ಶುಕ್ರವಾರ, ಏಪ್ರಿಲ್ 15, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಲಂಬಾಣಿ ನೃತ್ಯ

ಬೆಂಗಳೂರಿನಲ್ಲಿ ಅಂಬೇಡ್ಕರ್ ಜಯಂತಿ ಅಂಗವಾಗಿ ಗುರುವಾರ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಲಂಬಾಣಿ ಸಮುದಾಯದವರು ನೃತ್ಯ ಪ್ರದರ್ಶಿಸಿದರು

ಸ್ವಯಂ ಉದ್ಯೋಗ: 10 ಸಾವಿರ ಯುವ ಜನರಿಗೆ ಸಹಾಯಧನ – ಸಿ.ಎಂ ಬೊಮ್ಮಾಯಿ

ಪರಿಶಿಷ್ಟರಿಗೆ ನೆರವು: ₹1 ಲಕ್ಷಕ್ಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಯಂ ಉದ್ಯೋಗ ಕೈಗೊಳ್ಳುವ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಟಿ) ಯುವ ಜನರಿಗೆ ಸರ್ಕಾರದಿಂದ ನೀಡುತ್ತಿದ್ದ ಸಹಾಯಧನದ ಮೊತ್ತವನ್ನು ₹ 50 ಸಾವಿರದಿಂದ ₹ 1ಲಕ್ಷಕ್ಕೆ ಹೆಚ್ಚಳ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಗುರುವಾರ ನಡೆದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 131ನೇ ಜನ್ಮದಿನಾಚರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿ ವರ್ಷ 10 ಸಾವಿರ ಯುವಜನರಿಗೆ ಸ್ವಯಂ ಉದ್ಯೋಗಕ್ಕೆ ನೆರವು ನೀಡಲಾಗುತ್ತಿದೆ. ಈ ಯೋಜನೆಯಡಿ ಯೋಜನೆಗೆ ಬ್ಯಾಂಕ್‌ಗಳ ಮೂಲಕ ಒದಗಿಸುತ್ತಿರುವ ಸಾಲದ ಮೊತ್ತವನ್ನೂ ಹೆಚ್ಚಳ ಮಾಡಲಾಗುವುದು ಎಂದರು.

ರಾಜಕೀಯ ಸ್ವಾರ್ಥ ಸಾಧನೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರನ್ನು ದುರ್ಬಳಕೆ ಮಾಡಿಕೊಳ್ಳುವುದು ಅಪರಾಧ. ಶೋಷಿತ ಸಮುದಾಯಗಳು ಮತ್ತು ಮಹಿಳೆಯರು ಸಾಮಾಜಿಕ ಹಾಗೂ ಆರ್ಥಿಕ ಶಕ್ತಿ ಪಡೆಯಬೇಕು ಎಂಬುದು ಅಂಬೇಡ್ಕರ್ ನಿಲುವಾಗಿತ್ತು. ಅದಕ್ಕೆ ಪೂರಕವಾಗಿ ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ. ಸ್ತ್ರೀ ಶಕ್ತಿ ಸಂಘಗಳಿಗೆ ನೆರವು ನೀಡಲು ಆ್ಯಂಕರ್ ಬ್ಯಾಂಕ್ ಸ್ಥಾಪಿಸಲಾಗುತ್ತಿದೆ. ಅಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಹಿಳೆಯರಿಗೆ ಆದ್ಯತೆ ನೀಡಲಾಗುವುದು. ಅಂಬೇಡ್ಕರ್ ಹೆಸರಿನಲ್ಲಿ 100 ವಿದ್ಯಾರ್ಥಿ ನಿಲಯಗಳನ್ನು ಆರಂಭಿಸಲಾಗುತ್ತಿದೆ ಎಂದು ಹೇಳಿದರು.

ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಐವರಿಗೆ ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಪ್ರದಾನ ಮಾಡಲಾಯಿತು. 139 ಪೌರ ಕಾರ್ಮಿಕರನ್ನು ಗೌರವಿಸಲಾಯಿತು.

ಚಿತ್ರ 5

ಪಿಟಿಸಿಎಲ್ ಕಾಯ್ದೆ ತಿದ್ದುಪಡಿ ಭರವಸೆ

ಸುಪ್ರೀಂ ಕೋರ್ಟ್ ಆದೇಶದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಭೂ ಪರಭಾರೆ ನಿಷೇಧ (ಪಿಟಿಸಿಎಲ್) ಕಾಯ್ದೆಗೆ ತಿದ್ದುಪಡಿ ತರಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು. ಮುಖ್ಯಮಂತ್ರಿಯವರ ಭಾಷಣದ ನಡುವೆಯೇ ಎದ್ದುನಿಂತ ವ್ಯಕ್ತಿಯೊಬ್ಬರು, ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತರುವಂತೆ ಒತ್ತಾಯಿಸಿ ಘೋಷಣೆ ಕೂಗಿದರು. ಆಗ ಮುಖ್ಯಮಂತ್ರಿ ಈ ಭರವಸೆ ನೀಡಿದರು.

ಭಾಷಣದ ಆರಂಭದಲ್ಲೇ ಏರುಧ್ವನಿಯಲ್ಲಿ ಘೋಷಣೆ ಕೂಗುತ್ತಾ ವೇದಿಕೆಯತ್ತ ನುಗ್ಗಿದ ಗುಂಪೊಂದು, ಗಣರಾಜ್ಯೋತ್ಸವ ಸಮಾರಂಭದಲ್ಲಿ ಅಂಬೇಡ್ಕರ್ ಭಾವಚಿತ್ರ ತೆಗೆಸಿದ್ದ ನ್ಯಾಯಾಧೀಶ ಮಲ್ಲಿಕಾರ್ಜುನಗೌಡ ಅಮಾನತಿಗೆ ಆಗ್ರಹಿಸಿತು. ಪೊಲೀಸರು ಅವರನ್ನು ವಶಕ್ಕೆ ಪಡೆದು ಹೊರಕ್ಕೆ ಕರೆದೊಯ್ದರು.

ಆತ್ಮಹತ್ಯೆ ಹಿಂದೆ ರಾಜಕೀಯ ಬಣ್ಣ: ಎಚ್‌.ಡಿ. ದೇವೇಗೌಡ

ಬೆಂಗಳೂರು: ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಹಿಂದೆ ರಾಜಕೀಯ ಬಣ್ಣವಿದ್ದಂತೆ ಕಾಣುತ್ತಿದೆ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಹೇಳಿದರು. ಪಕ್ಷದ ರಾಜ್ಯ ಕಚೇರಿಯಲ್ಲಿ ಗುರುವಾರ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,'ಈ ಪ್ರಕರಣದ ವಿಚಾರದಲ್ಲಿ ಯಾರೆಲ್ಲ ಏನೇನು ಹೇಳಿದ್ದಾರೆ ಎಂಬುದು ಗೊತ್ತಿದೆ. ನಾನು ಯಾರ ಬಗ್ಗೆಯೂ ವೈಯಕ್ತಿಕವಾಗಿ ಮಾತನಾಡುವುದಿಲ್ಲ' ಎಂದರು.

'ನಾನು ಕೂಡ ಆಡಳಿತ ನಡೆಸಿದ್ದೇನೆ. ಯಾರ ಕಾಲದಲ್ಲಿ ಏನಾಗಿದೆ, ಎಷ್ಟು ಲಂಚ ಪಡೆದು ಸರ್ಕಾರ ನಡೆಸಿದ್ದಾರೆ ಎಂಬುದರ ಬಗ್ಗೆ ಈಗ ಮಾತನಾಡುವುದಿಲ್ಲ. ಈ ಬಗ್ಗೆ ಎಚ್.ಡಿ. ಕುಮಾರಸ್ವಾಮಿ ನೀಡಿರುವ ಹೇಳಿಕೆ ಕುರಿತೂ ಪ್ರತಿಕ್ರಿಯಿಸುವುದಿಲ್ಲ. ಶೇಕಡ 40ರಷ್ಟು ಲಂಚದ ಆರೋಪದ ಕುರಿತು ಮಾತನಾಡುವ ನೈತಿಕತೆ ಎರಡೂ ರಾಷ್ಟ್ರೀಯ ಪಕ್ಷಗಳಿಗೆ ಇಲ್ಲ' ಎಂದು ಹೇಳಿದರು.

ಸಿ.ಎಂ. ಇಬ್ರಾಹಿಂ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರಾಗುತ್ತಾರೆ. ಈಗ ಅಧ್ಯಕ್ಷರಾಗಿರುವ ಎಚ್.ಕೆ. ಕುಮಾರಸ್ವಾಮಿ ಅವರು ಸಂಸದೀಯ ಮಂಡಳಿ ಅಧ್ಯಕ್ಷರಾಗುತ್ತಾರೆ. ಇಬ್ಬರೂ ಜತೆಯಾಗಿ ಪಕ್ಷದ ಕೆಲಸ ಮಾಡಲಿದ್ದಾರೆ ಎಂದರು.

ಈಶ್ವರಪ್ಪ ಬಂಧನಕ್ಕೆ ಎಎಪಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಚಿವ ಕೆ.ಎಸ್.ಈಶ್ವರಪ್ಪ ಅವರು ಕೇವಲ ರಾಜೀನಾಮೆ ನೀಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಅವರನ್ನು ಬಂಧಿಸಿ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ನಡೆದ ಹಗರಣಗಳ ಸಮಗ್ರ ತನಿಖೆ ನಡೆಸಿದರಷ್ಟೇ ಸಂತೋಷ್ ಪಾಟೀಲ ಸಾವಿಗೆ ನ್ಯಾಯ ಸಿಗಲಿದೆ' ಎಂದು ಆಮ್ ಆದ್ಮಿ ಪಕ್ಷದ(ಎಎಪಿ) ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ಹೇಳಿದರು.

'ಸಂತೋಷ್ ಪಾಟೀಲ ಆತ್ಮಹತ್ಯೆಗೆ ಕಾರಣ ಆಗಿರುವ ಈಶ್ವರಪ್ಪ ಅವರಿಗೆ ಶಿಕ್ಷೆಯಾಗಬೇಕು. ಸಾಕ್ಷಿಯಾಗಿ ವಾಟ್ಸ್‌ಆ್ಯಪ್ ಸಂದೇಶ ಇದ್ದರೂ, ಮೃತನ ಸಂಬಂಧಿಕರು ದೂರು ನೀಡಿದ್ದರೂ ಇನ್ನೂ ಬಂಧನ ಆಗದಿರುವುದು ಖಂಡನೀಯ. ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯಲ್ಲಿ ಭಾರೀ ಅಕ್ರಮ ನಡೆದಿರುವ ಆರೋಪ ಕೇಳಿ ಬರುತ್ತಿದೆ. ಎಲ್ಲಾ ಆರೋಪಗಳ ಬಗ್ಗೆ ತನಿಖೆ ನಡೆಯಬೇಕು' ಎಂದು ಒತ್ತಾಯಿಸಿದರು.

ಹಲಾಲ್–ಜಟ್ಕಾ ವಿವಾದ: ಸೊರಗಿದ ಕುರಿ ಸಂತೆ

• ಜಿ.ಬಿ. ನಾಗರಾಜ್

ಚಿತ್ರದುರ್ಗ: ಮಾಂಸಕ್ಕೆ ಸಂಬಂಧಿಸಿ ರಾಜ್ಯದಲ್ಲಿ ಭುಗಿಲೆದ್ದ ಹಲಾಲ್–ಜಟ್ಕಾ ವಿವಾದದಿಂದಾಗಿ ಇಲ್ಲಿನ ಕುರಿ ಮಾರುಕಟ್ಟೆ ಸೊರಗುತ್ತಿದೆ. ಹೊರ ರಾಜ್ಯದ ವ್ಯಾಪಾರಸ್ಥರು ಖರೀದಿಗೆ ಆಸಕ್ತಿ ತೋರದಿರುವುದರಿಂದ ವಹಿವಾಟು ಕುಸಿತವಾಗುತ್ತಿದ್ದು, ಕುರಿ ಸಾಕಣೆದಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ನಗರದ ಎಪಿಎಂಸಿ ಆವರಣದಲ್ಲಿ ಪ್ರತಿ ಗುರುವಾರ ಕುರಿ ಮಾರುಕಟ್ಟೆ ನಡೆಯುತ್ತದೆ. ಮಧ್ಯ ಕರ್ನಾಟಕದಲ್ಲಿಯೇ ಅತಿ ಹೆಚ್ಚು ವಹಿವಾಟು ನಡೆಯುವ ಖ್ಯಾತಿಯೂ ಇದಕ್ಕಿದೆ. ಜಿಲ್ಲೆಯಲ್ಲಿ ಕುರಿ ಸಾಕಣೆದಾರರ ಸಂಖ್ಯೆ ಹೆಚ್ಚಿರುವುದರಿಂದ ಹಿರಿಯೂರು, ಚಳ್ಳಕೆರೆ ಹಾಗೂ ಮೊಳಕಾಲ್ಮುರು ತಾಲ್ಲೂಕಿನ ರಾಂಪುರದಲ್ಲಿಯೂ ಪ್ರತ್ಯೇಕ ಕುರಿ ಮಾರುಕಟ್ಟೆಗಳಿವೆ.

'ಸಾಕಿದ ಹಾಗೂ ಹಳ್ಳಿಯಲ್ಲಿ ಖರೀದಿಸಿದ ಕುರಿಗಳನ್ನು ಸಂತೆಗೆ ತಂದು ಮಾರಾಟ ಮಾಡುವ ಕಾಯಕವನ್ನು 25 ವರ್ಷಗಳಿಂದ ಮಾಡುತ್ತಿದ್ದೇನೆ. ಪ್ರತಿ ವಾರದ ಸಂತೆಗೆ 20 ಕುರಿ ತರುತ್ತಿದ್ದೆ. ಎಲ್ಲವೂ ನಿರೀಕ್ಷಿತ ಬೆಲೆಗೆ ಮಾರಾಟವಾಗುತ್ತಿದ್ದವು. ಒಂದೂವರೆ ತಿಂಗಳಿಂದ ಈಚೆಗೆ ಕುರಿ ಮಾರಾಟ ಕಡಿಮೆಯಾಗಿದೆ. ಕಳೆದ ವಾರ ಐದು ಕುರಿ ಕೂಡ ಮಾರಾಟವಾಗಲಿಲ್ಲ. ಮಾರುಕಟ್ಟೆಗೆ ಬರುವ ಕುರಿ ವ್ಯಾಪಾರಸ್ಥರ ಸಂಖ್ಯೆಯಲ್ಲಿ ಇಳಿಮುಖವಾಗಿದೆ' ಎನ್ನುತ್ತಾರೆ ಚಿತ್ರದುರ್ಗ ತಾಲ್ಲೂಕಿನ ಮಾರಗಟ್ಟ ಗ್ರಾಮದ ಬಸಣ್ಣ.

ಪಶುಸಂಗೋಪನಾ ಇಲಾಖೆಯ ಪ್ರಕಾರ ಜಿಲ್ಲೆಯಲ್ಲಿ 17.37 ಲಕ್ಷ ಕುರಿಗಳಿವೆ. ಚಳ್ಳಕೆರೆ ಹಾಗೂ ಹಿರಿಯೂರು ತಾಲ್ಲೂಕಿನಲ್ಲಿಯೇ 10 ಲಕ್ಷಕ್ಕೂ ಹೆಚ್ಚು ಕುರಿಗಳಿವೆ. ಗೊಲ್ಲ, ಮ್ಯಾಸಬೇಡ ಹಾಗೂ ಕುರುಬ ಸಮುದಾಯದ ಪ್ರಮುಖ ಕಾಯಕ ಕುರಿ ಸಾಕಣೆ. ಹೀಗೆ ಸಾಕಣೆ ಮಾಡಿದ ಕುರಿಗಳನ್ನು ಮಾರಾಟ ಮಾಡಲು ವಾರದ ಸಂತೆಗೆ ತರುವುದು ವಾಡಿಕೆ. ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರದಿಂದ ವ್ಯಾಪಾರಸ್ಥರು ಇಲ್ಲಿಗೆ ಬರುತ್ತಾರೆ. ಬೆಳಿಗ್ಗೆ 6ರಿಂದ 11ರವರೆಗೆ ನಡೆಯುವ ಸಂತೆಯಲ್ಲಿ ಸಾವಿರಾರು ಕುರಿಗಳು ಮಾರಾಟವಾಗುತ್ತವೆ.

'ತಮಿಳುನಾಡು, ಮಹಾರಾಷ್ಟ್ರದ ವ್ಯಾಪಾರಸ್ಥರು ಗಣನೀಯ ಪ್ರಮಾಣದಲ್ಲಿ ಕುರಿ ಖರೀದಿಸುತ್ತಾರೆ. ಖರೀದಿದಾರರಲ್ಲಿ ಬಹುತೇಕರು ಮುಸ್ಲಿಮರು. ಇವರು ಮಾರುಕಟ್ಟೆಗೆ ಬರದಿರುವುದರಿಂದ ಕುರಿಗೆ ಬೇಡಿಕೆ ಕಡಿಮೆಯಾಗಿದೆ. ವಹಿವಾಟು ಕುಸಿತವಾಗಿ ನಿರೀಕ್ಷಿತ ಬೆಲೆಗೆ ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲ. ₹ 20 ಸಾವಿರ ಮೌಲ್ಯದ ಕುರಿಯನ್ನು ₹ 15 ಸಾವಿರಕ್ಕೆ ಮಾರಾಟ ಮಾಡಬೇಕಾಗಿದೆ' ಎನ್ನುತ್ತಾರೆ ಹೊಳಲ್ಕೆರೆ ತಾಲ್ಲೂಕಿನ ಅಮೃತಾಪುರದ ಕುರಿ ಸಾಕಣೆದಾರ ದಾಸಪ್ಪ.

ದಾವಣಗೆರೆ, ಬಳ್ಳಾರಿ, ವಿಜಯನಗರ, ಚಿಕ್ಕಮಗಳೂರು, ಶಿವಮೊಗ್ಗ ಸೇರಿ ರಾಜ್ಯದ ಇತರ ಜಿಲ್ಲೆಯ ವ್ಯಾಪಾರಸ್ಥರು ಮಾತ್ರ ಸಂತೆಗೆ ಬರುತ್ತಿದ್ದಾರೆ. ಬೆಂಗಳೂರು ವ್ಯಾಪಾರಸ್ಥರ ಸಂಖ್ಯೆಯೂ ಕಡಿಮೆಯಾಗಿದೆ. ಸ್ಥಳೀಯರು, ಜಾತ್ರೆಗೆ ಖರೀದಿಸುವ ಗ್ರಾಮೀಣರು ಹಾಗೂ ಮಾಂಸದಂಗಡಿಯ ಮಾಲೀಕರು ಮಾತ್ರ ಮಾರುಕಟ್ಟೆಯಲ್ಲಿ ಕಾಣಸಿಗುತ್ತಾರೆ. ಸಂತೆಗೆ ತಂದಿದ್ದ ಕುರಿಗಳು ಮಾರಾಟವಾಗದೇ ಕುರಿಗಾಹಿಗಳು ನಿರಾಸೆಯಿಂದ ಮನೆಗೆ ಮರಳುತ್ತಿದ್ದಾರೆ.

'ಸಂತೆಯಲ್ಲಿ ಸರಾಸರಿ ನಾಲ್ಕು ಸಾವಿರ ಕುರಿಗಳು ಮಾರಾಟವಾಗುತ್ತವೆ. ತಿಂಗಳಿಂದ ಈಚೆಗೆ ಕುರಿ ಮಾರಾಟ ಕಡಿಮೆಯಾಗಿದೆ. ಕಳೆದ ವಾರ ಶೇ 20ರಷ್ಟು ವಹಿವಾಟು ಕುಸಿತವಾಗಿದೆ' ಎನ್ನುತ್ತಾರೆ ದೇವರಾಜ ಅರಸು ಕುರಿ ಸಾಕಣೆ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿ ಮಹಾಂತೇಶ್.

ಚಿತ್ರದುರ್ಗದ ಕುರಿ ಮಾರುಕಟ್ಟೆಯಲ್ಲಿ ಗುರುವಾರ ಕುರಿಗಾಹಿಗಳಿಂದ ಕುರಿ ಖರೀದಿಸಿದ ವ್ಯಾಪಾರಿ

ಪ್ರಜಾವಾಣಿ ವಿಶೇಷ

> **ವಾರದ ಸಂತೆಗೆ ತಂದಿದ್ದ ಹತ್ತು ಕುರಿಗಳನ್ನು ಮಾರಾಟ ಮಾಡಿದೆ. ನಿರೀಕ್ಷಿತ ಬೆಲೆ ಸಿಗಲಿಲ್ಲ. ಸುಮಾರು ₹ 5 ಸಾವಿರ ನಷ್ಟ ಉಂಟಾಯಿತು**
> **ನಾಗರಾಜ,** ಕುರಿ ಸಾಕಣೆದಾರ, ಜುಮ್ಮಪ್ಪನಹಳ್ಳಿ ಮ್ಯಾಸರಹಟ್ಟಿ, ಕೂಡ್ಲಿಗಿ ತಾಲ್ಲೂಕು

'ಪ್ರಧಾನಮಂತ್ರಿ ಸಂಗ್ರಹಾಲಯ' ಉದ್ಘಾಟಿಸಿದ ನರೇಂದ್ರ ಮೋದಿ

ಮಾಜಿ ಪ್ರಧಾನಿಗಳ ಕೊಡುಗೆ ಶ್ಲಾಘನೆ

ನವದೆಹಲಿ(ಪಿಟಿಐ): ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಗುರುವಾರ ನವದೆಹಲಿಯಲ್ಲಿ 'ಪ್ರಧಾನಮಂತ್ರಿ ಸಂಗ್ರಹಾಲಯ'ವನ್ನು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, 'ಸಾಂವಿಧಾನಿಕ ಪ್ರಜಾಪ್ರಭುತ್ವದ ಗುರಿಗಳ ಈಡೇರಿಕೆಯಲ್ಲಿ ದೇಶದ ಪ್ರತಿಯೊಬ್ಬ ಪ್ರಧಾನಿಯೂ ಅಪಾರ ಕೊಡುಗೆ ನೀಡಿದ್ದಾರೆ. ಇಂಥ ಕೊಡುಗೆಗಳನ್ನು ನೀಡಿದ ಪ್ರಧಾನಿಗಳ ಕುರಿತು ಪರಿಚಯ, ಸಮಗ್ರ ಮಾಹಿತಿಯನ್ನು ಪ್ರಧಾನಮಂತ್ರಿ ಸಂಗ್ರಹಾಲಯವು ಒಳಗೊಂಡಿದೆ' ಎಂದರು.

'ಹಿಂದಿನ ಎಲ್ಲಾ 14 ಪ್ರಧಾನಿಗಳಿಗೆ ಸಮರ್ಪಿತವಾಗಿರುವ ಪ್ರಧಾನಮಂತ್ರಿ ಸಂಗ್ರಹಾಲಯವು, ದೇಶವು ಸ್ವಾತಂತ್ರ್ಯೋತ್ಸವದ 75ನೇ ವರ್ಷವನ್ನು ಆಚರಿಸುತ್ತಿರುವ ಈ ಸಮಯದಲ್ಲಿ ಸ್ಫೂರ್ತಿ ನೀಡುವ ತಾಣವಾಗಿದೆ. ಎಲ್ಲಾ ಪ್ರಧಾನಮಂತ್ರಿಗಳನ್ನು ಸ್ಮರಿಸುವುದೆಂದರೆ ಸ್ವತಂತ್ರ ಭಾರತದ ಪಯಣದ ಬಗ್ಗೆ ತಿಳಿದುಕೊಳ್ಳುವುದು ಎಂದರ್ಥ' ಎಂದು ಹೇಳಿದರು.

'ಭಾರತವು ಪ್ರಜಾಪ್ರಭುತ್ವದ ತಾಯಿ' ಎಂದು ಪ್ರತಿಪಾದಿಸಿದ ಅವರು, 'ಭಾರತದ ಪ್ರಜಾಪ್ರಭುತ್ವದ ದೊಡ್ಡ ವೈಶಿಷ್ಟ್ಯವೆಂದರೆ ಅದು ಕಾಲಾನಂತರದಲ್ಲಿ ನಿರಂತರವಾಗಿ ಬದಲಾಗುತ್ತಿರುತ್ತದೆ. ಪ್ರತಿ ಯುಗದಲ್ಲಿ, ಪ್ರತಿ ಪೀಳಿಗೆಯಲ್ಲಿ, ಪ್ರಜಾಪ್ರಭುತ್ವವನ್ನು ಹೆಚ್ಚು ಆಧುನಿಕ ಮತ್ತು ಸಶಕ್ತಗೊಳಿಸುವ ನಿರಂತರ ಪ್ರಯತ್ನಗಳು ನಡೆಯುತ್ತವೆ. ಅಂತೆಯೇ ಈ ವಸ್ತು ಸಂಗ್ರಹಾಲಯವು ಪ್ರತಿ ಸರ್ಕಾರದ ಪರಂಪರೆಯ ಜೀವಂತ ಸಂಕೇತವಾಗಿದೆ' ಎಂದು ಅಭಿಪ್ರಾಯಪಟ್ಟರು.

ಚಕ್ರವನ್ನು ಹಿಡಿದಿರುವ ಅನೇಕ ಕೈಗಳನ್ನು ಹೊಂದಿರುವ ವಸ್ತುಸಂಗ್ರಹಾಲಯದ ಲಾಂಛನ ಕುರಿತು ವಿವರಿಸಿದ ಮೋದಿ, 'ಚಕ್ರವು 24 ಗಂಟೆಗಳ ನಿರಂತರತೆ, ಸಮೃದ್ಧಿ ಮತ್ತು ಕಠಿಣ ಪರಿಶ್ರಮದ ಸಂಕೇತವಾಗಿದೆ. ಇದರಲ್ಲಿನ ಸಂಕಲ್ಪ ಪ್ರಜ್ಞೆ ಮತ್ತು ಶಕ್ತಿಯು ಮುಂಬರುವ 25 ವರ್ಷಗಳಲ್ಲಿ ಭಾರತದ ಅಭಿವೃದ್ಧಿಯನ್ನು ವ್ಯಾಖ್ಯಾನಿಸಲಿದೆ' ಎಂದರು.

ದೆಹಲಿಯ ತೀನ್ ಮೂರ್ತಿ ಕಾಂಪ್ಲೆಕ್ಸ್‌ನಲ್ಲಿ ₹ 271 ಕೋಟಿ ವೆಚ್ಚದಲ್ಲಿ ಈ ವಸ್ತುಸಂಗ್ರಹಾಲಯವನ್ನು ನಿರ್ಮಿಸಲಾಗಿದೆ. ಉದ್ಘಾಟನೆಗೆ ಮುನ್ನವೇ ಮೋದಿ ಅವರು ವಸ್ತುಸಂಗ್ರಹಾಲಯದ ವೀಕ್ಷಣೆಗೆ ಮೊದಲ ಟಿಕೆಟ್ ಅನ್ನು ಖರೀದಿಸಿದ್ದರು. ಈ ವಸ್ತುಸಂಗ್ರಹಾಲಯವನ್ನು ಮೋದಿ ಅವರ ಮಾರ್ಗದರ್ಶನದಲ್ಲಿ ರೂಪಿಸಲಾಗಿದೆ ಎಂದು ಪ್ರಧಾನಮಂತ್ರಿಗಳ ಕಚೇರಿಯು ತಿಳಿಸಿದೆ.

ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಮಾಜಿ ಪ್ರಧಾನಿಗಳ ಕುಟುಂಬದ ಹಲವು ಸದಸ್ಯರು ವಸ್ತು ಸಂಗ್ರಹಾಲಯವನ್ನು ವೀಕ್ಷಿಸಿ ಸಂತಸ ವ್ಯಕ್ತಪಡಿಸಿದರು. ಆದರೆ, ನೆಹರೂ ಕುಟುಂಬದ ಸದಸ್ಯರು ಸಮಾರಂಭಕ್ಕೆ ಗೈರು ಹಾಜರಾಗಿದ್ದರು.

'ಪ್ರಧಾನಮಂತ್ರಿ ಸಂಗ್ರಹಾಲಯ'ದ ಮಾದರಿಯನ್ನು ಪ್ರಧಾನಿ ಮೋದಿ ಅವರು ವೀಕ್ಷಿಸಿದರು –ಪಿಟಿಐ ಚಿತ್ರ

> **ನನ್ನ ತಂದೆಯವರು ಬಿಜೆಪಿ ಟೀಕಿಸುತ್ತಿದ್ದರು. ಅವರು ಸೇರಿದಂತೆ ಹಿಂದಿನ ಎಲ್ಲ ಪ್ರಧಾನಿಗಳ ಸಾಧನೆಗಳನ್ನು ದೇಶದ ಮುಂದಿಡುವ ಕೆಲಸವನ್ನು ಮೋದಿ ಈಗ ಮಾಡಿದ್ದಾರೆ**
> **ನೀರಜ್ ಶೇಖರ್**
> ಸಂಸದ, ಮಾಜಿ ಪ್ರಧಾನಿ ಚಂದ್ರಶೇಖರ್ ಅವರ ಪುತ್ರ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUILDERS ESSENTIAL

Water Proofing

LEAKAGE... LEAKAGE... Old/New Building,Sump, Bathroom, Wallcrack, Skylight, Terrace Waterproofing done by NewTechnology- 9880916988

RENTAL PROPERTIES

Accommodation Available

Industrial And Factory

14500 SQFT. Industrial Godown for rent in Doddaballapur. Call: 9986716677.

Commercial

COMMERCIAL SPACE for Rent @ Uttarahalli Main Road & KumaraSwamy Layout Main Road. CONTACT: 8971660799.

COMMERCIAL SPACE 1720 SFT AVAILABLE IN PRIME LOCATION SUITABLE FOR FINANCIAL INSTITUTION/ SUPER MARKET ON RENT AT GROUND FLOOR, ST.JOHN'S ROAD, BANGALORE - 560042. B.K. SAMAJ. CONTACT- 9916118144, 7795346470, 9341210659.

REAL ESTATE SELLING

Flat

Shanthi Nagar

SPACIOUS CENTRALLY LOCATED 2BHK SEMI FURNISHED. CLOSED GARAGE UPS 1ST FLOOR. 95 LAKHS EAST FACING 9449013967.

Sites

Abbigere

BBMP A Khata Sites For Sale In Abbigere, Behind Suvilas Apts, Luxury Developement With Bank Loans Call: 9090603050

Kempegowda Layout

30X40 NORTH Facing Bheemanakuppe 7th Block 1st Sector Nada Prabhu Kempegowda Layout 5000/- Psft: 9845488488

30X40 BDA Approved West Facing Site KNS Layout Nada Prabhu Kempegowda Layout 4500/- Psft: 9845488488

Banashankari

BANASHANKARI 6TH Stage, BDA SITES 50X80, 40X60, 30X40, 20X30 BUYING/ SELLING, IMMEDIATE SETTLEMENT. 9845675290, 8660546182.

Hosur Road

5-ACRE-LAND-SALE Bank Seased With Rera Approval For 600 FLAT Construction Just Rs.24 Crore Market Rate Rs 38 Crore+ Only Genuine Investors /Builders Contact: 99009 76000

APPROX ONE Acre Industrial Land near Attibele Off: Hosur Road for Sale. Brokers Excuse. Contact: 9620938350/ 9844243147.

DH ಪ್ರಜಾವಾಣಿ

BOOK YOUR REAL ESTATE

Classified Advertisement In Deccan Herald & Prajavani

SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

PUBLIC NOTICE

PUBLIC NOTICE

This is to inform that my clients are intending to purchase the Schedule Property from its owner **Mr. Anup Raina and** if any person(s) having any claims, right, title, interest in respect of the said schedule property by way of inheritance, minor claim, share, sale, mortgage, lien, gift, possession or encumbrance whatsoever over the Schedule Property may forward their objection to the undersigned in writing to the address given below and also requested to email at ajithadvocate@gmail.com within 10(Ten) days from the date of publication of this notice, along with supporting documents failing which it will be deemed that there are no claims, right, title or interest by anybody and my clients will proceed with the completion of sale transaction presuming that there are no objection and will get register the absolute sale deed of the Schedule Property in their names

SCHEDULE PROPERTY:

All that piece and parcel of the immovable property being Residential Villa No. B-59, of Prestige Ozone, of "Beech", type BBMP Khatha No. 776/B/3/58 measuring Eastern side : 80 Feet, on the Western side : 80 Feet, on the Northern side : 50 Feet and on the Southern side : 50 feet, with total site area of 4000 sq.ft. along with residential Building consisting of Ground and First Floor measuring total super built up area of 3190 Sq.ft.,: and bounded on the
East By: Villa No.60 in 'ACORN' type of PRESTIGE OZONE'
West By : Villa No.58 in 'BEECH' type of PRESTIGE OZONE'
North By: Internal Layout Road in 'PRESTIGE OZONE',
South By: Villa No.62 in 'ELM' type of PRESTIGE OZONE'
Place: Bengaluru
Date: 15.04.2022

AJITH MATHEWS
Advocate
Parayil House No. 553 D8/674 Havanur Extn, 6th Main 6th Cross, Nagasandra Post, Hessarghatta Road, Bengaluru 560 0073.
Phone: 9740319251
Email: ajithadvocate@gmail.com

JOB OPPORTUNITIES

Accounts & Finance

WANTED EXPERIENCED BCom graduate candidate with tally knowledge, for reputed company at Whitefield. De Royale Ventures Hospitality FOA,Walkin interview Saturday Sunday, 10am to 4pm. Contact General Manager 9731166365.

WANTED LADIES For Accounts (Married) B.com with Tally Knowledge in & Around Jayanagar And JP-Nagar Contact: 9980921763/ 9632201671

Multiple Vacancy

REQUIRED TEAMLEADER, Telecaller, & Field Executive for For Banking Loan collection (salary 15,000-to-20,000). Direct recruitment to Company Contact: 9620206756, 9620200756.

OPPORTUNITY FOR Retired Officials, Bankers,NRI, Teachers, Professionals, Homemakers, CAs. Earn salary + Incentives. CALL: 8095301555

Part-Time Jobs

REPUTED MNC Company Will Provide Work From Home, Earn 30 to 35K Malleswaram: 7019215243/ 9886641282

Teachers/ Professors

WANTED EXPERIENCED TEACHERS B.A/ BSc, B.Ed English Literature, Computer Science. Florence High school, Sanjaynagar :23416499

Wanted

REQUIRED DATA ENTRY OPERATORS Graduates with good English apply online @ www.bidocean.com/employment.php

EDUCATIONAL

Admission

DIRECT FINAL: LLB (Can Practice) B.Tech/M.Tech Diploma, MBA/MSc, BCA, BBA, BSc, B.Com, D.Pharm/ B.Pharm, PU/ SSLC. Recognised Govt /UGC. Asha Academy, Bangalore. Ph: 9448460103/ 08026699786

BUSINESS

Business to Business

Finance

WANTED INVESTOR 12Cr, 16 Flats Buy Back After 48 Months 10Cr with Flat: 8892501007/9606701007

PERSONAL

Change of Name

I, SHIVANNA, residing at No. 528, Munivenkatappa Building, 1st cross 1st main Vibhuthipura Bangalore North, Marathahalli post Bangalore 560037, have changed my minor daughter's name from BOMIKA .S. to BHOOMIKA .S. vide affidavit dated 06.03.2022 before Notary Sreedharan Nair P.N. Bangalore. Henceforth she will be known as BHOOMIKA. S. only

I, ESTHER Susila Christy Isaac W/o. Moses Antony Isaac aged 63 Years R/at 810, 2nd B Cross, 1st Stage, HRBR Layout, Kalyannagar Bengaluru 560043. Have changed my name to ESTHER CHRISTY ISAAC vide affidavit dated 13.04.2022 before notary A.C Subbu Swamy Bangalore

I, NISHA SHARMILY, residing at No. 11/3, Hongasandra, Begur Main Road, Bommanahalli, Bangalore- 560068, have changed my name to NANDINI. S., vide affidavit dated 30.03.2022 before Notary Dharani P., Bangalore. Henceforth I shall be called NANDINI S. only

I, PRAVEEN SHIVAYOGAPPA MARIREVANNAVAR., R/at No. D305 Sruthika Spring Fields Apts, Singapura Layout, Bangalore- 560097 have changed my name to PRAVEEN MARIREVANNANAVAR vide affidavit dated: 14/4/2022 Before Notary Kundan Babu M Bangalore.

I, RAJU SINGH, aged 46 years Resident 18 & 19, K No 197, 2nd Floor, 2nd Cross, Chinnaswappa Layout, Horamavu, Bangalore- 560043 have changed my name to RAJU SINGH PUROHIT S/o Prem Singh Purohit Vide Affidavit Dated: 13/04/2022 Notary Uday Kumar.K

I, NISHITA POONAM BHATIA Residing #B2015 Nikoo Homes 2, Bhartya City No 6/1 Off Thanisandra Main Road, Bangalore-64 have changed my name to NISHITA BHATIA vide affidavit dated H.G.Venkataramu, Notary, Bangalore.

I,TANYA JOSHI residing at No.167/5,3rd 'A'Cross, 1st Stage,KHB Colony, Basaveshwar Nagar, Bangalore-79 have changed-my name-to TANYA vide affidavit dtd:13.04.2022 before Notary N.Nagappa, Bangalore.

NELAM W/O JC681905X SUB ANIL KUMAR SINGH R/A KENOURA LAMBHUA SULTANPUR UTTAR PRADESH MY NAME NELAM TO NEELAM Notary KV MANI Bangalore

6394140M HAV SARAT CHANDRA BEHERA 2ATC My MOTHER Name records KUSAYAL BEHERA Instead of KAUSHALYA BEHERA Notary KV MANI Bangalore

14825374Y HAV ARUN KUMAR SHUKLA 2ATC My SON Name records PIUSH SHUKLA Instead of PIYUSH SHUKLA Notary KV MANI Bangalore

14825384H HAV/MT ASHOK KUMAR MISHRA 2ATC My SON Name records UTKARASH Instead of UTKARSH MISHRA Notary KV MANI Bangalore

14841460N SEP/MT SANTOSH KUMAR YADAV 2ATC My Mother Name records DEVI Instead of RAJ KUMARI Notary KV MANI Bangalore

14816666A HAV BALBIR SINGH 2ATC My Mother Name records KASHTURI DEVI Instead of KISTURI DEVI Notary KV MANI Bangalore

14825384H HAV/MT ASHOK KUMAR MISHRA 2ATC My Daughter Name records SAKHHI Instead of SAKSHI Notary KV MANI Bangalore

14816474H HAV RAJESH KUMAR 2ATC My SON Name records PRAYAS Instead of PARYASH Notary KV MANI Bangalore

I, ANEES PHATHIMA W/o. Mir Vasee Ahmed R/a. Alipur, Gowribidanur, have changed my name to SYEDA ANIS FATHIMA, vide affidavit dated 05/04/2022, before notary M.S Ananda, Gowribidanur.

Lost

LOST

I, Krishna Murthy, R/a, 315 5th Main, 1st Cross, REMCO Layout, Vijayanagar 2nd Stage, Bangalore-40 To general public / company / organisation or any claims have lost memo copy No. 169/70 dated 16 Feb 1970, 1) vide documents No. 433 -1970-71 dated 16-4-1970 2) Vide document No. SARI-1-00610/2006-07 dated 8-5-2006 3) Vide document No. VJN -1-0057/2010-11 dated 2010 the whole documents pertaining to site No. 38, 6th Main, Hosalli, Vijayanagar, Bangalore Property Schedule East: Site No. 639 West: Site No. 637, North: Road South: Site No. 633
Finders Please Contact: 9880266223

WEEKEND CORNER ಕ್ಲಾಸಿಫೈಡ್ಸ್

TRAVEL CORNER

GUJARAT JYOTIRLINGA TOUR WITH JAMBUVAN CAVES
4N / 5D
Ex- Ahmedabad
Starting Just 14,999/- Person
Sumit Tours & Travels
SUMIT TOURS & TRAVELS
AHMEDABAD (GUJARAT)
M. 9066490663

MATRIMONIAL

Wedding Arrangements

Cards

WEDDING CARDS WITH PRINTING AT FACTORY RATES AT YOUR DOORSTEP (ALL INDIAN LANGUAGES). Call: 9880324530

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

ಶುಕ್ರವಾರ, ಏಪ್ರಿಲ್ 15, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 104 | ಪುಟ 16
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೆ.ಜಿ.ಎಫ್ ದಾಖಲೆ!
ವಿಶ್ವದೆಲ್ಲೆಡೆ 10 ಸಾವಿರಕ್ಕೂ ಅಧಿಕ ಸ್ಕ್ರೀನ್‌ಗಳಲ್ಲಿ ತೆರೆಕಂಡಿರುವ ಕೆ.ಜಿ.ಎಫ್ ಚಾಪ್ಟರ್–2 ಗಳಿಕೆಯಲ್ಲಿ ಹೊಸ ದಾಖಲೆ ಬರೆದಿದೆ. ಅಮೆರಿಕದಲ್ಲೇ ಮೊದಲ ದಿನ ₹8 ಕೋಟಿ ಸಂಗ್ರಹಿಸಿದೆ



ಸಂಖ್ಯೆ-ಸುದ್ದಿ
ಕೋವಿಡ್ ಹೊಡೆತಕ್ಕೆ ಜಗ್ಗದ ತೆರಿಗೆ ಸಂಗ್ರಹ

ಚೀನಾದಲ್ಲಿ ಕೋವಿಡ್ ಏರಿಕೆ: ಮತ್ತಷ್ಟು ನಗರಗಳಿಗೆ ನಿರ್ಬಂಧ ವಿಸ್ತರಣೆ 8

ಈಶ್ವರಪ್ಪ ಮಣಿದರೂ ಪಟ್ಟು ಸಡಿಲಿಸದ 'ಕೈ' 4

ಚಿನ್ನ (Std. 10g)	ಶುದ್ಧ ಬೆಳ್ಳಿ (kg)
₹54,840 (ಬೆಂಗಳೂರು) ▲	₹71,600 (ಬೆಂಗಳೂರು) ▲

ಕೆನರಾ ಬ್ಯಾಂಕ್ Canara Bank
Government of India Undertaking
Together We Can
ಗೃಹ ಸಾಲ 6.65% ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
1800 425 0018

ಸುದರ್ಶನ್ ಜ್ಯುವೆಲರ್ಸ್
ಚಿನ್ನ ❖ ಬೆಳ್ಳಿ ❖ ಚಿನ್ನದ ಆಭರಣಗಳು
916 Hallmark Gold Rate
₹4875/-gm
ಬೆಳ್ಳಿ ₹ 65,000/-
ಚಿಕ್ಕಪೇಟೆ: 41300355
Gangothri *CA

ರಾಜೀನಾಮೆ ಘೋಷಿಸಿದ ಈಶ್ವರಪ್ಪ

ವರಿಷ್ಠರ ನಿರ್ದೇಶನದ ಬೆನ್ನಲ್ಲೇ ನಿಲುವು ಬದಲು • ಬಿಜೆಪಿ ಸರ್ಕಾರದಲ್ಲಿ ಸಚಿವ ಸ್ಥಾನ ಕಳೆದುಕೊಂಡ ಮೂರನೇ ವ್ಯಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಶಿವಮೊಗ್ಗ: ಬೆಳಗಾವಿಯ ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದಲ್ಲಿ ಮೊದಲನೇ ಆರೋಪಿ ಯಾಗಿರುವ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ, ಶುಕ್ರವಾರ ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ.

ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಬಿಜೆಪಿ ವರಿಷ್ಠರು ನೀಡಿದ್ದ ಸೂಚನೆಯನ್ನು ಕಡೆಗಣಿಸಿ ಶಿವಮೊಗ್ಗದಲ್ಲಿ ಉಳಿದುಕೊಂಡಿದ್ದ ಈಶ್ವರಪ್ಪ, ಪ್ರಾಥಮಿಕ ತನಿಖೆಯ ವರದಿ ಬರುವವರೆಗೂ ಮುಂದುವರಿಯುವುದಾಗಿ ಪಟ್ಟು ಹಿಡಿದಿದ್ದರು. ಕಾಂಗ್ರೆಸ್ ಮುಖಂಡರು ವಿಧಾನಸೌಧದ ಮುಂದೆ ಅಹೋರಾತ್ರಿ ಧರಣಿ ಆರಂಭಿಸುತ್ತಿದ್ದಂತೆಯೇ ಪುನಃ ಮಧ್ಯಪ್ರವೇಶ ಮಾಡಿದ ಬಿಜೆಪಿ ವರಿಷ್ಠರು, ತಕ್ಷಣ ರಾಜೀನಾಮೆ ಕೊಡುವಂತೆ ಸಂದೇಶ ರವಾನಿಸಿದರು. ಅದರ ಬೆನ್ನಲ್ಲೇ ಗುರುವಾರ ಸಂಜೆ ಶಿವಮೊಗ್ಗದಲ್ಲಿ ದಿಢೀರ್ ಪತ್ರಿಕಾಗೋಷ್ಠಿ ನಡೆಸಿದ ಈಶ್ವರಪ್ಪ ನಿರ್ಧಾರ ಪ್ರಕಟಿಸಿದರು.

'ಪಕ್ಷ ಮತ್ತು ಸರ್ಕಾರಕ್ಕೆ ಮುಜುಗರ ತಪ್ಪಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಶುಕ್ರವಾರ ಭೇಟಿಯಾಗಿ ರಾಜೀನಾಮೆ ನೀಡುತ್ತಿದ್ದೇನೆ' ಎಂದರು.

4ನೇ ಪುಟ ನೋಡಿ

ಸ್ವಯಂಪ್ರೇರಣೆಯಿಂದ ರಾಜೀನಾಮೆ: ಬೊಮ್ಮಾಯಿ

'ಈಶ್ವರಪ್ಪ ಅವರು ನೈತಿಕ ಹೊಣೆ ಹೊತ್ತು ಸ್ವಯಂ ಪ್ರೇರಣೆಯಿಂದ ರಾಜೀನಾಮೆ ನಿರ್ಧಾರ ಕೈಗೊಂಡಿದ್ದಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಈಶ್ವರಪ್ಪ ಅವರು ನಿರ್ಧಾರ ಪ್ರಕಟಿಸುವ ಮುನ್ನ ನನ್ನೊಂದಿಗೆ ಮಾತನಾಡಿದ್ದರು. ನಾನು ಯಾವುದೇ ತಪ್ಪು ಮಾಡಿಲ್ಲ, ಆದರೆ ಸಚಿವನಾಗಿ ಮುಂದುವರಿದರೆ ಪಕ್ಷ, ಸರ್ಕಾರಕ್ಕೆ ಇರಿಸುಮುರಿಸಾಗುತ್ತದೆ ಎಂದರು. ಆರೋಪ ಮುಕ್ತನಾಗಿ ಬರುವವರೆಗೂ ಸಚಿವ ಸ್ಥಾನದಲ್ಲಿ ಇರುವುದಿಲ್ಲ ಎಂಬ ಮಾತು ಹೇಳಿದ್ದರು' ಎಂದರು.

ಆರೋಪ ಹೊತ್ತು ರಾಜೀನಾಮೆ ಪರ್ವ

2008–2013 (ಬಿಜೆಪಿ)	
ರಾಮಚಂದ್ರಗೌಡ	ಭ್ರಷ್ಟಾಚಾರ
ಹರತಾಳು ಹಾಲಪ್ಪ	ಲೈಂಗಿಕ ದೌರ್ಜನ್ಯ
ಕಟ್ಟಾ ಸುಬ್ರಹ್ಮಣ್ಯ ನಾಯ್ಡು	ಭ್ರಷ್ಟಾಚಾರ
ಕೃಷ್ಣಯ್ಯ ಶೆಟ್ಟಿ	ಭ್ರಷ್ಟಾಚಾರ
ಬಿ.ಎಸ್. ಯಡಿಯೂರಪ್ಪ	ಭ್ರಷ್ಟಾಚಾರ, ಅಕ್ರಮ ಗಣಿಗಾರಿಕೆ
ಕೃಷ್ಣ ಪಾಲೇಮಾರ್	ನೀಲಿಚಿತ್ರ ವೀಕ್ಷಣೆ
ಸಿ.ಸಿ. ಪಾಟೀಲ	ನೀಲಿಚಿತ್ರ ವೀಕ್ಷಣೆ
ಲಕ್ಷ್ಮಣ ಸವದಿ	ನೀಲಿಚಿತ್ರ ವೀಕ್ಷಣೆ
2013–2018 (ಕಾಂಗ್ರೆಸ್)	
ಸಂತೋಷ್ ಲಾಡ್	ಅಕ್ರಮ ಗಣಿಗಾರಿಕೆ
ಕೆ.ಜೆ. ಜಾರ್ಜ್	ಡಿವೈಎಸ್‌ಪಿ ಆತ್ಮಹತ್ಯೆ ಪ್ರಕರಣ
ಎಚ್.ವೈ. ಮೇಟಿ	ಲೈಂಗಿಕ ದೌರ್ಜನ್ಯ

ಈ ಸರ್ಕಾರದಲ್ಲಿ ಮೂರನೇ ರಾಜೀನಾಮೆ

2019ರ ಜುಲೈನಲ್ಲಿ ಬಿಜೆಪಿ ಸರ್ಕಾರ ರಚನೆಯಾದ ಬಳಿಕ ಆರೋಪ ಹೊತ್ತು ರಾಜೀನಾಮೆ ನೀಡುತ್ತಿರುವ ಸಚಿವರಲ್ಲಿ ಕೆ.ಎಸ್. ಈಶ್ವರಪ್ಪ ಮೂರನೆಯವರು. ಅಬಕಾರಿ ಸಚಿವರಾಗಿದ್ದ ಎಚ್. ನಾಗೇಶ್ ಭ್ರಷ್ಟಾಚಾರದ ಆರೋಪದ ಮೇಲೆ 2021ರ ಜನವರಿಯಲ್ಲಿ ರಾಜೀನಾಮೆ ನೀಡಿದ್ದರು. ಜಲ ಸಂಪನ್ಮೂಲ ಸಚಿವರಾಗಿದ್ದ ರಮೇಶ ಜಾರಕಿಹೊಳಿ ಲೈಂಗಿಕ ಹಗರಣದಲ್ಲಿ ಸಿಲುಕಿ 2021ರ ಮಾರ್ಚ್ 3ರಂದು ರಾಜೀನಾಮೆ ನೀಡಿದ್ದರು.

ಇನ್ನಷ್ಟು ಸುದ್ದಿಗಳು 4

ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಪ್ರಕರಣದ ವರ್ಗಾವಣೆ

ಉಡುಪಿ: ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದ ವಿಚಾರಣೆಯನ್ನು ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ವರ್ಗಾಯಿಸಲಾಗಿದೆ ಎಂದು ಎಸ್‌ಪಿ ಎನ್.ವಿಷ್ಣುವರ್ಧನ್ ತಿಳಿಸಿದರು.

ಚುನಾಯಿತ ಪ್ರತಿನಿಧಿಗಳು ಆರೋಪಿಗಳಾಗಿರುವ ಮತ್ತು ಅವರು ದೂರುದಾರರಾಗಿರುವ ಎಲ್ಲ ಪ್ರಕರಣಗಳ ವಿಚಾರಣೆ ಜನ ಪ್ರತಿನಿಧಿಗಳ ಪ್ರಕರಣಗಳ ವಿಶೇಷ ನ್ಯಾಯಾಲಯದಲ್ಲಿ ನಡೆಯಬೇಕು. ಹೀಗಾಗಿ, ಸಂತೋಷ್ ಪ್ರಕರಣವನ್ನು ಉಡುಪಿಯ ಒಂದನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ ನ್ಯಾಯಾಲಯದಿಂದ ಬೆಂಗಳೂರಿಗೆ ವರ್ಗಾವಣೆ ಮಾಡಲಾಗಿದೆ.

ಬಂಧನದವರೆಗೂ ಹೋರಾಟ: ಕಾಂಗ್ರೆಸ್

ಬೆಂಗಳೂರು: ಸಚಿವ ಕೆ.ಎಸ್. ಈಶ್ವರಪ್ಪ ರಾಜೀನಾಮೆ ನೀಡುವುದಾಗಿ ಘೋಷಿಸಿದ ಬೆನ್ನಲ್ಲೆ, ಸುದ್ದಿಗಾರರ ಜೊತೆ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಈಶ್ವರಪ್ಪ ಅವರನ್ನು ಬಂಧಿಸುವವರೆಗೆ ನಮ್ಮ ಹೋರಾಟ ನಿಲ್ಲುವುದಿಲ್ಲ' ಎಂದು ಘೋಷಿಸಿದ್ದಾರೆ. 'ನಮ್ಮ ಹೋರಾಟ ರಾಜೀನಾಮೆ ಕೇಳುವುದಕ್ಕಷ್ಟೇ ಸೀಮಿತವಾಗಿಲ್ಲ. ಈಶ್ವರಪ್ಪ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು. ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದಲ್ಲಿ ಮೊದಲ ಆರೋಪಿಯಾಗಿರುವ ಈಶ್ವರಪ್ಪ ಅವರನ್ನು ಬಂಧಿಸುವವರೆಗೆ ಹೋರಾಟ ಮುಂದುವರಿಯಲಿದೆ' ಎಂದರು.

ಮಾನವ ಹಕ್ಕು ಉಲ್ಲಂಘನೆ: ಅಮೆರಿಕ ಹೇಳಿಕೆಗೆ ತಿರುಗೇಟು

ವಾಷಿಂಗ್ಟನ್ (ಪಿಟಿಐ): 'ನಮ್ಮ ಕುರಿತು ಅಭಿಪ್ರಾಯಗಳನ್ನು ಹೊಂದಲು ಇತರರಿಗೆ ಹಕ್ಕು ಇದೆ. ಅದೇ ರೀತಿಯಲ್ಲಿ, ಅವರ ಅಭಿಪ್ರಾಯಗಳು, ಹಿತಾಸಕ್ತಿಗಳು, ಲಾಬಿಗಳು ಮತ್ತು ಅದಕ್ಕೆ ಕಾರಣವಾಗಿರುವ ಮತಬ್ಯಾಂಕ್ ಬಗ್ಗೆ ಅಭಿಪ್ರಾಯ ಹೊಂದುವ ಹಕ್ಕು ನಮಗೂ ಇದೆ. ಚರ್ಚೆಗಳು ನಡೆದಾಗ, ಈ ಬಗ್ಗೆ ಮಾತನಾಡಲು ನಾವು ಹಿಂಜರಿಯುವುದಿಲ್ಲ' ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.

ಸರ್ಕಾರದ ಕೆಲವು ಅಧಿಕಾರಿಗಳು, ಪೊಲೀಸರು ಮತ್ತು ಜೈಲು ಅಧಿಕಾರಿಗಳು ನಡೆಸುತ್ತಿರುವ ಮಾನವ ಹಕ್ಕು ಉಲ್ಲಂಘನೆಗಳು ಸೇರಿದಂತೆ, ಭಾರತದಲ್ಲಿ ಈಚೆಗೆ ನಡೆಯುತ್ತಿರುವ 'ಕಳವಳಕಾರಿ ಬೆಳವಣಿಗೆ'ಗಳ ಬಗ್ಗೆ ಅಮೆರಿಕ ನಿಗಾ ಇರಿಸಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಹೇಳಿದ್ದರು. ಭಾರತ ಮತ್ತು ಅಮೆರಿಕದ ವಿದೇಶಾಂಗ ಹಾಗೂ ರಕ್ಷಣಾ ಸಚಿವರ ನಡುವಣ 2+2 ಮಾತುಕತೆಯ ನಂತರದ ಜಂಟಿ ಮಾಧ್ಯಮ ಗೋಷ್ಠಿಯಲ್ಲಿ ಈ ವಿಚಾರವನ್ನು ಅವರು ಪ್ರಸ್ತಾಪಿಸಿದ್ದರು.

8ನೇ ಪುಟ ನೋಡಿ

ಟ್ವಿಟರ್ ಖರೀದಿಸಲು ಮುಂದಾದ ಮಸ್ಕ್ 10

ಚಿನಕುರಳಿ

ಪ್ರಕಾಶ್ ಶೆಟ್ಟಿ

ನನ್ನನ್ನೂ ದೇವಸ್ಥಾನದ ಒಳಗೆ ಬಿಡಲ್ಲ: ಪರಮೇಶ್ವರ

ಪ್ರಜಾವಾಣಿ ವಾರ್ತೆ

ಕೊರಟಗೆರೆ (ತುಮಕೂರು): 'ರಾಜ್ಯದ ಹಿರಿಯ ರಾಜಕಾರಣಿಯಾಗಿರುವ ನನ್ನನ್ನೂ ಇಂದಿಗೂ ದೇವಸ್ಥಾನದ ಒಳಗೆ ಸೇರಿಸುವುದಿಲ್ಲ' ಎಂದು ಶಾಸಕ ಡಾ.ಜಿ.ಪರಮೇಶ್ವರ ಅಸಮಾಧಾನ ವ್ಯಕ್ತಪಡಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಬಾಬು ಜಗಜೀವನ ರಾಂ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಅಸ್ಪೃಶ್ಯತೆಯ ಕಹಿ ಅನುಭವವನ್ನು ಬಿಚ್ಚಿಟ್ಟರು .

'ಪಿಎಚ್.ಡಿ ಮಾಡಿದ್ದೇನೆ. ವಿದೇಶಗಳಿಗೆ ಹೋಗಿ ಬಂದಿದ್ದೇನೆ. ಹಿಂದೆ ಸಚಿವನಾಗಿದ್ದೆ, ಈಗ ಶಾಸಕನಾಗಿದ್ದೇನೆ. ರಾಜ್ಯದಲ್ಲಿ ಹಿರಿಯ ರಾಜಕಾರಣಿಯಾಗಿದ್ದೇನೆ. ಆದರೂ ದೇವಸ್ಥಾನದ ಒಳಗೆ ಬಿಟ್ಟುಕೊಳ್ಳುವುದಿಲ್ಲ' ಎಂದು ಹೇಳಿದರು.

'ದೇವಸ್ಥಾನಗಳಿಗೆ ಹೋದರೆ ಸ್ವಲ್ಪ ನಿಂತುಕೊಳ್ಳಿ, ಅಲ್ಲಿಗೆ ಮಂಗಳಾರತಿ ತರುತ್ತೇವೆ ಎನ್ನುತ್ತಾರೆ. ದೇವಸ್ಥಾನದ ಒಳಕ್ಕೆ ಹೋಗುವ ಮೊದಲೇ ನನ್ನ ಹತ್ತಿರ ಮಂಗಳಾರತಿ ತರುತ್ತಾರೆ. ದೇವರ ಬಳಿ ಹೋಗಲು ಬಿಡುವುದಿಲ್ಲ. ದೇವಸ್ಥಾನದ ಒಳಗೆ ಬರುತ್ತಾರೆ ಎಂಬ ಆತಂಕದಿಂದ ಮಂಗಳಾರತಿಯನ್ನು ದೇವಸ್ಥಾನದಿಂದ ಹೊರಕ್ಕೆ ಹಿಡಿದುಕೊಂಡು ಓಡಿ ಬರುತ್ತಾರೆ. ಇಂತಹ ದಯನೀಯ ಸ್ಥಿತಿ ಈ ಸಮಾಜದಲ್ಲಿ ಇನ್ನೂ ಜೀವಂತ ಇದೆ' ಎಂದು ವಿಷಾದಿಸಿದರು.

'ಪ್ರಪಂಚದ ಯಾವುದೇ ದೇಶದಲ್ಲೂ ಇಂತಹ ಕೀಳುಮಟ್ಟದ ಜಾತಿ ವ್ಯವಸ್ಥೆ ಕೇಳಿಲ್ಲ, ನೋಡಿಲ್ಲ. ಈ ಬಗ್ಗೆ ಪ್ರಶ್ನಿಸಿದರೆ ಇದು ನಮ್ಮ ಭಾರತೀಯ ಸಂಸ್ಕೃತಿ ಎಂದು ದೊಡ್ಡದಾಗಿ ಹೇಳುತ್ತಾರೆ. ಜತೆಯಲ್ಲಿ ಹುಟ್ಟಿದ ಪರಿಶಿಷ್ಟರನ್ನು ಹೊರಗಿಡುತ್ತಾರೆ. ಇದು ಯಾವ ಸಂಸ್ಕೃತಿ' ಎಂದು ಪರಮೇಶ್ವರ ಖಾರವಾಗಿ ಪ್ರಶ್ನಿಸಿದರು.

'ನಾಯಿ ಕೆರೆಯಲ್ಲಿ ನೀರು ಕುಡಿಯುತ್ತದೆ. ಆದರೆ, ಪರಿಶಿಷ್ಟ ಜಾತಿಯವರು ಕೆರೆ ನೀರು ಮುಟ್ಟುವಂತಿಲ್ಲ. ಅಂತಹ ಪರಿಸ್ಥಿತಿಯನ್ನು ಇಂದಿಗೂ ನೋಡುತ್ತಿದ್ದೇವೆ. ಅಂತರ್ಜಾತಿ ವಿವಾಹ ಮಾಡಿಸಿದರೆ ಜಾತೀಯತೆ ತೊಲಗುತ್ತದೆ ಎಂಬ ಕಾರಣಕ್ಕೆ ಬಸವಣ್ಣನವರು ಆ ಕಾಲಕ್ಕೆ ಅಂತರ್ಜಾತಿ ವಿವಾಹ ಮಾಡಿಸಿದರು. ಆದರೆ ಈಗ ಅಂತರ್ಜಾತಿ ವಿವಾಹವಾದರೆ ನೇಣು ಹಾಕುವುದನ್ನು ಕಣ್ಣಾರೆ ಕಂಡಿದ್ದೇವೆ. ಮರ್ಯಾದೆಗೇಡು ಹತ್ಯೆ ನಡೆಯುತ್ತಿವೆ. ಸಮಾನತೆ ಬಗ್ಗೆ ಮಾತನಾಡುವ ನಾವು ಈ ಬಗ್ಗೆ ಯೋಚನೆ ಮಾಡಬೇಕಾಗಿದೆ' ಎಂದು ಹೇಳಿದರು.

ವಾಡಿಕೆಯಂತೆ ಮುಂಗಾರು ಮಳೆ: ಐಎಂಡಿ

ನವದೆಹಲಿ(ಪಿಟಿಐ): ಈ ಬಾರಿಯ ನೈರುತ್ಯ ಮುಂಗಾರು ವಾಡಿಕೆಯಂತೆ ಇರಲಿದ್ದು, ಉತ್ತರ ಭಾರತದ ಕೆಲವೆಡೆ ಅಧಿಕ ಮಳೆ ಬೀಳುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಗುರುವಾರ ಹೇಳಿದೆ.

ದೇಶದ ಮಧ್ಯಭಾಗ, ಹಿಮಾಲಯದ ತಪ್ಪಲಿನಲ್ಲಿ ಹಾಗೂ ವಾಯವ್ಯ ಭಾಗದಲ್ಲಿ ಸಹ ವಾಡಿಕೆಗಿಂತ ಹೆಚ್ಚು ಮಳೆ ಬೀಳುವುದು. ದೇಶದ ಈಶಾನ್ಯ ಹಾಗೂ ವಾಯವ್ಯ ಭಾಗದ ಕೆಲ ಪ್ರದೇಶಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಲಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

1971–2020ವರೆಗಿನ ದೀರ್ಘಾವಧಿ ಸರಾಸರಿ (ಎಲ್‌ಪಿಎ) ಮಳೆ 87 ಸೆಂ.ಮೀ. ಇದೆ. ಈ ಬಾರಿ ಈ ಎಲ್‌ಪಿಎ ಶೇ 96ರಿಂದ 104ರಷ್ಟು ಮಳೆ ಬೀಳುವ ಸಾಧ್ಯತೆ ಇದೆ ಎಂದು ಇಲಾಖೆ ಹೇಳಿದೆ. ಈ ಮೊದಲು 1961ರಿಂದ 2010ರ ವರೆಗಿನ ಎಲ್‌ಪಿಎ 88 ಸೆಂ.ಮೀ. ಅನ್ನು ಮಾನದಂಡವಾಗಿ ಇಲಾಖೆ ಪರಿಗಣಿಸುತ್ತಿತ್ತು.

ಈ ಹಿಂದಿನ ಮೂರು ವರ್ಷಗಳ ಮುಂಗಾರು ಅವಧಿಯಲ್ಲಿ ವಾಡಿಕೆಯಂತೆ ಮಳೆಯಾಗಿದೆ. ಈ ಬಾರಿಯೂ ವಾಡಿಕೆಯಂತೆ ಮಳೆ ಆಗುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿರುವ ಇಲಾಖೆ, ಮೇ ಅಂತ್ಯದಲ್ಲಿ ಮತ್ತೊಮ್ಮೆ ನೈರುತ್ಯ ಮಾರುತಗಳ ಪ್ರವೇಶ ಹಾಗೂ ಸಂಭಾವ್ಯ ಮಳೆ ಪ್ರಮಾಣ ಕುರಿತು ಮಾಹಿತಿ ನೀಡಲಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು ಗ್ರಾಮಾಂತರ,
ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು. ದೂರವಾಣಿ : 080-2959 9998
ಇ-ಮೇಲ್ : forest.brzp@gmail.com

ಸಂಖ್ಯೆ: ಎ2/ಬಿಯುಡಿ/ಬೆಂಗ್ರಾಸಾ/ಟೆಂಡರ್/ಸಿಆರ್-04/2022-23 ದಿನಾಂಕ: 05-04-2022

ಇ-ಟೆಂಡರ್ ಪ್ರಕಟಣೆ

2022-23 ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆ, ಸಾರ್ವಜನಿಕರಿಗೆ ವಿತರಣೆಗೋಸ್ಕರ ಸಸಿ ಬೆಳೆಸುವ (ಆರ್.ಎಸ್.ಪಿ.ಡಿ.) ಯೋಜನೆ, ರಸ್ತೆ ಬದಿ ನೆಡುತೋಪು ಯೋಜನೆ ಮತ್ತು ನಗರ ಪ್ರದೇಶ ಹಸಿರೀಕರಣ, ಯೋಜನೆಗಳಡಿ ನೆಡುತೋಪುಗಳ ನಿರ್ಮಾಣ, ನಿರ್ವಹಣೆ ಮತ್ತು ಸಸ್ಯ ಕ್ಷೇತ್ರಗಳಲ್ಲಿ ಸಸಿಗಳನ್ನು ಬೆಳೆಸುವುದು. ಹಾಗೂ ನಿರ್ವಹಣೆ ಮಾಡುವ ಕಾಮಗಾರಿಗಳನ್ನು ಕೈಗೊಳ್ಳಲು ಬೆಂಗಳೂರು ಗ್ರಾಮಾಂತರ ಪ್ರಾದೇಶಿಕ ಅರಣ್ಯ ವಿಭಾಗ / ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗದಲ್ಲಿ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಮಾತ್ರ ಕರ್ನಾಟಕ ಸರ್ಕಾರದ ಇ-ಪೋರ್ಟಲ್ http:eproc.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಫಾರಂಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 25-04-2022 ರ ಸಂಜೆ 4.00 ಗಂಟೆವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 27-04-2022 ರ ಅಪರಾಹ್ನ 4.00 ಗಂಟೆಗೆ. ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಹಾಗೂ ಷರತ್ತುಗಳನ್ನು ಪೂರೈಕೆಯಿಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಆರ್ಥಿಕ ಬಿಡ್‌ನ್ನು ದಿನಾಂಕ : 28-04-2022 ರಂದು ಅಪರಾಹ್ನ 4.00 ಗಂಟೆಗೆ ತೆರೆಯಲಾಗುವುದು.

ಮೇಲ್ಕಂಡ ದಿನಾಂಕಗಳಂದು ಯಾವುದೇ ಟೆಂಡರ್ ಬಾರದಿದ್ದರೆ ಅಥವಾ ಕಾರಣಾಂತರಗಳಿಂದ ಟೆಂಡರ್ ನಡೆಯದೇ ಇದ್ದರೆ. ಇದೇ ಪ್ರಕಟಣೆಯ ಷರತ್ತಿಗೊಳ್ಳಪಟ್ಟು ದಿನಾಂಕ : 09-05-2022 ರ ಅಪರಾಹ್ನ 4.00 ಗಂಟೆಯವರೆಗೆ ಮರು ಟೆಂಡರ್ ಮುಂದುವರೆಸಲಾಗುವುದು. ತಾಂತ್ರಿಕ ಬಿಡ್‌ನ್ನು ದಿನಾಂಕ : 11-05-2022 ರಂದು ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ದಿನಾಂಕ : 12-05-2022 ರಂದು ತೆರೆಯಲಾಗುವುದು.

ಮೇಲಿನ ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು ಇಲ್ಲಿ ಸಂಪರ್ಕಿಸಬಹುದು.

ಸಹಿ/-
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು ಗ್ರಾಮಾಂತರ.
ವಾಸಾಸಂಇ/ಉನಿಕ/ಬೆಂಗ್ರಾಜಿ/ಮಣಿಪಾಲ್/167/22-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೋಲಾರ ಜಿಲ್ಲೆ,
ಕೋಲಾರ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ, ಜಿಲ್ಲಾ ಕೌಶಲ್ಯ ಮಿಷನ್
ಕೊಠಡಿ ಸಂಖ್ಯೆ: ಎಸ್20, 2ನೇ ಮಹಡಿ ಜಿಲ್ಲಾಡಳಿತ ಭವನ,
ಎನ್.ಹೆಚ್-75, ಕುಂಬಾರಹಳ್ಳಿ, ಕೋಲಾರ-563103.
ಇ-ಮೇಲ್: dsdokolar@gmail.com ದೂ: 08152-243545
ಸಂ: ಜಿಕೌಮಿ/ಕೋ/(ಹೊ.ಗು)ಸಿ.ಆರ್/154/2021-22 ದಿನಾಂಕ: 11.04.2022

ಟೆಂಡರ್ ಪ್ರಕಟಣೆ (2ನೇ ಕರೆ) ಇ-ಪ್ರೊಕ್ಯೂರ್‌ಮೆಂಟ್ ಮೂಲಕ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಸೇವೆಗಳಿಗೆ ನಿಬಂಧನೆಗೊಳಪಟ್ಟಂತೆ, ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿ, ಕೋಲಾರ ಇವರು ಟೆಂಡರ್ ಮೂಲಕ ಅರ್ಹ ಮಾನವಸಂಪನ್ಮೂಲ ಸೇವೆ ಪೂರೈಸುವ ಏಜೆನ್ಸಿಗಳಿಂದ ಮಾನವ ಸೇವೆಗಳನ್ನು ಪಡೆದುಕೊಳ್ಳಲು ಅರ್ಹ ಏಜೆನ್ಸಿಗಳಿಂದ/ಸಂಸ್ಥೆಯವರಿಂದ ಸ್ಪರ್ಧಾತ್ಮಕ ಮೂಲಕ ಇ-ಪ್ರೊಕ್ಯೂಮರ್‌ಮೆಂಟ್ ಟೆಂಡರ್ ಕರೆಯಲಾಗಿದೆ. ಹೆಚ್ಚಿನ ವಿವರಗಳು ಟೆಂಡರ್ ದಸ್ತಾವೇಜುಗಳಲ್ಲಿ ಲಭ್ಯವಿದ್ದು, www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ, ಜಿಲ್ಲಾ ಕೌಶಲ್ಯ ಮಿಷನ್ ಕೋಲಾರ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು. **(1)** ಟೆಂಡರ್ ಪ್ರಕಾರ ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಅರ್ಜಿ ನಮೂನೆ ಹಾಗೂ ಇ.ಎಂ.ಡಿ ಠೇವಣಿಯನ್ನು ಸಲ್ಲಿಸುವ ಕೊನೆಯ ದಿನಾಂಕ: **11.04.2022 ರಿಂದ 25.04.2022 ಸಂಜೆ 5.00 ಗಂಟೆ. (2)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **26.04.2022 ಸಂಜೆ 5.10. (3)** ಆರ್ಥಿಕ ಬಿಡ್ ತೆರೆಯುವ ದಿನಾಂಕ: **27.04.2022 ಬೆಳಿಗ್ಗೆ 11.00.**

ಸಹಿ/- ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ,
ಜಿಲ್ಲಾ ಕೌಶಲ್ಯ ಮಿಷನ್, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ19/ಎಂ.ಸಿ.ಎ/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೈಋತ್ಯ ರೈಲ್ವೆ
ಇ-ಟೆಂಡರ್ ಪ್ರಕಟಣೆ ಸಂ. 01-ಎಕ್ಸ್‌ಇಎನ್-ಡಬ್ಲ್ಯುಎಸ್-ಝೋನಲ್-/2022-23 ದಿನಾಂಕ : 12-04-2022
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ ಕಾರ್ಯಾಗಾರದಲ್ಲಿ ದಿನಾಂಕ : 01-07-2022 ರಿಂದ 30-06-2023 ರವರೆಗೆ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಮತ್ತು ಸಾಮಗ್ರಿಗಳ ಸರಬರಾಜಿಗಾಗಿ ವಲಯವಾರು ಟೆಂಡರ್‌ಗಳು.	ರೂ. 2,00,00,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 12-05-2022 ರಂದು 15:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಕಾರ್ಯಪಾಲಕ ಇಂಜಿನಿಯರ್
ಕ್ಯಾರಿಯೇಜ್ ರಿಪೇರ್ ಕಾರ್ಯಾಗಾರ, ಹುಬ್ಬಳ್ಳಿ
ಪಿಯುಬಿ/33/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23
S.W.Railways SWRRLY SWRRLY

‘ಆ ಹದಿನೆಂಟು ದಿನಗಳು’ ನಾಟಕ ಪ್ರದರ್ಶನ 23ಕ್ಕೆ

ಬೆಂಗಳೂರು: ಪ್ರಭಾತ್ ಆರ್ಟ್ ಇಂಟರ್‌ನ್ಯಾಷನಲ್ ಏ.23 ರಂದು ಸಂಜೆ 6.15ಕ್ಕೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಮಹಾಭಾರತ ಕಥೆ ಆಧಾರಿತ ‘ಆ ಹದಿನೆಂಟು ದಿನಗಳು’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಈ ನೃತ್ಯ ನಾಟಕವನ್ನು ಭರತ್ ಆರ್. ಪ್ರಭಾತ್ ಹಾಗೂ ಶರತ್ ಆರ್. ಪ್ರಭಾತ್ ನೇತೃತ್ವದಲ್ಲಿ 120 ನೃತ್ಯ ಪಟುಗಳು ನಡೆಸಿಕೊಡಲಿದ್ದಾರೆ.

‘ಈ ನಾಟಕ ಸೃಜನಶೀಲ ಶೈಲಿಯ ಕಲೆ ಹಾಗೂ ತಂತ್ರಜ್ಞಾನದ ವೈಭವೋಪೇತ ರಸಪಾಕ. ಮಹಾಭಾರತದಿಂದ ರಶವಶರಾಗಿ ನಿರ್ಮಿತಗೊಂಡ ಈ ಕಲಾಕೃತಿ, ಸೃಜನಾತ್ಮಕ ಸಂಗೀತ ಹಾಗೂ ನೃತ್ಯ ಸಂಯೋಜನೆಯಿಂದ ಹೊಸ ರೂಪ ತಳೆದಿದೆ. ಕುರುಕ್ಷೇತ್ರ ಯುದ್ಧದಲ್ಲಿನ 18 ದಿನಗಳು ಜರಗುವ ಸನ್ನಿವೇಶಗಳ ಕಲಾತ್ಮಕ ನೋಟ ಇದಾಗಿದೆ’ ಎಂದು ಪ್ರಕಟಣೆ ತಿಳಿಸಿದೆ.

ಮನೆ ಹಸ್ತಾಂತರಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪಟೇಲ್ ಭೈರಹನುಮಯ್ಯ ಕೊಳಗೇರಿ ನಿವಾಸಿಗಳಿಗಾಗಿ ನಿರ್ಮಿಸಿರುವ 60 ಮನೆಗಳ ಬಹುಮಹಡಿ ಕಟ್ಟಡವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಉದ್ಘಾಟಿಸಿದರು. (ಎಡದಿಂದ) ಸಚಿವ ಮುರುಗೇಶ್ ನಿರಾಣಿ, ಸಂಸದ ಡಿ.ವಿ.ಸದಾನಂದ ಗೌಡ, ಸಚಿವ ಡಾ.ಸಿ.ಎನ್‌.ಅಶ್ವತ್ಥ ನಾರಾಯಣ, ಶಾಸಕ ಮುನಿರತ್ನ ಇದ್ದರು.

ಬೆಂಗಳೂರು: ಮಲ್ಲೇಶ್ವರ ಕ್ಷೇತ್ರ ವ್ಯಾಪ್ತಿಯ ವಾರ್ಡ್ 45ರ ಪಟೇಲ್ ಭೈರಹನುಮಯ್ಯ ಕೊಳೆಗೇರಿ ಫಲಾನುಭವಿಗಳಿಗೆ ಬಹುಮಹಡಿಯಲ್ಲಿ ಕಟ್ಟಲಾಗಿರುವ 60 ಮನೆಗಳನ್ನು ಹಸ್ತಾಂತರಿಸುವ ಪ್ರಕ್ರಿಯೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಚಾಲನೆ ನೀಡಿದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 131ನೇ ಜಯಂತ್ಯುತ್ಸವದ ಅಂಗವಾಗಿ ಬಿಬಿಎಂಪಿ ವತಿಯಿಂದ ಯಶವಂತಪುರದ ಸಂವಿಧಾನ ವೃತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅವರು, ₹ 5.5 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ 60 ಮನೆಗಳ ಬಹುಮಹಡಿ ಕಟ್ಟಡದ ಉದ್ಘಾಟನೆ ನೆರವೇರಿಸಿದರು.

ಅಧ್ಯಕ್ಷತೆ ವಹಿಸಿದ್ದ ಕ್ಷೇತ್ರದ ಶಾಸಕರೂ ಆದ ಡಾ.ಸಿ.ಎನ್.ಅಶ್ವತ್ಥನಾರಾಯಣ ಮಾತನಾಡಿ, ’ನಮ್ಮ ಸರ್ಕಾರ, ಅಂಬೇಡ್ಕರ್ ಹಾಕಿಕೊಟ್ಟ ಮೇಲ್ಪಂಕ್ತಿಯಲ್ಲಿ ನಡೆದು ದುರ್ಬಲ ವರ್ಗದವರನ್ನು ಸಬಲೀಕರಿಸಲು ಹೆಚ್ಚಿನ ಒತ್ತು ನೀಡುತ್ತಿದೆ’ ಎಂದರು.

‘ಮಲ್ಲೇಶ್ವರ ಕ್ಷೇತ್ರದಲ್ಲಿರುವ ಎಲ್ಲಾ 13 ಸರ್ಕಾರಿ ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಸಂಸದ ಡಿ.ವಿ.ಸದಾನಂದ ಗೌಡರ ಒತ್ತಾಸೆಯಿಂದ ಜನೌಷಧಿ ಕೇಂದ್ರಗಳ ಸ್ಥಾಪನೆ ಮೂಲಕ ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಉತ್ತಮಗೊಳಿಸಲಾಗಿದೆ. ಕ್ಷೇತ್ರ ವ್ಯಾಪ್ತಿಯಲ್ಲಿ ಡಿಜಿಟಲ್ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಯೋಜಿಸಲಾಗುತ್ತಿದೆ’ ಎಂದರು.

’ಕರಿಮಂಡಿ ಕೊಳೆಗೇರಿಯಲ್ಲಿ 36 ಮತ್ತು ಸರ್ದಾರ್ ವಲ್ಲಭಬಾಯಿ ಪಟೇಲ್ (ಯಶವಂತಪುರ ಮಾರ್ಕೆಟ್ ಪಕ್ಕ) ಕೊಳೆಗೇರಿ ಪ್ರದೇಶದಲ್ಲಿ 35 ಮನೆಗಳನ್ನು ಕಟ್ಟಲಾಗಿದೆ. ಸಿದ್ಧಾರ್ಥ ಕೊಳೆಗೇರಿಯಲ್ಲಿ 100 ಒಂಟಿ ಮನೆಗಳನ್ನು ಕಟ್ಟಲಾಗಿದೆ. ಎನ್‌ಎಚ್ ಕಾಲೋನಿಯಲ್ಲಿ ನೂರಕ್ಕೂ ಹೆಚ್ಚು ಮನೆಗಳಿವೆ. ಈಗ ಪಟೇಲ್ ಭೈರಹನುಮಯ್ಯ ಕೊಳೆಗೇರಿಯಲ್ಲಿ 60 ಮನೆಗಳನ್ನು ಕಟ್ಟಲಾಗಿದ್ದು, ಇನ್ನೂ 60 ಮನೆಗಳಿರುವ ಕಟ್ಟಡ ನಿರ್ಮಾಣಕ್ಕೆ ಇಂದು ಚಾಲನೆ ನೀಡಲಾಗಿದೆ’ ಎಂದರು.

ಪ್ರಜಾವಾಣಿ
ಜನಸ್ಪಂದನ
ಸಿಟಿಜ಼ನ್ಸ್ ಫಾರ್ ಚೇಂಜ್

ನೀವು ಹೆಬ್ಬಾಳ ವಿಧಾನಸಭಾ ಕ್ಷೇತ್ರದ ನಿವಾಸಿಯೇ?

ಶ್ರೀ ಬೈರತಿ ಸುರೇಶ್

ನಿಮ್ಮ ಸಮಸ್ಯೆಗಳಿಗೆ ದನಿ ನೀಡಲು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಆಯೋಜಿಸಿರುವ ಜನಸ್ಪಂಧನ ಕಾರ್ಯಕ್ರಮದಲ್ಲಿ ಭಾಗವಹಿಸಿ. ನಿಮ್ಮ ಕ್ಷೇತ್ರದ ಶಾಸಕರೊಂದಿಗೆ, ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ, ಪೊಲೀಸ್ ಹಾಗೂ ಇನ್ನಿತರ ಇಲಾಖೆಗಳ ಅಧಿಕಾರಿಗಳೂ ಉಪಸ್ಥಿತರಿದ್ದು, ನಿಮ್ಮ ಅಹವಾಲುಗಳಿಗೆ ಕಿವಿಯಾಗಲಿದ್ದಾರೆ. ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಿ.

- ಟ್ರಾಫಿಕ್
- ಕಸ ವಿಲೇವಾರಿ
- ನೀರು ಸರಬರಾಜು
- ರಸ್ತೆ ಗುಂಡಿಗಳು

ಕಾರ್ಯಕ್ರಮದ ದಿನಾಂಕ: 16/04/2022, ಶನಿವಾರ
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ
(ನೊಂದಣಿ: ಬೆಳಿಗ್ಗೆ 9 ರಿಂದ, ಪ್ರವೇಶ ಉಚಿತ)

ಸ್ಥಳ: ಹೆಚ್ ಎಂ ಟಿ ಗ್ರೌಂಡ್ಸ್, ಗಂಗಾನಗರ, ಆರ್ ಟಿ ನಗರ ಪೋಲಿಸ್ ಠಾಣೆ ಎದುರು, ಬೆಂಗಳೂರು-32

ಸಂಪರ್ಕಕ್ಕೆ:
ರವಿ ಎಂ: 9739997938

ಕರ್ನಾಟಕ ಸರ್ಕಾರ
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ಎನ್.ಹೆಚ್-75, ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ-563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ.
ಇ-ಮೇಲ್: eemidklr@rediffmail.com, eemigwddkolar@gmail.com
ದೂರವಾಣಿ ಸಂಖ್ಯೆ:- 08152-200049
ಸಂ: ಕಾ.ಪಾ.ಇಂ/ಸ.ನೀ ಮತ್ತು ಅ.ಅ.ವಿ/ಕೋ/ತಾಂ-ಸ/ಸ.ಇಂ-1/ಟೆಂಡರ್ ಪ್ರಕಟಣೆ/717/2022-23/ದಿ:13-04-2022

3ನೇ ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ

ಉಲ್ಲೇಖ: 1) ಈ ಕಛೇರಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:11/2021-22/ 188/ ದಿ:05-02-2022.
2) ಈ ಕಛೇರಿ 1ನೇ ಅಲ್ಪಾವಧಿ ಮುಂದೂಡಿಕೆ ಟೆಂಡರ್ ಪ್ರಕಟಣೆ ಸಂಖ್ಯೆ:11/ 21-22/ 421/ದಿ:03-03-22.
3) ಈ ಕಛೇರಿ 2ನೇ ಅಲ್ಪಾವಧಿ ಮುಂದೂಡಿಕೆ ಹಾಗೂ ತಿದ್ದುಪಡಿ ಟೆಂಡರ್ ಪ್ರಕಟಣೆ ಸಂಖ್ಯೆ:11/21-22/ 590/ದಿ:24-03-22.

ಮೇಲಿನ ಉಲ್ಲೇಖ (1) ಮತ್ತು (2)ರಂತೆ ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ:11/2021-22/ ದಿನಾಂಕ: 05-02-2022 ರಂದು ಈ ವಿಭಾಗ ವ್ಯಾಪ್ತಿಯ 4702 ಪ್ರಧಾನ ಕಾಮಗಾರಿ-ಸರಣಿ ಚೆಕ್ ಡ್ಯಾಂ ನಿರ್ಮಾಣ ಲೆಕ್ಕ ಶೀರ್ಷಿಕೆಯಡಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿತ್ತು. ಸದರಿ ಕಾಮಗಾರಿಗಳ ಟೆಂಡರ್‌ಗಳನ್ನು ತಾಂತ್ರಿಕ ಕಾರಣಗಳಿಂದ ಈ ಕೆಳಕಂಡಂತೆ ಮುಂದೂಡಲಾಗಿರುತ್ತದೆ.

1. ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸುವ ಪ್ರಾರಂಭಿಕ ದಿನಾಂಕ: 20/04/2022 16:00 ಗಂಟೆಯಿಂದ
2. ಪ್ರೀ ಬಿಡ್ ಸಭೆಯ ದಿನಾಂಕ : 25/04/2022 11:00 ಗಂಟೆಗೆ
   ಸ್ಥಳ: ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ
3. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02/05/2022 16:00 ಗಂಟೆಯವರೆಗೆ
4. ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ : 04/05/2022 16:30 ಗಂಟೆಗೆ
5. ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ : ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ

ಉಳಿದಂತೆ ಸದರಿ ಪ್ರಕಟಣೆಯನ್ನು ಯಾವುದೇ ಬದಲಾವಣೆ ಇರುವುದಿಲ್ಲ. ಪ್ರಕಟಣೆಯ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಅಥವಾ ದೂರವಾಣಿ ಮುಖಾಂತರ ಸಂಬಂಧಪಟ್ಟ ಶಾಖಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕೋಲಾರ.

ಪರೀಕ್ಷೆ ಮುಂದೂಡಿಕೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಏಪ್ರಿಲ್ ಮತ್ತು ಮೇ ತಿಂಗಳ ಅವಧಿಯಲ್ಲಿ ನಡೆಯಬೇಕಾಗಿದ್ದ ಕೆಲವು ವಿಷಯಗಳ ಪರೀಕ್ಷೆಗಳನ್ನು ಮುಂದೂಡಲಾಗಿದೆ.

ಸ್ನಾತಕೋತ್ತರ ಪದವಿಯ ಮೂರನೇ ಸೆಮಿಸ್ಟರ್ ಪರೀಕ್ಷೆಗಳು ಹಾಗೂ ಎಂಬಿಎ (ಹಗಲು ಮತ್ತು ಸಂಜೆ) ಒಳಗೊಂಡಂತೆ ಎಂಸಿಎ ಮೂರನೇ ಮತ್ತು ಐದನೇ ಸೆಮಿಸ್ಟರ್ ಪರೀಕ್ಷೆಗಳು ಮತ್ತು ಜೈವಿಕ ವಿಜ್ಞಾನ ಬಿ.ಎಸ್ಸಿ. ಮತ್ತು ಎಂ.ಎಸ್ಸಿ. ಪದವಿಯ 3, 5, 7, 9ನೇ ಸೆಮಿಸ್ಟರ್‌ನ ಪರೀಕ್ಷೆಗಳನ್ನು ಮುಂದೂಡಲಾಗಿದೆ.

ಪರಿಷ್ಕೃತ ವೇಳಾಪಟ್ಟಿಯನ್ನು ಸದ್ಯದಲ್ಲೇ ಪ್ರಕಟಿಸಲಾಗುವುದು ಎಂದು ಕುಲಸಚಿವ(ಮೌಲ್ಯಮಾಪನ) ತಿಳಿಸಿದ್ದಾರೆ.

ವಿಮಾನದಲ್ಲಿ ಪ್ರಯಾಣಿಕನ ಫೋನ್‌ಗೆ ಬೆಂಕಿ, ಆತಂಕ

ನವದೆಹಲಿ (ಪಿಟಿಐ): ದಿಬ್ರೂಘರ್ ಮತ್ತು ದೆಹಲಿ ನಡುವೆ ಸಂಚರಿಸುತ್ತಿದ್ದ ಇಂಡಿಗೋ ವಿಮಾನದಲ್ಲಿ ಪ್ರಯಾಣಿಕರೊಬ್ಬರ ಮೊಬೈಲ್ ಫೋನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಅಗ್ನಿಶಾಮಕ ಪರಿಕರವನ್ನು ಬಳಸಿ ಸಿಬ್ಬಂದಿ ಕೂಡಲೇ ಬೆಂಕಿ ನಂದಿಸಿದ್ದಾರೆ.

ದೆಹಲಿಗೆ ಬರುತ್ತಿದ್ದ 6ಇ 2037 ವಿಮಾನದಲ್ಲಿ ಈ ಘಟನೆ ನಡೆದಿದ್ದು, ಯಾರಿಗೂ ತೊಂದರೆಯಾಗಿಲ್ಲ. ವಿಮಾನ ಸುರಕ್ಷಿತವಾಗಿ ದೆಹಲಿ ತಲುಪಿದೆ ಎಂದು ಡಿಜಿಸಿಎ ಹೇಳಿಕೆ ತಿಳಿಸಿದೆ.

श्री आदिशङ्कराचार्य शारदा लक्ष्मीनृसिंह पीठम्, श्री मठम् – हरिहरपुरम्
SRI ADISHANKARACHARYA SHARADA LAKSHMI NARASIMHA PEETAM
ಶ್ರೀ ಆದಿಶಂಕರಾಚಾರ್ಯ ಶಾರದಾ ಲಕ್ಷ್ಮೀನೃಸಿಂಹ ಪೀಠಮ್



ಶ್ರೀಮಠ ಹರಿಹರಪುರದಲ್ಲಿ ಐತಿಹಾಸಿಕ ಮಹಾಕುಂಭಾಭಿಷೇಕ ಮಹೋತ್ಸವ
ದಿನಾಂಕ: 10.04.2022ರಿಂದ 24.04.2022ರ ವರೆಗೆ

ಆತ್ಮೀಯರೇ,
ಕರ್ನಾಟಕ ರಾಜ್ಯ, ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಪವಿತ್ರ ತುಂಗಾ ನದಿಯ ತೀರದಲ್ಲಿರುವ ದಿವ್ಯ ಕ್ಷೇತ್ರ ಹರಿಹರಪುರದಲ್ಲಿ ಅಗಸ್ತ್ಯ ಮಹರ್ಷಿ ಕರಾರ್ಚಿತ ಶ್ರೀ ಲಕ್ಷ್ಮೀನರಸಿಂಹಸ್ವಾಮಿಗೆ ಹಾಗೂ ಜಗದ್ಗುರು ಆದಿಶಂಕರ ಭಗವತ್ಪಾದರು ಪ್ರತಿಷ್ಠಾಪಿಸಿರುವ ಶ್ರೀ ಶಾರದಾ ಪರಮೇಶ್ವರೀ ದೇವಿಗೆ
ಮಹಾಕುಂಭಾಭಿಷೇಕ ಮಹೋತ್ಸವವನ್ನು
ಶ್ರೀಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀಮದ್ ಜಗದ್ಗುರು ಶಂಕರಾಚಾರ್ಯ
ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳವರು
ದಿನಾಂಕ: 15.04.2022ರಂದು ತಮ್ಮ ಅಮೃತ ಹಸ್ತದಿಂದ ನೆರವೇರಿಸಲಿದ್ದಾರೆ.
ಏಪ್ರಿಲ್ 10ರಿಂದ 24ರ ವರೆಗೆ ಶ್ರದ್ಧಾ-ಭಕ್ತಿ, ಸಡಗರ-ಸಂಭ್ರಮದಿಂದ ಈ ಮಹಾಕುಂಭಾಭಿಷೇಕ ಮಹೋತ್ಸವವು ನಡೆಯಲಿದ್ದು, ಈ ಶುಭ ಸಂದರ್ಭದಲ್ಲಿ ಅನೇಕ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮಹೋತ್ಸವದಲ್ಲಿ ರಾಜ್ಯದ ಮತ್ತು ರಾಷ್ಟ್ರದ ಅನೇಕ ಗಣ್ಯರು, ಅತಿಗಣ್ಯರು ಹಾಗೂ ಲಕ್ಷಾಂತರ ಭಕ್ತರು ಭಾಗವಹಿಸಲಿದ್ದಾರೆ. ಆದ್ದರಿಂದ ತಾವೆಲ್ಲರೂ ಈ ಪ್ರಕಟಣೆಯನ್ನು ವೈಯಕ್ತಿಕ ಆತ್ಮೀಯ ಆಹ್ವಾನ ಪತ್ರಿಕೆ ಎಂದು ಭಾವಿಸಿ, ಲೋಕಕಲ್ಯಾಣಾರ್ಥವಾಗಿ ನಡೆಯಲಿರುವ ಈ ಮಹಾಕುಂಭಾಭಿಷೇಕ ಮಹೋತ್ಸವದಲ್ಲಿ ಕುಟುಂಬ ಸಮೇತರಾಗಿ ಶ್ರದ್ಧಾಭಕ್ತಿಯಿಂದ ಪಾಲ್ಗೊಂಡು, ಪ್ರಸಾದ ಸ್ವೀಕರಿಸುವುದರೊಂದಿಗೆ ಶ್ರೀ ಶಾರದಾ ಲಕ್ಷ್ಮೀನರಸಿಂಹಸ್ವಾಮಿಯ ಹಾಗೂ ಪರಮಪೂಜ್ಯ ಮಹಾಸ್ವಾಮಿಗಳವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕೆಂದು ಈ ಮೂಲಕ ಕೋರುತ್ತೇವೆ.
ಇಂತಿ
ಡಾ|| ಬಿ.ಎಸ್. ರವಿಶಂಕರ್, ಆಡಳಿತಾಧಿಕಾರಿಗಳು
ಶ್ರೀಮಠ, ಹರಿಹರಪುರ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.



ಸರ್ವರಿಗೂ ಆದರದ ಆಮಂತ್ರಣ

ಸಾಗರದಲ್ಲಿ ನಡೆದ ಒಕ್ಕಲಿಗರ ಸಮುದಾಯ ಭವನ ಉದ್ಘಾಟನಾ ಸಮಾರಂಭ

‘ಮತಾಂತರ ಸಾಮಾಜಿಕ ಪಿಡುಗು’

ಪ್ರಜಾವಾಣಿ ವಾರ್ತೆ

ಸಾಗರ: ‘ಮತಾಂತರ ಒಂದು ಪಿಡುಗಾಗಿ ಕಾಡುತ್ತಿದೆ. ತಮ್ಮ ಧರ್ಮದ ಜನಸಂಖ್ಯೆ ಜಾಸ್ತಿ ಮಾಡಲು ಇತರೆ ಧರ್ಮೀಯರನ್ನು ಮತಾಂತರ ಮಾಡುವ ಪ್ರಕ್ರಿಯೆ ದುರದೃಷ್ಟಕರ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಇಲ್ಲಿನ ಒಕ್ಕಲಿಗರ ಸಮಾಜದ ವತಿಯಿಂದ ಗುರುವಾರ ಆಯೋಜಿಸಿದ್ದ ಒಕ್ಕಲಿಗರ ಸಮುದಾಯ ಭವನ ಉದ್ಘಾಟನಾ ಸಮಾರಂಭದಲ್ಲಿ ಒಕ್ಕಲಿಗರ ಸಮಾಜದ ಸ್ಮರಣ ಸಂಚಿಕೆ ಲೋಕಾರ್ಪಣೆಗೊಳಿಸಿ ಮಾತನಾಡಿದರು.

‘ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥ ನಾರಾಯಣ ಮಾತನಾಡಿ, ‘ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪಕ್ಕದಲ್ಲಿ 108 ಅಡಿ ಎತ್ತರದ ಕೆಂಪೇಗೌಡ ಮೂರ್ತಿಯನ್ನು ನಿರ್ಮಿಸುತ್ತಿದ್ದು, ಜೂನ್ ನಲ್ಲಿ ಲೋಕಾರ್ಪಣೆಗೊಳ್ಳಲಿದೆ’ ಎಂದು ತಿಳಿಸಿದರು.

ಸಾನ್ನಿಧ್ಯ ವಹಿಸಿದ್ದ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ, ‘ಒಕ್ಕಲಿಗ ಸಮಾಜದ ಮಕ್ಕಳಿಗೆ ವಿದ್ಯಾಭ್ಯಾಸ ಸಮಸ್ಯೆ ಉಂಟಾದರೆ ಸಮುದಾಯ ಅವರ ಬೆನ್ನಿಗೆ ನಿಂತುಕೊಳ್ಳಬೇಕು. ಜೊತೆಗೆ ಇತರೆ ಸಮುದಾಯಕ್ಕೂ ಕಣ್ಣಾಗಬೇಕು’ ಎಂದರು.

ಕಾರ್ಯಕ್ರಮದಲ್ಲಿ ಒಕ್ಕಲಿಗರ ಸಮಾಜದ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು. ಸಚಿವರಾದ ಆರಗ ಜ್ಞಾನೇಂದ್ರ, ಡಾ. ಸಿ.ಎನ್ ಅಶ್ವತ್ಥನಾರಾಯಣ, ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಶಿವಮೊಗ್ಗ ಆದಿಚುಂಚನಗಿರಿ ಮಠದ ಪ್ರಸನ್ನನಾಥ ಸ್ವಾಮೀಜಿ, ಗರ್ತಿಕೆರೆ ಮಠದ ರೇಣುಕಾನಂದ ಸ್ವಾಮೀಜಿ, ಶಾಸಕ ಎಚ್.ಹಾಲಪ್ಪ ಹರತಾಳು, ಮಾಜಿ ಶಾಸಕ ಗೋಪಾಲಕೃಷ್ಣ ಬೇಳೂರು ಇದ್ದರು.

ಒಕ್ಕಲಿಗರ ಸಂಘಕ್ಕೆ ಖಾಸಗಿ ವಿ.ವಿ: ಶೀಘ್ರವೇ ಅನುಮೋದನೆ

ಒಕ್ಕಲಿಗರ ಸಂಘದ ವತಿಯಿಂದ ಖಾಸಗಿ ವಿಶ್ವವಿದ್ಯಾನಿಲಯ ಸ್ಥಾಪಿಸಲು ಸರ್ಕಾರವು ಕೆಲವೇ ತಿಂಗಳುಗಳಲ್ಲಿ ಅನುಮೋದನೆ ಕೊಡಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದರು.

ಒಕ್ಕಲಿಗರ ಸಂಘದ ವತಿಯಿಂದ ಖಾಸಗಿ ವಿಶ್ವವಿದ್ಯಾನಿಲಯ ಸ್ಥಾಪಿಸಬೇಕೆಂಬುದು ಸಮುದಾಯದ ಮಠಾಧೀಶರ ಅಪೇಕ್ಷೆಯಾಗಿದೆ ಎಂದರು.

ಇಲ್ಲಿ ಇಂತಹ ಭವನ ನಿರ್ಮಿಸಬೇಕೆಂಬುದು ಬಹಳ ದಿನಗಳ ಕನಸಾಗಿತ್ತು. ಈ ಕಟ್ಟಡ ನಿರ್ಮಾಣಕ್ಕೆ ಸರ್ಕಾರ ₹ 30 ಲಕ್ಷ ಮಂಜೂರು ಮಾಡಿದೆ ಎಂದು ಹೇಳಿದರು.

ದೇಶ ವಿದೇಶಗಳಲ್ಲಿ ಕೂಡ ಒಕ್ಕಲಿಗರು ಸಂಘಟಿತರಾಗಿದ್ದು, ನಾಡು ಕಟ್ಟುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಸಮುದಾಯದವರ ಅಭಿವೃದ್ಧಿಗಾಗಿ ಸರ್ಕಾರವು ಒಕ್ಕಲಿಗರ ಅಭಿವೃದ್ಧಿ ಕಾರ್ಪೊರೇಷನ್ ಸ್ಥಾಪಿಸಿದೆ. ಒಕ್ಕಲಿಗರು ಎಲ್ಲೆಲ್ಲಿ ಅಲ್ಪಸಂಖ್ಯಾತರಾಗಿದ್ದಾರೋ ಅವರ ಅಭಿವೃದ್ಧಿಗಾಗಿ ಕಾರ್ಪೊರೇಷನ್ ಕೆಲಸ ಮಾಡಲಿದೆ ಎಂದರು.

ನಗರದ ಬ್ರಿಗೇಡ್ ರಸ್ತೆಯಲ್ಲಿ ಗುರುವಾರ ರಾತ್ರಿ ಹರಿಯುತ್ತಿದ್ದ ನೀರಿನಲ್ಲೇ ವಾಹನಗಳು ಸಂಚರಿಸಿದವು – ಪ್ರಜಾವಾಣಿ ಚಿತ್ರ

ಮಳೆ: ಮನೆಗಳಿಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುರುವಾರವೂ ಸಂಜೆ ಹಾಗೂ ರಾತ್ರಿ ಜೋರು ಮಳೆ ಆಯಿತು.

ಬುಧವಾರವೂ ನಗರದ ಹಲವೆಡೆ ಮಳೆ ಆಗಿತ್ತು. ಗುರುವಾರ ಬೆಳಿಗ್ಗೆಯಿಂದ ನಗರದ ಕೆಲವೆಡೆ ಮೋಡ ಕವಿದ ವಾತಾವರಣವಿತ್ತು. ಅದು ಸಂಜೆಯವರೆಗೂ ಮುಂದುವರಿದಿತ್ತು. ಬಹುತೇಕ ಪ್ರದೇಶಗಳಲ್ಲಿ ಸಂಜೆಯಿಂದ ರಾತ್ರಿಯವರೆಗೂ ಮಳೆ ಜೋರಾಗಿ ಸುರಿಯಿತು. ಜೋರು ಗಾಳಿಯೂ ಇತ್ತು.

ಯಲಚೇನಹಳ್ಳಿ ವಾರ್ಡ್‌ನ ಫಯಾಜ್‌ಬಾದ್ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ರಸ್ತೆ ಮೇಲೆ ಹರಿಯಿತು. ಅಕ್ಕ–ಪಕ್ಕದ ಮನೆಗಳಿಗೂ ನೀರು ನುಗ್ಗಿ ಸಮಸ್ಯೆ ಉಂಟಾಯಿತು.

‘ಸೂಕ್ತ ಕಾಲುವೆಗಳ ವ್ಯವಸ್ಥೆ ಇಲ್ಲ. ಮಳೆ ಬಂದಾಗಲೆಲ್ಲ ನೀರು ಮನೆಯೊಳಗೆ ನುಗ್ಗುತ್ತದೆ. ಮಕ್ಕಳು, ವೃದ್ಧರು ಕಷ್ಟಪಡುತ್ತಿದ್ದಾರೆ. ಮನೆಯ ವಸ್ತುಗಳೂ ತೇಲಿ ಹೋಗುತ್ತಿವೆ’ ಎಂದು ಸ್ಥಳೀಯರು ಅಳಲು ತೋಡಿ ಕೊಂಡರು.

ಬನ್ನೇರುಘಟ್ಟ ರಸ್ತೆಯ ಬಾಸ್ಕೆಟ್ ಬಾಲ್ ಕ್ರೀಡಾಂಗಣ ಬಳಿ ಮರ ರಸ್ತೆ ಮಧ್ಯೆಯೇ ನೆಲಕ್ಕುರುಳಿದ್ದು, ವಾಹನಗಳ ಸಂಚಾರಕ್ಕೆ ಅಡಚಣೆಯಾಯಿತು. ಯಶವಂತಪುರದಲ್ಲೂ ಮರವೊಂದು ಉರುಳಿಬಿದ್ದು ಸ್ಥಳೀಯರು, ಬಿಬಿಎಂಪಿ ಸಿಬ್ಬಂದಿ ಮರ ತೆರವು ಮಾಡಿದರು.

ಮಡಿವಾಳ, ಕೋರಮಂಗಲ, ಲಾಲ್‌ಬಾಗ್, ಶಾಂತಿನಗರ, ವಿಲ್ಸನ್ ಗಾರ್ಡನ್, ಜಯನಗರ, ಬನಶಂಕರಿ, ಹನುಮಂತನಗರ, ಗಿರಿನಗರ, ಚಾಮರಾಜಪೇಟೆ, ರಾಜರಾಜೇಶ್ವರಿನಗರ, ನಾಯಂಡನಹಳ್ಳಿ, ದೀಪಾಂಜಲಿನಗರ, ವಿಜಯನಗರ, ರಾಜಾಜಿನಗರ, ಸುಂಕದಕಟ್ಟೆ, ಲಗ್ಗೆರೆ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಜೋರು ಮಳೆ ಇತ್ತು.

ಪೀಣ್ಯ, ಯಶವಂತಪುರ, ಜಾಲಹಳ್ಳಿ, ಹೆಬ್ಬಾಳ, ಆರ್.ಟಿ.ನಗರ, ಮಲ್ಲೇಶ್ವರ, ಶೇಷಾದ್ರಿಪುರ, ಶಿವಾಜಿನಗರ, ಎಂ.ಜಿ. ರಸ್ತೆ, ಅಶೋಕನಗರ, ಮೆಜೆಸ್ಟಿಕ್, ಗಾಂಧಿನಗರ, ಚಿಕ್ಕಪೇಟೆ, ಕಲಾಸಿಪಾಳ್ಯ, ಸಿಟಿ ಮಾರ್ಕೆಟ್ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಉತ್ತಮ ಮಳೆ ಆಯಿತು. ಗುಡುಗು–ಸಿಡಿಲು ಅಬ್ಬರವೂ ಇತ್ತು.

ಓಕಳಿಪುರ ಕೆಳ ಸೇತುವೆ, ಶಿವಾನಂದ ವೃತ್ತ, ಮೆಜೆಸ್ಟಿಕ್ ಕೆಳಸೇತುವೆ, ಮಲ್ಲೇಶ್ವರದ ಸಂಪಿಗೆ ರಸ್ತೆ ಸೇರಿದಂತೆ ಕೆಲವೆಡೆ ರಸ್ತೆ ಮೇಲೆಯೇ ನೀರು ಹರಿಯಿತು.

ದಾಬಸ್ ಪೇಟೆಯಲ್ಲೂ ಮಳೆ: ದಾಬಸ್‌ಪೇಟೆ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಗುಡುಗು, ಮಿಂಚು ಹಾಗೂ ಗಾಳಿ ಸಹಿತ ಗುರುವಾರ ರಾತ್ರಿ ಮಳೆಯಾಯಿತು.

ರಾತ್ರಿ 8 ಗಂಟೆ ಸುಮಾರಿಗೆ ಆರಂಭವಾದ ಮಳೆಯು ಬಿಡುವು ಕೊಡುತ್ತಲೇ ತಡರಾತ್ರಿಯವರೆಗೆ ಸುರಿಯಿತು. ಬುಧವಾರ ರಾತ್ರಿಯೂ ಸಾಧಾರಣ ಮಳೆಯಾಗಿತ್ತು. ಬಿಸಿಲಿನ ತಾಪಮಾನ ಏರಿಕೆಯಿಂದ ಹೋಬಳಿಯ ಜನ ಬಸವಳಿದಿದ್ದರು. ಮಳೆ ಬಂದದ್ದರಿಂದ ತುಸು ತಂಪಿನ ಅನುಭವ ಆಯಿತು.

ಹಣ ದುರ್ಬಳಕೆ: ಸಹಾಯಕ ಆಯುಕ್ತ ಬಂಧನ

ಬೆಂಗಳೂರು: ಮುಜರಾಯಿ ಇಲಾಖೆಗೆ ಸೇರಿದ್ದ ₹ 25.50 ಲಕ್ಷ ಹಣವನ್ನು ದುರುಪಯೋಗಪಡಿಸಿಕೊಂಡ ಆರೋಪದಡಿ, ಇಲಾಖೆಯ ಸಹಾಯಕ ಆಯುಕ್ತ ಕೆ.ವಿ. ವೆಂಕಟರಮಣ ಗುರುಪ್ರಸಾದ್ ಅವರನ್ನು ವಿಧಾನಸೌಧ ಪೊಲೀಸರು ಬಂಧಿಸಿದ್ದಾರೆ.

‘ತಹಶೀಲ್ದಾರ್ ಎಸ್.ಆರ್. ಅರವಿಂದ ಬಾಬು ಇತ್ತೀಚೆಗೆ ದೂರು ನೀಡಿದ್ದರು. ಪುರಾವೆಗಳನ್ನು ಸಂಗ್ರಹಿಸಿ ಆರೋಪಿ ವೆಂಕಟರಮಣ ಗುರುಪ್ರಸಾದ್ ಅವರನ್ನು ಬಂಧಿಸಲಾಗಿದೆ. ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಕರ್ಣಾಟಕ ಬ್ಯಾಂಕ್‌ನ ಕೆ.ಜಿ. ರಸ್ತೆ ಶಾಖೆಯಲ್ಲಿ ಇಲಾಖೆಗೆ ಸಂಬಂಧಪಟ್ಟಂತೆ ಉಳಿತಾಯ ಖಾತೆ ಇದ್ದು, ಅದರಲ್ಲಿ ₹ 25.50 ಲಕ್ಷವಿತ್ತು. ಅದೇ ಹಣವನ್ನು ಆರೋಪಿ ಅಕ್ರಮವಾಗಿ ಅನ್ಯರಿಗೆ ವರ್ಗಾವಣೆ ಮಾಡಿದ್ದರು. ಈ ಬಗ್ಗೆ ಪ್ರಾಥಮಿಕ ತನಿಖೆ ನಡೆಸಿದ್ದ ತಹಶೀಲ್ದಾರ್, ಅದರ ವರದಿ ಸಮೇತ ದೂರು ನೀಡಿದ್ದರು.’

‘2021ರ ಅಕ್ಟೋಬರ್ 5ರಿಂದ ನವೆಂಬರ್ 29ರವರೆಗಿನ ಅವಧಿಯಲ್ಲಿ ₹ 25.50 ಲಕ್ಷ ಹಣ ಅಕ್ರಮವಾಗಿ ಅನ್ಯರಿಗೆ ವರ್ಗಾವಣೆ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಹಣವನ್ನು ಯಾವುದಕ್ಕೆ ಖರ್ಚು ಮಾಡಲಾಗಿದೆ ಎಂಬುದು ಗೊತ್ತಾಗಿಲ್ಲ. ಹಣ ದುರುಪಯೋಗ ಬಗ್ಗೆ ತನಿಖೆ ಮುಂದುವರಿದಿದೆ’ ಎಂದೂ ತಿಳಿಸಿದರು.

10 ಗ್ರಾಂ ಚಿನ್ನದ ನಾಣ್ಯ ಜಪ್ತಿ: ‘ವೆಂಕಟರಮಣ ಗುರುಪ್ರಸಾದ್ ಅವರಿಗೆ ಸೇರಿದ್ದು ಎನ್ನಲಾದ 10 ಗ್ರಾಂ ಚಿನ್ನದ ನಾಣ್ಯ, ಕಚೇರಿಯ ಮಹಿಳಾ ಸಿಬ್ಬಂದಿ ಬಳಿ ಇತ್ತು. ಅದನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ನಕಲಿ ಇ– ಸ್ವತ್ತು ಸೃಷ್ಟಿಸಿ ವಂಚನೆ

ಬೆಂಗಳೂರು: ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ಹಾಗೂ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯ ಲಾಗಿನ್ ಐ.ಡಿ ಬಳಸಿಕೊಂಡು ನಕಲಿ ಇ–ಸ್ವತ್ತು ಸೃಷ್ಟಿಸಿ ವಂಚಿಸಲಾಗಿದ್ದು, ಈ ಬಗ್ಗೆ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ನಾಗವೇಣಿ ಅವರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಲಾಗಿನ್ ಐ.ಡಿ ಅಕ್ರಮವಾಗಿ ಬಳಸಿಕೊಂಡಿರುವ ಅಪರಿಚಿತರು, ಇ–ಸ್ವತ್ತು ತಂತ್ರಾಂಶ ಪ್ರವೇಶಿಸಿದ್ದಾರೆ. ತಮಗೆ ಬೇಕಾದ ರೀತಿಯಲ್ಲಿ ನಕಲಿ ಇ–ಸ್ವತ್ತು ಸೃಷ್ಟಿಸಿದ್ದಾರೆ. ಈ ಮೂಲಕ ಸರ್ಕಾರಕ್ಕೆ ನಷ್ಟವನ್ನುಂಟು ಮಾಡಿದ್ದಾರೆ’ ಎಂದೂ ತಿಳಿಸಿದರು.

‘ಕುಂಬಳಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಖ್ಯಾಡ ಗ್ರಾಮದ ಇ–ಸ್ವತ್ತು ಪರಿಶೀಲನೆ ವೇಳೆ, ನಕಲಿ ಇ–ಸ್ವತ್ತು ಪತ್ತೆಯಾಗಿದೆ. ಇದೇ ರೀತಿ ಹಲವು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಕಲಿ ಇ–ಸ್ವತ್ತು ಇರುವ ಮಾಹಿತಿ ಇದ್ದು, ಪರಿಶೀಲನೆ ನಡೆದಿದೆ’ ಎಂದು ಪೊಲೀಸರು ಹೇಳಿದರು.

ಕಾರ್ಖಾನೆಯಲ್ಲಿ ಸ್ಫೋಟ: ಆರು ಮಂದಿ ಸಾವು

ಹೈದರಾಬಾದ್: ಆಂಧ್ರ ಪ್ರದೇಶದ ಏಲೂರು ಜಿಲ್ಲೆಯ ಅಕ್ಕಿರೆಡ್ಡಿಗುಡೆಂನ ಪೋರಸ್ ಲ್ಯಾಬ್ಸ್ ರಾಸಾಯನಿಕ ಕಾರ್ಖಾನೆಯಲ್ಲಿ ಗುರುವಾರ ಸಂಭವಿಸಿದ ಸ್ಫೋಟದಲ್ಲಿ ಆರು ಮಂದಿ ಕಾರ್ಮಿಕರು ಮೃತಪಟ್ಟಿದ್ದು, ಹನ್ನೆರಡು ಮಂದಿ ಗಾಯಗೊಂಡಿದ್ದಾರೆ.

ಅನಿಲ ಸೋರಿಕೆಯಾದ ಪರಿಣಾಮ ಬೆಂಕಿ ಹೊತ್ತಿಕೊಂಡಿದ್ದು, ಬಳಿಕ ರಿಯಾಕ್ಟರ್ ಸ್ಫೋಟಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ: ತತ್ವ, ಸಿದ್ಧಾಂತ ಅಳವಡಿಸಿಕೊಳ್ಳಲು ಸಲಹೆ

ಸಮಾನತೆಯ ಹರಿಕಾರನಿಗೆ ನಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯನ್ನು ನಗರದಲ್ಲಿ ಸಂಘ–ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ರಾಜಕೀಯ ಪಕ್ಷಗಳು ಸಂಭ್ರಮದಿಂದ ಆಚರಿಸಿದವು. ಅಂಬೇಡ್ಕರ್ ಅವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ, ಅವರ ತತ್ವ ಸಿದ್ಧಾಂತದ ಆಶಯಗಳನ್ನು ಸ್ಮರಿಸಲಾಯಿತು.

ಬೆಂಗಳೂರು ವಿಶ್ವವಿದ್ಯಾಲಯ ಆಶ್ರಯದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್, 'ಡಾ.ಬಿ.ಆರ್. ಅಂಬೇಡ್ಕರ್ ಅವರ ಶಿಕ್ಷಣ, ಸಂಘಟನೆ ಮತ್ತು ಸಂಘರ್ಷ ತತ್ವಗಳನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಕುಲಪತಿ ಕೆ.ಆರ್. ಪ್ರೊ.ವೇಣುಗೋಪಾಲ್, ಕುಲಸಚಿವ ಪ್ರೊ. ಎಂ. ಕೊಟ್ರೇಶ್, ಕುಲಸಚಿವ (ಮೌಲ್ಯಮಾಪನ) ಪ್ರೊ. ಜಿ.ಟಿ. ದೇವರಾಜ್, ಸಿಂಡಿಕೇಟ್ ಸದಸ್ಯ ಡಾ. ಸಿ.ಆರ್. ಮಹೇಶ್ ಇದ್ದರು.

ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಡಾ. ಉದಯಕುಮಾರ್, ಡಾ. ಸುಧಾಕರ್, ವಿಧೇಯ ಶ್ರೀಕಂಠ ಬೆಳಗೋಡೆ, ಪ್ರೇಮ್ ಸೋಹನಲಾಲ್ ಮತ್ತು ಡಾ. ಗೋವಿಂದರಾಜ್ ಅವರು ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಸ್ವಾಭಿಮಾನದ ಬದುಕಿಗೆ ಅಂಬೇಡ್ಕರ್: ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ನಾಗಪುರ ವಾರ್ಡ್‌ನಲ್ಲಿರುವ ಶಾಸಕರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವ ಕೆ.ಗೋಪಾಲಯ್ಯ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

'ಮಾರಪ್ಪನ ಪಾಳ್ಯದಲ್ಲಿ ₹19 ಕೋಟಿ ವೆಚ್ಚದಲ್ಲಿ ಅಂಬೇಡ್ಕರ್ ಅವರ ಹೆಸರಿನಲ್ಲಿ ಹೈಟೆಕ್ ಸರ್ಕಾರಿ ಶಾಲೆ ನಿರ್ಮಿಸಲಾಗುತ್ತಿದ್ದು, ಅವರ ಪ್ರತಿಮೆಯನ್ನು ನಿರ್ಮಿಸಿ ಮುಂದಿನ ವರ್ಷದ ಜಯಂತಿಯನ್ನು ಅಲ್ಲಿಯೇ ಆಚರಿಸಲಾಗುವುದು' ಎಂದು ಹೇಳಿದರು

ದಿನಸಿ ಕಿಟ್ ವಿತರಣೆ: ಗಾಂಧಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಓಕುಳಿಪುರ ಸನ್ ರೈಸ್ ಸರ್ಕಲ್‌ನಲ್ಲಿ ಗಾಂಧಿನಗರ ಮತ್ತು ಕಾಟನ್ ಪೇಟೆ ಬ್ಲಾಕ್ ಕಾಂಗ್ರೆಸ್ ಸಮಿತಿ ಮತ್ತು ಗುಂಡೂರಾವ್ ಫೌಂಡೇಷನ್ ವತಿಯಿಂದ ಅಂಬೇಡ್ಕರ್ ಜಯಂತಿ ಅಂಗವಾಗಿ ಐದು ಸಾವಿರ ಕುಟುಂಬಗಳಿಗೆ ದಿನಸಿ ಕಿಟ್ ವಿತರಿಸಲಾಯಿತು. ಶಾಸಕ ದಿನೇಶ್ ಗುಂಡೂರಾವ್, ಗುಂಡೂರಾವ್ ಫೌಂಡೇಷನ್ ಸಂಸ್ಥಾಪಕರಾದ ತಬು ದಿನೇಶ್ ಗುಂಡೂರಾವ್ ಇದ್ದರು.

ಎಲ್ಲ ಧರ್ಮ, ಜಾತಿಯವರಿಗೆ ಸಮಾನವಾಗಿ ಬಾಳಲು ಸಂವಿಧಾನ ಅವಕಾಶ ನೀಡಿದೆ. ಆದರೆ, ಬಿಜೆಪಿ ಸಂವಿಧಾನ ವಿರೋಧಿ ನೀತಿ ಅನುಸರಿಸಿ ಆಡಳಿತ ನಡೆಸುತ್ತಿದೆ.
ದಿನೇಶ್ ಗುಂಡೂರಾವ್, ಶಾಸಕ

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಾಚನಾಯಕನಹಳ್ಳಿ ನಡೆದ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಆರ್.ಕೆ. ರಮೇಶ್, ಹೆನ್ನಾಗರ ಗ್ರಾಮ ಪಂಚಾಯಿತಿ ಅಧ್ಯಕ್ಷ ಮುನಿರತ್ನ ಮುನಿರಾಜು, ಉಪಾಧ್ಯಕ್ಷ ಪ್ರಸನ್ನಕುಮಾರ್ ಉಪಸ್ಥಿತರಿದ್ದರು.

ಬಿಎಂಟಿಸಿ: ಬಿಎಂಟಿಸಿ ಎಸ್ಸಿ,ಎಸ್ಟಿ ನೌಕರರ ಸಂಘದ ವತಿಯಿಂದ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜನ್ಮ ದಿನಾಚರಣೆಯನ್ನು ಬಿಎಂಟಿಸಿ ಉಪಾಧ್ಯಕ್ಷ ಎಂ.ಆರ್. ವೆಂಕಟೇಶ್ ನೇತೃತ್ವದಲ್ಲಿ ನಡೆಯಿತು. ಪ್ರಯಾಣಿಕರಿಗೆ ಸಿಹಿ ಹಂಚಲಾಯಿತು. ನಿರ್ದೇಶಕರಾದ ಭೃಂಗೇಶ್, ಪ್រಕಾಶ್ ಇದ್ದರು.

'ಅಂಬೇಡ್ಕರ್ ಸ್ಫೂರ್ತಿ ಸೌಧ'ಕ್ಕೆ ಸಿಎಂ ಶಂಕುಸ್ಥಾಪನೆ

ಬೆಂಗಳೂರು: ವಿಧಾನಸೌಧ– ವಿಕಾಸಸೌಧದ ವ್ಯಾಪ್ತಿಯ ಪ್ರದೇಶದಲ್ಲಿ ₹ 52 ಕೋಟಿ ವೆಚ್ಚದಲ್ಲಿ 'ಅಂಬೇಡ್ಕರ್ ಸ್ಫೂರ್ತಿ ಸೌಧ' ಶೀಘ್ರ ತಲೆ ಎತ್ತಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆಯ ಸಹಭಾಗಿತ್ವದಲ್ಲಿ ಆಯೋಜಿಸಿದ್ದ 'ಅಂಬೇಡ್ಕರ್ ಸ್ಫೂರ್ತಿ ಸೌಧ' ನಿರ್ಮಾಣ ಕಾಮಗಾರಿಗೆ ಗುರುವಾರ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, 'ಸರ್ಕಾರದ ಎಲ್ಲ ಸೌಲಭ್ಯಗಳನ್ನು ತಳ ಸಮುದಾಯಗಳಿಗೆ ಒದಗಿಸುವ ಕಚೇರಿಗಳು ಈ ಕಟ್ಟಡದಲ್ಲಿ ಇರಲಿವೆ' ಎಂದರು.

'ಸರ್ಕಾರದ ಪ್ರಾಮಾಣಿಕ ಪ್ರಯತ್ನ ಇಚ್ಛಾಶಕ್ತಿಯಿಂದ ಬದಲಾವಣೆಯ ಪರ್ವವನ್ನು ತರಲಾಗುವುದು. ಈ ಆಶಯಕ್ಕೆ ಅಂಬೇಡ್ಕರ್ ಅವರೇ ಸ್ಫೂರ್ತಿ' ಎಂದೂ ಹೇಳಿದರು. ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಶಾಸಕ ರಿಜ್ವಾನ್ ಅರ್ಷದ್ ಇದ್ದರು.

'ಸಮಾನತೆ ಸಾಧಿಸುವವರೆಗೂ ಮೀಸಲಾತಿ'

ಬೊಮ್ಮನಹಳ್ಳಿ: 'ದಲಿತರು ಹಾಗೂ ಹಿಂದುಳಿದ ಜಾತಿಗಳ ಜನ ಇಂದಿಗೂ ಶೋಷಣೆ ಅನುಭವಿಸುತ್ತಿದ್ದಾರೆ. ಹೀಗಾಗಿ, ಮೀಸಲಾತಿ ಮುಂದುವರಿಸಲೇಬೇಕು' ಎಂದು ಶಾಸಕ ಸತೀಶ್ ರೆಡ್ಡಿ ಹೇಳಿದರು.

ಅರಕೆರೆ ಗ್ರಾಮದಲ್ಲಿ ಅಂಬೇಡ್ಕರ್ ಯುವಕ ಸಂಘ ಆಯೋಜಿಸಿದ್ದ ಅಂಬೇಡ್ಕರ್ ಅವರ 131ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಅಂಬೇಡ್ಕರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಜತೆಗೆ ಪುನಿತ್ ರಾಜಕುಮಾರ್ ಅವರ ಭಾವಚಿತ್ರಕ್ಕೂ ಪೂಜೆ ಸಲ್ಲಿಸಲಾಯಿತು. ಅಂಬೇಡ್ಕರ್ ಯುವಕ ಸಂಘದ ಅಧ್ಯಕ್ಷ ವೆಂಕಟೇಶ್ ಮೂರ್ತಿ, ಪಾಲಿಕೆಯ ಮಾಜಿ ಸದಸ್ಯೆ ಭಾಗ್ಯಲಕ್ಷ್ಮಿ ಮುರಳಿ, ಸ್ಥಳೀಯ ಬಿಜೆಪಿ ಮುಖಂಡ ಮುರಳೀಧರ್ ಇದ್ದರು.

ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯವಾಹ ಡಾ. ಜಯಪ್ರಕಾಶ್, ವಾದಿರಾಜ್ ಅವರು ಭಾರತಾಂಬೆ ಮತ್ತು ಅಂಬೇಡ್ಕರ್ ಅವರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

'ಬುರ್ಖಾನೇ ಅನಾರೋಗ್ಯಕರ ಎಂದಿದ್ದರು ಅಂಬೇಡ್ಕರ್'

ಬೆಂಗಳೂರು: 'ಮುಸ್ಲಿಂ ಮಹಿಳೆಯರು ಧರಿಸುವ ಬುರ್ಖಾ ಒಂದು ಅನಾರೋಗ್ಯಕರ ಪದ್ಧತಿ ಎಂಬುದನ್ನು ಸ್ವಾತಂತ್ರ್ಯ ಪೂರ್ವದಲ್ಲಿಯೇ ಗ್ರಹಿಸಿದ್ದ ಡಾ.ಅಂಬೇಡ್ಕರ್, ಸಮಾಜದ ಪರಿವರ್ತನೆಗೆ ಬದ್ಧವಾಗಿದ್ದ ಒಬ್ಬ ತೀಕ್ಷ್ಣಮತಿಯ ಮಹಾನ್ ರಾಷ್ಟ್ರವಾದಿಯಾಗಿದ್ದರು ಮತ್ತು ಹಿಜಾಬ್‌ಗಾಗಿ ನಡೆಯುತ್ತಿರುವ ಇಂದಿನ ಸಂಘರ್ಷದ ವಾತಾವಾರಣದಲ್ಲಿ ನಾವು ಅವರ ಈ ಚಿಂತನೆಯನ್ನು ಗಂಭೀರವಾಗಿ ಅವಲೋಕಿಸಬೇಕಿದೆ' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ವಕ್ತಾರ ವಾದಿರಾಜ್ ಅಭಿಪ್ರಾಯಪಟ್ಟರು.

ಅಂಬೇಡ್ಕರ್ ಜಯಂತಿ ಅಂಗವಾಗಿ ಗಂಗಾನಗರದ ಐಇಟಿಇ ಕಟ್ಟಡದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಆಶ್ರಯದಲ್ಲಿ ಗುರುವಾರ ನಡೆದ ವೈಚಾರಿಕ ಸಂವಾದದಲ್ಲಿ ವಾದಿರಾಜ್ 'ಅಂಬೇಡ್ಕರ್ ಅವರ ಸಾಮಾಜಿಕ ಸಾಮರಸ್ಯ' ಎಂಬ ವಿಷಯದ ಕುರಿತು ಮಾತನಾಡಿದರು.

'ದೇಶ ವಿಭಜನೆ ಆಗಬಾರದು ಎಂದು ಬಲವಾಗಿ ಪ್ರತಿಪಾದಿಸಿದ್ದ ಅಂಬೇಡ್ಕರ್, ಒಂದು ವೇಳೆ ವಿಭಜನೆ ಆಗಿದ್ದೇ ಆದಲ್ಲಿ, ಇಲ್ಲಿರುವ ಎಲ್ಲ ಮುಸ್ಲಿಮರೂ ಇಲ್ಲಿಂದ ಹೋಗಬೇಕು ಮತ್ತು ಉದಯವಾಗುವ ಹೊಸ ದೇಶದಲ್ಲಿನ ಹಿಂದೂಗಳು ಭಾರತಕ್ಕೆ ಬರಬೇಕು ಎಂದಿದ್ದರು. ಇಲ್ಲವಾದಲ್ಲಿ ಈ ಭಾರತ ಮುಸಲ್ಮಾನರ ಸಮಸ್ಯೆ ಬಗೆಹರಿಸಿಕೊಳ್ಳುವುದರಲ್ಲೇ ವ್ಯಸ್ತವಾಗಿ ಹಿಂದೂ ಸಮಾಜದೊಳಗಿರುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಸಾಧ್ಯವೇ ಆಗದಂತಹ ಪರಿಸ್ಥಿತಿಗೆ ಒಳಗಾಗುತ್ತದೆ ಎಂಬುದನ್ನು ಚೆನ್ನಾಗಿ ಮನಗಂಡಿದ್ದರು' ಎಂದು ವಿವರಿಸಿದರು.

ಆರ್‌ಎಸ್‌ಎಸ್ ಕ್ಷೇತ್ರೀಯ ಸಂಚಾಲಕ ವಿ.ನಾಗರಾಜ್, 'ಸ್ವಾತಂತ್ರ್ಯಾನಂತರ ದೇಶ ವ್ಯಕ್ತಿಪೂಜೆಗೆ ಪಕ್ಕಾಯಿತು. ಅದರ ಪರಿಣಾಮ ಮತ್ತು ಮೇಲಾಟಗಳನ್ನು ನಾವಿಂದು ಅನುಭವಿಸುವಂತಾಗಿದೆ' ಎಂದು ವಿಷಾದಿಸಿದರು.

ಭಗವಾನ್ ಮಹಾವೀರ ಜಯಂತಿ

ಅಹಿಂಸೆ, ಶಾಂತಿ ತತ್ವ ಪಾಲಿಸಲು ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಗವಾನ್ ಮಹಾವೀರರು ಬೋಧಿಸಿದ ಅಹಿಂಸೆ ಮತ್ತು ಶಾಂತಿಯ ಮಾರ್ಗದಲ್ಲಿ ನಾವೆಲ್ಲರೂ ಸಾಗಬೇಕಾಗಿದೆ' ಎಂದು ಕಾರ್ಕಳದ ಜೈನ ಮಠದ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಪ್ರತಿಪಾದಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವೀಂದ್ರ ಕಲಾಕ್ಷೇತ್ರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ವಿಜ್ಞಾನ ಕ್ಷೇತ್ರ ಇಂದು ಅಪಾರ ಪ್ರಗತಿ ಸಾಧಿಸಿದೆ. ಆದರೆ, ಮಾನವೀಯ ಮೌಲ್ಯಗಳನ್ನು ಕಡೆಗಣಿಸಲಾಗುತ್ತಿದೆ. ಇದರಿಂದ ಧರ್ಮಕ್ಕೆ ಹಾನಿಯಾಗುತ್ತಿದೆ' ಎಂದು ಹೇಳಿದರು.

'ಅಹಿಂಸೆಯ ಮಂತ್ರ ಪಠಿಸಿದ ಮಹಾವೀರರನ್ನು ಇಂದು ಎಲ್ಲ ಧರ್ಮೀಯರು ಮನೆ ಮನಗಳಲ್ಲಿ ಆರಾಧಿಸುತ್ತಿದ್ದಾರೆ. ಅವರ ಕೊಡುಗೆ ಸ್ಮರಣೀಯ. ಅವರ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಸಚಿವರು ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಭಾಗಿಯಾದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಸಾಹಿತಿ ಪ್ರೊ. ಹಂಪ ನಾಗರಾಜಯ್ಯ ಅವರು, 'ಜೈನ ಧರ್ಮೀಯರು ಅಲ್ಪಸಂಖ್ಯಾತರು. ಜೈನ ಸಮುದಾಯದ ಮತಗಳು ಹೆಚ್ಚು ಇಲ್ಲದಿರಬಹುದು. ಆದರೆ, ಹೆಚ್ಚು ತೆರಿಗೆಯನ್ನು ಜೈನ್ ಸಮುದಾಯ ಸಂದಾಯ ಮಾಡುತ್ತಿದೆ. ಇದನ್ನು ಸರ್ಕಾರ ಅರಿಯಬೇಕು' ಎಂದರು.

'ಶಾಂತಿ ಮಂತ್ರ ಪಠಿಸಿದ ಮಹಾವೀರರು ಪ್ರಾಕೃತ ಭಾಷೆಯಲ್ಲಿ ಜನರಿಗೆ ಬೋಧನೆ ಮಾಡಿದರು. ಜಾತಿಯ ಸೋಂಕಿಲ್ಲದೆ ಸಮಾಜದ ಸುಧಾರಣೆಗೆ ಶ್ರಮಿಸಿದ್ದಾರೆ' ಎಂದು ತಿಳಿಸಿದರು.

ಕರ್ನಾಟಕ ಜೈನ್ ಅಸೋಸಿಷನ್ ಅಧ್ಯಕ್ಷ ಬಿ.ಪ್ರಸನ್ನಯ್ಯ ಮಾತನಾಡಿ, 'ಜೈನ ಧರ್ಮದ ಕಾರ್ಯಕ್ರಮದ ಬಗ್ಗೆ ಸರ್ಕಾರ ನಿರ್ಲಕ್ಷ್ಯ ಮಾಡಬಾರದು' ಎಂದು ಮನವಿ ಮಾಡಿದರು.

ಕಾರ್ಕಳದ ನಿವೃತ್ತ ಉಪನ್ಯಾಸಕ ಡಾ.ಮುನಿರಾಜ ರೆಂಜಾಳ ಅವರು ಮಹಾವೀರರ ಬಗ್ಗೆ ಉಪನ್ಯಾಸ ನೀಡಿದರು.

ನಗರದಲ್ಲಿ ಗುರುವಾರ ಆಯೋಜಿಸಿದ್ದ ಭಗವಾನ್ ಮಹಾವೀರ್ ಜಯಂತಿ ಕಾರ್ಯಕ್ರಮದಲ್ಲಿ ಮಹಾವೀರರ ಭಾವಚಿತ್ರಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಪ್ರಕಾಶ್ ಜಿ. ಟಿ. ನಿಟ್ಟಾಲಿ, ಸಾಹಿತಿಗಳಾದ ಪ್ರೊ. ಹಂಪ ನಾಗರಾಜಯ್ಯ, ಕಮಲಾ ಹಂಪನಾ, ನಿವೃತ್ತ ಉಪನ್ಯಾಸಕ ಮುನಿರಾಜು ರೆಂಜಾಳ, ಭಾರತೀಯ ಜೈನ್ ಮಿಲನ್ ಕಾರ್ಯಾಧ್ಯಕ್ಷ ಸುರೇಂದ್ರಕುಮಾರ್, ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಪುಷ್ಪ ನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

'ಎರಡನೇ ಸ್ವಾತಂತ್ರ್ಯ ಸಂಗ್ರಾಮ ನಡೆಯಲಿ'

ಬೆಂಗಳೂರು: 'ದೇಶದ ಇಂದಿನ ಪರಿಸ್ಥಿತಿಯಲ್ಲಿ ಎರಡನೇ ಸ್ವಾತಂತ್ರ್ಯ ಸಂಗ್ರಾಮ ನಡೆಯುವ ಅಗತ್ಯವಿದೆ' ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಅಭಿಪ್ರಾಯಪಟ್ಟರು.

ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ಮಾಗಡಿ ರಸ್ತೆಯ 'ಸ್ಫೂರ್ತಿ ಧಾಮ'ದಲ್ಲಿ ಗುರುವಾರ ಆಯೋಜಿಸಿದ್ದ 'ಅಂಬೇಡ್ಕರ್ ಹಬ್ಬ'ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಇಂದು ಸರ್ಕಾರದ ಎಲ್ಲ ಪ್ರಮುಖ ಸಂಸ್ಥೆಗಳು ಕುಸಿಯುವ ಸ್ಥಿತಿಗೆ ತಲುಪಿವೆ. ಪ್ರಜಾಪ್ರಭುತ್ವದ ಆಶಯಗಳಿಗೆ ಧಕ್ಕೆ ತರುವ ಯತ್ನ ಮಾಡಲಾಗುತ್ತಿದೆ. ದಲಿತರ ಬದುಕಿಗೆ ಇನ್ನೂ ಕತ್ತಲು ಆವರಿಸಿಕೊಂಡಿದೆ' ಎಂದರು.

ಚಿಂತಕ ಡಾ.ಜಿ. ರಾಮಕೃಷ್ಣ ಮಾತನಾಡಿ, 'ಇಂದಿನ ಸರ್ಕಾರಗಳ ಆರ್ಥಿಕ ನೀತಿಯ ಬಗ್ಗೆ ವಿಶ್ಲೇಷಣೆ ನಡೆಯಬೇಕಾಗಿದೆ. ಅಂಬೇಡ್ಕರ್ ಪ್ರತಿಪಾದಿಸಿದ್ದ ನೀತಿಗಳನ್ನು ಕಡೆಗಣಿಸುವ ಯತ್ನ ನಡೆಯುತ್ತಿದೆ. ಅಂಬೇಡ್ಕರ್ ಅವರ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ' ಎಂದರು.

ಅಂಬೇಡ್ಕರ್ ಹಬ್ಬದ ಅಂಗವಾಗಿ ಸ್ಫೂರ್ತಿಧಾಮ ನೀಡುವ 2022ನೇ ಸಾಲಿನ 'ಬೋಧಿವೃಕ್ಷ' ಹಾಗೂ 'ಬೋಧಿ ವರ್ಧನ' ಪ್ರಶಸ್ತಿಗಳನ್ನು ಈ ಸಂದರ್ಭದಲ್ಲಿ ಪ್ರದಾನ ಮಾಡಲಾಯಿತು.

'ಬೋಧಿವೃಕ್ಷ' ಪ್ರಶಸ್ತಿಯನ್ನು ತೆಲಂಗಾಣದ ಡಾ.ರಾಳ್ಳಪಲ್ಲಿ ಶಿವ ಪ್ರವೀಣ್ ಕುಮಾರ್ ಅವರಿಗೆ ಪ್ರದಾನ ಮಾಡಲಾಯಿತು. 'ಬೋಧಿವೃಕ್ಷ' ಪ್ರಶಸ್ತಿಯು ಫಲಕ ಮತ್ತು ₹1 ಲಕ್ಷ ನಗದು ಒಳಗೊಂಡಿದೆ. 'ಬೋಧಿವರ್ಧನ' ಪ್ರಶಸ್ತಿಯನ್ನು ಗುರುಪ್ರಸಾದ್ ಕೆರಗೋಡು, ಡಿ.ನಾಗಲಕ್ಷ್ಮಿ, ಪದ್ಮಾಲಯ ನಾಗರಾಜ್, ಡಾ. ಬಿ.ಪಿ. ಮಹೇಂದ್ರ ಕುಮಾರ್ ಮತ್ತು ಮೇರಿ ಲೋಬೋ ಅವರಿಗೆ ಪ್ರದಾನ ಮಾಡಲಾಯಿತು. 'ಬೋಧಿವರ್ಧನ' ಪ್ರಶಸ್ತಿಯು ಫಲಕ ಮತ್ತು ತಲಾ ₹25 ಸಾವಿರ ನಗದು ಒಳಗೊಂಡಿದೆ.

ಮಾಜಿ ಸೈನಿಕನ ಹತ್ಯೆ

ಬೆಂಗಳೂರು: ದೊಮ್ಮಲೂರು ಬಳಿಯ ಗೌತಮ್ ನಗರದಲ್ಲಿ ಮಾಜಿ ಸೈನಿಕ ಸುರೇಶ್ ಉರ್ಫ್ ಜುಡೆ (56) ಎಂಬುವರನ್ನು ಸುತ್ತಿಗೆಯಿಂದ ಹೊಡೆದು ಹತ್ಯೆ ಮಾಡಲಾಗಿದ್ದು, ಸಂಬಂಧಿಕರೇ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ.

'ಸೇನೆಯಿಂದ ನಿವೃತ್ತರಾದ ಬಳಿಕ ಸುರೇಶ್ ಅವರು ಒಂಟಿಯಾಗಿ ನೆಲೆಸಿದ್ದರು. ಬುಧವಾರ ಅವರ ಮನೆಗೆ ಬಂದಿದ್ದ ಆರೋಪಿಗಳು, ಹತ್ಯೆ ಮಾಡಿ ಪರಾರಿಯಾಗಿದ್ದಾರೆ' ಎಂದು ಪೊಲೀಸರು ಹೇಳಿದರು.

'ಸುರೇಶ್ ಹಾಗೂ ಸಂಬಂಧಿಕರ ನಡುವೆ ಆಸ್ತಿ ವಿಚಾರವಾಗಿ ಆಗಾಗ ಗಲಾಟೆ ಆಗುತ್ತಿತ್ತು. ಈ ಬಗ್ಗೆ ಠಾಣೆಯಲ್ಲೂ ಪ್ರಕರಣ ದಾಖಲಾಗಿತ್ತು. ಆಸ್ತಿ ಕಾರಣಕ್ಕಾಗಿಯೇ ಸುರೇಶ್ ಅವರನ್ನು ಕೊಲೆ ಮಾಡಿರುವ ಅನುಮಾನವಿದೆ. ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದೂ ತಿಳಿಸಿದರು.

'ಪರಾರಿಯಾಗುವ ವೇಳೆಯಲ್ಲಿ ಆರೋಪಿಗಳು, ಮೃತದೇಹದ ಮೇಲೆ ಹಾಗೂ ಸುತ್ತಮುತ್ತ ಖಾರದ ಪುಡಿ ಎರಚಿ ಹೋಗಿದ್ದಾರೆ.' ಎಂದರು.

ಹೆಬ್ಬಾಳ ಮೇಲ್ಸೇತುವೆ ಕೆಳಗಿನ ಚೌರಾಸ್ತಾ ಗೌಜು

ಬೇಕಾಗಿದೆ ಬಿಎಂಟಿಸಿ ಬಸ್ ನಿಲ್ದಾಣ

• ಬಿ.ಎಸ್.ಷಣ್ಮುಖಪ್ಪ

ಬೆಂಗಳೂರು: 'ಕೃಷಿ ವಿಶ್ವವಿದ್ಯಾಲಯದ ಬೃಹತ್ ಕ್ಯಾಂಪಸ್ ಪ್ರದೇಶ ಮತ್ತು ಸುಂದರ ಹೆಬ್ಬಾಳ ಕೆರೆಯ ಮಧ್ಯದಲ್ಲಿರುವ ಮೇಲ್ಸೇತುವೆಯ ಕೆಳಗೆ ಕೃಷಿ ವಿವಿ ಜಾಗದಲ್ಲಿ ಬಿಎಂಟಿಸಿ ಬಸ್ ನಿಲ್ದಾಣವೊಂದು ನಿರ್ಮಾಣವಾದರೆ ಅತ್ಯಂತ ಉಪಕಾರವಾಗುತ್ತದೆ' ಎಂಬುದು ಸ್ಥಳೀಯರ ಹಕ್ಕೊತ್ತಾಯ.

ಬಳ್ಳಾರಿ ರಸ್ತೆಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಾಗುವ ಮಾರ್ಗಮಧ್ಯೆ ಸಿಗುವ ಹೆಬ್ಬಾಳ ಬಿಎಂಟಿಸಿ ಬಸ್ ನಿಲ್ದಾಣ ಅತ್ಯಂತ ಜನನಿಬಿಡ. ಈ ಬಸ್ ನಿಲ್ದಾಣದಿಂದಲೇ ಮುಂದಕ್ಕೆ ಸಾಗುವ ಮೇಲ್ಸೇತುವೆ ಮತ್ತು ಇದರ ಕೆಳಭಾಗವೂ ಸಾಕಷ್ಟು ಪ್ರತಿಷ್ಠಿತ ಪ್ರದೇಶಗಳನ್ನು ಸಂಧಿಸುವ ಬಳಸು ದಾರಿ.

ವಿಮಾನ ನಿಲ್ದಾಣ ಮಾರ್ಗದಿಂದ ಮೇಲ್ಸೇತುವೆ ಮೇಲೆ ಹಾದು ಭೂಪಸಂದ್ರ ಕಡೆ ಸಾಗಬೇಕಾದ ವಾಹನಗಳು ಎಡಕ್ಕೆ ಸರ್ವಿಸ್ ರಸ್ತೆಯಲ್ಲಿ ಇಳಿದರೆ ಮಸ್ಜಿದ್ ಎ ಅಜಂ ಮದರಸಾದ ಅರೇಬಿಯಾ ಶಂಶುಲ್ ಉಲುಮ್ ಮಸೀದಿ ಸಿಗುತ್ತದೆ. ಇದರ ಎದುರು ನಿಂತರೆ ಅಲ್ಲೊಂದು ಪುಟ್ಟ ಜಗತ್ತೇ ಅನಾವರಣವಾಗುತ್ತದೆ.

ಸಂಪರ್ಕ ಕೇಂದ್ರ: ಚೌರಾಸ್ತಾ (ನಾಲ್ಕು ರಸ್ತೆಗಳು ಕೂಡುವ ಜಾಗ) ಸ್ವರೂಪದ ಈ ಕೇಂದ್ರವು ಪಶ್ಚಿಮಕ್ಕೆ ಭೂಪಸಂದ್ರ, ಪೂರ್ವಕ್ಕೆ ವಿ.ನಾಗೇನಹಳ್ಳಿ, ಉತ್ತರಕ್ಕೆ ವಿಮಾನ ನಿಲ್ದಾಣ ಹಾಗೂ ದಕ್ಷಿಣಕ್ಕೆ ಮೇಖ್ರಿ ಸರ್ಕಲ್ ಕಡೆ ಸಂಪರ್ಕ ಕಲ್ಪಿಸುತ್ತದೆ. ಈ ಮಸೀದಿಯ ನೂರು ಮೀಟರ್ ಅಂತರದಲ್ಲೇ ರೈಲ್ವೇ ಹಳಿಯೂ ಇದ್ದು ಪಾದಚಾರಿಗಳಿಗೆ ಇದೇ ಸಂಪರ್ಕ ಬಿಂದು.

ಹೆಬ್ಬಾಳದ ಕೆ2 ಬಸ್ ನಿಲ್ದಾಣಕ್ಕೆ ಸ್ಥಳಾವಕಾಶವಿಲ್ಲದೇ ಫ್ಲೈಓವರ್ ಕೆಳಗಡೆ ಬಸ್ ನಿಲ್ಲಿಸಿರುವ ದೃಶ್ಯ –ಪ್ರಜಾವಾಣಿ ಚಿತ್ರ

ಕೃಷಿ ವಿವಿಯ ಜಮೀನಿನಲ್ಲಿ ಒಂದರ್ಧ ಎಕರೆ ಪ್ರದೇಶವನ್ನು ಬಿಎಂಟಿಸಿ ಪಡೆದುಕೊಂಡು ಅಲ್ಲೊಂದು ಬಸ್ ನಿಲ್ದಾಣ ನಿರ್ಮಾಣ ಮಾಡಿದರೆ ಸಾರ್ವಜನಿಕರಿಗೆ ಸಾಕಷ್ಟು ಅನುಕೂಲ ಕಲ್ಪಿಸಿದಂತಾಗುತ್ತದೆ.

ಡಾ.ಶಿವಣ್ಣ ನೀರ್ಗಲ್
ಶಿಲ್ಪ ಹೈಟೆಕ್ ಸೀಡ್ಸ್ ಮಾಲೀಕ

ರಸ್ತೆ ಮಧ್ಯದಲ್ಲಿ ಒಮ್ಮೆಗೇ ನಾಲ್ಕೈದು ಬಸ್‌ಗಳು ನಿಂತಾಗ ಸಾಕಷ್ಟು ತೊಂದರೆ ಉಂಟಾಗುತ್ತದೆ. ಇದರಿಂದ ಎಷ್ಟೋ ಬಾರಿ ಸಣ್ಣಪುಟ್ಟ ಅಪಘಾತಗಳು ಸಂಭವಿಸುವ ಭೀತಿಯೂ ಇರುತ್ತದೆ.

ಧನಲಕ್ಷ್ಮಿ, ಕೆ–2 ಬಸ್ ಕಂಡಕ್ಟರ್

ಈ ಪ್ರದೇಶದಲ್ಲಿ ಬಿಎಂಟಿಸಿಯ ಕೆ–2 ಹಾಗೂ 279ರ ಸಂಖ್ಯೆಯ ಬಸ್‌ಗಳೂ ನಿಲ್ಲುತ್ತವೆ. ಅಷ್ಟೇಕೆ ಇದು ರಾಜರಾಜೇಶ್ವರಿ ಆಟೊ ರಿಕ್ಷಾ ನಿಲ್ದಾಣವೂ ಕೂಡಾ. ತರಕಾರಿ ಮಾರುಕಟ್ಟೆ, ಬಟ್ಟೆ ಬರೆ ವ್ಯಾಪಾರಿಗಳು, ಸರಕು ಸಾಗಣೆ ವಾಹನಗಳು, ಟ್ಯಾಕ್ಸಿ ಕಾರುಗಳು ನಿಲ್ಲುವುದಕ್ಕೂ ಜಾಗವೇ ಆಗಿದೆ...!

ಸಂಶೋಧನಾ ಕೇಂದ್ರಗಳು: ಈ ಬಸ್‌ಗಳು ನಿಲ್ಲುವುದು ಸೀದಾ ಮೇಲ್ಸೇತುವೆ ಕೆಳಗಿನ ಜಾಗದಲ್ಲಿ. ಇದರಿಂದಾಗಿ ಇದು ಸದಾ ದಟ್ಟಣೆಯ ತಾಣ. ಈ ತಾಣದ ಎದುರಿಗೆ, ಒಂದೆಡೆ ಶತಮಾನೋತ್ಸವದ ಸಂಭ್ರಮ ಕಂಡಿರುವ ಹೆಬ್ಬಾಳ ಕೃಷಿ ಶಾಲೆಯ ಮುಖ್ಯ ಸಂಶೋಧನಾ ಕೇಂದ್ರವಿದ್ದರೆ ಮತ್ತೊಂದೆಡೆ ಬೀಜ ಪರೀಕ್ಷಾ ಪ್ರಯೋಗಾಲಯವಿದೆ.

'ಕೇಂದ್ರೀಯ ಅಬಕಾರಿ ಬಡಾವಣೆಗೆ ತಿರುವು ಪಡೆದುಕೊಳ್ಳುವ ತನಕ ಮತ್ತು ಭೂಪಸಂದ್ರ ಮುಖ್ಯ ರಸ್ತೆಗೆ ಸಾಗುವ ಮಧ್ಯದಲ್ಲಿ ಎಲ್ಲಾದರೂ ಒಂದೆಡೆ ಕೃಷಿ ವಿಶ್ವವಿದ್ಯಾಲಯದ ಕಿಂಚಿತ್ ಭಾಗದಲ್ಲಿ ಬಿಎಂಟಿಸಿ ಬಸ್ ನಿಲ್ದಾಣ ಮಾಡಿದರೆ ಈ ಭಾಗದಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆ ಕಡಿಮೆ ಮಾಡಬಹುದು' ಎನ್ನುತ್ತಾರೆ ಇಲ್ಲಿಂದ ಪ್ರತಿನಿತ್ಯ ಸಿಟಿ ಸಿವಿಲ್ ಕೋರ್ಟ್‌ಗೆ ಸಂಚರಿಸುವ ಉದ್ಯೋಗಿ ಬಿ. ರೂಪಾ.

ರಾಜರಾಜೇಶ್ವರಿ ಆಟೊ ನಿಲ್ದಾಣದ ರಿಕ್ಷಾ ಚಾಲಕ ವಾಸುದೇವ್, 'ಇಲ್ಲಿಂದ ವಿದ್ಯಾನಿಕೇತನ ಶಾಲೆಗೆ ಹೋಗುವ ಮಕ್ಕಳು, ಭೂಪಸಂದ್ರ, ನಾಗಶೆಟ್ಟಿಹಳ್ಳಿ ಮತ್ತು ಸಂಜಯನಗರದ ಕಡೆ ಸಾಗುವವರು ಈ ದಾರಿಯನ್ನು ಬಳಸುತ್ತಾರೆ. ಆದರೆ, ಇಲ್ಲಿ ಬಸ್‌ಗಳು ಯಾವಾಗಲೂ ರಸ್ತೆ ಮಧ್ಯದಲ್ಲೇ (ಮೇಲ್ಸೇತುವೆ ಕೆಳಗೆ) ನಿಂತಿರಬೇಕಾಗುತ್ತದೆ' ಎಂದು ಹೇಳುತ್ತಾರೆ.

ರೌಡಿಗಳ ಕಾಟ

ಮಸೀದಿ ಎದುರಿನ ಚೌರಾಸ್ತಾ ಪ್ರದೇಶದಲ್ಲಿ ನಿತ್ಯವೂ ತರಕಾರಿ ಮಾರುವ ಕಲಾವತಿ ಅವರಿಗೆ ಸ್ಥಳೀಯ ರೌಡಿಗಳ ಕಾಟ...!

'ನಿನ್ನತ್ರ ಪರ್ಮಿಷನ್ ಇದೆಯಾ, ನಾವ್ಯಾರು ಗೊತ್ತಾ, ಅಣ್ಣನ್ ಕಡೆಯವರು. ನಾವು ಅವರನ್ ಕತ್ತರಿಸಿದ್ದೀವಿ, ಇವರನ್ ಕತ್ತರಿಸಿದ್ದೀವಿ, ನೀನು ಹಿಂಗೆಲ್ಲಾ ಪರ್ಮಿಷನ್ ಇಲ್ಲದೆ ತರಕಾರಿ ಮಾರುವಂತಿಲ್ಲ ಎಂದು ಇಲ್ಲಿನ ಒಂದಷ್ಟು ರೌಡಿಗಳು ನನಗೆ ಆಗಾಗ್ಗೆ ಬೆದರಿಕೆ ಹಾಕುತ್ತಾರೆ ಸ್ವಾಮಿ' ಎಂದು ಅವರು ಅಳಲು ತೋಡಿಕೊಂಡರು.

ಹೆಬ್ಬಾಳ ಕ್ಷೇತ್ರ: ನಾಳೆ ಜನಸ್ಪಂದನ

ಜನಸ್ಪಂದನ
ಸಿಟಿಜನ್ಸ್ ಫಾರ್ ಚೇಂಜ್

ಬೆಂಗಳೂರು: ಹೆಬ್ಬಾಳ ವಿಧಾನ ಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ 'ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ವತಿಯಿಂದ ಇದೇ 16ರಂದು ಆರ್.ಟಿ.ನಗರ ಪೊಲೀಸ್ ಠಾಣೆ ಎದುರಿನ ಎಚ್.ಎಂ.ಟಿ ಮೈದಾನದಲ್ಲಿ 'ಜನಸ್ಪಂದನ' ಕಾರ್ಯಕ್ರಮ ಏರ್ಪಡಿಸಲಾಗಿದೆ.

ಶಾಸಕ ಬೈರತಿ ಸುರೇಶ್, ಬಿಬಿಎಂಪಿ, ಜಲಮಂಡಳಿ, ಬಿಡಿಎ, ಬೆಸ್ಕಾಂ, ಪೊಲೀಸ್ ಇಲಾಖೆಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ. ಈ ಕ್ಷೇತ್ರದ ನಿವಾಸಿಗಳು ಸ್ಥಳೀಯ ಸಮಸ್ಯೆಗಳನ್ನು ನೇರವಾಗಿ ಶಾಸಕರ ಹಾಗೂ ಅಧಿಕಾರಿಗಳ ಗಮನಕ್ಕೆ ತಂದು ಬಗೆಹರಿಸಿಕೊಳ್ಳಬಹುದು.

ಆಸಕ್ತರು ಬೆಳಿಗ್ಗೆ 9ರಿಂದ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು. ಮೊದಲು ನೋಂದಣಿ ಮಾಡಿಸಿದವರಿಗೆ ಆದ್ಯತೆ. ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ಕಾರ್ಯಕ್ರಮ ನಡೆಯಲಿದೆ.

ಸಂಪರ್ಕ: 9739997938

ಸಚಿವರ ರಾಜೀನಾಮೆಗೆ ಎಎಪಿ ಆಗ್ರಹ

ಆರೋಗ್ಯ ಇಲಾಖೆ: ಭ್ರಷ್ಟಾಚಾರ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈದ್ಯಕೀಯ ಉಪಕರಣಗಳ ಖರೀದಿಯ ಗುತ್ತಿಗೆಯನ್ನು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು ತಮ್ಮ ಆಪ್ತ ಕಂಪನಿಗಳಿಗೆ ಕೊಡಿಸುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಮೂಲ ಬೆಲೆಗಿಂತ ಹೆಚ್ಚಿನ ದರಕ್ಕೆ ವೈದ್ಯಕೀಯ ಉಪಕರಣಗಳ ಖರೀದಿ ನಡೆದಿದೆ' ಎಂದು ಆಮ್ ಆದ್ಮಿ ಪಕ್ಷ (ಎಎಪಿ) ಆರೋಪಿಸಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ಬೆಂಗಳೂರು ಘಟಕದ ಅಧ್ಯಕ್ಷ ಮೋಹನ್ ದಾಸರಿ, 'ಆರೋಗ್ಯ ಇಲಾಖೆಯಲ್ಲಿ ಭಾರೀ ಭ್ರಷ್ಟಾಚಾರ ನಡೆಯುತ್ತಿದೆ. ಸಚಿವ ಸುಧಾಕರ್ ಅವರಿಂದ ರಾಜೀನಾಮೆ ಪಡೆದು, ಹಗರಣಗಳ ಕುರಿತು ಸಮಗ್ರ ನ್ಯಾಯಾಂಗ ತನಿಖೆ ನಡೆಸಬೇಕು. ಸಚಿವರ ಆಪ್ತ ಕಂಪನಿಗಳಿಗೆ ಗುತ್ತಿಗೆ ನೀಡುತ್ತಿರುವ ಬಗ್ಗೆ ಕಳೆದ ವರ್ಷವೇ ದಾಖಲೆ ಬಿಡುಗಡೆ ಮಾಡಲಾಗಿತ್ತು. ಆದರೆ, ಈವರೆಗೂ ಸರ್ಕಾರ ಕ್ರಮ ಕೈಗೊಂಡಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಅಲ್ಪಾವಧಿ ಗುತ್ತಿಗೆಯನ್ನು ರದ್ದು ಮಾಡಿ, ಮತ್ತೊಮ್ಮೆ ಟೆಂಡರ್ ಕರೆಯುವಾಗ ಟೆಂಡರ್ ಮಾನದಂಡಗಳನ್ನು ಬದಲಿಸಲು ಅವಕಾಶವಿಲ್ಲ. ಆದರೂ ಬದಲಾವಣೆ ಮಾಡಿದ್ದಾರೆ. ಟೆಂಡರ್‌ನಲ್ಲಿ ಕೇವಲ ಒಂದೇ ಬಿಡ್ ಬಂದಿದ್ದರೂ ಅದನ್ನು ಆಯ್ಕೆ ಸಮಿತಿ ಪರಿಗಣಿಸಿದೆ. ಸಿಸ್ಮೆಕ್ಸ್ ಎಂಬ ಕಂಪನಿಯಿಂದ 'ತ್ರೀ ಪಾರ್ಟ್ ಹೆಮಟಾಲಜಿ ಸೆಲ್ ಕೌಂಟರ್ ಉಪಕರಣ'ಗಳನ್ನು ದೆಹಲಿ ಸರ್ಕಾರ ₹ 1,80,540ಕ್ಕೆ ಖರೀದಿಸಿದೆ. ಇದನ್ನು ಹಿಮಾಚಲ ಪ್ರದೇಶ ಸರ್ಕಾರವು ₹ 1,30,000ಕ್ಕೆ ಹಾಗೂ ದೆಹಲಿಯ ಪುರಸಭೆ ₹1,44,000ಕ್ಕೆ ಖರೀದಿಸಿದೆ. ಕರ್ನಾಟಕ ಸರ್ಕಾರವು ಅದೇ ಉಪಕರಣಕ್ಕೆ ₹ 2,96,180 ನೀಡಿದೆ. ಒಟ್ಟು 1,195 ಉಪಕರಣಗಳ ಖರೀದಿಗೆ ₹ 19.85 ಕೋಟಿ ಹೆಚ್ಚುವರಿಯಾಗಿ ನೀಡಲಾಗಿದೆ' ಎಂದರು.

'ಫೈವ್ ಪಾರ್ಟ್ ಹೆಮಟಾಲಜಿ ಸೆಲ್ ಕೌಂಟರ್ ಉಪಕರಣ'ಗಳನ್ನು ಸಿಸ್ಮೆಕ್ಸ್ ಕಂಪನಿಯು ಕೇರಳ ಸರ್ಕಾರಕ್ಕೆ ₹ 4.60 ಲಕ್ಷಕ್ಕೆ ನೀಡಿದೆ. ಆದರೆ, ಕರ್ನಾಟಕ ಸರ್ಕಾರವು ಅದೇ ಕಂಪನಿಯಿಂದ ₹ 8.35 ಲಕ್ಷಕ್ಕೆ ಖರೀದಿಸಿದೆ. ಒಟ್ಟು 165 ಉಪಕರಣಗಳ ಖರೀದಿಯಿಂದಾಗಿ ₹ 6.18 ಕೋಟಿ ಹೆಚ್ಚುವರಿ ಹೊರೆಯಾಗಿದೆ' ಎಂದು ಆರೋಪಿಸಿದರು.

ಎಎಪಿಯ ಬೆಂಗಳೂರು ನಗರ ಘಟಕದ ಉಪಾಧ್ಯಕ್ಷ ಸುರೇಶ್ ರಾಥೋಡ್, 'ಸುಧಾಕರ್ ಅವರು ರಾಜ್ಯ ಸಚಿವ ಸಂಪುಟದಲ್ಲಿರುವ ಅತಿ ಭ್ರಷ್ಟ ಸಚಿವ. ಮಾಧ್ಯಮಗಳಲ್ಲೂ ಆರೋಗ್ಯ ಇಲಾಖೆಯ ಸಾಲು ಸಾಲು ಹಗರಣಗಳು ವರದಿಯಾಗುತ್ತಿವೆ. ಆದರೂ ಅವರ ವಿರುದ್ಧ ಮುಖ್ಯಮಂತ್ರಿ ಯಾವುದೇ ಕ್ರಮ ಕೈಗೊಳ್ಳದಿರುವುದು ದುರಂತ' ಎಂದು ಹೇಳಿದರು.

ಈ ಬಗ್ಗೆ ಪ್ರತಿಕ್ರಿಯೆಗೆ ಸಚಿವ ಸುಧಾಕರ್ ಲಭ್ಯರಾಗಲಿಲ್ಲ.

ನಗರದಲ್ಲಿ ಇಂದು

54ನೇ ವರ್ಷದ ಮಕ್ಕಳ ಬೇಸಿಗೆ ರಜೆಯ ಶಿಕ್ಷಣ ಹಾಗೂ ಮನರಂಜನಾ ಶಿಬಿರ: ಅಧ್ಯಕ್ಷತೆ: ಕೆ. ಮೋಹನ್ ದೇವ್ ಆಳ್ವ, ಉದ್ಘಾಟನೆ: ಜಮೀರ್ ಅಹ್ಮದ್ ಖಾನ್, ಮುಖ್ಯ ಅತಿಥಿಗಳು: ವೂಡೇ ಪಿ. ಕೃಷ್ಣ, ಪ್ರೇಮ ತೋತಾದ್ರಿ, ಆಯೋಜನೆ ಹಾಗೂ ಸ್ಥಳ: ಅಖಿಲ ಕರ್ನಾಟಕ ಮಕ್ಕಳ ಕೂಟ, ಕೋಟೆ, ಮಧ್ಯಾಹ್ನ 3.30

ದಕ್ಷಿಣ ಕನ್ನಡ ಜೈನ ಮೈತ್ರಿಕೂಟದ 35ನೇ ವಾರ್ಷಿಕೋತ್ಸವ ಹಾಗೂ ಮಹಾಕವಿ ರತ್ನಾಕರವರ್ಣಿ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯವರ್ಯ, ಪ್ರಶಸ್ತಿ ಪ್ರದಾನ: ಆರಗ ಜ್ಞಾನೇಂದ್ರ, ಪ್ರಶಸ್ತಿ ಪುರಸ್ಕೃತರು: ಮುನಿರಾಜ ರೆಂಜಾಳ, ಪುಸ್ತಕ ಬಿಡುಗಡೆ: ಪದ್ಮರಾಜ ದಂಡಾವತಿ, ಲೇಖಕರು: ಜಯಲಕ್ಷ್ಮಿ ಅಭಯ ಕುಮಾರ್, ಆಯೋಜನೆ: ದಕ್ಷಿಣ ಕನ್ನಡ ಜೈನ ಮೈತ್ರಿಕೂಟ, ಸ್ಥಳ: ಶ್ರೀ ಧರ್ಮಸ್ಥಳ ಮಂಜುನಾಥಸ್ವಾಮಿ ಕಲ್ಯಾಣ ಮಂಟಪ, ಬಸವನಗುಡಿ, ಸಂಜೆ 4

ಕದಳಿ ಮಹಿಳಾ ಸಮಾವೇಶ: ಉದ್ಘಾಟನೆ: ಸೌಮ್ಯಾ ರೆಡ್ಡಿ, ನೇತೃತ್ವ: ಗೊ.ರು. ಚನ್ನಬಸಪ್ಪ, ಅಧ್ಯಕ್ಷತೆ: ಪ್ರೊ. ಮಲೆಯೂರು ಗುರುಸ್ವಾಮಿ, ಮುಖ್ಯ ಅತಿಥಿಗಳು: ಶೈಲಜಾ ವಿ. ಸೋಮಣ್ಣ, ಸುಶೀಲಾ ಸೋಮಶೇಖರ್, ಸನ್ಮಾನ: ಗಂಗಾಂಬಿಕೆ ಮಲ್ಲಿಕಾರ್ಜುನ್, ಉಮಾ ಜಯಕುಮಾರ್, ಆಯೋಜನೆ: ಕದಳಿ ಮಹಿಳಾ ವೇದಿಕೆ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

'ಅಮೃತ ಸಂಗೀತಂ' ವೈವಿಧ್ಯಮಯ ಸಂಗೀತ ಕಛೇರಿ: ಓಂಕಾರ್ ಹವಾಲ್ದಾರ್ ಅವರಿಂದ ಹಿಂದೂಸ್ತಾನಿ ಸಂಗೀತ ಕಛೇರಿ, ತಬಲಾ: ಕೇದಾರನಾಥ್ ಹವಾಲ್ದಾರ್, ಸಾಗರ್ ಭಾರದ್ವಾಜ್, ರಾಜೇಶ್ ಕುಲಕರ್ಣಿ, ಹಾರ್ಮೋನಿಯಂ: ಸಮೀರ್ ಹವಾಲ್ದಾರ್, ರಂಜನಿ ಗಾಯತ್ರಿ ಅವರಿಂದ ಕರ್ನಾಟಕ ಸಂಗೀತ ಕಛೇರಿ, ಪಿಟೀಲು: ಎಚ್.ಎಂ. ಸ್ಮಿತಾ, ಮೃದಂಗ: ಸಾಯಿ ಗಿರಿಧರ್, ಘಟ: ಚಂದ್ರಶೇಖರ ಶರ್ಮಾ, ಆಯೋಜನೆ: ಭಾರತೀಯ ಸಾಮಗಾನ ಸಭಾ, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ ಸಂಜೆ 5.30ರಿಂದ

ಶ್ರೀನಾಥ್ ಬಿದರೆ ಅವರ ಕಲಾಕೃತಿ

ಶ್ರೀನಾಥ್ ಬಿದರೆ ಅವರ ಕಲಾಕೃತಿಗಳ ಪ್ರದರ್ಶನ: ಮುಖ್ಯ ಅತಿಥಿಗಳು: ಚಂದ್ರನಾಥ್ ಆಚಾರ್ಯ, ನಜ್ಮೀನ್ ಬಾನು, ಎಂ.ಎಸ್. ಪ್ರಕಾಶ್ ಬಾಬು, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5

ದಾಸವಾಣಿ: ಕನಕಗಿರಿ ಹುಸೇನ್‌ಸಾಬ್ ಮತ್ತು ತಂಡದಿಂದ, ಆಯೋಜನೆ: ವಿಎಲ್ಎನ್–ನಿರ್ಮಾಣ್–ಪುರಂದರ ಪ್ರತಿಷ್ಠಾನ, ಸ್ಥಳ: ಪುರಂದರ ಮಂಟಪ, ನಿಸರ್ಗ ಬಡಾವಣೆ, ಸಂಜೆ 6

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಕರ್ನಾಟಕ ಸಂಗೀತ ಕಾರ್ಯಕ್ರಮ: ತ್ರಿಚೂರು ಸಹೋದರರು, ಸಾಯಿ ರಕ್ಷಿತ್, ತ್ರಿಚೂರು ಮೋಹನ್, ಕೋವೈ ಸುರೇಶ್, ಆಯೋಜನೆ: ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ: ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 6.30ರಿಂದ

ಬೆಂಗಳೂರು ಕರಗ ಶಕ್ತ್ಯೋತ್ಸವದ 'ಪೊಂಗಲು ಸೇವೆ': ಸ್ಥಳ: ಸಂಪಂಗಿಕೆರೆ ಅಂಗಳದ ಶಕ್ತಿಪೀಠ, ಮುಂಜಾನೆ 3ಕ್ಕೆ

ಗ್ರಾಮೀಣ ಕುಡಿಯುವ ನೀರು ಸರಬರಾಜು ಹಾಗೂ ನೈರ್ಮಲ್ಯ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾ.ಕು.ನೀ&ನೈ.ಇ, ಕೊಠಡಿ ಸಂಖ್ಯೆ: ಎಸ್–11, ಮತ್ತು ಎಸ್–14, ಜಿಲ್ಲಾಡಳಿತ ಭವನ, ಕೋಲಾರ–563101, ದೂ: 08152-222331
ಇ–ಮೇಲ್: eerdwsd.klr@gmail.com

ಸಂ: ಕಾಪಾಅ/ಗ್ರಾಕುನೀ&ನೈವಿ/ಕೋ/ಕಿ.ಇಂ–1/10/2022–23 ದಿ: 11.04.2022

ಬಾಡಿಗೆ ವಾಹನಗಳನ್ನು ಒದಗಿಸಲು ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ: 01/2022–23, ದಿನಾಂಕ: 11.04.2022

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣ ಕಾಯ್ದೆಗಳಲ್ಲಿಯ ನಿಯಮಗಳು ಹಾಗೂ ಸರ್ಕಾರದ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ (ದ್ವಿ–ಲಕೋಟೆ), ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕೋಲಾರ ವಿಭಾಗ ಮತ್ತು ವಿಭಾಗ ವ್ಯಾಪ್ತಿಗೆ ಒಳಪಡುವ ಕೋಲಾರ, ಬಂಗಾರಪೇಟೆ, ಮಾಲೂರು, ಮುಳಬಾಗಿಲು ಮತ್ತು ಶ್ರೀನಿವಾಸಪುರ ಉಪ ವಿಭಾಗ ಕಛೇರಿಗಳಿಗೆ ತಲಾ ಒಂದು ವಾಹನದಂತೆ ತಿಂಗಳ ಬಾಡಿಗೆ ಆಧಾರದ ಮೇಲೆ ಉತ್ತಮ ಕಾರ್ಯನಿರ್ವಹಣೆಯಲ್ಲಿರುವ ಇಟಿಯೋಸ್, ಟಾಟಾಸುಮೋ, ಸ್ವಿಫ್ಟ್, ಸ್ವಿಫ್ಟ್‌ಡಿಸೈರ್ ಹಾಗೂ ಇನ್ನಿತರೆ ವಾಹನಗಳನ್ನು ಹೊಂದಿರುವಂತಹ ಕರ್ನಾಟಕ ರಾಜ್ಯದಲ್ಲಿ ನೋಂದಣಿ ಮಾಡಿ (ಹಳದಿ ಬೋರ್ಡ್) ಸ್ವಂತ ವಾಹನಗಳನ್ನು ಹೊಂದಿರುವ ಸರಬರಾಜುದಾರರು/ ಟ್ರಾವೆಲ್ ಏಜೆನ್ಸಿಗಳಿಂದ 6 ವಾಹನಗಳಿಗೆ ಒಂದು ವರ್ಷದ ಅವಧಿಗೆ ಒದಗಿಸಲು (ಷರತ್ತು ಮತ್ತು ನಿಬಂಧನೆಗಳಂತೆ) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ **(e-Procurement website: https://eproc.karnataka.gov.in)** ಅರ್ಜಿ ಶುಲ್ಕ: **ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ (ಹಿಂತಿರುಗಿಸಲಾಗುವುದಿಲ್ಲ).** **(2)** ಇ.ಎಂ.ಡಿ. (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಸಲ್ಲಿಸುವುದು): **ರೂ.16,000/–ಗಳು** (ಪ್ರತಿ ವಾಹನಕ್ಕೆ) **(3)** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **25.04.2022 (ಸಂಜೆ 4.00 ಗಂಟೆಯೊಳಗೆ). (4)** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **27.04.2022 (ಸಂಜೆ 4.30 ಗಂಟೆಗೆ). (5)** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ: **29.04.2022 (ಸಂಜೆ 4.30 ಗಂಟೆಗೆ). ಸೂಚನೆ:** ಸದರಿ ಟೆಂಡರ್‌ನ್ನು ಯಾವುದೇ ಕಾರಣವನ್ನು ನೀಡದೇ ಹಿಂದಕ್ಕೆ ಪಡೆಯುವ ಅಥವಾ ರದ್ದುಗೊಳಿಸುವ/ತಿರಸ್ಕರಿಸುವ ಅಧಿಕಾರವನ್ನು ಕಾರ್ಯಪಾಲಕ ಅಭಿಯಂತರರು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೋಲಾರ.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 16/ಎಂ.ಸಿ.ಎ/2022–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

Azadi Ka Amrit Mahotsav | ಭಾರತ ಸರ್ಕಾರ

ಗೌರವ, ಹಕ್ಕುಗಳು, ಅವಕಾಶಗಳು

ಬುಡಕಟ್ಟು ಸಮುದಾಯಗಳ
ಸಮಗ್ರ ಅಭಿವೃದ್ಧಿಗೆ ಸರ್ಕಾರ ಬದ್ಧ

- ಭಗವಾನ್ ಬಿರ್ಸಾ ಮುಂಡಾ ಜಯಂತಿಯನ್ನು 'ಜನಜಾತೀಯ ಗೌರವ ದಿನ'ವನ್ನಾಗಿ ಘೋಷಣೆ
- ಬುಡಕಟ್ಟು ಅಭಿವೃದ್ಧಿಗೆ ಕೇಂದ್ರ ಬಜೆಟ್‌ನಲ್ಲಿ ಅನುದಾನ ನಾಲ್ಕು ಪಟ್ಟು ಹೆಚ್ಚಳ – 2013–14ರಲ್ಲಿ 21,525 ಕೋಟಿ ರೂ.ನಿಂದ 2022–23ರಲ್ಲಿ 87,584 ಕೋಟಿ ರೂ.ಗಳಿಗೆ ಏರಿಕೆ
- ವಿದ್ಯಾರ್ಥಿವೇತನದ ಹಂಚಿಕೆ ದುಪ್ಪಟ್ಟು–2013–14ರಲ್ಲಿ 978 ಕೋಟಿ ರೂ.ಗಳಿಂದ 2021–22ರಲ್ಲಿ 2,726 ಕೋಟಿ ರೂ.ಗಳಿಗೆ ಹೆಚ್ಚಳ
- ಏಕಲವ್ಯ ಶಾಲೆಗಳ ಸಂಖ್ಯೆ ಐದುಪಟ್ಟು ಹೆಚ್ಚಳ 2004–2014ರ ವರೆಗೆ 90 ಶಾಲೆಗಳಿಗೆ ಅನುಮೋದನೆ, 2014–22ರ ವರೆಗೆ 512 ಶಾಲೆಗಳಿಗೆ ಅನುಮೋದನೆ
- ಸಿಕಲ್ ಸೆಲ್ ರೋಗ ನಿರ್ಮೂಲನೆಗೆ ಅದರ ಯೋಜನಾ ಅವಧಿಯಲ್ಲಿ ಸುಮಾರು ಒಂದು ಕೋಟಿ ಆದಿವಾಸಿಗಳ ತಪಾಸಣೆ
- ದೇಶಾದ್ಯಂತ ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರರ 10 ಮ್ಯೂಸಿಯಂಗಳ ಸ್ಥಾಪನೆ
- ದ್ವಿಗುಣಗೊಂಡ ಅರಣ್ಯ ಹಕ್ಕುಗಳ 2006–14ರ ಅವಧಿಯಲ್ಲಿ 55 ಲಕ್ಷ ಎಕರೆ, 2014–22ರ ಅವಧಿಯಲ್ಲಿ 103.5 ಲಕ್ಷ ಎಕರೆ
- ಮಿಷನ್ ವನ ಧನ್ ಯೋಜನೆಯಿಂದ 9 ಲಕ್ಷ ಜನರಿಗೆ ಅನುಕೂಲ 3,110 ವಿಕಾಸ ಕೇಂದ್ರ ಕ್ಲಸ್ಟರ್‌ಗಳ 52,976 ವನ ಧನ್ ಸ್ವಸಹಾಯ ಗುಂಪುಗಳ ಮೂಲಕ
- ಬಿದಿರು ಮೇಲಿನ ನಿಯಂತ್ರಣಗಳ ನಿವಾರಣೆ – ಭಾರತೀಯ ಅರಣ್ಯ ಕಾಯ್ದೆಗೆ ತಿದ್ದುಪಡಿ ಮಾಡುವ ಮೂಲಕ ಬಿದಿರಿನ ಮೇಲಿನ ನಿಯಂತ್ರಣ ತೆಗೆದು ಬಿದಿರು ಬೆಳೆ ಮತ್ತು ಮಾರಾಟಕ್ಕೆ ಉತ್ತೇಜನ
- ಇದೇ ಮೊದಲ ಬಾರಿಗೆ ಅಧಿಸೂಚನೆಯಿಂದ ಕೈಬಿಟ್ಟ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳ ಕಲ್ಯಾಣ ಮತ್ತು ಅಭಿವೃದ್ಧಿಗೆ ಮಂಡಳಿ ಸ್ಥಾಪನೆ

"ನಮ್ಮ ಬುಡಕಟ್ಟು ಸಮುದಾಯಗಳ ಸಬಲೀಕರಣ ಮತ್ತು ಅವರ ಸಂಪ್ರದಾಯಗಳ ಸಂರಕ್ಷಣೆ ನಿಟ್ಟಿನಲ್ಲಿ ನಮ್ಮ ಸರ್ಕಾರ ದೃಢವಾಗಿ ಕಾರ್ಯನಿರ್ವಹಿಸುತ್ತಿದೆ. ನಾವು ಬುಡಕಟ್ಟು ಗ್ರಾಮೀಣ ಆರ್ಥಿಕ ವ್ಯವಸ್ಥೆ ಪರಿವರ್ತನೆಗೆ ಅರ್ಹನೀತಿ ಕಾರ್ಯನಿರ್ವಹಿಸುತ್ತಿದ್ದೇವೆ."
–ನರೇಂದ್ರ ಮೋದಿ

davp 43101/13/0004/2223

ಮುಖ್ಯಮಂತ್ರಿ ನಿವಾಸಕ್ಕೆ ಮುತ್ತಿಗೆ ಯತ್ನ • ಬಂಧನಕ್ಕೆ ಆಗ್ರಹಿಸಿ ವಿಧಾನಸೌಧ ಪೂರ್ವದ್ವಾರದಲ್ಲಿ ಅಹೋರಾತ್ರಿ ಧರಣಿ

ಈಶ್ವರಪ್ಪ ಮಣಿದರೂ ಪಟ್ಟು ಸಡಿಲಿಸದ 'ಕೈ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸುವಂತೆ ಆಗ್ರಹಿಸಿ ಗುರುವಾರ ಬೆಳಿಗ್ಗೆ ಮುಖ್ಯಮಂತ್ರಿ ನಿವಾಸಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ ಕಾಂಗ್ರೆಸ್ ನಾಯಕರು, ಮಧ್ಯಾಹ್ನದ ಬಳಿಕ ವಿಧಾನಸೌಧದ ಪೂರ್ವದ್ವಾರದಲ್ಲಿ ಅಹೋರಾತ್ರಿ ಧರಣಿ ಆರಂಭಿಸಿದರು.

'ಕೈ' ನಾಯಕರು ಹೋರಾಟ ತೀವ್ರಗೊಳಿಸುತ್ತಿದ್ದಂತೆ ಅತ್ತ ಶಿವಮೊಗ್ಗದಲ್ಲಿ ಸುದ್ದಿಗೋಷ್ಠಿ ನಡೆಸಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಈಶ್ವರಪ್ಪ ಘೋಷಿಸಿದರು. ಆದರೂ ಪಟ್ಟು ಸಡಿಲಿಸದ ಕಾಂಗ್ರೆಸ್ ನಾಯಕರು, 'ಪ್ರಕರಣದ ಮೊದಲ ಆರೋಪಿ ಈಶ್ವರಪ್ಪ ಅವರನ್ನು ಬಂಧಿಸುವರೆಗೆ ಮತ್ತು ಅವರ ವಿರುದ್ಧ ಭ್ರಷ್ಟಾಚಾರ ಪ್ರಕರಣ ದಾಖಲಿಸುವವರೆಗೆ ಪ್ರತಿಭಟನೆಯಿಂದ ಹಿಂದೆ ಸರಿಯುವುದಿಲ್ಲ' ಎಂದು ಘೋಷಿಸಿದರು.

ರೇಸ್‌ಕೋರ್ಸ್ ರಸ್ತೆಯ ಕಾಂಗ್ರೆಸ್ ಭವನದಿಂದ ಮುಖ್ಯಮಂತ್ರಿ ನಿವಾಸದ ಕಡೆಗೆ ಪ್ರತಿಭಟನಾ ರ‍್ಯಾಲಿ ನಡೆಸಿದ ಕಾಂಗ್ರೆಸ್ ನಾಯಕರು, ಕಾರ್ಯಕರ್ತರನ್ನು ಪೊಲೀಸರು ತಡೆದರು. ಈ ವೇಳೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಮತ್ತಿತರರು ಬ್ಯಾರಿಕೇಡ್ ಹತ್ತಿ ಜಿಗಿಯಲು ಯತ್ನಿಸಿದರು. ಆಗ ಪೊಲೀಸರು ಮತ್ತು ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು. ತಳ್ಳಾಟ, ನೂಕಾಟ ಜೋರಾದ ವೇಳೆ ಪರಿಸ್ಥಿತಿ ನಿಯಂತ್ರಿಸಲು ಕೆಲವು ಮುಖಂಡರು ಮತ್ತು ಕಾರ್ಯಕರ್ತರನ್ನು ಪೊಲೀಸರು ಬಲವಂತವಾಗಿ ವಶಕ್ಕೆ ಪಡೆದರು.

ಬಳಿಕ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಧ್ರುವನಾರಾಯಣ್, ಸಲೀಂ ಅಹಮ್ಮದ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಟಿ.ಬಿ. ಜಯಚಂದ್ರ, ಪ್ರಿಯಾಂಕ್ ಖರ್ಗೆ, ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್ ಸೇರಿದಂತೆ ಅನೇಕ ನಾಯಕರನ್ನೂ ವಶಕ್ಕೆ ಪಡೆದರು.

ಪ್ರತಿಭಟನೆ ವೇಳೆ ಮಾತನಾಡಿದ ಸಿದ್ದರಾಮಯ್ಯ, 'ಈಶ್ವರಪ್ಪ ವಿರುದ್ಧ ಎಫ್‌ಐಆರ್ ದಾಖಲಾಗುತ್ತಿದ್ದಂತೆ ಕ್ರಮ ಕೈಗೊಳ್ಳಬೇಕಿತ್ತು. ಭ್ರಷ್ಟಾಚಾರಕ್ಕೆ ಮುಖ್ಯಮಂತ್ರಿ ಕುಮ್ಮಕ್ಕು ನೀಡುತ್ತಿದ್ದಾರೆ. ಅತ್ಯಂತ ಭ್ರಷ್ಟ ಸರ್ಕಾರ ರಾಜ್ಯದಲ್ಲಿದೆ. ಆರೋಗ್ಯ ಸಚಿವ ಸುಧಾಕರ್ ವಿರುದ್ಧವೂ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಭ್ರಷ್ಟಾಚಾರದ ಆರೋಪ ಮಾಡಿದ್ದಾರೆ. ಭ್ರಷ್ಟಾಚಾರದ ಗಂಗೋತ್ರಿಯ ಅಧ್ಯಕ್ಷ ಮುಖ್ಯಮಂತ್ರಿ. ಭ್ರಷ್ಟಾಚಾರ ಮುಕ್ತ ಕರ್ನಾಟಕಕ್ಕಾಗಿ ಕಾಂಗ್ರೆಸ್ ಅಭಿಯಾನ ಆರಂಭಿಸುತ್ತಿದೆ. ಇದು ರಾಜಕೀಯ ಹೋರಾಟವಲ್ಲ. ಭ್ರಷ್ಟಾಚಾರದ ವಿರುದ್ಧ ಸಂಘರ್ಷ' ಎಂದರು.

'ಸಚಿವ ಈಶ್ವರಪ್ಪ ವಿರುದ್ಧ ಕೊಲೆ ಪ್ರಕರಣ ದಾಖಲಾದ ಬಳಿಕವೂ ಅವರು ಸಂಪುಟದಲ್ಲಿ ಮುಂದುವರಿಯುತ್ತಿರುವುದಾದರೂ ಹೇಗೆ' ಎಂದು ರಣದೀಪ್‌ಸಿಂಗ್ ಸುರ್ಜೇವಾಲಾ ಪ್ರಶ್ನಿಸಿದರು.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಕುಳಿತು ಅಹೋರಾತ್ರಿ ಧರಣಿ ನಡೆಸಿದ ಕಾಂಗ್ರೆಸ್ ನಾಯಕರು —ಪ್ರಜಾವಾಣಿ ಚಿತ್ರ

'ಬಳಸಿ ಬಿಸಾಡುವ ಪಕ್ಷ ಬಿಜೆಪಿ'

ಬೆಳಗಾವಿ: 'ಬಳಸಿ ಬಿಸಾಡುವ ಪಕ್ಷವಿದ್ದರೆ ಅದು ಬಿಜೆಪಿ ಮಾತ್ರ. ಆ ಪಕ್ಷದ ನಾಯಕರು ಹೊಡೆದಾಡಲು, ಬಡಿದಾಡಲು ಮಾತ್ರ ಕಾರ್ಯಕರ್ತರನ್ನು ಬಳಸಿಕೊಳ್ಳುತ್ತಾರೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಟೀಕಿಸಿದರು.

ಇಲ್ಲಿ ಮಾಧ್ಯಮವರೊಂದಿಗೆ ಗುರುವಾರ ಮಾತನಾಡಿ, 'ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದ ಆರೋಪಿ ಸಚಿವ ಕೆ.ಎಸ್. ಈಶ್ವರಪ್ಪ ಅವರನ್ನು ಬಂಧಿಸುವವರೆಗೂ ನಮ್ಮ ಹೋರಾಟ ನಡೆಯಲಿದೆ. ಎಫ್‌ಐಆರ್ ಆಗಿದೆ. ಮೃತರ ಕುಟುಂಬದವರೂ ಆರೋಪಿಸಿದ್ದಾರೆ. ಆರೋಪಿ ಬಂಧಿಸಲು ಇಷ್ಟು ಸಾಕಲ್ಲವೇ' ಎಂದು ಪ್ರಶ್ನಿಸಿದರು.

ತಕ್ಷಣ ಬಂಧಿಸಬೇಕು– ಸಿದ್ದರಾಮಯ್ಯ

ಈಶ್ವರಪ್ಪ ಸಚಿವ ಸ್ಥಾನ ತ್ಯಜಿಸುವುದಾಗಿ ಘೋಷಿಸಿದ ಬೆನ್ನಲ್ಲೆ ಮಾತನಾಡಿದ ಸಿದ್ದರಾಮಯ್ಯ, 'ಈಶ್ವರಪ್ಪ ರಾಜೀನಾಮೆ ನಮ್ಮ ಹೋರಾಟದ ಮುಖ್ಯ ಉದ್ದೇಶವಲ್ಲ. ಅವರ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು. ಈಗ ಅವರ ಮೇಲೆ ಸೆಕ್ಷನ್ 306, ಸೆಕ್ಷನ್ 34ರಡಿ ಕೇಸ್ ದಾಖಲಾಗಿದೆ. ಇದೊಂದು ಅಮಾನವೀಯ ಅಪರಾಧ. ಇಂಥ ಪ್ರಕರಣಗಳಲ್ಲಿ ಅಪರಾಧಿ ಸಿಕ್ಕ ಕೂಡಲೆ ಬಂಧಿಸಬೇಕು ಎಂದು ಕಾನೂನು ಹೇಳುತ್ತದೆ. ಹೀಗಾಗಿ, ಅವರನ್ನು ತಕ್ಷಣ ಬಂಧಿಸಬೇಕು. ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ಈ ಆತ್ಮಹತ್ಯೆ ಪ್ರಕರಣದ ನ್ಯಾಯಾಂಗ ತನಿಖೆ ಆಗಬೇಕು. ಶೇ 40 ಕಮಿಷನ್ ಆರೋಪದ ಬಗ್ಗೆಯೂ ನ್ಯಾಯಾಂಗ ತನಿಖೆಯಾಗಬೇಕು. ನಮ್ಮ ಎಲ್ಲ ಬೇಡಿಕೆಗಳು ಇನ್ನೂ ಈಡೇರಿಲ್ಲ' ಎಂದರು.

ನುಡಿದಂತೆ ನಡೆದಿಲ್ಲ– ಡಿಕೆಶಿ

'ಈಶ್ವರಪ್ಪ ರಾಜೀನಾಮೆ ನೀಡುವುದಾಗಿ ಹೇಳಿಕೆ ನೀಡಿದ್ದಾರೆ. ಆದರೆ, ಅವರು ಯಾವತ್ತೂ ನುಡಿದಂತೆ ನಡೆದಿಲ್ಲ. ಸುಳ್ಳಿನ ಸಮಿತಿ ಮುಖ್ಯಸ್ಥ ಈಶ್ವರಪ್ಪ' ಎಂದು ಡಿ.ಕೆ. ಶಿವಕುಮಾರ್ ಟೀಕಿಸಿದರು.

'ನಾನಾಗಲಿ, ನಮ್ಮ ಶಾಸಕಾಂಗ ಪಕ್ಷದ ನಾಯಕರಾಗಲಿ ಈಶ್ವರಪ್ಪನವರ ರಾಜೀನಾಮೆಗೆ ಹೆಚ್ಚಿನ ಒತ್ತು ಕೊಟ್ಟಿಲ್ಲ. ಅವರ ವಿರುದ್ಧ ಭ್ರಷ್ಟಾಚಾರ ಪ್ರಕರಣ ದಾಖಲಿಸಿ, ಬಂಧಿಸಬೇಕು. ಈ ಪ್ರಕರಣದ ತನಿಖೆ ಹೈಕೋರ್ಟ್ ಹಾಲಿ ನ್ಯಾಯಮೂರ್ತಿಯ ಮೇಲುಸ್ತುವಾರಿಯಲ್ಲಿ ನಡೆಯಬೇಕು. ಅಲ್ಲಿಯವರೆಗೆ ನಮ್ಮ ಹೋರಾಟ ಮುಂದುವರಿಯಲಿದೆ' ಎಂದರು.

'ಸಚಿವರನ್ನು ಬಂಧಿಸಬೇಕು'

ಬೆಳಗಾವಿ: 'ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದಲ್ಲಿ ಸಚಿವ ಕೆ.ಎಸ್. ಈಶ್ವರಪ್ಪ ಅವರ ರಾಜೀನಾಮೆಯನ್ನು ನಾವು ಕೇಳಿಲ್ಲ. ಎಫ್‌ಐಆರ್ ದಾಖಲಾಗಿದ್ದು, ಅದರಂತೆ ಆರೋಪಿಗಳನ್ನು ಬಂಧಿಸಬೇಕು' ಎಂದು ಸಹೋದರ ಸಂಬಂಧಿ ಪ್ರಶಾಂತ್ ಪಾಟೀಲ ಒತ್ತಾಯಿಸಿದರು.

ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಕೆ.ಎಸ್. ಈಶ್ವರಪ್ಪ ಅವರು ಘೋಷಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನನ್ನ ತಮ್ಮ ಮಾಡಿದ ಕಾಮಗಾರಿಯ ಬಿಲ್ ₹ 4 ಕೋಟಿ ಪಾವತಿಸಬೇಕು. ಅವರ ಪತ್ನಿಗೆ ಸರ್ಕಾರಿ ನೌಕರಿ ಕೊಡಿಸಬೇಕು. ಪರಿಹಾರ ನೀಡಬೇಕು. ಈಶ್ವರಪ್ಪ ಸೇರಿದಂತೆ ಮೂವರು ಆರೋಪಿಗಳ ಬಂಧನ ಆಗಬೇಕು' ಎಂದು ಹೇಳಿದರು.

ಸುದ್ದಿ 2 ನಿಮಿಷ

ಬಿಜೆಪಿಯದ್ದು ನರಹಂತಕ ಸರ್ಕಾರ: ಡಾ.ಮಹದೇವಪ್ಪ

ಮೈಸೂರು: 'ಬಿಜೆಪಿಯದ್ದು ನರಹಂತಕ ಸರ್ಕಾರ' ಎಂದು ಕಾಂಗ್ರೆಸ್ ಮುಖಂಡ ಡಾ.ಎಚ್.ಸಿ.ಮಹದೇವಪ್ಪ ವಾಗ್ದಾಳಿ ನಡೆಸಿದರು.

ಗುರುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಕಾಂಗ್ರೆಸ್ ಸರ್ಕಾರ ಅಭಿವೃದ್ಧಿ ಪರ, ಸಂವಿಧಾನ ಪರ ಆಡಳಿತ ಮಾಡಿರುವುದು ದಾಖಲೆಯಲ್ಲಿ ಸೇರಿಹೋಗಿದೆ. ಈಗಿನ ಬಿಜೆಪಿ ಸರ್ಕಾರ ಕಾನೂನು ಪಾಲನೆಯಲ್ಲಿ ಸಂಪೂರ್ಣವಾಗಿ ಸೋತಿದೆ. ಜಂಗಲ್ ರೂಲ್ ನಡೆಯುತ್ತಿದೆ. ಸಂವಿಧಾನ ಬಾಹಿರ ಕೆಲಸಗಳು ನಡೆಯುತ್ತಿದ್ದರೂ ಕಣ್ಮುಚ್ಚಿ ಕುಳಿತಿದೆ. ಇದೊಂದು ಅಸಮರ್ಥ ಸರ್ಕಾರ' ಎಂದು ದೂರಿದರು.

'ಗುತ್ತಿಗೆದಾರನ ಆತ್ಮಹತ್ಯೆ ಪ್ರಕರಣದಲ್ಲಿ ಕೆ.ಎಸ್.ಈಶ್ವರಪ್ಪ ರಾಜೀನಾಮೆ ಕೊಡುವವರೆಗೂ ಕಾಂಗ್ರೆಸ್ ಹೋರಾಟ ನಡೆಯಲಿದೆ. ಅವರನ್ನು ಸಚಿವ ಸ್ಥಾನದಿಂದ ರಾಜ್ಯಪಾಲರು ವಜಾಗೊಳಿಸಬೇಕು. ಅವರು ತಪ್ಪಿತಸ್ಥರಲ್ಲದಿದ್ದರೆ ಮತ್ತೆ ಸಚಿವರಾಗಲಿ' ಎಂದರು.

'ವರ್ಕ್ ಆರ್ಡರ್ ಇಲ್ಲದೇ ಕೆಲಸ ಕೊಟ್ಟಿದ್ದನ್ನು ಕೇಳಬೇಕಿತ್ತು'

ಹೊಸಪೇಟೆ (ವಿಜಯನಗರ): 'ವರ್ಕ್ ಆರ್ಡರ್ ಇಲ್ಲದೇ ಸಂತೋಷ್ ಪಾಟೀಲಗೆ ಕೆಲಸ ಕೊಟ್ಟಿದ್ದನ್ನು ಆ ಕ್ಷೇತ್ರದ ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಅವರು ಕೇಳಬೇಕಿತ್ತು. ಅವರೇಕೆ ಮಾಡಿಲ್ಲ' ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಮಹೇಶ್ ಟೆಂಗಿನಕಾಯಿ ಹಾಗೂ ಅಶ್ವತ್ಥನಾರಾಯಣ ಅವರು ಪ್ರಶ್ನಿಸಿದರು.

ನಗರದಲ್ಲಿ ಗುರುವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಕಾಮಗಾರಿ ಕೈಗೆತ್ತಿಕೊಳ್ಳುವುದಕ್ಕೆ ಪ್ರಸ್ತಾವ ಸಲ್ಲಿಸಿದ್ದು ಯಾರು? ಅನುಮತಿ ಕೊಟ್ಟಿದ್ದು ಯಾರು? ₹4 ಕೋಟಿ ಕೆಲಸ ಮಾಡಲು ವರ್ಕ್ ಆರ್ಡರ್ ಇತ್ತಾ?. ಈ ಪ್ರಶ್ನೆಗಳನ್ನು ಕೇಳುವುದು ಶಾಸಕಿ ಆಗಿರುವ ಲಕ್ಷ್ಮಿ ಅವರ ಕರ್ತವ್ಯವಾಗಿತ್ತು' ಎಂದು ಪ್ರಶ್ನಿಸಿದರು.

'ಮೃತ ಸಂತೋಷ್ ಬಿಜೆಪಿ ಕಾರ್ಯಕರ್ತನಾಗಿರಲಿಲ್ಲ. 2018ರ ಚುನಾವಣೆಯಲ್ಲಿ ಲಕ್ಷ್ಮಿ ಹೆಬ್ಬಾಳಕರ ಅವರ ಪರ ಕೆಲಸ ಮಾಡಿದ್ದ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ 'ಲೆಟರ್ ಹೆಡ್' ವಂಚನೆ ಪ್ರಕರಣ ಅವರ ಮೇಲಿದೆ. ಬಿಜೆಪಿಗೂ ಸಂತೋಷ್‌ಗೂ ಯಾವುದೇ ಸಂಬಂಧ ಇಲ್ಲ' ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001.
ದೂರವಾಣಿ: 080–22215601, 22211246, ಫ್ಯಾಕ್ಸ್: 080–22215602

ಸಂಖ್ಯೆ: ಡಿವೈಇಎಸ್/ತಾಂಶಾಖೆ/ಕ್ರೀಯೋ/22/2022–23 ದಿನಾಂಕ: 13–04–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಉಪ–ನಿರ್ದೇಶಕರು (ಆಡಳಿತ), ಇವರು ಈ ಕೆಳಗೆ ತಿಳಿಸಿರುವ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಕಾಮಗಾರಿ ವಿವರ	ಟೆಂಡರ್ ಮೊತ್ತ	ಇ.ಎಂ.ಡಿ ಮೊತ್ತ
1	ಬೆಂಗಳೂರಿನ ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಬಾಡಿಗೆ ಆಧಾರದ ಮೇಲೆ ಹವಾ ನಿಯಂತ್ರಣ ವ್ಯವಸ್ಥೆಯನ್ನು ಹಾಗೂ ಜನರೇಟರ್‌ಗಳನ್ನು ಒದಗಿಸುವ ಬಗ್ಗೆ.	ರೂ. 59.00 ಲಕ್ಷಗಳು	ರೂ. 1.18 ಲಕ್ಷಗಳು

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರಿನ ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಬಾಡಿಗೆ ಆಧಾರದ ಮೇಲೆ ಹವಾ ನಿಯಂತ್ರಣ ವ್ಯವಸ್ಥೆಯನ್ನು ಹಾಗೂ ಜನರೇಟರ್‌ಗಳನ್ನು ಒದಗಿಸಲು ಮೂರು ದಿನಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ (ಸಮಯದ ಅಭಾವದಿಂದಾಗಿ Manual Tender ಆಹ್ವಾನಿಸಲಾಗಿದೆ)
1) ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **16–04–2022ರಂದು ಸಮಯ: 16.00 ಗಂಟೆಯವರೆಗೆ.** 2) ಹಣಕಾಸು ಬಿಡ್ ತೆರೆಯುವ ದಿನಾಂಕ: **17–04–2022ರಂದು ಸಮಯ: 12.30 ಗಂಟೆಗೆ.** ಹಣಕಾಸು ಬಿಡ್‌ನ್ನು ಮಾನ್ಯ ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಕಾರ್ಯಾಲಯದಲ್ಲಿ ನಿಗದಿತ ಸಮಯದಲ್ಲಿ ತೆರೆಯಲಾಗುವುದು. ಇಚ್ಛೆಯುಳ್ಳ ಗುತ್ತಿಗೆದಾರರು ಸದರಿ ಸಮಯದಲ್ಲಿ ಹಾಜರಾಗಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು (ಆಡಳಿತ) ಹಾಗೂ
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ವಾಸಾಸಂಇ/ವಾ.ಪ್ರ/176/ಅಡ್ವರ್ಟೋ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

भारतीय प्रतिभूति और विनिमय बोर्ड
SECURITIES AND EXCHANGE BOARD OF INDIA

ಪಿಎಸಿಎಲ್‌ಹೂಡಿಕೆದಾರರು – ರಿಫಂಡ್‌ಗಾಗಿ ಅಧಿಕೃತ ಪ್ರಮಾಣಪತ್ರಗಳನ್ನು ಸಲ್ಲಿಸುವುದು

ಪಿಎಸಿಎಲ್‌ಪ್ರಕರಣದಲ್ಲಿ ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ಸಮಿತಿಯಿಂದ ಎಸ್‌ಎಂಎಸ್‌ಗಳನ್ನು ಸ್ವೀಕರಿಸಿರುವ ಪಿಎಸಿಎಲ್‌ಹೂಡಿಕೆದಾರರು ಪಿಎಸಿಎಲ್‌ನೀಡಿರುವ ಅಧಿಕೃತ ಪ್ರಮಾಣಪತ್ರಗಳನ್ನು (Original Certificate) ಸಲ್ಲಿಸುವ ಅಗತ್ಯವಿದೆ. ಅವುಗಳನ್ನು ಕೆಳಕಂಡ ವಿಳಾಸಕ್ಕೆ ರಿಜಿಸ್ಟರ್ಡ್‌ಪೋಸ್ಟ್‌ಅಥವಾ ಸ್ಪೀಡ್‌ಪೋಸ್ಟ್‌ಮುಖಾಂತರ ಕಳುಹಿಸಬೇಕಾಗಿ ವಿನಂತಿ :

SEBI Bhawan, Plot No.C4-A, 'G' Block, Bandra-Kurla Complex, Bandra (East), Mumbai – 400051
ಲಕೋಟೆಯ ಮೇಲೆ ಪ್ರಮಾಣಪತ್ರದ ಸಂಖ್ಯೆಯನ್ನು ಬರೆಯಬೇಕು.
ಅಧಿಕೃತ ಪ್ರಮಾಣಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಜೂನ್ 30, 2022.

ಈ ಕುರಿತ ವಿಸ್ತೃತ ಮಾಹಿತಿ **www.sebipaclrefund.co.in** ಮತ್ತು **www.sebi.gov.in.** ನಲ್ಲಿ ಲಭ್ಯವಿದೆ.

ನೋಡಲ್‌ಅಧಿಕಾರಿ ಮತ್ತು ಕಾರ್ಯದರ್ಶಿ,
ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ಸಮಿತಿ

ಸಹಾಯವಾಣಿ ಸಂಖ್ಯೆ : 022-61216966

'ಈಶ್ವರಪ್ಪ ಬಗ್ಗೆ ಮೃದು ಧೋರಣೆ ಇಲ್ಲ'

ಚನ್ನಪಟ್ಟಣ: 'ಸಚಿವ ಕೆ.ಎಸ್. ಈಶ್ವರಪ್ಪ ಬಗ್ಗೆ ನಾನೇಕೆ ಮೃದು ಧೋರಣೆ ತಾಳಲಿ. ಅವರ ಬಗ್ಗೆ ನನಗೆ ಯಾವ ರೀತಿಯ ಸಾಫ್ಟ್ ಕಾರ್ನರ್ ಇಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ಗುರುವಾರ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಬಿಜೆಪಿಯವರಿಗೆ ಇನ್ನೆಷ್ಟು ಬಲಿ ಬೇಕು?'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಬಿಜೆಪಿಯವರೇ ನಿಮಗೆ ಇನ್ನೆಷ್ಟು ಬಲಿ ಬೇಕು? ಹೊಲಸು ರಾಜಕಾರಣ ಬಿಡಿ. ಸಂತೋಷ್ ಪಾಟೀಲ ಅವರನ್ನು ಸಾಯಿಸಿದ್ದೀರಿ. ಕೊನೆಯ ಪಕ್ಷ ಅವರ ಪತ್ನಿ, ತಾಯಿಯ ಕಣ್ಣೀರನ್ನಾದರೂ ಒರೆಸುವ ಕೆಲಸ ಮಾಡಿ' ಎಂದು ಕಾಂಗ್ರೆಸ್ ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಆಕ್ರೋಶ ವ್ಯಕ್ತಪಡಿಸಿದರು.

ಪತ್ರಕರ್ತರೊಂದಿಗೆ ಗುರುವಾರ ಮಾತನಾಡಿದ ಅವರು, 'ಬಿಜೆಪಿಯವರಿಗೆ ಮಾನವೀಯತೆ ಮುಖ್ಯವಲ್ಲ; ರಾಜಕಾರಣವೇ ಮುಖ್ಯ. ಈ ಹೊಲಸು ರಾಜಕಾರಣದಿಂದ ಇನ್ನೂ ಅದೆಷ್ಟು ಮಂದಿಯ ಬಲಿ ಪಡೆಯುತ್ತಾರೆಯೋ ಗೊತ್ತಿಲ್ಲ' ಎಂದು ವಾಗ್ದಾಳಿ ನಡೆಸಿದರು.

'ಸಂತೋಷ ಬಿಜೆಪಿ ಕಾರ್ಯಕರ್ತ. ಅವನು ಸತ್ತಾಗ ಕೊರಳಲ್ಲಿ ಕೇಸರಿ ಶಾಲು ಹಾಕಿದ್ದ. ಪ್ರಧಾನಿ ನರೇಂದ್ರ ಮೋದಿ, ಶಾಸಕ ಬಿ.ಎಸ್. ಯಡಿಯೂರಪ್ಪ ಅವರ ಅಪ್ಪಟ ಅಭಿಮಾನಿಯಾಗಿದ್ದ. ಆದರೆ, ಬಿಜೆಪಿಯ ಯಾವೊಬ್ಬ ಮುಖಂಡರೂ ಅಂತ್ಯಕ್ರಿಯೆಗೆ ಬಾರದಿದ್ದುದು ದುರದೃಷ್ಟಕರ' ಎಂದು ಕಿಡಿಕಾರಿದರು.

'ನಾನು ಒಂದು ಕರೆ ಕೊಟ್ಟಿದ್ದರೆ ಸಾವಿರಾರು ಜನ ಸೇರುತ್ತಿದ್ದರು. ಎರಡು ದಿನಗಳಿಂದ ಸಂತೋಷ್ ತಾಯಿ, ಪತ್ನಿ ಮತ್ತು ಕುಟುಂಬದವರು ಊಟ, ನಿದ್ರೆ ಇಲ್ಲದೆ ಸಂಕಷ್ಟದಲ್ಲಿದ್ದಾರೆ. ಆದ್ದರಿಂದ ಅಂತ್ಯಕ್ರಿಯೆ ನಡೆಯಲು ಬಿಟ್ಟಿದ್ದೇವೆ' ಎಂದರು.

ಬಿಜೆಪಿಯವರ ಗೈರು, ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಸೇರಿ ಕಾಂಗ್ರೆಸ್ ನಾಯಕರ ಆಕ್ರೋಶ

ಗೊಂದಲ, ಪ್ರತಿಭಟನೆ ನಡುವೆ ಸಂತೋಷ್ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಅವರ ವಿರುದ್ಧ ಕಮಿಷನ್ ಆರೋಪ ಮಾಡಿ ಆತ್ಮಹತ್ಯೆಗೆ ಶರಣಾದ ಗುತ್ತಿಗೆದಾರ ಮತ್ತು ಬಿಜೆಪಿ ಕಾರ್ಯಕರ್ತ ಸಂತೋಷ್ ಪಾಟೀಲ ಅವರ ಅಂತ್ಯಕ್ರಿಯೆ ತಾಲ್ಲೂಕಿನ ಸ್ವಗ್ರಾಮ ಬಡಸ ಕೆ.ಎಚ್.ನಲ್ಲಿರುವ ಅವರ ಜಮೀನಿನಲ್ಲಿ, ವೀರಶೈವ ಲಿಂಗಾಯತ ಸಂಪ್ರದಾಯದಂತೆ ಗುರುವಾರ ಬೆಳಿಗ್ಗೆ ನಡೆಯಿತು.

'ಕುಟುಂಬಕ್ಕೆ ಪರಿಹಾರ ಸಿಗುವವರೆಗೂ ಅಂತ್ಯಕ್ರಿಯೆ ನಡೆಸಬಾರದು' ಎಂದು ಕೆಲವರು ಮತ್ತು 'ಅಂತ್ಯಕ್ರಿಯೆ ಜರುಗಲಿ, ನಂತರ ಹೋರಾಡೋಣ' ಎಂದು ಕೆಲವರು ಹೇಳಿದ್ದರಿಂದ ಗೊಂದಲ ಉಂಟಾಯಿತು. ಬಂಧುಗಳಲ್ಲೇ ಭಿನ್ನ ಅಭಿಪ್ರಾಯಗಳು ವ್ಯಕ್ತವಾದವು. ಕಾಂಗ್ರೆಸ್ ಬೆಂಬಲಿತರಲ್ಲಿ ಕೆಲವರು ಪ್ರತಿಭಟನೆಯನ್ನೂ ನಡೆಸಿದರು.

ಮೃತದೇಹಕ್ಕೆ ಕೇಸರಿ ಶಾಲು ಹಾಕಲಾಗಿತ್ತು. ಬಿಜೆಪಿ ಕಾರ್ಯಕರ್ತರಾಗಲಿ, ಮುಖಂಡರಾಗಲಿ ಪಾಲ್ಗೊಳ್ಳದಿದ್ದಕ್ಕೆ ಕುಟುಂಬದವರಿಂದ ಆಕ್ರೋಶ ವ್ಯಕ್ತವಾಯಿತು.

ಕುಟುಂಬದವರ ಪಟ್ಟು, ಮನವೊಲಿಕೆ: ಉಡುಪಿಯಿಂದ ಮೃತದೇಹದೊಂದಿಗೆ ಬೆಳಿಗ್ಗೆ ಎಂ.ಕೆ. ಹುಬ್ಬಳ್ಳಿ ಸಮೀಪ ಬರುತ್ತಿದ್ದಂತೆಯೇ ತಮಗೆ ಎದುರಾದ ಡಿಸಿಪಿ ರವೀಂದ್ರ ಗಡಾದಿ, ಎಸಿಪಿ ಎನ್.ವಿ. ಭರಮನಿ ಮೊದಲಾದ ಪೊಲೀಸ್ ಅಧಿಕಾರಿಗಳೊಂದಿಗೆ ಮಾತನಾಡಿದ ಕುಟುಂಬದವರು, 'ಆರೋಪಿಗಳನ್ನು ಬಂಧಿಸುವವರೆಗೂ ನಾವು ಅಂತ್ಯಕ್ರಿಯೆ ನಡೆಸುವುದಿಲ್ಲ' ಎಂದು ಪಟ್ಟು ಹಿಡಿದರು.

'ಆರೋಪಿಗಳನ್ನು ಬಂಧಿಸುವುದಕ್ಕೆ ಬೇಕಾದ ಎಲ್ಲ ದಾಖಲೆಗಳೂ ಇವೆ. ತಡವೇಕೆ ಮಾಡುತ್ತಿದ್ದೀರಿ' ಎಂದು ಪ್ರಶ್ನಿಸಿದರು. 'ಪ್ರಕರಣ ಉಡುಪಿ ಠಾಣೆಯಲ್ಲಿ ದಾಖಲಾಗಿದ್ದು, ಅಲ್ಲಿನ ಪೊಲೀಸರು ಕ್ರಮ ಕೈಗೊಳ್ಳಬೇಕಾಗುತ್ತದೆ. ನಿಮ್ಮ ಮನವಿಯನ್ನು ಅವರಿಗೆ ತಲುಪಿಸುತ್ತೇವೆ' ಎಂದು ಅಧಿಕಾರಿಗಳು ಮನವರಿಕೆ ಮಾಡಿದ ನಂತರ ಮೃತದೇಹವನ್ನು ಬಡಸ ಕೆ.ಎಚ್. ಗ್ರಾಮಕ್ಕೆ ಸಾಗಿಸಲಾಯಿತು.

ಮುಗಿಲು ಮುಟ್ಟಿದ ಆಕ್ರಂದನ: ಮನೆಯ ಬಳಿಗೆ ಮೃತದೇಹ ತರಲಾಗುತ್ತಿದ್ದಂತೆಯೇ ತಾಯಿ ಪಾರ್ವತಿ ಪಾಟೀಲ, ಪತ್ನಿ ಜಯಶ್ರೀ ಪಾಟೀಲ ಹಾಗೂ ಕುಟುಂಬದವರು ಮತ್ತು ಬಂಧುಗಳ ಆಕ್ರಂದನ ಮುಗಿಲು ಮುಟ್ಟಿತು.

ಸ್ಥಳಕ್ಕೆ ಬಂದ ಗ್ರಾಮೀಣ ಶಾಸಕಿ ಲಕ್ಷ್ಮಿ ಹೆಬ್ಬಾಳಕರ, ವಿಧಾನಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಮುಖಂಡ ಅಡಿವೇಶ ಇಟಗಿ ಮೊದಲಾದವರು, 'ಪರಿಹಾರ ಸಿಗುವವರೆಗೂ ಹೋರಾಡೋಣ. ಸ್ಥಳಕ್ಕೆ ಬಿಜೆಪಿ ಶಾಸಕರು ಬರಲಿ. ಅಲ್ಲಿವರೆಗೆ ಮೃತದೇಹವನ್ನು ಎತ್ತುವುದು ಬೇಡ' ಎಂದು ಸಲಹೆ ನೀಡಿದರು. ಇದಕ್ಕೆ ಕೆಲವರಿಂದ ಬೆಂಬಲ–ಬಹುತೇಕರಿಂದ ವಿರೋಧ ವ್ಯಕ್ತವಾಯಿತು. ಕೆಲವರು ಕೈ–ಕೈಮಿಲಾಯಿಸುವ ಹಂತಕ್ಕೂ ಪರಿಸ್ಥಿತಿ ಹೋಗಿತ್ತು. ಪೊಲೀಸರು ಮಧ್ಯಪ್ರವೇಶಿಸಿ ತಿಳಿಗೊಳಿಸಿದರು.

ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಬಂದು ತೀರ್ಥ ಪ್ರೋಕ್ಷಣೆ ಮಾಡಿ ತೆರಳಿದರು. ಬಳಿಕ ಮೃತದೇಹದ ಅಂತಿಮ ಮೆರವಣಿಗೆ ನಡೆಯಿತು.

ಕಾಂಗ್ರೆಸ್‌ನವರಿಂದ ಪ್ರತಿಭಟನೆ: ಅಂತ್ಯಕ್ರಿಯೆ ಸ್ಥಳದಲ್ಲೂ ಒಂದು ಗುಂಪು ವಿರೋಧ ವ್ಯಕ್ತಪಡಿಸಿತು. 'ಊರಿನಲ್ಲಿ ಎರಡು ಮದುವೆಗಳಿವೆ. ಕುಟುಂಬದವರು, ಹೆಣ್ಣು ಮಕ್ಕಳು ಎರಡು ದಿನಗಳಿಂದ ಊಟ ಮಾಡಿಲ್ಲ. ಹೀಗಾಗಿ, ಅಂತ್ಯಕ್ರಿಯೆ ವಿಳಂಬ ಮಾಡುವುದು ಬೇಡ' ಎಂದು ಕೆಲವರು ಹೇಳಿದರು. ಅದಕ್ಕೆ ಲಕ್ಷ್ಮಿ ಹೆಬ್ಬಾಳಕರ, ಚನ್ನರಾಜ, ಅಡಿವೇಶ ಮೊದಲಾದವರು ಆಕ್ಷೇಪ ವ್ಯಕ್ತಪಡಿಸಿದರು. ಮುಖಂಡ ಅಡಿವೇಶ ಅವರು ಗುಂಡಿ ತೆಗೆದಿದ್ದ ಮಣ್ಣಿನ ಮೇಲೆ ನಿಂತು, 'ನನ್ನ ಸಮೇತ ಗುಂಡಿ ಮುಚ್ಚಿಬಿಡಿ' ಎಂದು ಬೆದರಿಕೆ ಒಡ್ಡಿದರು. ಬಿಜೆಪಿ ನಾಯಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. 'ನಗರದಲ್ಲೇ ಇರುವ ಜಿಲ್ಲಾ ಉಸ್ತುವಾರಿ ಸಚಿವ ಗೋವಿಂದ ಕಾರಜೋಳ ಅವರು ಸ್ಥಳಕ್ಕೆ ಬರಲಿ. ಅವರ ಪಕ್ಷದ ಕಾರ್ಯಕರ್ತನ ಸಾವಿಗೆ ನ್ಯಾಯ ದೊರಕಿಸಿಕೊಡಲಿ' ಎಂದು ಒತ್ತಾಯಿಸಿದರು.

ಕೆಲವರ ವಿರೋಧದ ನಡುವೆಯೇ, ಜೆಸಿಬಿಯಿಂದ ಮಣ್ಣು ಮುಚ್ಚಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಪ್ರತಿಭಟನೆ ಮುನ್ಸೂಚನೆ ಹಿನ್ನೆಲೆಯಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಬೆಳಗಾವಿ ತಾಲ್ಲೂಕಿನ ಬಡಸ ಕೆ.ಎಚ್. ಗ್ರಾಮದಲ್ಲಿ ಗುರುವಾರ ಗುತ್ತಿಗೆದಾರ ಸಂತೋಷ್ ಪಾಟೀಲ ಕುಟುಂಬಕ್ಕೆ ಪರಿಹಾರ ನೀಡುವವರೆಗೂ ಅಂತ್ಯಕ್ರಿಯೆಗೆ ಅವಕಾಶ ಕೊಡುವುದಿಲ್ಲ ಎಂದು ಪಟ್ಟು ಹಿಡಿದ ಕಾಂಗ್ರೆಸ್ ಮುಖಂಡ ಅಡಿವೇಶ ಇಟಗಿ ಅವರನ್ನು ಸಂತೋಷ್ ಬಂಧುಗಳು ಸಮಾಧಾನಪಡಿಸಿದರು — ಪ್ರಜಾವಾಣಿ ಚಿತ್ರ

'ಈಶ್ವರಪ್ಪ ಪ್ರಕರಣದಲ್ಲೂ ಮಹಾನಾಯಕನ ಕೈವಾಡ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಸಿ.ಡಿ. ಪ್ರಕರಣದಲ್ಲಿ ನನ್ನ ವಿರುದ್ಧದ ಷಡ್ಯಂತ್ರದಲ್ಲಿ ಭಾಗಿಯಾಗಿದ್ದ ತಂಡವೇ ಈಗ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಅವರ ವಿರುದ್ಧವೂ ಕೆಲಸ ಮಾಡಿದೆ. ಹೀಗಾಗಿ, ಅವರು ಯಾವುದೇ ಕಾರಣಕ್ಕೂ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬಾರದು' ಎಂದು ಗೋಕಾಕ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ಸಚಿವ ಈಶ್ವರಪ್ಪ ವಿರುದ್ಧ ಕಮಿಷನ್ ಆರೋಪ ಮಾಡಿ ಆತ್ಮಹತ್ಯೆಗೆ ಶರಣಾದ ಗುತ್ತಿಗೆದಾರ, ಬಿಜೆಪಿ ಕಾರ್ಯಕರ್ತ ಸಂತೋಷ್ ಪಾಟೀಲ ಅವರ ಕುಟುಂಬದವರಿಗೆ ತಾಲ್ಲೂಕಿನ ಬಡಸ ಕೆ.ಎಚ್. ಗ್ರಾಮದಲ್ಲಿ ಸಾಂತ್ವನ ಹೇಳಿ, ಸಮಾಧಿಗೆ ಪುಷ್ಪನಮನ ಸಲ್ಲಿಸಿದ ಬಳಿಕ ಪತ್ರಕರ್ತರೊಂದಿಗೆ ಅವರು ಗುರುವಾರ ಮಾತನಾಡಿದರು.

'ಹೈಕಮಾಂಡ್ ಅನುಮತಿ ಪಡೆದು ಸೋಮವಾರ (ಏ.18) ಪತ್ರಿಕಾಗೋಷ್ಠಿ ನಡೆಸಿ ಸಂಪೂರ್ಣ ವಿವರ ನೀಡಲಿದ್ದೇನೆ' ಎಂದು ತಿಳಿಸಿದರು.

'ತನಿಖೆ ನಡೆಯಲಿ, ಈಶ್ವರಪ್ಪ ಅವರ ತಪ್ಪಿದ್ದರೆ ಶಿಕ್ಷೆಯಾಗಲಿ. ಅಲ್ಲಿವರೆಗೆ ರಾಜೀನಾಮೆ ಕೊಡಬಾರದು. ನಾನು ಷಡ್ಯಂತ್ರಕ್ಕೆ ಸಿಲುಕಿ ವರ್ಷದಿಂದ ನೊಂದಿದ್ದೇನೆ. ಆ ಸ್ಥಿತಿ ಈಶ್ವರಪ್ಪ ಅವರಿಗೆ ಬರಬಾರದು' ಎಂದರು.

'ಈ ಪ್ರಕರಣದಲ್ಲಿ ಏನಾಗಿದೆ ಎನ್ನುವುದು ನನಗೆ ಸಂಪೂರ್ಣ ಗೊತ್ತಿದೆ. ನಾನು ಉಸ್ತುವಾರಿ ಸಚಿವ ಆಗಿದ್ದಾಗಿನಿಂದಲೂ ನೋಡಿದ್ದೇನೆ. ಈ ಪ್ರಕರಣದಲ್ಲಿ ರಾಜಕಾರಣ ಮಾಡಲಾಗುತ್ತಿದೆ. ನಿಜವಾದ ಸಂಗತಿಯನ್ನು ಶೀಘ್ರವೇ ಬಹಿರಂಗಪಡಿಸುತ್ತೇನೆ' ಎಂದು ಹೇಳಿದರು.

'ಈ ಪ್ರಕರಣ ಹಾಗೂ ನನ್ನ ವಿರುದ್ಧದ ಸಿ.ಡಿ. ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು. ಇದರಲ್ಲಿರುವ 'ಮಹಾನಾಯಕ' ಯಾರು ಎನ್ನುವುದು ಹೊರಗೆ ಬರುತ್ತದೆ. ಈಗ ಯಾರ ಹೆಸರನ್ನೂ ಹೇಳುವುದಕ್ಕೆ ಬಯಸುವುದಿಲ್ಲ' ಎಂದು ಪರೋಕ್ಷವಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಗ್ರಾಮೀಣ ಶಾಸಕಿ ಲಕ್ಷ್ಮಿ ಹೆಬ್ಬಾಳಕರ ವಿರುದ್ಧ ಆರೋಪಿಸಿದರು.

ನಾವು ಎಲ್ಲದಕ್ಕೂ ಸಿದ್ಧ– ಡಿಕೆಶಿ

ಬೆಂಗಳೂರು: 'ರಮೇಶ ಜಾರಕಿಹೊಳಿ ಏನು ಬೇಕಾದರೂ ಬಿಚ್ಚಿಡಲಿ. ನಾವು ಎಲ್ಲದಕ್ಕೂ ಸಿದ್ಧ ಇದ್ದೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

'ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದಲ್ಲಿ ಮಹಾನಾಯಕನ ಕೈವಾಡ ಸೋಮವಾರ ಬಿಚ್ಚಿಡುತ್ತೇನೆ' ಎಂದು ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರ ಹೇಳಿಕೆ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿ ಅವರು, 'ಯಾರ‍್ಯಾರು ಏನೇನು ಬಿಚ್ಚಿದ್ದಾರೆ ಎಂಬುದನ್ನು ಜನ ಈಗಾಗಲೇ ನೋಡಿದ್ದಾರಲ್ಲ' ಎಂದು ತಿರುಗೇಟು ನೀಡಿದರು.

ರಾಜೀನಾಮೆ ಘೋಷಿಸಿದ ಈಶ್ವರಪ್ಪ

ಒಂದನೇ ಪುಟದಿಂದ

'ನಾನು ಯಾವ ತಪ್ಪನ್ನೂ ಮಾಡಿಲ್ಲ. ಸಣ್ಣ ತಪ್ಪು ಮಾಡಿದ್ದರೂ ನನ್ನ ಮನೆ ದೇವರಾದ ಚೌಡೇಶ್ವರಿ ನೋಡಿಕೊಳ್ಳುತ್ತಾಳೆ' ಎಂದು ಹೇಳುತ್ತಾ ಈಶ್ವರಪ್ಪ ಗದ್ಗದಿತರಾದರು.

'ಬಾಕಿ ಬಿಲ್ ಪಾವತಿಗೆ ಶೇಕಡ 40ರಷ್ಟು ಲಂಚಕ್ಕೆ ಈಶ್ವರಪ್ಪ ಬೇಡಿಕೆ ಇಟ್ಟಿದ್ದಾರೆ' ಎಂದು ಆರೋಪಿಸಿದ್ದ ಸಂತೋಷ್ ಉಡುಪಿಯ ಲಾಡ್ಜ್ ಒಂದರಲ್ಲಿ ಸೋಮವಾರ ಆತ್ಮಹತ್ಯೆ ಮಾಡಿಕೊಂಡಿರುವುದು ಮಂಗಳವಾರ ಬಹಿರಂಗವಾಗಿತ್ತು. ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸಿ ವಿರೋಧ ಪಕ್ಷಗಳಾದ ಕಾಂಗ್ರೆಸ್, ಎಎಪಿ ಪ್ರತಿಭಟನೆ ಆರಂಭಿಸಿದ್ದವು.

ಮೈಸೂರಿನಲ್ಲಿ ಪಕ್ಷದ ವಿಭಾಗೀಯ ಮಟ್ಟದ ಸಭೆಯಲ್ಲಿದ್ದ ಈಶ್ವರಪ್ಪ ಅವರನ್ನು ಸಂಪರ್ಕಿಸಿದ್ದ ಪಕ್ಷದ ವರಿಷ್ಠರು ಬೆಂಗಳೂರಿಗೆ ತೆರಳಿ ರಾಜೀನಾಮೆ ಸಲ್ಲಿಸುವಂತೆ ಸೂಚಿಸಿದ್ದರು. ಆದರೆ, ಮೈಸೂರಿನಿಂದ ಹೊರಟ ಬಳಿಕ ನಿಲುವು ಬದಲಿಸಿದ್ದ ಸಚಿವರು, ಶಿವಮೊಗ್ಗಕ್ಕೆ ತೆರಳಿದ್ದರು. ಮೃತ ಗುತ್ತಿಗೆದಾರ ಸಾವಿಗೂ ಮುನ್ನ ವಾಟ್ಸ್ ಆ್ಯಪ್ ಮೂಲಕ ಕಳುಹಿಸಿದ ಸಂದೇಶ ಹಾಗೂ ಕುಟುಂಬದವರು ನೀಡಿದ ದೂರನ್ನು ಆಧರಿಸಿ ಈಶ್ವರಪ್ಪ ಮತ್ತು ಇತರರ ವಿರುದ್ಧ ಬುಧವಾರ ಪ್ರಕರಣ ದಾಖಲು ಮಾಡಲಾಗಿತ್ತು. ಆ ಬಳಿಕ ರಾಜೀನಾಮೆಗೆ ಒತ್ತಡ ಮತ್ತಷ್ಟು ಹೆಚ್ಚಿತ್ತು.

ಕೈ ನಾಯಕರ ಪಟ್ಟು: ಪ್ರಕರಣದ ಕುರಿತು ಪ್ರಾಥಮಿಕ ತನಿಖೆಯ ವರದಿ ಬರುವವರೆಗೂ ತಮ್ಮ ರಾಜೀನಾಮೆ ಕೇಳಬಾರದು ಎಂದು ಈಶ್ವರಪ್ಪ ಪಟ್ಟು ಹಿಡಿದಿದ್ದರು. 'ಮೂರು ದಿನ ಈ ಪ್ರಕರಣ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡುವುದಿಲ್ಲ' ಎಂದು ಗುರುವಾರ ಬೆಳಿಗ್ಗೆ ಹೇಳಿಕೆ ನೀಡಿದ್ದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡ ಪ್ರಾಥಮಿಕ ತನಿಖೆ ಬಳಿಕವೇ ಈಶ್ವರಪ್ಪ ರಾಜೀನಾಮೆ ಕುರಿತು ನಿರ್ಧಾರವಾಗಲಿದೆ ಎಂದಿದ್ದರು.

ಈಶ್ವರಪ್ಪ ರಾಜೀನಾಮೆ ಮತ್ತು ಪ್ರಕರಣದ ಎಲ್ಲ ಆರೋಪಿಗಳ ಬಂಧನಕ್ಕೆ ಆಗ್ರಹಿಸಿ ಮುಖ್ಯಮಂತ್ರಿಯವರ ಮನೆಗೆ ಮುತ್ತಿಗೆ ಹಾಕಲು ಹೊರಟಿದ್ದ ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರನ್ನು ಪೊಲೀಸರು ತಡೆದರು. ಅಲ್ಲಿಂದ ಮಾರ್ಗ ಬದಲಿಸಿದ ಅವರು ವಿಧಾನಸೌಧಕ್ಕೆ ಬಂದು ಧರಣಿ ಕುಳಿತರು. ಅಹೋರಾತ್ರಿ ಧರಣಿ ಮುಂದುವರಿಸುವುದಾಗಿಯೂ ಘೋಷಿಸಿದರು.

ರಾಜೀನಾಮೆಗೆ ವರಿಷ್ಠರ ತಾಕೀತು: 'ರಾಜ್ಯದಲ್ಲೇ ಇರುವ ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ತಕ್ಷಣವೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪಕ್ಷದ ನಾಯಕ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಹಲವರ ಜತೆ ಚರ್ಚಿಸಿದರು. ಈಶ್ವರಪ್ಪ ರಾಜೀನಾಮೆ ಪಡೆಯದಿದ್ದರೆ ಸರ್ಕಾರ ಮತ್ತು ಪಕ್ಷದ ವರ್ಚಸ್ಸಿಗೆ ಹಾನಿಯಾಗುತ್ತದೆ ಎಂಬುದನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಜತೆ ಚರ್ಚಿಸಿದರು. ಈ ಬೆಳವಣಿಗೆಗಳ ಮರು ಕ್ಷಣದಲ್ಲೇ ಈಶ್ವರಪ್ಪ ಅವರನ್ನು ಸಂಪರ್ಕಿಸಿದ ಬಿಜೆಪಿಯ ಕೇಂದ್ರದ ಪ್ರಭಾವಿ ನಾಯಕರೊಬ್ಬರು ರಾಜೀನಾಮೆಗೆ ಸೂಚಿಸಿದರು' ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಇನ್ನೊಂದು ವರ್ಷದಲ್ಲಿ ವಿಧಾನಸಭಾ ಚುನಾವಣೆಯ ಎದುರಿಸಬೇಕಾಗಿರುವ ಹೊತ್ತಿನಲ್ಲಿ ಪ್ರಕರಣ ಎದುರಾಗಿರುವುದರಿಂದ ರಾಜೀನಾಮೆ ಪಡೆಯದಿದ್ದರೆ ಕಾಂಗ್ರೆಸ್‌ಗೆ ಪ್ರಬಲ ಅಸ್ತ್ರ ನೀಡಿದಂತಾಗುತ್ತದೆ ಎಂಬ ಅಳುಕು ಬಿಜೆಪಿ ನಾಯಕರನ್ನು ಕಾಡುತ್ತಿದೆ. ಶನಿವಾರ ಮತ್ತು ಭಾನುವಾರ ಹೊಸಪೇಟೆಯಲ್ಲಿ ಪಕ್ಷದ ರಾಜ್ಯ ಕಾರ್ಯಕಾರಿಣಿ ಕೂಡ ನಿಗದಿಯಾಗಿದೆ. ಈ ಸಂದರ್ಭದಲ್ಲಿ ಮತ್ತಷ್ಟು ಮುಜುಗರಕ್ಕೆ ಸಿಲುಕಬಹುದು ಎಂಬುದೂ ಸಚಿವರ ರಾಜೀನಾಮೆ ಪಡೆಯಲು ಕಾರಣ ಎಂದು ಗೊತ್ತಾಗಿದೆ.

'ಅಸ್ಪೃಶ್ಯತೆ ಮುಕ್ತ ಗ್ರಾ.ಪಂ.ಗೆ ವಿಶೇಷ ಅನುದಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಅಸ್ಪೃಶ್ಯತೆ ಮುಕ್ತ ಗ್ರಾಮ ಪಂಚಾಯಿತಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ವಿಶೇಷ ಅನುದಾನ ನೀಡುವ ಕುರಿತು ಪರಿಶೀಲಿಸಿ, ಕ್ರಮ ಕೈಗೊಳ್ಳಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಸ್ಪೃಶ್ಯತೆ ನಿವಾರಣೆಯ ದಿಕ್ಕಿನಲ್ಲಿ ಕೆಲಸ ಮಾಡುವ ಗ್ರಾಮ ಪಂಚಾಯಿತಿಗಳಿಗೆ ಉತ್ತೇಜನ ನೀಡುವ ಯೋಚನೆ ಇದೆ. ಸಂಪೂರ್ಣವಾಗಿ ಅಸ್ಪೃಶ್ಯತೆಯನ್ನು ತೊಡೆದುಹಾಕಿರುವ ಗ್ರಾಮ ಪಂಚಾಯಿತಿಗಳಿಗೆ ವಿಶೇಷ ಅನುದಾನ ನೀಡುವ ಯೋಚನೆ ಇದೆ' ಎಂದರು.

ಕೊಪ್ಪಳ ಜಿಲ್ಲೆಯಲ್ಲಿ ಪರಿಶಿಷ್ಟ ಸಮುದಾಯದ ಮಗುವೊಂದು ದೇವಸ್ಥಾನದ ಒಳಕ್ಕೆ ಪ್ರವೇಶಿಸಿದ್ದ ಕಾರಣಕ್ಕೆ ₹ 25,000 ದಂಡ ವಿಧಿಸಲಾಗಿತ್ತು. ವಿನಯ ಎಂಬ ಹೆಸರಿನ ಆ ಮಗುವನ್ನು ಸಮಾಜ ಕಲ್ಯಾಣ ಇಲಾಖೆ ದತ್ತು ಪಡೆದಿದೆ. ಅದೇ ಹೆಸರಿನಲ್ಲಿ ಅಸ್ಪೃಶ್ಯತೆ ನಿವಾರಣೆಗಾಗಿ ಬಜೆಟ್‌ನಲ್ಲಿ 'ವಿನಯ ಸಾಮರಸ್ಯ' ಎಂಬ ಯೋಜನೆ ಪ್ರಕಟಿಸಲಾಗಿದೆ ಎಂದು ಅವರು ಹೇಳಿದರು.

ಕರ್ನಾಟಕ ಸರ್ಕಾರ

ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ರಾಯಚೂರು ಜಿಲ್ಲೆ.

ದೂರವಾಣಿ:08532–231710 Email ID: dobcmraichur@gmail.com

ಸಂ: ಹಿಂವಕಇರಾ/ಆಹಾರ/ಸಿಆರ್– /2022–23 ದಿನಾಂಕ: 12/04/2022

ಟೆಂಡರ್ ಪ್ರಕಟಣೆ ಇ– ಪ್ರೊಕ್ಯೂರ್‌ಮೆಂಟ್ ಮೂಲಕ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ರಾಯಚೂರು ವ್ಯಾಪ್ತಿಯಲ್ಲಿ ಬರುವ 5 ತಾಲ್ಲೂಕಗಳ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರ ಬಾಲಕ/ಬಾಲಕಿಯರ ವಸತಿ ನಿಲಯಗಳಿಗೆ 2022–23ನೇ ಸಾಲಿಗೆ ಆಹಾರ ಹಾಗೂ ಇತರೆ ಸಾಮಗ್ರಿ ಸರಬರಾಜು ಮಾಡಲು ಅರ್ಹ ನೊಂದಾಯಿತ ಸಂಸ್ಥೆ/ ಏಜೆನ್ಸಿಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಜಿಲ್ಲಾ ಮಟ್ಟದಲ್ಲಿ ತಾಲೂಕವಾರು ಟೆಂಡರ್ ಆಹ್ವಾನಿಸಲಾಗಿದೆ.
1) ಇ–ಪ್ರೊಕ್ಯೂರ್‌ಮೆಂಟ್' ಮೂಲಕ ಟೆಂಡರ್ ಸಲ್ಲಿಕೆ ಪ್ರಾರಂಭಿಕ ದಿನಾಂಕ : **12/04/2022,** 2) ಪೂರ್ವಭಾವಿ ಸಭೆ ದಿನಾಂಕ: **22/04/2022,** 3) ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ : **13/05/2022 ಸಮಯ ಸಾಯಂಕಾಲ 5:30,** 4) Technical Bidಅನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ : 16/05/2022 ರಂದು ಬೆಳಿಗ್ಗೆ:11.00 ಗಂಟೆಗೆ ಈ ಕೆಳಕಾಣಿಸಿದ ಕಛೇರಿ, 5) Financial Bid ಅನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ : 26/05/2022 ಮುಂಜಾನೆ 11:30 ಗಂಟೆಗೆ ಈ ಕೆಳಕಾಣಿಸಿದ ಕಛೇರಿ 6) ವ್ಯವಹರಿಸಬೇಕಾದ ಅಧಿಕಾರಿ, ವಿಳಾಸ ಹಾಗೂ ದೂರವಾಣಿ ಸಂಖ್ಯೆ : ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ರಾಯಚೂರು ಜಿಲ್ಲೆ, ದೂರವಾಣಿ ಸಂಖ್ಯೆ:08532–231710

ಕ್ರಸಂ	ತಾಲ್ಲೂಕಿನ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ. ಲಕ್ಷಗಳಲ್ಲಿ)
1	ರಾಯಚೂರು	393.98	9.90
2	ದೇವದುರ್ಗ	136.98	3.45
3	ಲಿಂಗಸುಗೂರು	295.18	7.40
4	ಮಾನ್ವಿ	186.08	4.70
5	ಸಿಂಧನೂರು	132.70	3.30

ಹೆಚ್ಚಿನ ಮಾಹಿತಿಯನ್ನು www-eproc.karnataka.gov.in ವೆಬ್ ಸೈಟ್‌ನಲ್ಲಿ ಅಥವಾ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು.

ಸಹಿ/– ಜಿಲ್ಲಾ ಅಧಿಕಾರಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರಾಯಚೂರು ಜಿಲ್ಲೆ,

ವಾ.ಸಾ.ಸಂ.ಇ/ರಾಯಚೂರು/23/ಎಂ.ಸಿ.&ಎ/2022–23

ಅರಣ್ಯ ಇಲಾಖೆ ಪ್ರಸ್ತಾವ ● ರಾಂಪುರ ಶಿಬಿರದಿಂದ ಕೆಲವು ಆನೆಗಳ ಸ್ಥಳಾಂತರ

ಬಂಡೀಪುರ: ಆನೆ ಸಫಾರಿಗೆ ಚಿಂತನೆ

● ಮಲ್ಲೇಶ ಎಂ.

ರಾಂಪುರ ಆನೆ ಶಿಬಿರದಲ್ಲಿರುವ ಸಾಕಾನೆಗಳು

ಪ್ರಜಾವಾಣಿ ವಿಶೇಷ

ಗುಂಡ್ಲುಪೇಟೆ: ತಾಲ್ಲೂಕಿನ ಬಂಡೀಪುರದಲ್ಲಿ ಆನೆಗಳ ಶಿಬಿರವನ್ನು ಸ್ಥಾಪಿಸಿ ಬಳಿಕ ಆನೆ ಸಫಾರಿಯನ್ನು ಆರಂಭಿಸಲು ಅರಣ್ಯ ಇಲಾಖೆ ಚಿಂತನೆ ನಡೆಸಿದೆ.

ಬಂಡೀಪುರ ಹುಲಿ ಸಂರಕ್ಷಿತ ವಲಯದ ಎಂ.ಎಂ.ಗುಡಿ ವಲಯದ ರಾಂಪುರ ಆನೆ ಶಿಬಿರದಲ್ಲಿ ಈಗ 21 ಆನೆಗಳಿವೆ. ಅಲ್ಲಿ ಒತ್ತಡ ಹೆಚ್ಚಾಗುತ್ತಿದ್ದು, ಅಲ್ಲಿಂದ ಏಳು ಆನೆಗಳನ್ನು ಬಂಡೀ ಪುರಕ್ಕೆ ಸ್ಥಳಾಂತರಿಸುವುದು ಇಲಾಖೆಯ ಉದ್ದೇಶ. ಈ ಸಂಬಂಧ ಅಧಿಕಾರಿಗಳು ಪ್ರಸ್ತಾವ ಸಿದ್ಧಪಡಿಸಿದ್ದಾರೆ.

ಇತ್ತೀಚೆಗೆ ಅರಣ್ಯ ಸಚಿವ ಉಮೇಶ ಕತ್ತಿ ಅವರು ಭೇಟಿ ನೀಡಿದ್ದಾಗ ಅಧಿಕಾರಿಗಳು ಈ ಬಗ್ಗೆ ಪ್ರಸ್ತಾಪಿಸಿದ್ದು, ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

'ಬಂಡೀಪುರಕ್ಕೆ ಹೊಂದಿಕೊಂಡಿರುವ ತಮಿಳುನಾಡಿನ ಮುಧುಮಲೈ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಆನೆ ಸಫಾರಿ ಇದ್ದು, ಹೆಚ್ಚು ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ಅದೇ ಮಾದರಿಯಲ್ಲಿ ಬಂಡೀಪುರದಲ್ಲೂ ಸಫಾರಿ ಆರಂಭಿಸಿದರೆ ಪರಿಸರ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಿದಂತಾಗುತ್ತದೆ' ಎಂಬುದು ಅಧಿಕಾರಿಗಳ ಯೋಚನೆ.

ಈ ಹಿಂದೆ ಬಂಡೀಪುರದಲ್ಲೂ ಸಾಕಾನೆಗಳಿದ್ದವು. ಬೇಸಿಗೆಯಲ್ಲಿ ನೀರಿನ ಕೊರತೆಯಿಂದ ರಾಂಪುರದ ಶಿಬಿರಕ್ಕೆ ಸ್ಥಳಾಂತರಿಸಲಾಗಿತ್ತು.

'ಆಗ ಸಾಕಾನೆ ಶಿಬಿರ ಬಂಡೀಪುರ ಕ್ಯಾಂಪಸ್‌ನಲ್ಲಿತ್ತು. ಅಲ್ಲಿಯೇ ಸಫಾರಿ ಕೌಂಟರ್ ಇದ್ದುದರಿಂದ ಪ್ರವಾಸಿಗರು ಹೆಚ್ಚಾಗಿ ಪ್ರಾಣಿಗಳಿಗೆ ಕಿರಿಕಿರಿಯಾಗುತ್ತಿತ್ತು. ಈಗ ಬಂಡೀಪುರ ಟಿಕೆಟ್ ಕೌಂಟರ್ ಅರಣ್ಯ ಪ್ರದೇಶದಿಂದ ಹೊರಗಿದೆ. ಕೆಲವು ವರ್ಷಗಳಿಂದ ಉತ್ತಮ ಮಳೆಯಾಗುತ್ತಿರುವುದರಿಂದ ನೀರಿನ ಸಮಸ್ಯೆ ಮೊದಲಿನಷ್ಟಿಲ್ಲ. ಹಾಗಾಗಿ, ಶಿಬಿರ ಆರಂಭಿಸಬಹುದು' ಎನ್ನುತ್ತಾರೆ ಅಧಿಕಾರಿಗಳು.

21 ಆನೆಗಳು: ರಾಂಪುರ ಆನೆ ಶಿಬಿರದಲ್ಲಿ ಹಿಂದೆ 13 ಸಾಕಾನೆಗಳಿದ್ದವು. 2021ರ ಡಿಸೆಂಬರ್ 16ರಂದು ಕೊಡಗಿನ ಆನೆ ಮನೆ ಫೌಂಡೇಷನ್‌ಗೆ ಸೇರಿದ ಎಂಟು ಆನೆಗಳನ್ನು ಕರೆ ತಂದ ನಂತರ ಈ ಸಂಖ್ಯೆ 21ಕ್ಕೆ ಏರಿದೆ.

'ರಾಂಪುರ ಶಿಬಿರದಲ್ಲಿ ನಿರ್ವಹಣೆ ಸೇರಿದಂತೆ ವಿವಿಧ ಕಾರಣಗಳಿಗೆ ಸಮಸ್ಯೆಯಾಗುತ್ತಿದೆ. ಮಾವುತ, ಕಾವಾಡಿಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸಲು ತೊಂದರೆಯಿದೆ. ಆದ್ದರಿಂದ ಬಂಡೀಪುರ ವಲಯದಲ್ಲಿ ಕಾಡಿನೊಳಗೆ ಕೆರೆಗೆ ಹೊಂದಿಕೊಂಡಂತೆ ಶಿಬಿರ ಮಾಡಲು ಪ್ರಸ್ತಾವ ತಯಾರಿಸಿದ್ದೇವೆ' ಎಂದು ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಡಾ.ರಮೇಶ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಮುಖ್ಯಾಂಶಗಳು

- ಏಳು ಆನೆಗಳ ಸ್ಥಳಾಂತರಕ್ಕೆ ಚಿಂತನೆ
- ಮುಧುಮಲೈಯ ಆನೆ ಸಫಾರಿ ಮಾದರಿ
- 2018ರಲ್ಲೂ ಪ್ರಸ್ತಾವನೆ ಸಲ್ಲಿಸಿದ್ದ ಅಧಿಕಾರಿಗಳು

2018ರಲ್ಲೇ ಇಲಾಖೆಗೆ ಪತ್ರ

ಆನೆಗಳ ಸಫಾರಿ ಆರಂಭಕ್ಕೆ ಸಂಬಂಧಿಸಿ 2018ರಲ್ಲಿ ಅಂದಿನ ಹುಲಿ ಯೋಜನೆ ನಿರ್ದೇಶಕ ಅಂಬಾಡಿ ಮಾಧವ್ ಇಲಾಖೆಗೆ ಪತ್ರ ಬರೆದು, 'ಎಲ್ಲ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಆನೆ ಸಫಾರಿ ಇದೆ. ಹೆಚ್ಚಿನ ಬೇಡಿಕೆ ಇರುವುದರಿಂದ ಬಂಡೀಪುರದಲ್ಲೂ ಆರಂಭಿಸಬಹುದು' ಎಂದಿದ್ದರು. ಆದರೆ, ಅದು ಕಾರ್ಯರೂಪಕ್ಕೆ ಬಂದಿರಲಿಲ್ಲ.

ಇದೀಗ, ಬಂಡೀಪುರದಲ್ಲಿ ಆನೆ ಶಿಬಿರ ಆರಂಭಿಸುವ ಪ್ರಸ್ತಾವವನ್ನು ಅರಣ್ಯ ಸಚಿವ ಉಮೇಶ ಕತ್ತಿ ಒಪ್ಪಿಕೊಂಡಿದ್ದು, ಆನೆಗಳ ಸ್ಥಳಾಂತರಕ್ಕೆ ಸಮ್ಮತಿಸಿದ್ದಾರೆ. ಆನೆ ಸಫಾರಿ ಆರಂಭಿಸುವುದರ ಬಗ್ಗೆಯೂ ಉತ್ಸಾಹ ತೋರಿದ್ದಾರೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ಮಣ್ಣಿಗೆ ಹೋಗುವುದರೊಳಗೆ ದಲಿತರೊಬ್ಬರನ್ನು ಸಿಎಂ ಮಾಡುವೆ'

ಮಳವಳ್ಳಿ(ಮಂಡ್ಯ): 'ನಾನು ಮಣ್ಣಿಗೆ ಹೋಗುವುದರೊಳಗಾಗಿ ಜೆಡಿಎಸ್ ಪಕ್ಷದಿಂದ ರಾಜ್ಯದಲ್ಲಿ ದಲಿತರೊಬ್ಬರನ್ನು ಮುಖ್ಯಮಂತ್ರಿ ಮಾಡುತ್ತೇನೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಮಳವಳ್ಳಿಯಲ್ಲಿ ಗುರುವಾರ ಡಾ.ಬಿ.ಆರ್.ಅಂಬೇಡ್ಕರ್ ದಿನಾಚರಣೆಯಲ್ಲಿ ಮಾತನಾಡಿ, 'ಅನೇಕ ದಲಿತ ನಾಯಕರಿಗೆ ಪಕ್ಷದಲ್ಲಿ, ಸರ್ಕಾರದ ಮಟ್ಟದಲ್ಲಿ ಜೆಡಿಎಸ್ ಉನ್ನತ ಹುದ್ದೆ ಗಳ ನ್ನು ನೀಡಿದೆ. ಮೀಸಲಾತಿ ಇಲ್ಲದ ಸಂದರ್ಭದಲ್ಲೇ, ಮೊದಲ ಬಾರಿಗೆ ಹಾಸನ ಜಿಲ್ಲಾ ಪಂಚಾಯಿತಿಗೆ ಆಯ್ಕೆಯಾಗಿದ್ದ ಎಚ್. ಡಿ.ರೇವಣ್ಣ ಅವರನ್ನು ಬಿಟ್ಟು, ಎಂ.ಎ ಪದವೀಧರರಾಗಿ ದ್ದ ದಲಿತ ಅಭ್ಯರ್ಥಿಯನ್ನು ಎಚ್.ಡಿ.ದೇವೇಗೌಡರು ಅಧ್ಯಕ್ಷರನ್ನಾಗಿಸಿದ್ದರು' ಎಂದರು.

'ನನ್ನ ಬಳಿಗೆ ರಾಜ್ಯದ ವಿವಿಧ ಮೂಲೆಗಳಿಂದ ಬರುವ ಜನರ ಜಾತಿ, ಧರ್ಮದ ಬಗ್ಗೆ ಕೇಳದೆ, ನಿಮ್ಮ ಕಷ್ಟ ವೇನು ಎಂದಷ್ಟೇ ಕೇಳುತ್ತೇನೆ. ಐದು ವರ್ಷ ಅಧಿಕಾರ ಕೊಟ್ಟರೆ ಜನ ಮೆಚ್ಚುವ ಕಾರ್ಯಕ್ರಮಗಳನ್ನು ರೂಪಿಸುವೆ. ನೀರಾವರಿ ವಿಚಾರದಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸುವೆ. ಆಗದಿದ್ದರೆ ಪಕ್ಷವನ್ನೇ ವಿಸರ್ಜಿಸುವೆ. ಮೈತ್ರಿ ರಾಜಕಾರಣ ಖಂಡಿತಾ ಬೇಡ' ಎಂದರು.

ಭಾಷಣದ ವೇಳೆ ಹೃದಯಾಘಾತ: ಸಂಸ್ಥೆಯ ಕಾರ್ಯದರ್ಶಿ ಸಾವು

ವಿಠ್ಠಲ ಎಚ್. ಪವಾರ

ಹಾರೂಗೇರಿ (ಬೆಳಗಾವಿ ಜಿಲ್ಲೆ): ಪಟ್ಟಣದ ವೃಷಭೇಂದ್ರ ಶಿಕ್ಷಣ ಸಂಸ್ಥೆಯ ಸಭಾಭವನದಲ್ಲಿ ಗುರುವಾರ ನಡೆಯುತ್ತಿದ್ದ ಭಗವಾನ್ ಮಹಾವೀರ ಹಾಗೂ ಸಂವಿಧಾನಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ, ಸಂಸ್ಥೆಯ ಕಾರ್ಯದರ್ಶಿ ವಿಠ್ಠಲ ಎಚ್. ಪವಾರ (88) ಅವರು ಕುಸಿದುಬಿದ್ದು ಮೃತಪಟ್ಟರು.

ಅಧ್ಯಕ್ಷ ಭಾಷಣ ಮಾಡುವಾಗ ಕುಸಿದು ಬಿದ್ದರು. ಪವಾರ ಅವರನ್ನು ಖಾಸಗಿ ಆಸ್ಪತ್ರೆಗೆ ಸಾಗಿಸಲಾಗಿತ್ತು. ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ ಎಂದು ವೈದ್ಯರು ದೃಢಪಡಿಸಿದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರಿದ್ದಾರೆ.

'ರಾಜಕಾರಣಿಗಳು ಇನ್ನಾದರೂ ಆತ್ಮಶುದ್ಧಿ ಮಾಡಿಕೊಳ್ಳಲಿ'

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ರಾಜ್ಯದಲ್ಲಿ ಗುತ್ತಿಗೆ ಕಾರ್ಯಗಳಲ್ಲಿ ಕಮಿಷನ್ ವಿಚಾರ ಹೊಸದಲ್ಲ. ಈಗ ಶೇ 40ಕ್ಕೆ ಬಂದು ನಿಂತಿದೆ. ಬಕ ಪಕ್ಷಿ, ತೋಳ–ತಿಮಿಂಗಲಗಳಂತಹ ರಾಜಕಾರಣಿಗಳು, ಒಂದು ಜೀವ ಹೋದ ಮೇಲಾದರೂ ಈ ವಿಚಾರದಲ್ಲಿ ಆತ್ಮಶುದ್ಧಿ ಮಾಡಿಕೊಳ್ಳಬೇಕು' ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಮುಖಂಡ ಬಿ.ಭಾಸ್ಕರರಾವ್ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ರಾಜ್ಯದಲ್ಲಿ ಶೇ 99 ಸರ್ಕಾರಿ ಅಧಿಕಾರಿಗಳು ಪ್ರಾಮಾಣಿಕರು. ಆದರೆ ಒತ್ತಡದಿಂದ ಭ್ರಷ್ಟರಾಗಿದ್ದಾರೆ. ಬದುಕುವ ಸಲುವಾಗಿ ಸುಳ್ಳು ಹೇಳಲು ಶುರು ಮಾಡಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ರಾಜ್ಯದಲ್ಲಿ ನಡೆಯುತ್ತಿರುವ ಕೋಮು ಸಂಘರ್ಷ ಜನರ ಗಮನ ಬೇರೆಡೆ ಸೆಳೆಯುವ ತಂತ್ರ. ನಾವೆಲ್ಲ ಭಾರತೀಯರು, ಒಂದೇ ತಾಯಿಯ ಮಕ್ಕಳು ಎಂದು ಹಿರಿಯರು, ಬಹಳಷ್ಟು ತಿಳಿವಳಿಕೆ ಇರುವ ಯಡಿಯೂರಪ್ಪನವರು ಕೂಡ ಹೇಳಿದ್ದಾರೆ. ಅದನ್ನು ಆ ಪಕ್ಷದವರು ತುರ್ತಾಗಿ ಅರ್ಥಮಾಡಿಕೊಂಡು ಆಡಳಿತ ನೀಡಬೇಕು' ಎಂದು ಕಿವಿಮಾತು ಹೇಳಿದರು.

ಯಾವುದೇ ಸವಾಲಿಗೂ ಸಿದ್ಧ: 'ರಾಜಕೀಯ ಅಜೆಂಡಾಗಿಂತ ಜನಹಿತ ಒಳಗೊಂಡ ಆರ್ಥಿಕ ಅಜೆಂಡಾ ಈಗ ದೇಶದ ಅಭಿವೃದ್ಧಿಗೆ ಬೇಕಿದೆ. ಅದರ ಬದಲಿಗೆ ಈಗ ಆರ್ಥಿಕ ಭಯೋತ್ಪಾದನೆ ನಡೆಯುತ್ತಿದೆ. ರಾಜಕೀಯ ವಿರೋಧಿಗಳನ್ನು ಆರ್ಥಿಕವಾಗಿ ಹಾಳುಮಾಡುವ ಕೆಲಸ ನಡೆಯುತ್ತಿದೆ. ಆಮ್ ಆದ್ಮಿ ಪಕ್ಷದ ಬೆಳವಣಿಗೆ ವಿಚಾರದಲ್ಲಿ ಯಾವುದೇ ಸವಾಲು ಎದುರಿಸಲು ಸಿದ್ಧನಿದ್ದೇನೆ' ಎಂದರು.

ಮುಸ್ಲಿಂ ವ್ಯಾಪಾರಿಗಳಿಗೆ ಅಡ್ಡಿ

ಹೆತ್ತೂರು (ಹಾಸನ): ವಳಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರಡಿಗಾಲ ಗ್ರಾಮದಲ್ಲಿ ದೇವಿರಮ್ಮ ಸುಗ್ಗಿ ಆಚರಣೆ ವೇಳೆ ವ್ಯಾಪಾರ ನಡೆಸಲು ಮುಸ್ಲಿಂ ವ್ಯಾಪಾರಿ ಗಳಿಗೆ ಅವಕಾಶ ನೀಡಿಲ್ಲ.

ಅಂಗಡಿ ಇಡಲು ಬಂದ ನಾಲ್ಕೈದು ಮುಸ್ಲಿಂ ವ್ಯಾಪಾರಿಗಳಿಗೆ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಅಡ್ಡಿಪಡಿಸಿದ್ದರಿಂದ ವ್ಯಾಪಾರಿಗಳು ಹಿಂದಿರುಗಿದರು.

ಕೆ.ಜಿ.ಎಫ್–2: ಮೊದಲ ದಿನವೇ ದಾಖಲೆ ಗಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶ್ ನಟನೆಯ, ಪ್ರಶಾಂತ್ ನೀಲ್ ನಿರ್ದೇಶನದ ಪ್ಯಾನ್ ಇಂಡಿಯಾ ಸಿನಿಮಾ ಕೆ.ಜಿ.ಎಫ್ ಚಾಪ್ಟರ್–2 ಮೊದಲ ದಿನವೇ ಒಟ್ಟು ₹120 ಕೋಟಿ ಗಳಿಸಿದೆ ಎಂದು ಅಂದಾಜಿಸಲಾಗಿದೆ. ಅಮೆರಿಕದಲ್ಲೇ ಮೊದಲ ದಿನದ ಕಲೆಕ್ಷನ್ ₹7.62 ಕೋಟಿ ಮೀರಿ ಮುನ್ನುಗ್ಗಿದೆ ಎಂದು ಹೊಂಬಾಳೆ ಫಿಲ್ಮ್ಸ್ ಟ್ವೀಟ್‌ನಲ್ಲಿ ಅಧಿಕೃತವಾಗಿ ತಿಳಿಸಿದೆ.

ಭಾರತದಲ್ಲೇ ಆರು ಸಾವಿರಕ್ಕೂ ಅಧಿಕ ಪರದೆಗಳಲ್ಲಿ ಈ ಸಿನಿಮಾ ಬಿಡುಗಡೆಯಾಗಿದೆ. ವಿಶೇಷವೆಂದರೆ ಈ ಪೈಕಿ ದಕ್ಷಿಣ ಭಾರತಕ್ಕಿಂತ ಹಿಂದಿ ಭಾಷಿಕರು ಹೆಚ್ಚಿರುವ ಉತ್ತರ ಭಾರತದಲ್ಲೇ ಅತ್ಯಧಿಕ ಪರದೆಗಳಿವೆ. ಈ ಅಂತರ ಸುಮಾರು ಎರಡು ಸಾವಿರದಷ್ಟಿತ್ತು. ಇದರ ಜೊತೆಗೆ ಅಮೆರಿಕ, ರಷ್ಯಾ, ಫ್ರಾನ್ಸ್, ನ್ಯೂಜಿಲೆಂಡ್ ಸೇರಿ ವಿಶ್ವದೆಲ್ಲೆಡೆ ಪರದೆಗಳ ಸಂಖ್ಯೆ 10 ಸಾವಿರ ದಾಟಿದೆ. ಸ್ಯಾಂಡಲ್‌ವುಡ್ ಇರಲಿ ವಿಶ್ವದ ಯಾವುದೇ ಚಿತ್ರರಂಗದ ಸಿನಿಮಾವೊಂದು ಹಿಂದೆಂದೂ ಇಷ್ಟೊಂದು ಪರದೆಗಳಲ್ಲಿ ತೆರೆಕಂಡಿಲ್ಲ. ಆಶ್ಚರ್ಯವೆಂದರೆ ಕೆ.ಜಿ.ಎಫ್ ಸೈನೈಡ್ ಗುಡ್ಡದಲ್ಲೇ ಚಿತ್ರೀಕರಣಗೊಂಡ ಈ ಸಿನಿಮಾವೂ ಕೆಜಿಎಫ್‌ನಲ್ಲೇ ತೆರೆಕಂಡಿಲ್ಲ.

ಹಲವು ಚಿತ್ರಮಂದಿರಗಳಲ್ಲಿ ಗುರುವಾರ ಬೆಳಗಿನ ಜಾವ 1–2 ಗಂಟೆಯಿಂದಲೇ ಫ್ಯಾನ್ಸ್ ಶೋ ನಡೆದಿತ್ತು. ಚಿತ್ರಮಂದಿರಗಳಲ್ಲಿ ಯಶ್, ಸಂಜಯ್ ದತ್ ಕಟೌಟ್‌ಗಳಿಗೆ ಹಾರ ಹಾಕಿ, ಪಟಾಕಿ ಸಿಡಿಸಿ, ಕುಣಿದು ಕುಪ್ಪಳಿಸಿ ಸಂಭ್ರಮದಿಂದಲೇ ಅಭಿಮಾನಿಗಳು ಕೆ.ಜಿ.ಎಫ್‌ಗೆ ಪ್ರವೇಶಿಸಿದ್ದಾರೆ. ಮೊದಲ ದಿನವೇ ₹ 29 ಲಕ್ಷ ಟಿಕೆಟ್‌ಗಳನ್ನು ಪ್ರೇಕ್ಷಕರು ಆನ್‌ಲೈನಲ್ಲಿ ಬುಕ್ ಮಾಡಿದ್ದಾರೆ ಎಂದು ಟಿಕೆಟ್ ಬುಕಿಂಗ್ ಆ್ಯಪ್ ಕಂಪನಿ ಬುಕ್‌ಮೈ ಶೋ ಟ್ವೀಟ್‌ನಲ್ಲಿ ಉಲ್ಲೇಖಿಸಿದೆ.

ಚಿನ್ನದ ಕಡಲಲ್ಲಿ ರಾಕಿ 'ದುನಿಯಾ'

ಯಶ್

ನಾವು ನೋಡಿದ ಸಿನಿಮಾ

ಕೆ.ಜಿ.ಎಫ್ –ಚಾಪ್ಟರ್ 2 (ಕನ್ನಡ)

- **ನಿರ್ಮಾಣ:** ವಿಜಯ್ ಕಿರಗಂದೂರು
- **ನಿರ್ದೇಶನ:** ಪ್ರಶಾಂತ್ ನೀಲ್
- **ತಾರಾಗಣ:** ಯಶ್, ಶ್ರೀನಿಧಿ ಶೆಟ್ಟಿ, ಸಂಜಯ್ ದತ್, ರವೀನಾ ಟಂಡನ್, ರಾವ್ ರಮೇಶ್, ಪ್ರಕಾಶ್ ರಾಜ್

'ಹಾಸಿಗೆ ಇದ್ದಷ್ಟೇ ಯಾಕೆ ಕಾಲು ಚಾಚಬೇಕು? ಹಾಸಿಗೆಯನ್ನೇ ದೊಡ್ಡದು ಮಾಡೋಣ' ಎನ್ನುವ ನಾಯಕನ ಡೈಲಾಗ್ ಕೆ.ಜಿ.ಎಫ್ ಸರಣಿಯ ಜೀವಾಮೃತ. 'ಕ್ಯಾ ಚಾಹಿಯೇರೆ ತುಜೆ' ಎಂದು ನಾಯಕನನ್ನು ಪ್ರಶ್ನಿಸುವಾಗ ಆತ ನೀಡಿದ ಉತ್ತರ 'ದುನಿಯಾ'. ಮೊದಲ ಅಧ್ಯಾಯದಲ್ಲಿ ಹೊಡೆದ ಈ ಡೈಲಾಗ್ ಮುಂದಿನ ಅಧ್ಯಾಯಕ್ಕೂ ತಳಹದಿ. ಭಾರತಕ್ಕೇ 'ಸಿ.ಇ.ಒ' ಆದ ನಾಯಕ, ಇದೀಗ ತಾಯಿಯೇ ಉಲ್ಲೇಖಿಸಿದ್ದ ಹೊಳೆವ ಸಮುದ್ರದಲ್ಲಿ ಮಲಗಿದ್ದಾನೆ. ಆತ ಮತ್ತೆ ಎದ್ದು ಬರುವುದಕ್ಕೆ ಪ್ರೇಕ್ಷಕರು ತುದಿಗಾಲಲ್ಲಿ ನಿಂತಿದ್ದಾರೆ.

ಕೆ.ಜಿ.ಎಫ್ ಎರಡನೇ ಅಧ್ಯಾಯ ಬಿಡುಗಡೆಯಾದ ಗಾತ್ರವೂ ಚಂದನವನದ ತಾಕತ್ತನ್ನು ಪ್ರಪಂಚಕ್ಕೆ ತೋರಿಸಿದೆ. ಹಾಸಿಗೆಯನ್ನೇ ದೊಡ್ಡದು ಮಾಡಿ ವಿಶ್ವದ ಹತ್ತು ಸಾವಿರ ಪರದೆಗಳಲ್ಲಿ ಸೂಟುಬೂಟಿನಲ್ಲಿ ರಾಕಿಭಾಯ್ ಪ್ರವೇಶಿಸುವಾಗ ಕ್ಷಣದಲ್ಲೊಮ್ಮೆ ಚಿತ್ರಮಂದಿರವೇ ಉತ್ಸವಕ್ಕೆ ವೇದಿಕೆಯಾಗುತ್ತದೆ. ರಾಜ ಕೃಷ್ಣಪ್ಪ ಭೇರ್ಯನಾಗಿ ಹುಟ್ಟಿದ ನಾಯಕ ಮುಂಬೈಗೆ ಕಾಲಿಟ್ಟು 'ರಾಕಿ'ಭಾಯ್‌ಯಾಗಿ ಬೆಳೆದು ಕೆ.ಜಿ.ಎಫ್‌ನ ನಾರಾಚಿ ಹೆಬ್ಬಾಗಿಲಿನೊಳಗೆ ನುಗ್ಗಿ ಅಲ್ಲಿನ ಅಧಿಪತಿ ಗರುಡನನ್ನೇ ಹೊಡೆದುರುಳಿಸುವಲ್ಲಿಗೆ ಮೊದಲ ಅಧ್ಯಾಯ ಮುಗಿಯುತ್ತದೆ.

ಮೊದಲ ಅಧ್ಯಾಯದಲ್ಲಿ 'ಆನಂದ್ ಇಂಗಳಗಿ'ಯಾಗಿ 'ರಾಕಿ ಭಾಯ್' ಕಥೆಯನ್ನು ನಿರೂಪಣೆ ಮಾಡಿದ್ದ ನಟ ಅನಂತನಾಗ್ ಎರಡನೇ ಅಧ್ಯಾಯ ದಲ್ಲಿ ಇಲ್ಲ ಎನ್ನುವುದು ಮೊದಲೇ ಗೊತ್ತಿತ್ತು. ಈ ಸ್ಥಾನವನ್ನು 'ಪ್ರಕಾಶ್ ರಾಜ್' ತುಂಬಲಿದ್ದಾರೆ ಎನ್ನುವ ಮಾಹಿತಿಯೂ ಇತ್ತು. ಆದರೆ 'ಹೇಗೆ' ಎನ್ನುವ ಪ್ರಶ್ನೆ ಎಲ್ಲರಲ್ಲೂ ಇತ್ತು. ಈ ಸಂದರ್ಭವನ್ನು ಅತ್ಯಂತ ಚಾಣಾಕ್ಷ ರೀತಿಯಲ್ಲಿ ನಿರ್ದೇಶಕ ಪ್ರಶಾಂತ್ ನೀಲ್ ನಿಭಾಯಿಸಿದ್ದಾರೆ. ಆನಂದ್ ಇಂಗಳಗಿ ಮಗನಾಗಿ (ವಿಜಯೇಂದ್ರ ಇಂಗಳಗಿ) ಪ್ರಕಾಶ್ ರಾಜ್ ಎರಡನೇ ಅಧ್ಯಾಯದ ಕಥೆ ಮುನ್ನಡೆಸುತ್ತಾರೆ. ಇದು ಮೊದಲ ಗೆಲುವು.

ಚಿನ್ನದ ಸಾಮ್ರಾಜ್ಯ ನಾರಾಚಿಗೆ ಹೊಸ ಅಧಿಪತಿಯಾಗಿ ರಾಕಿ ಬೆಳೆಯಲಾರಂಭಿಸುತ್ತಾನೆ.ತಮ್ಮನ್ನು ಬೇಡಿಯೊಳಗಿಟ್ಟ ಗರುಡನನ್ನು ಹೊಡೆದುರುಳಿಸಿದ ನಾಯಕನೇ ಇಲ್ಲಿ ಜನರಿಗೆ ದೇವರಾಗುತ್ತಾನೆ. ಕಾಲು ಚಾಚಲು ಹಾಸಿಗೆಯನ್ನೇ ದೊಡ್ಡದು ಮಾಡುತ್ತಾನೆ. ಗಣಿಯನ್ನು ವಿಸ್ತರಿಸುತ್ತಾನೆ. ಗರುಡ ಬದುಕಿರುವವರೆಗೂ ಕೆ.ಜಿ.ಎಫ್‌ಗೆ ಕಾಲಿಡುವುದಿಲ್ಲ ಎಂದು ಮಾತು ಕೊಟ್ಟಿದ್ದ ಅಧೀರ ಇದೀಗ ರಾಕಿಯ ಮುಂದಿದ್ದಾನೆ. ಅಧೀರನಾಗಿ ಬಾಲಿವುಡ್ ನಟ ಸಂಜಯ್ ದತ್ ಪ್ರವೇಶ ಭರ್ಜರಿಯಾಗಿದೆ. ಚಿತ್ರದ ಮೊದಲಾರ್ಧ ತೆರೆಯ ತುಂಬಾ 'ರಾಕಿ' 'ಅಧೀರ'ರೇ ತುಂಬಿಕೊಳ್ಳುತ್ತಾರೆ. ಯಶ್, ಸಂಜಯ್ ದತ್ ಡೈಲಾಗ್‌ಗಳು, ದೃಶ್ಯವೈಭವದಿಂದ ಕೂಡಿದ ಮೊದಲಾರ್ಧದ ಕಥೆ ಬಿರುಗಾಳಿಯಂತೆ ಸಾಗುತ್ತದೆ. ಈ ಬಿರುಗಾಳಿಗೆ ರವಿ ಬಸ್ರೂರು ಅವರ ಸಂಗೀತ, ಕಲಾ ನಿರ್ದೇಶಕ ಶಿವಕುಮಾರ್ ಅವರ ಕೈಚಳಕವೂ ಓಘ ನೀಡಿದೆ. ಇದು ಎರಡನೇ ಗೆಲುವು.

'ಸುಲ್ತಾನ'ನಾಗಿ ಬೆಳೆಯುವ ರಾಕಿಗೆ 'ಅಧೀರ'ನ ಜೊತೆಗೆ ಪ್ರಧಾನಿಯಾಗಿ ಆಯ್ಕೆಯಾಗುವ 'ರಮಿಕಾ ಸೇನ್'(ರವೀನಾ ಟಂಡನ್) ಎದುರಾಗುತ್ತಾಳೆ. ಮುಂದೇನಾಗುತ್ತದೆ ಎನ್ನುವಲ್ಲಿಂದ ಎರಡನೇ ಅಧ್ಯಾಯದ ಕಥೆ ಮುಂದುವರಿಯುತ್ತದೆ.

ಸಿ.ಬಿ.ಐ ಅಧಿಕಾರಿ 'ರಾಘವನ್' ಪಾತ್ರದಲ್ಲಿ ನಟ ರಾವ್ ರಮೇಶ್ ನಟನೆ ಉಲ್ಲೇಖಾರ್ಹ. ದ್ವಿತೀಯಾರ್ಧದಲ್ಲಿ ಚಿತ್ರಕಥೆಯು ಬಿರುಗಾಳಿಗೆ ಮತ್ತಷ್ಟು ವೇಗ ನೀಡಿ ಚಂಡಮಾರುತ ಸೃಷ್ಟಿಸಲಿದೆಯೇ ಎಂದು ಕಾದರೆ ನಿರಾಸೆ ಖಚಿತ. ನಾಯಕಿ ಜೊತೆಗಿನ ಹಾಡು ಓಡುವ ಕುದುರೆಯನ್ನು ಮುಗ್ಗರಿಸಿ ಬೀಳುವಂತೆ ಮಾಡಿದೆ. ಮುಂದೆ, ಕಥೆಯು ಮೈಕೊಡವಿ ಏಳುವಷ್ಟರಲ್ಲಿ 'ರಾಕಿ' 'ಅಧೀರ'ನ ಕ್ಲೈಮ್ಯಾಕ್ಸ್ ಫೈಟ್ ಕೂಡಾ ಅಂತ್ಯವಾಗಿರುತ್ತದೆ. ಇದು ಮೊದಲ ಸೋಲು. ಮೊದಲ ಅಧ್ಯಾಯದ ದ್ವಿತೀಯಾರ್ಧದಲ್ಲಿ ಪ್ರೇಕ್ಷಕರನ್ನು ಹಿಡಿದಿಟ್ಟಿದ್ದ ಸದೃಢ ಕಥೆ ಇಲ್ಲಿ ಗೈರಾಗಿದೆ.

ನಾಯಕ, ಖಳನಾಯಕರಿಗೆ ಅಬ್ಬರದ ಹಿನ್ನೆಲೆ ಸಂಗೀತದ ಜೊತೆಗೆ ಸೂಜಿ ಬಿದ್ದರೂ ಕೇಳುವ ಮೌನವೂ ಸಂಗೀತ ನಿರ್ದೇಶಕ ರವಿ ಬಸ್ರೂರು ಅವರ ಕೈಚಳಕಕ್ಕೆ ಸಾಕ್ಷ್ಯ. ಅಮ್ಮ–ಮಗನ ಭಾವನಾತ್ಮಕ ದೃಶ್ಯಗಳಿಗೆ ನೀಡಿದ ಸಂಗೀತ ತಂಗಾಳಿಯ ಅನುಭವ. ಮೊದಲ ಅಧ್ಯಾಯದಲ್ಲಿನ ಹಿನ್ನೆಲೆ ಸಂಗೀತಕ್ಕೇ ಸಾಣೆ ಹಿಡಿದಂತೆ ಎರಡನೇ ಅಧ್ಯಾಯಕ್ಕೂ ಸಂಗೀತ ನೀಡಿರುವುದು ಕಥೆಯನ್ನು ಹಿಡಿದಿಡುತ್ತದೆ. 'ದೊಡ್ಡಮ್ಮ'ನ ಆರ್ಭಟ, ಊಹೆಗೂ ಸಿಲುಕದೆ ಫ್ಯಾನ್ ಆದ ಹೆಲಿಕಾಪ್ಟರ್, ಗುಂಡಿನ ಮೊರೆತ ಚಿತ್ರದುದ್ದಕ್ಕೂ ಹೆಚ್ಚೆನಿಸಿದರೂ ದೃಶ್ಯವೈಭವದ ಸಾಗರದಲ್ಲಿ ಇದು ನಗಣ್ಯ. ಪ್ಯಾನ್ ಇಂಡಿಯಾ ಸಿನಿಮಾಗಳ ಮಟ್ಟಿಗೆ ಚಿತ್ರದ ಮೇಕಿಂಗ್ ಅದ್ಭುತವಾಗಿದೆಯಾದರೂ, ಹಾಲಿವುಡ್‌ಗೆ ಹೋಲಿಸಲು ನಿಂತರೆ ಅದು ಉತ್ಪ್ರೇಕ್ಷೆಯಾದೀತು. ಆದರೆ, ಹಾಲಿವುಡ್ ಸಿನಿಮಾದಂತೆಯೇ ಕೊನೆಯಲ್ಲಿ ನೀಡಿರುವ ತಿರುವು ದ್ವಿತೀಯಾರ್ಧದ ಹೈಲೈಟ್.

ಅಭಿಲಾಷ್ ಪಿ.ಎಸ್.

ಎಸ್ಸೆಸ್ಸೆಲ್ಸಿ ಮೌಲ್ಯಮಾಪಕರ ಸಂಭಾವನೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್ಸೆಸ್ಸೆಲ್ಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪಕರ ಭತ್ಯೆಯನ್ನು ಹೆಚ್ಚಿಸಿ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಆದೇಶ ಹೊರಡಿಸಿದೆ.

ಭತ್ಯೆ ಪರಿಷ್ಕರಣೆಯಿಂದಾಗಿ ಮೌಲ್ಯ ಮಾಪನ ಕೇಂದ್ರಗಳ ಜಂಟಿ ಮುಖ್ಯ ಪರೀಕ್ಷಕರ ಸಂಭಾವನೆ ₹ 6,924ರಿಂದ ₹ 7,270, ಉಪ ಮುಖ್ಯ ಪರೀಕ್ಷಕರ ಸಂಭಾವನೆ ₹ 5,204ರಿಂದ ₹ 5,464ಗೆ ಹೆಚ್ಚಳ ಆಗಲಿದೆ.

ಮೌಲ್ಯಮಾಪಕರಿಗೆ ಪ್ರತಿ ಉತ್ತರ ಪತ್ರಿಕೆಯ ಮೌಲ್ಯಮಾಪನ ದರವನ್ನು ₹ 1 ಹೆಚ್ಚಿಸಲಾಗಿದೆ. ಇದರಿಂದ ₹ 22 ಇದ್ದ ಪ್ರಥಮ ಭಾಷೆ ಪತ್ರಿಕೆಯ ಮೌಲ್ಯ ಮಾಪನ ದರ ₹ 23, ದ್ವಿತೀಯ, ತೃತೀಯ ಭಾಷೆ ಮತ್ತು ಐಚ್ಛಿಕ ವಿಷಯಗಳಿಗೆ ₹ 20 ಇದ್ದ ಪ್ರತಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ದರ ₹ 21ಗೆ ಹೆಚ್ಚಿಸಲಾಗಿದೆ.

ಭತ್ಯೆ ಬೆಂಗಳೂರಿನಲ್ಲಿ ₹ 596 (ಹಿಂದಿನ ದರ ₹ 568) ಹಾಗೂ ಇತರ ನಗರಗಳಲ್ಲಿ ₹ 469 (ಹಿಂದಿನ ದರ ₹ 447), ಸ್ಥಳೀಯ ಭತ್ಯೆ ಬೆಂಗಳೂರಿಗೆ ₹ 224 (ಹಿಂದಿನ ದರ ₹ 224), ಇತರ ನಗರಗಳಲ್ಲಿ ಸ್ಥಳೀಯ ಭತ್ಯೆಯನ್ನು ₹ 189 (ಹಿಂದಿನ ದರ ₹ 180) ಹೆಚ್ಚಳ ಮಾಡಲಾಗಿದೆ.

ಕ್ಯಾಂಪ್ ಕಸ್ಟೋಡಿಯನ್ ಸಂಭಾವನೆ ₹ 4,515 (ಹಿಂದಿನ ದರ ₹ 4,300), ಕ್ಯಾಂಪ್ ಸಹಾಯಕರ ಸಂಭಾವನೆ ₹ 1,260 (ಹಿಂದಿನ ದರ ₹ 1,200), 'ಡಿ' ದರ್ಜೆ ನೌಕರರ ಸಂಭಾವನೆ ₹ 630 (ಹಿಂದಿನ ದರ ₹ 600) ಆಗಿ ಹೆಚ್ಚಿಸಲಾಗಿದೆ ಎಂದು ಮಂಡಳಿ ತಿಳಿಸಿದೆ.

'ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಅವಕಾಶ ಕೊಡಿ'

ಪ್ರಜಾವಾಣಿ ವಾರ್ತೆ

ಉಡುಪಿ: 'ಏ.22ರಿಂದ ದ್ವಿತೀಯ ಪಿಯುಸಿ ಪರೀಕ್ಷೆಗಳು ಆರಂಭವಾಗುತ್ತಿದ್ದು ಮುಸ್ಲಿಂ ವಿದ್ಯಾರ್ಥಿನಿಯರ ಶೈಕ್ಷಣಿಕ ಭವಿಷ್ಯ ಹಾಳಾಗದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕ್ರಮ ತೆಗೆದುಕೊಳ್ಳಬೇಕು' ಎಂದು ಹಿಜಾಬ್ ಹೋರಾಟಗಾರ್ತಿ ಅಲಿಯಾ ಅಸಾದಿ ಟ್ವೀಟ್ ಮೂಲಕ ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿಗೆ ಇನ್ನೂ ಕಾಲಾವಕಾಶವಿದೆ. ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಮುಸ್ಲಿಂ ವಿದ್ಯಾರ್ಥಿನಿಯರಿಗೆ ಅನುಕೂಲ ಮಾಡಿಕೊಡಬೇಕು. ನಾವು ದೇಶದ ಭವಿಷ್ಯ ಎಂದು ಅಲಿಯಾ ಅಸಾದಿ ಟ್ವೀಟ್ ಮಾಡಿದ್ದಾರೆ.

ವಿಧಾನಸೌಧದಲ್ಲಿ ಗುರುವಾರ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಜನ್ಮದಿನಾಚರಣೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತರಾದ ಬಿ.ಎಂ. ಗಿರಿರಾಜ್, ಡಿ. ರಾಮಾ ನಾಯಕ್, ಎಸ್. ಸಿದ್ಧಾರ್ಥ, ಆರ್.ಎಸ್. ಸರಸ್ವತಮ್ಮ ಮತ್ತು ಗುರುವಪ್ಪ ಎನ್.ಟಿ. ಬಾಳೆಪುಣಿ ಅವರೊಂದಿಗೆ ವಿಧಾನ ಪರಿಷತ್ ಸದಸ್ಯರಾದ ಪ್ರತಾಪಸಿಂಹ ನಾಯಕ್, ಎಚ್.ಎಂ. ರಮೇಶ್ ಗೌಡ, ಸಚಿವ ಕೋಟ ಶ್ರೀನಿವಾಸ ಪೂಜಾರಿ, ಶಾಸಕ ರಿಜ್ವಾನ್ ಅರ್ಷದ್, ಚಲವಾದಿ ಗುರುಪೀಠದ ಬಸವ ನಾಗಿದೇವ ಸ್ವಾಮೀಜಿ, ಮಾಜಿ ಸಚಿವೆ ಮೋಟಮ್ಮ, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಶಿವರಾಂ ಇದ್ದಾರೆ –ಪ್ರಜಾವಾಣಿ ಚಿತ್ರ

ಅಸಮಾನತೆ – ದೇವನೂರ ಮಹಾದೇವ ಟೀಕೆ

ಹುಚ್ಚು ಕುದುರೆಯಂತೆ ಓಟ

ಪ್ರಜಾವಾಣಿ ವಾರ್ತೆ



ಮೈಸೂರು: 'ದೇಶದಲ್ಲಿ ಹೆಚ್ಚುತ್ತಿರುವ ಅಸಮಾನತೆಯ ಹುಚ್ಚು ಕುದುರೆಯನ್ನು ದ್ವೇಷ, ಅಸಹನೆ, ಕೋಮುವಾದದ ಹೆಂಡ ಕುಡಿದ ಜಾಕಿ ಓಡಿಸುತ್ತಿದ್ದಾನೆ' ಎಂದು ಲೇಖಕ ದೇವನೂರ ಮಹಾದೇವ ಟೀಕಿಸಿದರು.

ಭಾರತೀಯ ಪರಿವರ್ತನ ಸಂಘವು ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಪ್ರಯುಕ್ತ ನಗರದ ಪುರಭವನ ಮುಂಭಾಗದ ಅಂಬೇಡ್ಕರ್ ಪ್ರತಿಮೆ ಬಳಿ ಗುರುವಾರ ಆಯೋಜಿಸಿದ್ದ 'ಸಮಾನತೆಗಾಗಿ ಓಟ'ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಮಾಜಿ ಆಟಗಾರ, ಹಾಲಿ ಕೋಚ್‌ನಂತೆ ಉಡುಪು ಧರಿಸಿ ಓಟಕ್ಕೆ ಚಾಲನೆ ನೀಡಿದ್ದೇನೆ. ಕ್ಷಮೆ ಇರಲಿ. ನಾನು ಎಂದೂ ಓಡಿದವನಲ್ಲ. ನಿಮ್ಮೊಡನೆ ಅಥವಾ ನಿಮ್ಮ ಹಿಂದೆಯಾದರೂ ಓಡುವ ಚೈತನ್ಯ ನನಗಿಲ್ಲ. ಓಡುತ್ತಿರುವ ಎಳೆಯರ ಬೆನ್ನು ತಟ್ಟಲು ಬಂದಿದ್ದೇನೆ. ಏಕೆಂದರೆ ನೀವು ಓಡುತ್ತಿರುವುದು ಸಮಾನತೆಗಾಗಿ' ಎಂದರು.

'ಎಳೆಯ ಸ್ನೇಹಿತರೆ, ನೀವು ತುಂಬಾ ವೇಗವಾಗಿ ಓಡಬೇಕಾಗಿದೆ. ಏಕೆಂದರೆ ಇಂದು ಅಸಮಾನತೆ ಹಿಂದೆಂದೂ ಇಲ್ಲದಷ್ಟು ಹುಚ್ಚು ಕುದುರೆಯಂತೆ ಓಡುತ್ತಿದೆ. ಈಗಾಗಲೇ ಅದು ತುಂಬಾ ದೂರ ಓಡಿದೆ. ಆದರಿಂದ ಕಚ್ಚಿಸಿಕೊಳ್ಳದೆ ನೀವು ಎಚ್ಚರ ವಹಿಸಿ ಓಡಬೇಕಾಗಿದೆ. ನೀವು ಎಳೆಯರಾದ್ದರಿಂದ ಗೆಲ್ಲುತ್ತೀರಿ ಎಂಬ ನಂಬಿಕೆ ನನಗಿದೆ. ನೀವು ಗೆಲ್ಲಲೇಬೇಕು' ಎಂದು ನುಡಿದರು.

'ಈ ದೇಶಕ್ಕೆ ದಿಕ್ಕು ತೋರಿಸುತ್ತಿರುವ ಚಿಂತಕ, ಹೋರಾಟಗಾರ ಯೋಗೇಂದ್ರ ಯಾದವ್ ಈಚೆಗೆ ಮೈಸೂರಿಗೆ ಬಂದಿದ್ದಾಗ ಒಂದು ನುಡಿಗಟ್ಟು ಹೇಳಿದ್ದರು. ಪ್ರಧಾನಿ ಮೋದಿ ಅವರ ಬಾಯಲ್ಲಿ ಸೀತಾಪತಿ ಅಂದರೆ- ರಾಮ, ಹೃದಯದಲ್ಲಿ ನೀತಾ ಅಂದರೆ- ಅಂಬಾನಿ ಇದ್ದಾರೆ. ಮೋದಿ ಹೃದಯದಲ್ಲಿರುವ ಅಂಬಾನಿ ಲಕ್ಷಾಂತರ ಕೋಟಿ ರೂಪಾಯಿ ಒಡೆಯ. ಭಾರತದಲ್ಲಿರುವ ಇಂಥ ಹಲವು ಕುಟುಂಬಗಳ ಸಂಪತ್ತು ಒಟ್ಟಾದರೆಅದುದೇಶದಒಟ್ಟುಸಂಪತ್ತಿನ ಅರ್ಧಭಾಗ ದಷ್ಟು ಆಗುತ್ತದಂತೆ. ಬಡವರ ಸಂಖ್ಯೆ ದಿನವೂ ಹೆಚ್ಚುತ್ತಿದೆ. ಇಷ್ಟೊಂದು ಅಸಮಾನತೆ ಈಗ ದೇಶದಲ್ಲಿದೆ' ಎಂದರು.

2–ಎ ಪಟ್ಟಿಗೆ ಪಂಚಮಸಾಲಿ ಸೇರ್ಪಡೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಪ್ರವರ್ಗ 2–ಎ ಪಟ್ಟಿಗೆ ಲಿಂಗಾಯತ ಪಂಚಮಸಾಲಿ ಸಮುದಾಯವನ್ನು ಸೇರಿಸಬೇಕೆಂಬ ಬೇಡಿಕೆಯನ್ನು ಮಾನ್ಯ ಮಾಡಬಾರದು ಎಂದು ಒತ್ತಾಯಿಸಿ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟವು ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಲಿಖಿತ ಮನವಿ ಸಲ್ಲಿಸಿದೆ.

ಪಂಚಮಸಾಲಿ ಸಮುದಾಯದ ಬೇಡಿಕೆ ಕುರಿತು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಮಾರ್ಚ್ 3ರಂದು ವಿಚಾರಣೆ ನಡೆಸಿದ್ದರು. ಲಿಖಿತ ಮನವಿ ಸಲ್ಲಿಸಲು ಕಾಲಾವಕಾಶ ನೀಡುವಂತೆ ಒಕ್ಕೂಟವು ಮಾಡಿದ್ದ ಮನವಿಯನ್ನು ಆಯೋಗ ಒಪ್ಪಿತ್ತು. ಆಯೋಗದ ಅಧ್ಯಕ್ಷರನ್ನು ಬುಧವಾರ ಭೇಟಿಮಾಡಿದ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಣ್ಣೆಗೆರೆ ಆರ್. ವೆಂಕಟರಾಮಯ್ಯ, ಲಿಖಿತ ಮನವಿ ಸಲ್ಲಿಸಿದರು.

'ಹಿಂದುಳಿದ ವರ್ಗಗಳ ಪ್ರವರ್ಗ 2–ಎ ಪಟ್ಟಿ 2002ರಿಂದಲೂ ಚಾಲ್ತಿಯಲ್ಲಿದೆ. ಲಿಂಗಾಯತ ಪಂಚಮಸಾಲಿ ಸಮುದಾಯವನ್ನು ಈ ಪಟ್ಟಿಗೆ ಸೇರಿಸಬೇಕೆಂಬ ಅರ್ಜಿಯನ್ನು ಪ್ರೊ. ರವಿವರ್ಮಕುಮಾರ್ ನೇತೃತ್ವದ ಆಯೋಗ ತಿರಸ್ಕರಿಸಿತ್ತು. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯವಾಗಿ ಪ್ರಬಲವಾಗಿರುವ ಪಂಚಮಸಾಲಿ ಸಮುದಾಯವನ್ನು 2–ಎ ಪಟ್ಟಿಗೆ ಸೇರಿಸುವುದರಿಂದ ಈ ಪಟ್ಟಿಯಲ್ಲಿರುವ 102 ಜಾತಿಗಳ ಜನರಿಗೆ ಅನ್ಯಾಯವಾಗುತ್ತದೆ' ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಸಮುದಾಯದ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿ ಕುರಿತು ಅಧ್ಯಯನ ನಡೆಸದೇ ಆ ಜಾತಿಯನ್ನು ಹಿಂದುಳಿದ ವರ್ಗಗಳ 2–ಎ ಪಟ್ಟಿಗೆ ಸೇರಿಸುವುದು ಸರಿಯಲ್ಲ. ಪಂಚಮಸಾಲಿ ಸಮುದಾಯವನ್ನು ಈಗಾಗಲೇ 2–ಎ ಪಟ್ಟಿಯಲ್ಲಿರುವ ಯಾವುದೇ ಜಾತಿಗಳ ಜತೆಗೂ ಹೋಲಿಕೆ ಮಾಡಲು ಸಾಧ್ಯವಿಲ್ಲ ಎಂದು ಹೇಳಲಾಗಿದೆ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಒಂದು ಕೆಲಸ ಯೋಗ್ಯವಾದುದು ಎನಿಸಿದರೆ ಅದನ್ನು ಹೃತ್ಪೂರ್ವಕವಾಗಿ ಮಾಡು.

–ಗೌತಮ ಬುದ್ಧ

ಅಂಕೆಗೆ ಸಿಗುತ್ತಿಲ್ಲ ಹಣದುಬ್ಬರ ನಿಯಂತ್ರಣಕ್ಕೆ ಬೇಕು ದೃಢ ಹೆಜ್ಜೆ

ದೇಶದಲ್ಲಿ ಹಣದುಬ್ಬರ ಪ್ರಮಾಣ ಜಾಸ್ತಿ ಆಗುತ್ತಿದೆ ಎಂದು ಹೇಳುವುದಕ್ಕೆ ಈಗ ಸರ್ಕಾರವು ತಿಂಗಳಿಗೆ ಒಮ್ಮೆ ಬಿಡುಗಡೆ ಮಾಡುವ ಅಂಕಿ-ಅಂಶಗಳ ನೆರವಿನ ಅಗತ್ಯ ಇಲ್ಲ. ದಿನನಿತ್ಯದ ಖರ್ಚುಗಳ ಮೇಲೆ ಸ್ವಲ್ಪಮಟ್ಟಿಗೆ ಕಣ್ಣಿಟ್ಟರೂ, ಅಗತ್ಯ ವಸ್ತುಗಳ ಬೆಲೆಯು ಹೆಚ್ಚಾಗುತ್ತಿರುವುದು ಯಾರಿಗೇ ಆದರೂ ಅರ್ಥ ಆಗುತ್ತದೆ. ಹಣದುಬ್ಬರ ಪ್ರಮಾಣವು ದೇಶದಲ್ಲಿ ಮಿತಿಯನ್ನು ಮೀರಿ ಬೆಳೆಯುತ್ತಿರುವುದು ವಾಸ್ತವ. ಜನವರಿಯ ನಂತರದಲ್ಲಿ ದೇಶದ ಹಣದುಬ್ಬರ ದರವು ಶೇಕಡ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಉಳಿದಿದೆ. ಮಾರ್ಚ್ ತಿಂಗಳಲ್ಲಿ ದೇಶದಲ್ಲಿ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 6.95ಕ್ಕೆ ತಲುಪಿದೆ. ಇದು 17 ತಿಂಗಳ ಗರಿಷ್ಠ ಮಟ್ಟ. ಹಿಂದಿನ ವರ್ಷದ ಮೇ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇ 6.30ರಷ್ಟು ಇತ್ತು. ಅದಾದ ನಂತರದಲ್ಲಿ ಹಣದುಬ್ಬರ ಪ್ರಮಾಣ ತಗ್ಗುತ್ತಾ ಬಂತು. ಸೆಪ್ಟೆಂಬರ್‌ನಲ್ಲಿ ಶೇ 4.35ಕ್ಕೆ ಇಳಿಕೆ ಕಂಡ ಹಣದುಬ್ಬರ ಪ್ರಮಾಣವು ನಂತರದ ತಿಂಗಳುಗಳಲ್ಲಿ ನಿಯಂತ್ರಣಕ್ಕೆ ಸಿಗುತ್ತಿಲ್ಲ. ಚಿಲ್ಲರೆ ಹಣದುಬ್ಬರ ದರವನ್ನು ಶೇ 4ಕ್ಕೆ ಮಿತಿಗೊಳಿಸಬೇಕು ಎನ್ನುವುದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿ ಮಾಡಿಕೊಂಡಿರುವ ಗುರಿ. ಇದು ಗರಿಷ್ಠ ಶೇ 6ಕ್ಕೆ ತಲುಪಲು ಅವಕಾಶವಿದೆ. ಅದಕ್ಕಿಂತ ಹೆಚ್ಚಿನ ಮಟ್ಟಕ್ಕೆ ಹಣದುಬ್ಬರ ಹೋಗಬಾರದು. ಆದರೆ, ಈ ವರ್ಷದ ಜನವರಿ, ಫೆಬ್ರುವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ಹಣದುಬ್ಬರ ಪ್ರಮಾಣವು ಶೇ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಉಳಿದುಕೊಂಡಿದೆ. ಸತತ ಮೂರು ತಿಂಗಳುಗಳಿಂದ ಹಣದುಬ್ಬರ ಮಿತಿಯನ್ನು ಮೀರಿ ಬೆಳೆದು ನಿಂತಿರುವುದು, ಆರ್ಥಿಕವಾಗಿ ದುರ್ಬಲರಾಗಿರುವವರ ಪಾಲಿಗೆ ಕಷ್ಟಗಳನ್ನು ದುಪ್ಪಟ್ಟುಗೊಳಿಸಿದಂತೆ ಆಗಿದೆ. ಲಾಕ್‌ಡೌನ್ ಜಾರಿಗೆ ಬಂದ ನಂತರದಲ್ಲಿ ದೇಶದಲ್ಲಿ ಅಗತ್ಯ ವಸ್ತುಗಳ ಬೆಲೆಯು ಹಲವು ಕಾರಣಗಳಿಂದಾಗಿ ಹೆಚ್ಚಳ ಕಂಡಿದೆ. ಪೂರೈಕೆ ವ್ಯವಸ್ಥೆಗೆ ಬಿದ್ದ ಏಟಿನಿಂದಾಗಿ, ಕಾರ್ಮಿಕರ ಕೊರತೆಯಿಂದಾಗಿ, ವ್ಯವಸ್ಥೆಯಲ್ಲಿ ಹೆಚ್ಚಿನ ನಗದು ಹರಿವಿನಿಂದಾಗಿ ಹಣದುಬ್ಬರ ಹೆಚ್ಚಳ ಕಂಡಿದೆ. ಈಗ ರಷ್ಯಾ–ಉಕ್ರೇನ್ ಯುದ್ಧದ ಪರಿಣಾಮಗಳಿಂದಾಗಿಯೂ ಹಣದುಬ್ಬರವು ಏರಿಕೆ ಆಗುತ್ತಿದೆ.

ತೈಲೋತ್ಪನ್ನಗಳ ಮೇಲಿನ ಸುಂಕ, ತೆರಿಗೆ ತಗ್ಗಿಸಿ ಜನಸಾಮಾನ್ಯರ ಮೇಲಿನ ಹೊರೆಯನ್ನು ಇಳಿಸಲು ಸರ್ಕಾರಗಳು ಗಮನ ನೀಡಬೇಕು

ಎರಡು ವರ್ಷಗಳ ಅವಧಿಯಲ್ಲಿ ಹಣದುಬ್ಬರ ನಿಯಂತ್ರಣಕ್ಕೆ ಆರ್‌ಬಿಐ ಹೆಚ್ಚಿನ ಆದ್ಯತೆ ನೀಡಲಿಲ್ಲ. ಅದರ ಬದಲಿಗೆ, ವ್ಯವಸ್ಥೆಯಲ್ಲಿ ನಗದು ಲಭ್ಯತೆ ಹೆಚ್ಚಿಸಿ, ಆರ್ಥಿಕ ಪುನಶ್ಚೇತನಕ್ಕೆ ಅದು ಜಾಸ್ತಿ ಗಮನ ನೀಡಿತು. ಇದರ ಪರಿಣಾಮವಾಗಿ ಸಾಲವು ಕಡಿಮೆ ಬಡ್ಡಿಗೆ ದೊರೆಯುವಂತಾದರೂ ಹಣದುಬ್ಬರ ಹೆಚ್ಚಳಕ್ಕೆ ಇದು ಕೂಡ ಕಾರಣವಾಗಿದೆ. ಆದರೆ ಇನ್ನು ಮುಂದೆ ಹಣದುಬ್ಬರ ನಿಯಂತ್ರಣಕ್ಕೆ ಆದ್ಯತೆ ನೀಡಲಾಗುತ್ತದೆ ಎಂಬ ಮಾತನ್ನು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಈಚೆಗೆ ನಡೆದ ಹಣಕಾಸು ನೀತಿ ಸಮಿತಿಯ ಸಭೆಯ ನಂತರ ಹೇಳಿದ್ದಾರೆ. ಈ ಮಾತು ಸ್ವಾಗತಾರ್ಹ. ಆದರೆ ಈ ಕೆಲಸವನ್ನು ಆರ್‌ಬಿಐ ಮೊದಲೇ ಮಾಡಬೇಕಿತ್ತು. ಹಣದುಬ್ಬರ ಪ್ರಮಾಣ ಇನ್ನಷ್ಟು ಹೆಚ್ಚಾಗಲು ಅವಕಾಶ ನೀಡಿದರೆ, ಮಾರುಕಟ್ಟೆಯಲ್ಲಿ ಈಗ ಕಾಣಿಸುತ್ತಿರುವ ಆರ್ಥಿಕ ಚಟುವಟಿಕೆಗಳ ಚೇತರಿಕೆಯು ಮಂಕಾಗುತ್ತದೆ. ಬೇಡಿಕೆ ಕಡಿಮೆ ಆಗಿ, ಆರ್ಥಿಕ ಪುನಶ್ಚೇತನದ ಆರ್‌ಬಿಐ ಉದ್ದೇಶ ಅಡಿಮೇಲಾಗುತ್ತದೆ. ಹಣದುಬ್ಬರದ ಪ್ರಮಾಣವು ಇನ್ನಷ್ಟು ಹೆಚ್ಚಳ ಕಾಣುವ ಸಾಧ್ಯತೆಗಳೇ ಜಾಸ್ತಿ ಇವೆ. ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚಳವನ್ನು ಮಾರ್ಚ್ 21ರ ನಂತರದಲ್ಲಿ ಪುನರಾರಂಭಿಸಿದವು. ಅಲ್ಲಿಂದ ಇದುವರೆಗೆ ಡೀಸೆಲ್ ಮತ್ತು ಪೆಟ್ರೋಲ್ ಬೆಲೆಯು ತಲಾ ₹ 10ರಷ್ಟು ಹೆಚ್ಚಾಗಿದೆ. ಇದರಿಂದಾಗಿ ಹಣದುಬ್ಬರದ ಮೇಲೆ ಆಗಿರುವ ಪರಿಣಾಮಗಳು ಏಪ್ರಿಲ್ ತಿಂಗಳ ಅಂಕಿ-ಅಂಶಗಳಲ್ಲಿ ಗೊತ್ತಾಗುತ್ತವೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಈಗಿರುವ ಮಟ್ಟದಲ್ಲೇ ಉಳಿದರೆ ಅಥವಾ ಇನ್ನಷ್ಟು ಜಾಸ್ತಿ ಆದರೆ ಹಣದುಬ್ಬರ ಪ್ರಮಾಣವು ಹೆಚ್ಚಾಗುವ ಸಾಧ್ಯತೆ ಇಲ್ಲದಿಲ್ಲ. ಹೀಗಾಗಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆದ್ಯತೆ ಮೇಲೆ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ಹಾಗೂ ಮೌಲ್ಯವರ್ಧಿತ ತೆರಿಗೆ ಪ್ರಮಾಣ ತಗ್ಗಿಸಬೇಕು. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ಸಂಗ್ರಹ ಆಗುತ್ತಿರುವ ವರಮಾನವು ದೊಡ್ಡ ಮಟ್ಟದಲ್ಲಿ ಇರುವ ಕಾರಣ, ಸರ್ಕಾರಗಳು ತೈಲೋತ್ಪನ್ನಗಳ ಮೇಲಿನ ಸುಂಕ, ತೆರಿಗೆ ತಗ್ಗಿಸಿ ಜನಸಾಮಾನ್ಯರ ಮೇಲಿನ ಹೊರೆಯನ್ನು ಇಳಿಸುವತ್ತ ಗಮನ ನೀಡಬೇಕು.

ದ್ವೇಷ ಎಂಬ ಅಗ್ನಿಯು ಹಬ್ಬುತ್ತಾ ತನ್ನ ಮನೆಯನ್ನೇ ಸುಡುತ್ತದೆ ಎಂಬ ಅರಿವು ನಾಶವಾಗದಿರಲಿ

ಒಳ್ಳೆಯ ಸುದ್ದಿಗಾಗಿ ಕಾತರಿಸಿದೆ ಮನ

ವಿಶ್ಲೇಷಣೆ

ಸಬಿತಾ ಬನ್ನಾಡಿ

‘ಅರಗಿನ ಅರಮನೆಗೆ ಹಾಕಿದ ಬೆಂಕಿಯು ಬೀಜವಾಗಿ, ವಿಷದ ಲಡ್ಡುಗೆಯನ್ನು ತಿನ್ನಿಸಿದ್ದು ಮೊಳಕೆಯಾಗಿ, ಕಪಟ ಜೂಜಿನಲ್ಲಿ ಚಿಗುರಾಗಿ, ದ್ರೌಪದಿಯ ಸೀರೆ ಸೆಳೆದಾಗ ಹೂವಾಗಿ ವೈರವೆಂಬುದು ಬೆಳೆದು ಇಂದು ಮರವಾಗಿರುವಾಗ ಮುಂದೆ ಅದು ಕೌರವನ ಕಿರೀಟವನ್ನು ಪುಡಿಯಾಗಿಸುವ ಮತ್ತು ತೊಡೆಗಳನ್ನು ಮುರಿಯುವ ಫಲಗಳನ್ನು ಕೊಡದೆ ಇರುತ್ತದೆಯೇ? ವಿಷವೃಕ್ಷವು ವಿಷದ ಹಣ್ಣನ್ನೇ ಬಿಡುತ್ತದೆಯಲ್ಲವೇ’ ಇದು ರನ್ನನ ಗದಾಯುದ್ಧದಲ್ಲಿ ಬರುವ ಭೀಷ್ಮರ ಮಾತು. ಯುದ್ಧ ಬಿಟ್ಟು ಸಂಧಿ ಮಾಡಿಕೊಳ್ಳಲು ಹೇಳಿದಾಗ ಆತ ಒಪ್ಪದೇ ಹೋದಾಗ ಅವರು ಮನಸ್ಸಿನಲ್ಲೇ ಅಂದುಕೊಳ್ಳುವ ಮಾತು. ಸ್ವತಃ ಅವರೇ ಇದೇ ಕೌರವನ ಪಡೆಯಲ್ಲಿ ಸೇನಾಧಿಕಾರಿಯಾಗಿ ಯುದ್ಧ ಮಾಡಿ ಪಾಂಡವ ಪಡೆಯ ಸಾವಿರಾರು ಜನರ ಹತ್ಯೆ ನಡೆಸಿದ ನಂತರದಲ್ಲಿ ಶರಶಯ್ಯೆಯಲ್ಲಿರುವಾಗ ಹೀಗೆ ಅಂದುಕೊಳ್ಳುತ್ತಾರೆ.

ಅಜ್ಜನಾಗಿ ಮೊಮ್ಮಕ್ಕಳನ್ನು ತಡೆಯಲು ಇವರಿಗೆ ಸಾಧ್ಯವಾಗದೇ ಹೋದ ದುರಂತವೇ ಇದು? ಅಥವಾ ಈ ಮಾತನ್ನು ಓದುಗರ ವಿವೇಕ ಹೆಚ್ಚಿಸಲು ಕವಿ ಬರೆದಿರುವುದೇ? ಕವಿಗಳ ಈ ಮಾತು ಕೇಳಿಸಿಕೊಳ್ಳುವ ಕಿವಿಗಳು ಇವೆಯೇ? ಇರಲಿ, ಬಿಡಲಿ, ಮಾನವತೆಯನ್ನು ಎದೆಯಲ್ಲಿ ಹೊತ್ತವರು ಹೇಳುವುದನ್ನು ಎಂದಿಗೂ ಬಿಡಲಾರರು. ಅದು ತಮ್ಮ ಲಾಭಕ್ಕಾಗಿ ಅಲ್ಲ, ಲೋಕದ ಒಳಿತಿಗಾಗಿ. ಕೌರವನೆಂಬ ರಾಜನಿಗೆ ಭೀಷ್ಮ, ದ್ರೋಣರೆಂಬ ಹಿರಿಯರೂ ಗುರುಗಳೂ ತಕ್ಕ ಸಮಯದಲ್ಲಿ ಇಂತಹ ಮಾತನ್ನು ಹೇಳಲು ಹೆದರಿದರೇ? ಅದಕ್ಕಾಗಿ ಯುದ್ಧ ನಡೆದು ಲಕ್ಷಾಂತರ ಸೈನಿಕರು ಸಾಯುವಂತಾಯಿತೇ? ಯುದ್ಧ ಬೇಡ ಎಂದ ಕೃಷ್ಣನ ಮಾತನ್ನೇ ಆತ ಕೇಳದೇ ಹೋದ ನಿಜ. ಆದರೆ ಇವರೆಲ್ಲರೂ ಯಾಕೆ ಅವನನ್ನೇ ಬೆಂಬಲಿಸಿದರು? ಬಹುಸಂಖ್ಯಾತರ ಬೆಂಬಲ ಇದ್ದದ್ದು ಕೌರವನಿಗೇ ವಿನಾ ಪಾಂಡವರಿಗಲ್ಲ. ಎಲ್ಲ ದುರಂತಗಳಾಚೆಗೆ ಗೆಲುವು ಸಿಕ್ಕಿದ್ದು ಪಾಂಡವರಿಗೇ ವಿನಾ ಕೌರವರಿಗಲ್ಲ. ಇದೇ ಸಂಕಟ. ನಡುವಿನ ದುರಂತಗಳೆಲ್ಲವೂ ಕೌರವನಂತಹ ಆಳುವವರ ಅವಿವೇಕದಿಂದ ನಡೆದುಹೋಗುತ್ತವೆ.

ನಮ್ಮ ಸುತ್ತಲಿನ ಕೆಲವು ಘಟನೆಗಳು, ಮಾತುಗಳು ಇಂತಹ ವೈರದ ಬೀಜವನ್ನು ಬಿತ್ತುತ್ತಿವೆ. ಸನ್ಯಾಸಿಯೆಂದು ಕಾವಿ ತೊಟ್ಟಿರುವವರೊಬ್ಬರಿಂದ ತಮ್ಮ ಧರ್ಮದ ಹೆಣ್ಣು-ಮಕ್ಕಳಿಗೆ ಕೀಟಲೆ ಮಾಡಿದರೆ ಅನ್ಯ ಧರ್ಮದ ಮಗಳು, ಸೊಸೆಯಂದಿರನ್ನು ತಾನೇ ಅತ್ಯಾಚಾರ ಮಾಡುವುದಾಗಿ ಹೇಳಿಕೆ ಬಂದಿದೆ. ಕೀಟಲೆ ಯಾರು ಮಾಡಿದರೂ ಶಿಕ್ಷೆಗೆ ಗುರಿಯಾಗುವುದಾಗಿ ಹೇಳಲಿ. ಆದರೆ ಇದೆಂಥ ಮಾತು? ಇದರರ್ಥ ಏನು? ತನ್ನದೇ ಧರ್ಮದವರು ಕೀಟಲೆ ಮಾಡಿದರೆ ಸರಿಯೇ? ಒಬ್ಬ ಸನ್ಯಾಸಿಯೆನಿಸಿಕೊಂಡವನು ತಾನೇ ಅತ್ಯಾಚಾರ ಮಾಡುವುದಾಗಿ ಹೇಳುವುದು ತನ್ನದೇ ಧರ್ಮಕ್ಕೆ ಮಾಡುವ ಅವಮಾನ ಅಲ್ಲವೇ? ದ್ವೇಷ, ಅಸೂಯೆಗಳನ್ನು ನೀರು, ಗೊಬ್ಬರ ಹಾಕಿ ಬೆಳೆಸಿದರೆ ಮತ್ತು ಹಾಗೆ ಬೆಳೆಸುತ್ತಿರುವುದನ್ನು ನೋಡಿಯೂ ತಮಗೆ ಅದರೊಳಗೇ ಒಂದು ಹುದ್ದೆಯೋ ಅನುಕೂಲವೋ ಇದ್ದರೆ ಸಾಕು ಬಿಡು ಎಂದುಕೊಂಡು ಆ ಆಡಳಿತದ ಭಾಗವಾದವರು ಮೌನವಾಗಿದ್ದರೆ ಅದರ ಪರಿಣಾಮ ಏನಾಗಬಹುದು ಎನ್ನುವುದಕ್ಕೆ ದ್ರೌಪದಿಯ ಪ್ರಸಂಗಕ್ಕಿಂತ ದೊಡ್ಡ ಪಾಠ ಯಾವುದೂ ಇಲ್ಲ. ಇದು ನಮ್ಮೊಳಗನ್ನು ಸದಾ ಎಚ್ಚರವಾಗಿಡಬೇಕು. ಆಕೆ ಸ್ವತಃ ತಮಗೆ ಸೊಸೆಯಾಗಿರುವವಳು ಎಂಬುದೂ ಈ ದ್ವೇಷಕ್ಕೆ ಮುಖ್ಯವಾಗುವುದೇ ಇಲ್ಲ. ಕಣ್ಣಿಲ್ಲದ ಧೃತರಾಷ್ಟ್ರ ಮತ್ತು ಕಣ್ಣಿಗೆ ಪಟ್ಟಿ ಕಟ್ಟಿಕೊಂಡು ಕುರುಡಾದ ಗಾಂಧಾರಿ ಇಡೀ ವ್ಯವಸ್ಥೆಯ ರೂಪಕಗಳು. ಕಣ್ಣಿಲ್ಲದವರ ಸಾಮ್ರಾಜ್ಯದಲ್ಲಿ ಕೆಲವರು ಹೀಗೆ ಪಟ್ಟಿ ಕಟ್ಟಿಕೊಂಡು ಕೃತಕ ಕುರುಡಿನಲ್ಲಿ ಸುಖವನ್ನು ಹುಡುಕುತ್ತಾರೆ. ಕಣ್ಣಿರುವವರು ಪಾಪಿಗಳೆನಿಸಿಕೊಳ್ಳುತ್ತಾರೆ. ಕಾಶ್ಮೀರದ ಪಂಡಿತರು ಮತ್ತು ಕಾಶ್ಮೀರದ ಅಸಂಖ್ಯಾತ ಇತರ ಜಾತಿ, ಧರ್ಮದವರು, ಭಾರತವನ್ನು ಬೆಂಬಲಿಸುವ ಮುಸ್ಲಿಮರುಗಳೆಲ್ಲಾ ಮೂಲಭೂತವಾದಿ ಮತ್ತು ಪ್ರತ್ಯೇಕತಾವಾದಿಗಳ ಅಟ್ಟಹಾಸಕ್ಕೆ ಬಲಿಯಾದರು. ಇಲ್ಲಿ ಅನ್ಯ ದೇಶ ಮತ್ತು ಅಲ್ಲಿನ ಇಸ್ಲಾಂ ಭಯೋತ್ಪಾದಕರ ಅಮಾನವೀಯ ಆಕ್ರಮಣ ಇದೆ. ಆದರೆ, ಇನ್ನೊಂದೆಡೆ ನಮ್ಮದೇ ಖೈರ್ಲಾಂಜಿ ಮತ್ತು ಇಂತಹುದೇ ಅಸಂಖ್ಯ ಪ್ರಕರಣಗಳಲ್ಲಿ ದೇಶೀಯರೇ, ತಮ್ಮ ಧರ್ಮದವರೇ ಆಗಿದ್ದರೂ ಅವರ ಮೇಲೆ ಇಂತಹದೇ ಅಟ್ಟಹಾಸ ಮೆರೆಯುವುದು ಏನನ್ನು ಸೂಚಿಸುತ್ತದೆ? ಖೈರ್ಲಾಂಜಿಯ ದಲಿತ ಹೆಣ್ಣುಮಕ್ಕಳನ್ನು ಬೆತ್ತಲೆ ಮೆರವಣಿಗೆ ಮಾಡಿಸಿದ್ದು ದ್ವೇಷದ ಪರಾಕಾಷ್ಠೆಯು ಮುಟ್ಟುವ ಅಧಃಪತನವಲ್ಲವೇ?

ಇತ್ತೀಚೆಗೆ ದಕ್ಷಿಣ ಕನ್ನಡದ ಭೂತಕೋಲವೊಂದನ್ನು ನೋಡಲು ಹೋಗಿದ್ದ ಮಲೆನಾಡಿನ ಹುಡುಗನಿಗೆ ಆದ ಅನುಭವವೊಂದನ್ನು ಹೇಳಬಯಸುತ್ತೇನೆ. ಅಲ್ಲಿ ಊಟಕ್ಕೆಂದು ಸಿದ್ಧತೆ ನಡೆಯುವಾಗ ಒಂದಿಷ್ಟು ಹುಡುಗರು ಬಹುಶ್ರಮ ವಹಿಸಿ ಹೊರಗಿನ ಕೆಲಸ ಮಾಡುತ್ತಿದ್ದರು. ಅವರಲ್ಲಿ ಒಬ್ಬ ನೀರು ಕುಡಿಯಲೆಂದು ಮುಂದುಗಡೆ ಇದ್ದ ನೀರಿನ ಪಾತ್ರೆಯನ್ನು ಬಳಸಲು ಬಂದ. ಆಗ ಅಲ್ಲಿಗೆ ಬಂದ ಮರಿ ನಾಯಕನೊಬ್ಬ, ‘ಏನು ನೀನು ಇಲ್ಲೆಲ್ಲಾ ಬರುವುದಾ?’ ಎಂದು ಝುಂಕಿಸಿದ. ಈತ ತಡವರಿಸುತ್ತಾ ಏನೋ ಅಂದ. ಇವನೂ ಕೇಸರಿ ಶಾಲೇ ಹಾಕಿದ್ದ. ಆದರಿವನು ತಳಜಾತಿಯವನಾಗಿದ್ದ. ತಳಜಾತಿಯವನು ಎಷ್ಟೇ ಮೇಲಕ್ಕೆ ಚಲಿಸಿದರೂ ಅವರ ಅಧೀನದಲ್ಲೇ ಇರಬೇಕು. ವಿರೋಧಿಸಿದಾಗಲೇ ಬಿಸಿ ಮುಟ್ಟುವುದು. ಇಂದು ಅನ್ಯಧರ್ಮೀಯರ ಮೇಲೆ ನಡೆಯುವುದು ಅಲ್ಲಿನ ಟಾರ್ಗೆಟ್ ಮುಗಿದ ಮೇಲೆ ಎಲ್ಲಿಗೆ ಹೋಗುತ್ತದೆ ಎಂಬುದಕ್ಕೆ ಇದಕ್ಕಿಂತ ಬೇರೆ ಸೂಚನೆ ಬೇಕಿಲ್ಲ. ಆದರೆ ಇಂದು ಅವರ ಟಾರ್ಗೆಟ್ ಮುಗಿಸಲು ಇವರೆಲ್ಲಾ ಅಸ್ತ್ರಗಳಾಗಿ ಬಹಳ ಸಂತೋಷದಿಂದ, ಉನ್ಮಾದದಿಂದ ಕೆಲಸ ಮಾಡುತ್ತಿದ್ದಾರೆ. ಈ ಉನ್ಮಾದಕ್ಕೆ ಮಹಿಳೆಯರೂ ಸಿಲುಕಿದ್ದಾರೆ. ಮರಿ ನಾಯಕರಾಗಿದ್ದವರು ಇವರಿಂದಾಗಿ ಮುಂದೆ ದೊಡ್ಡ ನಾಯಕರಾಗುತ್ತಾರೆ. ಅದಕ್ಕಾಗಿಯೇ ಈ ವಿಭಜನೆಗಳನ್ನು ಪೋಷಿಸುತ್ತಲೇ ಇರುತ್ತಾರೆ. ನಮ್ಮ ಸುತ್ತಲೂ ಇದುವರೆಗೂ ‘ಸಭ್ಯ’ರಂತೆ ಮುಖವಾಡ ತೊಟ್ಟವರನೇಕರು ಇಂದು ತಮ್ಮ ನಿಜಮುಖಗಳನ್ನು ತೋರಿಸತೊಡಗಿದ್ದಾರೆ. ಮರಿ ನಾಯಕರಾಗುವ ಅತುಲ ಉತ್ಸಾಹದಲ್ಲಿದ್ದಾರೆ.

ಜಗತ್ತನ್ನು ಕಾಡುತ್ತಲೇ ಇರಬೇಕಾದ ಹಿಟ್ಲರ್‌ತನವನ್ನು ಆಗಾಗ ಎಚ್ಚರಿಸುವ ಕೆಲಸವನ್ನು ಎಲ್ಲ ಪ್ರಾಜ್ಞರೂ ಮಾಡುತ್ತಲೇ ಬಂದಿದ್ದಾರೆ. ಹಾಗೆ ಹೇಳಿದಾಗ, ‘ನೀವೆಲ್ಲಾ ಇಲ್ಲದೇ ಇರುವುದನ್ನು ಹೇಳುತ್ತಿದ್ದೀರಿ’ ಎನ್ನುವವರೇ ಈಗ ನಡೆಯುತ್ತಿರುವುದೇನು? ಯಹೂದಿಗಳನ್ನು ಪ್ರತ್ಯೇಕಿಸಿದಂತೆಯೇ ಇಂದು ನಮ್ಮ ಕರ್ನಾಟಕದಲ್ಲಿ ಮುಸ್ಲಿಮರ ಹೊಟ್ಟೆಪಾಡುಗಳ ಮೇಲೆ ಆಕ್ರಮಣ ಮಾಡುತ್ತಿರುವುದು ಯಾವುದರ ಸೂಚನೆ? ನಾವಿಲ್ಲಿ ಆಂತರಿಕವಾಗಿ ಘರ್ಷಣೆಗೆ ತೊಡಗುವುದು ಬಾಹ್ಯರು ತಲೆತೂರಿಸಲು ಅವಕಾಶ ಮಾಡಿಕೊಡುವುದಿಲ್ಲವೇ? ನಾವು ಸಬಲ ಭಾರತವನ್ನು ಕಟ್ಟಬೇಕಾಗಿದೆಯಲ್ಲವೇ? ನಮಗೆ ಮಾದರಿಗಳು ಯಾರು? ಕೊಳಕು ಭಯೋತ್ಪಾದಕರೇ? ಅವರದೇ ದಾರಿಗಳನ್ನು ನಾವು ಅನುಸರಿಸಬೇಕಾಗಿದೆಯೇ? ನಮ್ಮದೇ ದೇಶದಲ್ಲಿ ಹಿಂದೆ ಎಷ್ಟೆಲ್ಲಾ ಒಳ್ಳೆಯ ಮಾರ್ಗಗಳು ಆವಿಷ್ಕಾರ-ಗೊಂಡಿದ್ದುವಲ್ಲ? ಅದೆಲ್ಲ ಬಿಟ್ಟು ಹಿಟ್ಲರ್ ಮಾದರಿಯ ಹಿಂದೇಕೆ ಹೋಗುತ್ತಿದ್ದೇವೆ? ಹಿಟ್ಲರ್‌ನ ನೆನಪನ್ನು ಹಿಂದಿಕ್ಕಿ, ಸಿರಿಯಾದ ನಿರಾಶ್ರಿತರಿಗೆ ಆಶ್ರಯ ಕೊಟ್ಟೂ, ಕೋವಿಡ್ ಕಾಲದಲ್ಲೂ ಆರ್ಥಿಕ ಸ್ಥಿರತೆ ಹೊಂದಿ ಜನಾಂಗ ದ್ವೇಷವಿಲ್ಲದೆ ಹದಿನಾರು ವರ್ಷ ಆಡಳಿತ ಮಾಡಿ ತಾನೇ ಅಧಿಕಾರವನ್ನು ತ್ಯಜಿಸಿದ ಏಂಜೆಲಾ ಮರ್ಕೆಲ್‌ರಂತಹ-ವರು ಕಟ್ಟಿದ ಜರ್ಮನಿ ನಮಗಿಂದು ನೆನಪಾಗಬೇಕು. ಸಂತೃಪ್ತ, ಸುಶಿಕ್ಷಿತ, ಮಾನವತೆಯ ಆಗರವಾದ, ವಿಷಮುಕ್ತ ಪರಿಸರ ಮತ್ತು ಆಹಾರವನ್ನು ನೀಡುವ ಜಗತ್ತಿನ ಅಪರೂಪದ ದೇಶ ಭಾರತವಾಗಿದೆ ಎಂಬ ಒಳ್ಳೆಯ ಸುದ್ದಿಯೊಂದನ್ನು ಕೇಳುವ ಕಾತರದಲ್ಲಿ ನನ್ನ ಕಿವಿಗಳಿವೆ. ಈ ಸುದ್ದಿ ನೀಡಲು ಕಾರಣರಾಗುವವರು ಯಾರೇ ಆದರೂ ಅವರಿಗೊಂದು ಸೆಲ್ಯೂಟ್ ಅನ್ನು ಈಗಲೇ ಹೇಳುವೆ.



ಕೃಷ್ಣ, ತನ್ನ ಧರ್ಮದಲ್ಲಿದ್ದೇ ಪಾಪದ ಕೆಲಸ ಮಾಡಿದ ಕೌರವನಿಗೆ ಬುದ್ಧಿಮಾತು ಹೇಳಿದಾಗ, ಆತ ‘ದನ ಕಾಯುವ ಜಾತಿಯವನು’, ‘ಈಗಷ್ಟೇ ದಾಸಿಯ ಮನೆಯ (ವಿದುರ) ಕೂಳು ತಿಂದು ಬಂದವನು’ ಎಂದು ಟ್ರೋಲ್ ಮಾಡುತ್ತಾನೆ! ಇಂದು ಬುದ್ಧಿಜೀವಿಗಳೂ ಹೀಗೇ ಅನ್ನಿಸಿಕೊಳ್ಳಬೇಕಾದ ಕಾಲದಲ್ಲಿದ್ದಾರೆ!

ಚುರುಮುರಿ



ಮೌನ ಸಂದರ್ಶನ!

• ಬಿ.ಎನ್.ಮಲ್ಲೇಶ್

ಪತ್ರಕರ್ತ ತೆಪರೇಸಿಗೆ ಕಚೇರಿಯಿಂದ ತುರ್ತು ಬುಲಾವ್ ಬಂತು. ‘ನೋಡ್ರಿ, ಆ ಗುತ್ತಿಗೆದಾರನ ಆತ್ಮಹತ್ಯೆ ಬಗ್ಗೆ ಮುಖ್ಯಮಂತ್ರಿ ರಿಯಾಕ್ಷನ್ ಬೇಕು, ಫಟ್ ಅಂತ ಹೋಗಿ ತಗಂಬನ್ನಿ...’ ಸಂಪಾದಕರು ಆದೇಶಿಸಿದರು.

ತೆಪರೇಸಿ ತಲೆ ಕೆರೆದುಕೊಂಡು ನಿಂತುಕೊಂಡ. ‘ಸರ್, ಅವರು ಜಾಸ್ತಿ ಮಾತೇ ಆಡಲ್ಲ, ಏನ್ ಪ್ರಶ್ನೆ ಕೇಳಿದ್ರೂ ಸುಮ್ನೆ ಇರ್ತಾರೆ. ಮೌನಿ ಅಂತ ವಿರೋಧ ಪಕ್ಷದೋರು ಟೀಕೆ ಮಾಡ್ತಿರೋದು ನಿಮಗೂ ಗೊತ್ತಲ್ಲ. ಆದ್ರೂ ಟ್ರೈ ಮಾಡ್ತೀನಿ’ ಎಂದ.

ಮುಖ್ಯಮಂತ್ರಿ ಮನೆ ಬಳಿ ಆಗ್ಲೇ ಹತ್ತಾರು ಪತ್ರಕರ್ತರು ಅವರ ಸಂದರ್ಶನಕ್ಕೆ ಮುಗಿ-ಬಿದ್ದಿದ್ದರು. ‘ಸರ್, ಗುತ್ತಿಗೆದಾರನ ಆತ್ಮಹತ್ಯೆ ಪ್ರಕರಣದಲ್ಲಿ ಸಚಿವರು ಈಗಾಗ್ಲೆ ರಾಜೀನಾಮೆ ಘೋಷಿಸಿದ್ದಾರೆ... ಅವರು ಈ ಆರೋಪದಿಂದ ಮುಕ್ತರಾಗ್ತಾರಾ ಸರ್?’

ಮುಖ್ಯಮಂತ್ರಿ ಆಕಾಶ ನೋಡಿದರು. ಅಲ್ಲಿ ಅವರಿಗೆ ಏನು ಕಾಣಿಸಿತೋ... ತೆಪರೇಸಿಗಂತೂ ಏನೂ ಕಾಣಲಿಲ್ಲ.

‘ಸರ್, ನಲವತ್ತು ಪರ್ಸೆಂಟ್ ಕಮಿಷನ್ನೇ ಇದಕ್ಕೆ ಕಾರಣ ಅಂತ ವಿರೋಧ ಪಕ್ಷದೋರು ಹೇಳ್ತಿದಾರಲ್ಲ’.

ಮುಖ್ಯಮಂತ್ರಿ ಕೈ ಮುಗಿದು ತಲೆ ಅಲ್ಲಾಡಿಸಿದರು. ಕೈ ಮುಗಿದಿದ್ಯಾಕೆ, ತಲೆ ಅಲ್ಲಾಡಿಸಿದ್ಯಾಕೆ... ತೆಪರೇಸಿಗೆ ಅರ್ಥವಾಗಲಿಲ್ಲ.

‘ಸರ್, ರಾಜ್ಯದಲ್ಲಿ ಸರ್ಕಾರವೇ ಇಲ್ಲ ಅಂತಿದಾರೆ?’

ಮುಖ್ಯಮಂತ್ರಿ ಕಣ್ಣು ಕಿರಿದುಗೊಳಿಸಿ ಪ್ರಶ್ನೆ ಕೇಳಿದವನನ್ನು ನೋಡಿದರು. ಅವರಿಗೆ ಸಿಟ್ಟು ಬಂದಿದೆ ಎಂದು ತೆಪರೇಸಿಗೆ ಗೊತ್ತಾಯಿತು.

‘ಸರ್, ಸಂಪುಟ ವಿಸ್ತರಣೆ ಯಾವಾಗ?’

ಮುಖ್ಯಮಂತ್ರಿ ಮುಗುಳ್ನಕ್ಕರು. ಏನಿದರ ಅರ್ಥ? ಆಗುತ್ತೆ ಅಂತಾನೋ ಆದಂಗೆ ಅಂತಾನೋ? ತೆಪರೇಸಿ ತಲೆ ಕೆರೆದುಕೊಂಡ.

‘ಸರ್, ವಿರೋಧ ಪಕ್ಷದೋರು ಸರ್ಕಾರದ ವಿರುದ್ಧ ಭಾರಿ ಹೋರಾಟ ಮಾಡ್ತಾರಂತೆ’.

ಮುಖ್ಯಮಂತ್ರಿ ಹುಬ್ಬುಗಂಟಿಕ್ಕಿ ಹೊರಡ ಲೆತ್ನಿಸಿದರು. ಆಗ ತೆಪರೇಸಿ ‘ಸರ್, ಕೊನೇ ಪ್ರಶ್ನೆ, ನಿಮ್ಮ ಮಂಡಿ ನೋವು ಹೇಗಿದೆ?’ ಎಂದ.

ಮುಖ್ಯಮಂತ್ರಿ ನಿಂತರು, ಮಾತಾಡಿದರು ‘ಹೈಕಮಾಂಡ್ ನಾಯಕತ್ವ ಬದಲಾವಣೆ ಇಲ್ಲ ಎಂದಿದೆ’ ಎಂದರು!

ದಿನದ ಟ್ವೀಟ್

ಭಾಷೆ ಹೇಗೆ ಮುಖ್ಯವಾಗುತ್ತದೆ?

ಐಟಿಐ ಪದವೀಧರರಿಗೆ ಮೂಡುಬಿದಿರೆ ಸಮೀಪದ ವೇಣೂರಿನಲ್ಲಿ ಇತ್ತೀಚೆಗೆ ಕ್ಯಾಂಪಸ್ ಸಂದರ್ಶನ ನಡೆಯಿತು. ಪ್ರಶ್ನೆಗಳನ್ನು ಹಿಂದಿಯಲ್ಲಿ ಕೇಳಲಾಯಿತು ಮತ್ತು ಹಿಂದಿ ಗೊತ್ತಿಲ್ಲದೇ ಇದ್ದವರನ್ನು ತಿರಸ್ಕರಿಸಲಾಯಿತು ಎಂದು ತಿಳಿದುಬಂದಿದೆ. ತಂತ್ರಜ್ಞಾನ ಆಧಾರಿತ ಉದ್ಯೋಗಕ್ಕೆ ಹಿಂದಿ ಹೇಗೆ ಮುಖ್ಯವಾಗುತ್ತದೆ ಎಂಬ ಪ್ರಶ್ನೆ ಇದೆ.

ಡಾ. ಅರುಣ್ ಮಾವಜಿ, ಉದ್ಯೋಗಿ, ಆರೋಗ್ಯಸೇವಾ ಕ್ಷೇತ್ರ

ಕಿಡಿನುಡಿ



ರಾಜೀನಾಮೆ ಎನ್ನುವುದು ಗೌರವಯುತ ಪದ. ಲಾಲ್‌ಬಹದ್ದೂರ್ ಶಾಸ್ತ್ರಿ ಕೂಡ ರಾಜೀನಾಮೆ ನೀಡಿದ್ದರು. ಮದ್ಯಪಾನ ನಿಷೇಧ ರದ್ದತಿ ವಿರೋಧಿಸಿ ಯಶೋಧರಾ ದಾಸಪ್ಪನವರೂ ರಾಜೀನಾಮೆ ಕೊಟ್ಟಿದ್ದರು. ಅಷ್ಟು ಗೌರವಯುತ ಪದವನ್ನು ಈಶ್ವರಪ್ಪ ಅವರಿಗೆ ಬಳಸುವುದು ಬೇಡ. ಅವರು ರಾಜೀನಾಮೆ ನೀಡುವುದಲ್ಲ, ವಜಾ ಆಗಬೇಕು.

ಕೆ.ಆರ್.ರಮೇಶ್ ಕುಮಾರ್, ಕಾಂಗ್ರೆಸ್ ಶಾಸಕ

---

25 ವರ್ಷಗಳ ಹಿಂದೆ

ಮಂಗಳವಾರ, 15-4-1997

• **ಮೂಪನಾರ್, ಮುಲಾಯಂ, ಗುಜ್ರಾಲ್...**

ನವದೆಹಲಿ, ಏ. 14 (ಪಿಟಿಐ)– ದೇವೇಗೌಡರು ಪದತ್ಯಾಗ ಮಾಡಲು ನಿರ್ಧರಿಸಿದ ಬಳಿಕ ಸಂಯುಕ್ತ ರಂಗದಲ್ಲಿ ಈಗ ನಾಯಕನ ಸ್ಥಾನಕ್ಕೆ ತೀವ್ರ ಪೈಪೋಟಿ ಆರಂಭವಾಗಿದೆ. ಹೊಸ ಸರ್ಕಾರದ ನೇತೃತ್ವ-ವಹಿಸಲು ಜಿ.ಕೆ. ಮೂಪನಾರ್, ಮುಲಾಯಂ ಸಿಂಗ್ ಯಾದವ್ ಹಾಗೂ ಲಾಲೂ ಪ್ರಸಾದ್ ಯಾದವ್ ಅವರ ಹೆಸರು ಪ್ರಮುಖವಾಗಿ ಚರ್ಚೆಯಲ್ಲಿದೆ.

ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ತಾವು ಪ್ರಧಾನಿ ಸ್ಥಾನಕ್ಕೆ ಸ್ಪರ್ಧಿಯಲ್ಲ ಎಂದು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಗೌಡರ ಸರ್ಕಾರದಲ್ಲಿ ವಿದೇಶಾಂಗ ಸಚಿವರಾಗಿದ್ದ ಜನತಾದಳದ ಐ.ಕೆ. ಗುಜ್ರಾಲ್ ಅವರ ಹೆಸರೂ ಪ್ರಧಾನಿಯ ಸ್ಥಾನಕ್ಕೆ ಕೇಳಿಬರುತ್ತಿದೆ.

• **ಚುನಾವಣೆ ಎದುರಿಸಲು ರಾಜ್ಯ ಸಿದ್ಧ: ಪಟೇಲ್**

ನವದೆಹಲಿ, ಏ. 14– ಮತ್ತೊಮ್ಮೆ ಲೋಕಸಭೆ ಚುನಾವಣೆ ನಡೆಯುವ ಪ್ರಮೇಯಕ್ಕೆ ಕರ್ನಾಟಕ ಸಿದ್ಧವಿದೆ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ಇಲ್ಲಿ ಪ್ರಕಟಿಸಿದರು.

‘ಸಂಯುಕ್ತ ರಂಗವು ಮತ್ತೆ ಕಾಂಗ್ರೆಸ್ ಪಕ್ಷದ ಬೆಂಬಲದಿಂದ ಸರ್ಕಾರ ರಚಿಸಿ ತೇಪೆ ವ್ಯವಸ್ಥೆಯನ್ನು ತರುವ ಬದಲು ಒಂದು ಸುಭದ್ರ ಸರ್ಕಾರಕ್ಕಾಗಿ ಲೋಕಸಭೆಗೆ ಮಧ್ಯಂತರ ಚುನಾವಣೆ ನಡೆಯುವುದು ಅನಿವಾರ್ಯ. ಇದಕ್ಕೆ ಕರ್ನಾಟಕ ಸಿದ್ಧವಾಗಿದೆ’ ಎಂದರು.

50 ವರ್ಷಗಳ ಹಿಂದೆ

ಶನಿವಾರ, 15-4-1972

• **ಲಾಟರಿ ಯೋಜನೆ ಕೂಡಲೇ ರದ್ದುಗೊಳಿಸಬೇಕೆಂದು ವಿಧಾನ ಪರಿಷತ್ತಿನಲ್ಲಿ ಒತ್ತಾಯ**

ಬೆಂಗಳೂರು, ಏ. 14– ಸಮಾಜದ ನೈತಿಕ ಮೌಲ್ಯದ ಅಧಃಪತನಕ್ಕೆ ಕಾರಣವಾಗಿರುವ ಲಾಟರಿ ಯೋಜನೆಯನ್ನು ಕೂಡಲೇ ರದ್ದು-ಗೊಳಿಸಬೇಕೆಂದು ಇಂದು ವಿಧಾನ ಪರಿಷತ್ತಿ-ನಲ್ಲಿ ಮಾತನಾಡಿದ ಬಹುಮಂದಿ ಸದಸ್ಯರು ಸರ್ಕಾರವನ್ನು ಒತ್ತಾಯಪಡಿಸಿದರು.

• **ಅರಸುಗೆ ವೀರೇಂದ್ರರ ಉಡುಗೊರೆ**

ನವದೆಹಲಿ, ಏ. 14– ರಾಜ್ಯದ ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಅವರು ತಮ್ಮ ಉತ್ತರಾಧಿಕಾರಿಯಾದ ಈಗಿನ ಮುಖ್ಯಮಂತ್ರಿ ದೇವರಾಜ ಅರಸು ಅವರಿಗೆ ಒಮೇಗಾ ಕೈಗಡಿಯಾರವೊಂದನ್ನು ಇಂದು ಇಲ್ಲಿನ ಮೈಸೂರು ಭವನದಲ್ಲಿ ಉಡುಗೊರೆ ಇತ್ತರು.

ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿ ನಿವೃತ್ತರಾದಾಗ 1968ರಲ್ಲಿ ಅವರ ಉತ್ತರಾಧಿಕಾರಿಯಾಗಿ ಮುಖ್ಯಮಂತ್ರಿ ಸ್ಥಾನಕ್ಕೆ ಬಂದ ವೀರೇಂದ್ರ ಪಾಟೀಲರಿಗೆ ಈ ಕೈಗಡಿ-ಯಾರವನ್ನು ನಿಜಲಿಂಗಪ್ಪನವರು ಕೊಟ್ಟಿದ್ದರು.

ಪಾಟೀಲರು ಈ ಗಡಿಯಾರವನ್ನು ತಮ್ಮ ಉತ್ತರಾಧಿಕಾರಿಗೆ ನೀಡಬೇಕೆಂಬುದು ನಿಜಲಿಂಗಪ್ಪ ಅವರ ಅಪೇಕ್ಷೆಯಾಗಿತ್ತು.

ಅರಸು ಅವರೂ ಈ ಕೈಗಡಿಯಾರವನ್ನು ತಮ್ಮ ಉತ್ತರಾಧಿಕಾರಿಗೆ ನೀಡುವರು.

ಸಂಗತ

ನೆನಪಾಗುತ್ತಿದ್ದಾನೆ... ಡಾಂಟೆ

ಇಟಾಲಿಯನ್ ಕವಿಯ ಕೃತಿಯ ಮರುಓದು ವರ್ತಮಾನದ ಭಾರತಕ್ಕೆ ಅತ್ಯಂತ ಪ್ರಸ್ತುತ

• ಡಾ. ಜ್ಯೋತಿ

ಡಾಂಟೆ ಮಧ್ಯಯುಗದ ಇಟಾಲಿಯನ್ ಕವಿ. ಅವನ ‘ಡಿವೈನ್ ಕಾಮಿಡಿ’ (ಮೂಲ ಹೆಸರು, ಕಾಮಿಡಿಯಾ) ಇಟಾಲಿಯನ್ ಭಾಷೆಯ ಶ್ರೇಷ್ಠ ಸಾಹಿತ್ಯ ಕೃತಿಯೆಂದು ಪರಿಗಣಿತವಾಗಿದೆ. ಕಾಮಿಡಿಯಾ, ಅಂದರೆ ಸುಖಾಂತ್ಯ. ಯಾಕೆಂದರೆ, ಸತ್ತ ಮನುಷ್ಯನ ಆತ್ಮವು ನರಕ ಮತ್ತು ಪ್ರಾಯಶ್ಚಿತ್ತ ಲೋಕಗಳನ್ನು ದಾಟಿ, ಸ್ವರ್ಗ ತಲುಪಿ ದೇವರ ದರ್ಶನ ಪಡೆಯುವುದರೊಂದಿಗೆ ಅಂತ್ಯವಾಗುತ್ತದೆ ಇದು.

ಈ ಕೃತಿಯ ಮರುಓದು, ಎರಡು ಕಾರಣಗಳಿಗಾಗಿ ವರ್ತಮಾನದ ಭಾರತಕ್ಕೆ ಅತ್ಯಂತ ಪ್ರಸ್ತುತವಾಗಿದೆ: ಆ ಕಾಲದ ಕ್ಯಾಥೊಲಿಕ್ ಧರ್ಮಗುರುಗಳ ದುರ್ವ್ಯವಹಾರ ಗಳನ್ನು ಡಾಂಟೆ ತರಾಟೆಗೆ ತೆಗೆದುಕೊಂಡ ರೀತಿ ಮತ್ತು ಶಾಸ್ತ್ರೀಯ ಭಾಷೆ ಲ್ಯಾಟಿನ್ ಬದಲಾಗಿ ಪ್ರಾದೇಶಿಕ ಆಡುಭಾಷೆ ಟಸ್ಕನ್ ಇಟಾಲಿಯನ್‌ನಲ್ಲಿ ಬರೆದು ಜನಸಾಮಾನ್ಯರನ್ನು ತನ್ನ ಓದುಗರನ್ನಾಗಿಸಿದ್ದು.

ಕಾಮಿಡಿಯಾವನ್ನು ಡಾಂಟೆ 1308ರಲ್ಲಿ ಆರಂಭಿಸಿ, 1320ರಲ್ಲಿ ಪೂರ್ಣಗೊಳಿಸಿದ. ಬೈಬಲ್‌ನಲ್ಲಿ ಚಿತ್ರಣಗೊಂಡ ನರಕ, ಪ್ರಾಯಶ್ಚಿತ್ತ ಮತ್ತು ಸ್ವರ್ಗಗಳ ಪರಿಕಲ್ಪನೆಯನ್ನು ಕ್ಯಾಥೊಲಿಕ್ ಧರ್ಮಗುರುಗಳು ತಮಗಿಷ್ಟಬಂದಂತೆ ಉಪದೇಶಿಸಿ, ಜನಸಾಮಾನ್ಯರ ಮುಗ್ಧತೆಯ ಲಾಭ ಪಡೆದು ಅವರಲ್ಲಿ ಪಾಪದ ಭಯ ಹುಟ್ಟಿಸಿ, ಪ್ರಾಯಶ್ಚಿತ್ತಕ್ಕೆಂದು ದುಬಾರಿ ಪರಿಹಾರ ಮಾರ್ಗ ಸೂಚಿಸಿ ಲೂಟಿ ಮಾಡುವುದನ್ನು ಕಣ್ಣಾರೆ ನೋಡಿದ್ದ ಡಾಂಟೆ. ಸ್ವರ್ಗ, ನರಕವೆಂದರೆ ಅದಲ್ಲ, ಸರಳ ಮಾರ್ಗವಿದೆ ಎನ್ನುವ ಧ್ಯೇಯದೊಂದಿಗೆ, ಪರ್ಯಾಯ ಧರ್ಮಸೂತ್ರವನ್ನು ಜನರಿಗೆ ನೀಡಬೇಕೆನ್ನುವ ಮಹದಾಸೆಯಿಂದ ಈ ಮೇರುಕೃತಿಯ ರಚನೆಗೆ ಮುಂದಾಗುತ್ತಾನೆ.

ವರ್ತಮಾನದ ಜಗತ್ತಿನಲ್ಲಿ ಧರ್ಮಗಳ ನಡುವೆ ಹೆಚ್ಚುತ್ತಿರುವ ಕಂದಕಗಳ ಮಧ್ಯೆ, ಡಾಂಟೆ ನಮಗೆ ಹೆಚ್ಚು ಪ್ರಸಕ್ತವಾಗಿ ಕಾಣಿಸುತ್ತಾನೆ. ಅವನ ಕೃತಿಯಲ್ಲಿ ಕ್ರೈಸ್ತ ಮತ್ತು ಇಸ್ಲಾಂ ಧರ್ಮದ ಅನುಯಾಯಿಗಳ ಸೌಹಾರ್ದ ಸಮನ್ವಯವನ್ನು ನೋಡಬಹುದು. ಡಾಂಟೆಯ ಪಯಣಕ್ಕೆ ಮಾರ್ಗದರ್ಶಕನಾಗಿ ಮುನ್ನಡೆಸುವವನು ಗುರುಸಮಾನನಾದ ಲ್ಯಾಟಿನ್ ಸಾಹಿತಿ ವರ್ಜಿಲ್. ಇಸ್ಲಾಂ ಅನುಯಾಯಿಗಳನ್ನು ಕೂಡ ಡಾಂಟೆ ತನ್ನ ಪಯಣದಲ್ಲಿ ಭೇಟಿಯಾಗುತ್ತಾನೆ. ವಿಶೇಷ ವೆಂದರೆ, ಕ್ರೈಸ್ತ ಪರಿಕಲ್ಪನೆಯ ಸಾವಿನ ನಂತರದ ಲೋಕಗಳಲ್ಲಿ ಭೇಟಿಯಾಗುವ ಅನ್ಯಧರ್ಮೀಯರನ್ನು ಸಂಯಮದಿಂದ ಚಿತ್ರಿಸಿ, ಅವರನ್ನು ತನ್ನ ಸಹಪಯಣಿಗ ರನ್ನಾಗಿಸುತ್ತಾನೆಯೇ ವಿನಾ ಇಲ್ಲಿ ಅನ್ಯಧರ್ಮಗಳ ನಿಂದನೆಯಿಲ್ಲ, ಬದಲಾಗಿ ಸಹಿಷ್ಣುತೆಯಿದೆ.

ಸದ್ಯ, ಪ್ರಾದೇಶಿಕ ಭಾಷೆಗಳ ಸ್ಥಾನದಲ್ಲಿ ಹಿಂದಿಯನ್ನು ಹೇರಬೇಕೆನ್ನುವ ಹೇಳಿಕೆಗಳ ನಡುವೆ, ಡಾಂಟೆಯ ನಡೆ ವಿಶೇಷವೆನಿಸುತ್ತದೆ. ತನ್ನ ಕಾಲದ ಸಾಹಿತ್ಯ ಕ್ಷೇತ್ರದಲ್ಲಿ ಪ್ರಾಬಲ್ಯ ಹೊಂದಿದ್ದ ಬುದ್ಧಿವಂತರ ಭಾಷೆ, ಲ್ಯಾಟಿನ್‌ನ ಸ್ಥಾನದಲ್ಲಿ ತನ್ನ ಹುಟ್ಟೂರು ಫ್ಲಾರೆನ್ಸ್‌ನ ಆಡುಭಾಷೆ ಟಸ್ಕನ್ ಇಟಾಲಿಯನ್‌ನಲ್ಲಿ ಬರೆಯುವುದರ ಮೂಲಕ ತನ್ನ ಸಾಹಿತ್ಯವನ್ನು ಜನಸಾಮಾನ್ಯರಿಗೆ ತಲುಪಿಸಿದ್ದ. ಇದು ಇಟಾಲಿಯನ್ ಭಾಷೆಯ ಬೆಳವಣಿಗೆಗೆ ಮುನ್ನುಡಿಯಾಗಿ, ಆನಂತರದ ದಿನಗಳಲ್ಲಿ ಶ್ರೇಷ್ಠ ಸಾಹಿತ್ಯ ಇಟಾಲಿಯನ್ ಭಾಷೆಯಲ್ಲಿ ಬರಲಾರಂಭಿಸಿತು. ಮಾತ್ರವಲ್ಲ, ಅವನು ಬಳಸಿದ ಟಸ್ಕನ್ ಇಟಾಲಿಯನ್ ಭಾಷೆ, ಇಟಲಿಯ ಅಧಿಕೃತ ಭಾಷೆಯ ಸ್ಥಾನ ಪಡೆಯಿತು. ವಿಶೇಷವೆಂದರೆ, ಸುಮಾರು 80 ವರ್ಷಗಳ ನಂತರ ಇಂಗ್ಲಿಷಿನ ಆದಿಕವಿ ಚಾಸರ್ ಕೂಡ ಶಾಸ್ತ್ರೀಯ ಭಾಷೆಗಳನ್ನು ಬಿಟ್ಟು, ಲಂಡನ್ನಿನ ಇಂಗ್ಲಿಷಿನಲ್ಲಿ ಬರೆದು ಅದನ್ನು ಅಧಿಕೃತ ಇಂಗ್ಲಿಷ್ ಭಾಷೆಯನ್ನಾಗಿಸಿದ. ಈ ರೀತಿ, ಯುರೋಪಿನಲ್ಲಿ ಪ್ರಾದೇಶಿಕ ಭಾಷೆಗಳ ಸಾಹಿತ್ಯದ ಬೆಳವಣಿಗೆಗೆ ಡಾಂಟೆ ಕಾರಣನಾಗುತ್ತಾನೆ.

ಈ ಕೃತಿಯ ಮೂರು ಭಾಗಗಳಾದ ಇನ್ಫರ್ನೋ (ನರಕ), ಪುರ್ಗಟೋರಿಯೊ (ಪ್ರಾಯಶ್ಚಿತ್ತ) ಮತ್ತು ಪ್ಯಾರಾಡಿಸೊ (ಸ್ವರ್ಗ), ಬೈಬಲ್‌ಗಿಂತ ವಿಭಿನ್ನ ಮತ್ತು ಸರಳವಾದ ಮರಣಾನಂತರದ ಜೀವನವನ್ನು ಕೊಡುತ್ತವೆ. ಇಲ್ಲಿ ತಪ್ಪು ಮಾಡಿದವನು ಯಾರೇ ಆಗಿರಲಿ, ಅವನಿಗೆ ನಿರ್ದಾಕ್ಷಿಣ್ಯವಾಗಿ ಶಿಕ್ಷೆ ಸಿಗುತ್ತದೆ. ಹಾಗಾಗಿ, ಡಾಂಟೆಯ ನರಕದಲ್ಲಿ ಧರ್ಮಗುರುಗಳು ಕೂಡ ಜನಸಾಮಾನ್ಯರನ್ನು ವಂಚಿಸಿದ್ದಕ್ಕಾಗಿ ಘೋರ ಶಿಕ್ಷೆ ಅನುಭವಿಸುತ್ತಾರೆ. ಈ ಕೃತಿಯು ಮನುಷ್ಯನ ಆತ್ಮದ ಪಯಣವಾಗಿದ್ದರಿಂದ, ಡಾಂಟೆ ಬೇರೆ ಯಾರನ್ನೂ ಸಾಯಿಸದೆ, ಸ್ವತಃ ಮುಖ್ಯಪಾತ್ರವಾಗಿ ನರಕಕ್ಕೆ ಪಯಣಿಸುತ್ತಾನೆ. ಅಲ್ಲಿ ಸಂಪೂರ್ಣ ಕತ್ತಲಲ್ಲಿ ಕ್ರೂರ ಮೃಗಗಳ ನಡುವೆ ಸಿಲುಕಿ ಕಷ್ಟಪಡುತ್ತಾನೆ. ಆದರೆ ಅವನಿಗಿರುವ ಆಶಾದೀಪವೆಂದರೆ, ದೂರದಲ್ಲಿರುವ ಪರ್ವತದ ಹಿಂದೆ ಕಾಣಿಸುವ ಸೂರ್ಯನ ಕಿರಣ. ಅದು ತಾನು ತಲುಪಬೇಕಿರುವ ಸ್ವರ್ಗದ ಪ್ರವೇಶದ್ವಾರವೆಂದು ಅವನಿಗೆ ತಿಳಿದಿದೆ. ನರಕದಲ್ಲಿ ಮನುಷ್ಯನ ಪಾಪಕರ್ಮ ಗಳಿಗೆ ಅನುಸಾರವಾಗಿ ವಿಭಿನ್ನ ಶಿಕ್ಷೆಗಳನ್ನು ಕೊಡುತ್ತಿರುವುದನ್ನು ನೋಡಿ ವಿಚಲಿತನಾಗುವ ಅವನಿಗೆ, ವರ್ಜಿಲ್ ಆತ್ಮಸ್ಥೈರ್ಯ ತುಂಬುತ್ತಾನೆ.

ಇಲ್ಲಿಂದ ಮುಂದಕ್ಕೆ, ತಮ್ಮ ಪಾಪಗಳಿಂದ ಮುಕ್ತಿ ಕಾಣಬಯಸುವವರಿಗೆ ಪ್ರಾಯಶ್ಚಿತ್ತ ಲೋಕದ ಪ್ರವೇಶ ದೊರೆಯುತ್ತದೆ. ಇಲ್ಲಿ, ಪಾಪಗಳ ಶುದ್ಧೀಕರಣ ನಡೆಯುತ್ತದೆ. ಡಾಂಟೆಯ ಆತ್ಮಸಖಿ ಬಿಯಾಟ್ರಿಸ್ ಸ್ವರ್ಗದಲ್ಲಿ ಅವನನ್ನು ಬರಮಾಡಿಕೊಂಡು ಮಾರ್ಗದರ್ಶನ ನೀಡುತ್ತಾಳೆ. ಸದ್ಗುಣಗಳ ಆಕರವಾದ ಸ್ವರ್ಗದಲ್ಲಿ, ಡಾಂಟೆ ಹಲವಾರು ಮಹಾನ್ ಸಂತರನ್ನು ಭೇಟಿ ಮಾಡಿ ಮಾತುಕತೆಯಾಡುತ್ತಾನೆ. ಅಂತಿಮವಾಗಿ ಡಾಂಟೆಗೆ ದೇವರ ದರ್ಶನವಾಗುವುದರೊಂದಿಗೆ ಈ ಕೃತಿ ಮುಕ್ತಾಯಗೊಳ್ಳುತ್ತದೆ.

ಕೊನೆಯದಾಗಿ, ಮನುಷ್ಯ ಜಗತ್ತಿಗೆ ಡಾಂಟೆ ಕೊಟ್ಟ ಸಂದೇಶವೆಂದರೆ, ‘ಜೀವನವಿರುವುದು ವಿವೇಚನಾ-ರಹಿತವಾಗಿ ಬದುಕುವುದಕ್ಕಲ್ಲ, ಬದಲಾಗಿ, ಸದ್ಗುಣ ಮತ್ತು ಜ್ಞಾನ ಸಂಪಾದಿಸಲು’.

ವಾಚಕರ ವಾಣಿ

ಲಂಚಗುಳಿತನ ಕಾಣುತ್ತಿಲ್ಲವೇ?

ರಾಜ್ಯ ಆರೋಗ್ಯ ಇಲಾಖೆಯಲ್ಲಿ ಭ್ರಷ್ಟಾಚಾರ ಮಿತಿಮೀರಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷರು ಹೇಳಿದ್ದಾರೆ. ಇದು ಅಕ್ಷರಶಃ ಸತ್ಯ. ಕಟ್ಟಡ ಕಾಮಗಾರಿಯಲ್ಲಿ ಮಾತ್ರವಲ್ಲದೆ ಇಡೀ ಆರೋಗ್ಯ ಇಲಾಖೆಯಲ್ಲಿ ಲಂಚಗುಳಿತನ ತಾಂಡವವಾಡುತ್ತಿದೆ. ಅಧಿಕಾರಿಗಳ ನೇಮಕಾತಿ, ವರ್ಗಾವಣೆ ಮತ್ತು ಮೆಡಿಕಲ್ ಕಾಲೇಜುಗಳ ನಿರ್ದೇಶಕ ಹುದ್ದೆಯ ನೇಮಕಾತಿಗೆ ಹಣವೇ ಪ್ರಧಾನ ಪಾತ್ರ ವಹಿಸುತ್ತಿದೆ ಎಂಬ ಆರೋಪಗಳು ಇವೆ. ಇಂತಹ ಸ್ಥಿತಿಯಲ್ಲಿ ಉತ್ತಮ ಆರೋಗ್ಯ ವ್ಯವಸ್ಥೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ.

ಆರೋಗ್ಯ ಇಲಾಖೆಯ ಭ್ರಷ್ಟಾಚಾರವನ್ನು ಬಯಲಿಗೆಳೆಯುವುದರಲ್ಲಿ ವಿರೋಧ ಪಕ್ಷಗಳ ನಾಯಕರೂ ವಿಫಲರಾಗಿದ್ದಾರೆಂದೇ ಅನಿಸುತ್ತದೆ. ಭ್ರಷ್ಟಾಚಾರವನ್ನು ಸಹಿಸುವುದೇ ಇಲ್ಲ ಎಂದು ಹೇಳುವ ಬಿಜೆಪಿ ವರಿಷ್ಠರಿಗೆ ಇವೆಲ್ಲವೂ ತಿಳಿಯುತ್ತಿಲ್ಲವೇ ಅಥವಾ ಏನಾದರೂ ಕ್ರಮ ತೆಗೆದುಕೊಂಡರೆ ಸರ್ಕಾರಕ್ಕೆ ಅಪಾಯವಾಗಬಹುದು ಎಂಬ ಭಯವೇ?

ಆತ್ರೇಯ, ಶಿವಮೊಗ್ಗ

ಪರ್ಸೆಂಟೇಜ್ ದಂಧೆಗೆ ಕಡಿವಾಣ ಬೀಳುವುದೇ?

ಕಾಮಗಾರಿ ಭ್ರಷ್ಟಾಚಾರದ ಬಗೆಗಿನ ಸಂಪಾದಕೀಯದ (ಪ್ರ.ವಾ., ಏ. 14) ಒಟ್ಟಾರೆ ನಿಲುವು ಸರಿಯಾಗಿದೆ. ಆದರೆ ತಳಮಟ್ಟದಲ್ಲಿ ರಾಜಕಾರಣಿಗಳ ಪಾತ್ರ ಮೊದಲು ಬರುತ್ತದೆ, ಆಪ್ತ ಸಹಾಯಕರು, ಅಧಿಕಾರಿಗಳು ಆಮೇಲೆ ಎಂಟ್ರಿ ಕೊಡುತ್ತಾರೆ. ಮೃತ ವ್ಯಕ್ತಿ ಮೊದಲು ಬೇರೆ ಪಕ್ಷದ ಸದಸ್ಯನಾಗಿದ್ದ ಎಂಬಂತಹ ರಕ್ಷಣಾ ತಂತ್ರವೂ ಆರಂಭವಾಗಿದೆ. ಬಾಯಿಮಾತಿನ ಮಂಜೂರಿ ಕೊಟ್ಟಿದ್ದರೆ ಕಾಮಗಾರಿ ಆರಂಭವಾದ ಮೇಲಾದರೂ ಕ್ರಮಬದ್ಧ ಸ್ವೀಕೃತಿ ನೀಡಿದರೆ ಮಾತ್ರ ಪಾವತಿಯ ಪ್ರಶ್ನೆ ಬರುತ್ತದೆ. ಗ್ರಾಮೀಣಾಭಿವೃದ್ಧಿ ಇಲಾಖೆ ನಡೆಸುತ್ತಿರುವ ತನಿಖೆಯ ಪ್ರಾಥಮಿಕ ವರದಿಯನ್ನು ಸರ್ಕಾರ ಕೂಡಲೇ ಬಹಿರಂಗಪಡಿಸಬೇಕು.

ಅಧಿಕಾರಾರೂಢ ಪಕ್ಷಗಳು ಅದ್ಧೂರಿ ಕಾರ್ಯಕ್ರಮಗಳನ್ನು ನಡೆಸುತ್ತಿವೆ. ಪಕ್ಷದ ವತಿಯಿಂದ ಎಷ್ಟು ಹಣ ವಿನಿ-ಯೋಗಿಸಲಾಯಿತು ಎಂಬುದನ್ನು ಯಾರೂ ಹೇಳುತ್ತಿಲ್ಲ, ಕೇಳುತ್ತಿಲ್ಲ. ಅದಲ್ಲದೆ ಹಲವರು ಅದನ್ನು ಆರ್ಥಿಕವಾಗಿ ಪ್ರಾಯೋಜಿಸಿರುತ್ತಾರೆ. ಆ ಪೈಕಿ ಕೆಲವರು ಮುಂದೆ ಸರ್ಕಾರಿ ಕಾಮಗಾರಿಗಳ ‘ಫಲಾನುಭವಿ’ಗಳಾಗುತ್ತಾರೆ. ಚುನಾವಣಾ ಪ್ರಚಾರದ ಅವಧಿ ಬಿಟ್ಟು ಮೆಗಾ ಕಾರ್ಯಕ್ರಮಗಳ ವೆಚ್ಚದ ಬಗೆಗೆ ಲೆಕ್ಕ ನೀಡುವ ವ್ಯವಸ್ಥೆ ಎಲ್ಲಿದೆ? ಒಂದು ದೊಡ್ಡ ಕಾಮಗಾರಿ ಹಲವು ಪೀಸ್ ವರ್ಕ್‌ಗಳಾಗಿ ಬೇರೆ ಬೇರೆ ಹೆಸರಿನಲ್ಲಿ ಕೆಲವೇ ವ್ಯಕ್ತಿಗಳ ಕೈಸೇರುವುದು ಒಂದು ‘ಕಲೆ’ಯಾಗಿ ಅಭಿವೃದ್ಧಿಗೊಂಡಿದೆ. ಸಮಿತಿ, ತನಿಖೆಗಳು ಇದನ್ನು ಹೊರಹಾಕಿದರೂ ಅಂತಿಮವಾಗಿ ಕಾರ್ಯಾಂಗವೇ ಕ್ರಮ ಕೈಗೊಳ್ಳಬೇಕಲ್ಲ. ನ್ಯಾಯಾಲಯಗಳು ಎಲ್ಲ ಪ್ರಕರಣಗಳಲ್ಲಿ ಪ್ರೊ-ಆ್ಯಕ್ಟಿವ್ ಆಗಲು ಸಾಧ್ಯವೇ? ಒಟ್ಟಿನಲ್ಲಿ ಚುನಾವಣಾ ವರ್ಷದಲ್ಲಿ ಈ ಪರ್ಸೆಂಟೇಜ್ ದಂಧೆಗೆ ಕಡಿವಾಣ ಬೀಳುವ ಸಂಭವ ಕಡಿಮೆ.

ಎಚ್.ಎಸ್.ಮಂಜುನಾಥ, ಬೆಂಗಳೂರು

ಆದರ್ಶ ವ್ಯಕ್ತಿ ಹೇಗಿರಬೇಕು?

ಅನೇಕ ಶಾಲಾ ಕಾಲೇಜುಗಳ ಪ್ರಮುಖ ಸಮಾರಂಭಗಳಿಗೆ ಅತಿಥಿಗಳನ್ನಾಗಿ ರಾಜಕೀಯ ನಾಯಕರು, ಸಿನಿಮಾ ನಟರು ಹಾಗೂ ಸಾಧು ಸಂತರನ್ನು ಕರೆಸುತ್ತಾರೆ. ಅವರಿಂದ ಉನ್ನತ ವಿಚಾರ, ನೈತಿಕತೆ, ಆದರ್ಶದ ನುಡಿಗಳನ್ನು ಕೇಳಿಸಿಕೊಳ್ಳುತ್ತಾರೆ. ನಮ್ಮ ದೇಶದ ಹಿರಿಮೆ, ಗರಿಮೆ ಬಗ್ಗೆ, ಸತ್ಯ, ಪ್ರಾಮಾಣಿಕತೆಯ ಬಗ್ಗೆ ಅತಿಥಿಗಳು ಮಾತನಾಡುತ್ತಾರೆ. ಆದರೆ ಹೀಗೆ ಮಾತನಾಡುವವರು ಸ್ವತಃ ಜೀವನದಲ್ಲಿ ನಡೆದುಕೊಳ್ಳುವ ರೀತಿ ಇದಕ್ಕಿಂತ ಭಿನ್ನವಾಗಿರುತ್ತದೆ. ಬೆಳಿಗ್ಗೆ ಕೊಟ್ಟ ಹೇಳಿಕೆಯನ್ನು ಸಂಜೆಯ ಹೊತ್ತಿಗೆ ತಾನು ಆ ಹೇಳಿಕೆ ಕೊಟ್ಟೇ ಇಲ್ಲ ಎಂದು ತಿರುಚಿ ಹೇಳುವವರಿದ್ದಾರೆ. ಮಕ್ಕಳು ಇಂತಹ ರಾಜಕೀಯ ನಾಯಕರ ಚಲನವಲನವನ್ನು ಮಾಧ್ಯಮಗಳ ಮೂಲಕ ಗಮನಿಸುತ್ತಿರುತ್ತಾರೆ.

ನಡೆದಂತೆ ನುಡಿಯುವವರು, ನುಡಿದಂತೆ ನಡೆಯುವವರು ಮಾತ್ರ ಆದರ್ಶ ವ್ಯಕ್ತಿಗಳಾಗಲು ಸಾಧ್ಯ. ಮಕ್ಕಳಿಗಾಗಿ ನಡೆಸುವ ಕಾರ್ಯಕ್ರಮಗಳಲ್ಲಿ ಪ್ರವಚನ, ಉದ್ಘಾಟನೆ, ಭಾಷಣಕ್ಕೆ ಅಂತಹ ವ್ಯಕ್ತಿಗಳನ್ನೇ ಕರೆಸುವುದು ಆದರ್ಶಪ್ರಾಯ ನಡೆ.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ಇಂಗ್ಲಿಷ್ ಭಾಷೆ ಬೇಕು, ಏಕೆಂದರೆ...

ಬ್ರಿಟಿಷರು ಭಾರತವನ್ನು ಆಳುವುದಕ್ಕೆ ಮುಂಚೆ ಪರ್ಷಿಯನ್ ಭಾಷೆ ಆಡಳಿತ ಭಾಷೆಯಾಗಿತ್ತು. ಬ್ರಿಟಿಷರು ಪರ್ಷಿಯನ್ ಭಾಷೆಯ ಬದಲು ಇಂಗ್ಲಿಷನ್ನು ಆಡಳಿತ ಭಾಷೆಯಾಗಿ ಬದಲಾಯಿಸಿದರು. ವಿಶ್ವದಲ್ಲಿ ಚೀನಾ, ರಷ್ಯಾ, ಜಪಾನ್, ಜರ್ಮನಿ, ಮೆಕ್ಸಿಕೊ, ಕೊರಿಯಾ ಸೇರಿದಂತೆ ಅನೇಕ ರಾಷ್ಟ್ರಗಳಲ್ಲಿ ಹೆಚ್ಚು ಹೆಚ್ಚು ಜನ ಇಂಗ್ಲಿಷನ್ನು ಬಳಸುತ್ತಿದ್ದಾರೆ. ಚೀನಾದಲ್ಲಿ ಪ್ರತಿವರ್ಷ 30 ಕೋಟಿ ಜನ ಇಂಗ್ಲಿಷ್ ಭಾಷೆಯನ್ನು ಕಲಿಯುತ್ತಿದ್ದಾರೆ. ಚೀನಾದಲ್ಲಿ ಇಂಗ್ಲಿಷ್ ಭಾಷೆ ಕಲಿಸುವ ಅಧ್ಯಾಪಕರಿಗೆ ಸಂಬಳದ ಜೊತೆ ಮನೆಯ ಬಾಡಿಗೆಯನ್ನೂ ಸರ್ಕಾರ ಕೊಡುತ್ತದೆ. ಹಲವು ದೇಶಗಳಲ್ಲಿ ಇಂಗ್ಲಿಷ್‌ಗೆ ಪ್ರಾಮುಖ್ಯತೆ ಕೊಡಲಾಗುತ್ತಿದೆ. ಬೆಂಗಳೂರಿನಿಂದಲೇ ಹಿಂದಿನ ವರ್ಷ 30 ಸಾವಿರ ವಿದ್ಯಾರ್ಥಿಗಳು ವಿದೇಶಕ್ಕೆ ಉನ್ನತ ವ್ಯಾಸಂಗಕ್ಕಾಗಿ ತೆರಳಿದರು. ಭಾರತದಲ್ಲಿ ದಕ್ಷಿಣ ಮತ್ತು ಈಶಾನ್ಯ ರಾಜ್ಯಗಳಲ್ಲಿ ಇಂಗ್ಲಿಷ್ ಬಳಕೆ ಹಾಗೂ ಸಾಕ್ಷರತೆಯ ಪ್ರಮಾಣ ಹೆಚ್ಚುತ್ತಿದ್ದಂತೆ ಅಭಿವೃದ್ಧಿಯಾಗಿರುವುದೂ ಕಾಕತಾಳೀಯ.

ಹಿಂದಿ ಮಾತನಾಡುವ ‘ಬಿಮಾರು’ ರಾಜ್ಯಗಳು ದಶಕಗಳಾದರೂ ಅಭಿವೃದ್ಧಿಯಾಗದಿರುವುದೂ ಕಠೋರ ಸತ್ಯ. ಅಭಿವೃದ್ಧಿಗೂ ಭಾಷೆಗೂ ನಂಟಿದೆ. ಇಂಗ್ಲಿಷ್ ಭಾಷೆ ಹೆಚ್ಚು ಅಭಿವೃದ್ಧಿಯಾಗಿರುವುದರಿಂದ ಇಂಗ್ಲಿಷ್ ಭಾಷೆಯ ಪರಿಣತರೂ ದೇಶಗಳೂ ಹೆಚ್ಚು ಅಭಿವೃದ್ಧಿಯಾಗುತ್ತಿರುವಂತೆ, ಹಿಂದಿ ಭಾಷೆ ಅಭಿವೃದ್ಧಿಯಾಗದ ಕಾರಣ ಹಿಂದಿ ಭಾಷೆಯ ರಾಜ್ಯಗಳು ಮತ್ತು ಅಲ್ಲಿನ ನಾಗರಿಕರು ಕೂಡಾ ಅಭಿವೃದ್ಧಿಯಾಗುತ್ತಿಲ್ಲ. ಈ ಕಾರಣಗಳಿಂದಲೇ ಭಾರತದಲ್ಲೂ ಇಂಗ್ಲಿಷ್ ಭಾಷೆ ಆಕರ್ಷಿಸುತ್ತಿರುವುದು. ಇಂಗ್ಲಿಷನ್ನು ಪರಕೀಯ ಎನ್ನುವುದಾದರೆ, ಇಂಗ್ಲಿಷರು ಮತ್ತು ವಿದೇಶಿಯರು ಕಂಡುಹಿಡಿದ ಹಾಗೂ ದಿನಬಳಕೆಯ ಅನೇಕ ಆಧುನಿಕ ವಸ್ತುಗಳನ್ನೂ ತಂತ್ರಜ್ಞಾನವನ್ನೂ ಸಾಮಾನುಗಳನ್ನೂ ‘ಪರಕೀಯ’ವೆಂದು ಹೇಳಿ ಆಮದನ್ನು ನಿಲ್ಲಿಸುವುದಿಲ್ಲವೇಕೆ? ಪ್ರಧಾನಿಗಾಗಿ ‘ಪರಕೀಯ’ ತಂತ್ರಜ್ಞಾನದ ಆಧುನಿಕ ವಿಮಾನವನ್ನು ಸಾವಿರಾರು ಕೋಟಿ ರೂಪಾಯಿ ಕೊಟ್ಟು ಆಮದು ಮಾಡಿಕೊಳ್ಳಬೇಕೇಕೆ? ‘ಪರಕೀಯ’ ರಫೇಲ್ ವಿಮಾನಗಳನ್ನು ತರಿಸಿಕೊಳ್ಳಬೇಕೇಕೆ? ಇಂಗ್ಲಿಷ್ ಭಾಷೆ ಮಾತ್ರ ಪರಕೀಯವೇ?

ಕೆ.ಎನ್.ಭಗವಾನ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಜೆಟ್ ಅಂದಾಜಿಗಿಂತ ₹5 ಲಕ್ಷ ಕೋಟಿ ಹೆಚ್ಚುವರಿ ವರಮಾನ

ಕೋವಿಡ್ ಹೊಡೆತಕ್ಕೆ ಜಗ್ಗದ ತೆರಿಗೆ ಸಂಗ್ರಹ

2021-22ನೇ ಆರ್ಥಿಕ ವರ್ಷದ ಆರಂಭದ ತಿಂಗಳುಗಳಲ್ಲಿ ಕೋವಿಡ್ ಎರಡನೇ ಅಲೆಯ ತೀವ್ರ ಹೊಡೆತಕ್ಕೆ ದೇಶ ಸಿಲುಕಿತ್ತು. ಸಾಂಕ್ರಾಮಿಕದ ಬಿಗಿ ಹಿಡಿತದ ನಡುವೆಯೂ ದೇಶದ ತೆರಿಗೆ ಸಂಗ್ರಹದಲ್ಲಿ ಭಾರಿ ಪ್ರಗತಿ ಕಂಡುಬಂದಿದೆ. ಬಜೆಟ್‌ನಲ್ಲಿ ₹22.17 ಲಕ್ಷ ಕೋಟಿ ತೆರಿಗೆ ಸಂಗ್ರಹಿಸುವ ಗುರಿ ಹಾಕಿಕೊಳ್ಳಲಾಗಿತ್ತು. ಆರ್ಥಿಕ ವರ್ಷ ಅಂತ್ಯಕ್ಕೆ ಸಂಗ್ರಹವಾದ ತೆರಿಗೆಯನ್ನು ಲೆಕ್ಕಹಾಕಿದಾಗ, ಬಜೆಟ್ ಅಂದಾಜಿಗಿಂತ ಸರಿಸುಮಾರು ₹5 ಲಕ್ಷ ಕೋಟಿ ಹೆಚ್ಚುವರಿ ತೆರಿಗೆ ಬೊಕ್ಕಸಕ್ಕೆ ಹರಿದುಬಂದಿದೆ.

2020-21ನೇ ಆರ್ಥಿಕ ವರ್ಷಕ್ಕೆ ಹೋಲಿಸಿದರೆ, ಈ ಸಾಲಿನಲ್ಲಿ ಶೇ 34ರಷ್ಟು ಹೆಚ್ಚು ತೆರಿಗೆ ಸಂಗ್ರಹವಾಗಿದೆ. ಕಳೆದ ಆರ್ಥಿಕ ವರ್ಷದಲ್ಲಿ ಎಲ್ಲ ತೆರಿಗೆ ಮೂಲಗಳಿಂದ ಒಟ್ಟಾರೆಯಾಗಿ ₹20.27 ಲಕ್ಷ ಕೋಟಿ ಸಂಗ್ರಹವಾಗಿತ್ತು. ಒಟ್ಟು ಸಂಗ್ರಹವಾದ ತೆರಿಗೆಯಲ್ಲಿ ಆದಾಯ ತೆರಿಗೆ, ಕಾರ್ಪೊರೇಟ್ ತೆರಿಗೆ, ಜಿಎಸ್‌ಟಿ ಮೊದಲಾದವು ಸೇರಿವೆ. ಈ ಸಾಲಿನ ಆರ್ಥಿಕ ವರ್ಷದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಎಕ್ಸೈಸ್ ಸುಂಕವೊಂದರಿಂದಲೇ ₹3.90 ಲಕ್ಷ ಕೋಟಿ ತೆರಿಗೆ ವರಮಾನ ಬಂದಿದೆ.

ನೇರ ತೆರಿಗೆ ವ್ಯಾಪ್ತಿಯಲ್ಲಿ ಬರುವ ವೈಯಕ್ತಿಕ ಆದಾಯ ತೆರಿಗೆ ಹಾಗೂ ಕಾರ್ಪೊರೇಟ್ ತೆರಿಗೆ ಸಂಗ್ರಹವು ಶೇ 49ರಷ್ಟು ಜಿಗಿತ ದಾಖಲಿಸಿದ್ದು, ₹14.10 ಲಕ್ಷ ಕೋಟಿ ಜಮೆಯಾಗಿದೆ. ಈ ಪೈಕಿ ಕಾರ್ಪೊರೇಟ್ ತೆರಿಗೆಯು ಶೇ 56.1ರಷ್ಟು ಹೆಚ್ಚಳದೊಂದಿಗೆ ₹8.58 ಲಕ್ಷ ಕೋಟಿ ಸಂಗ್ರಹವಾಗಿದೆ. ಹಾಗೆಯೇ, ಆದಾಯ ತೆರಿಗೆ ಸಂಗ್ರಹದಲ್ಲಿ ಶೇ 43ರಷ್ಟು ಹೆಚ್ಚಳ ಕಂಡುಬಂದಿದ್ದು, ₹7.49 ಲಕ್ಷ ಕೋಟಿ ಜಮೆಯಾಗಿದೆ. ಪರೋಕ್ಷ ತೆರಿಗೆಯಡಿ ಬರುವ ಕಸ್ಟಮ್ಸ್ ಸುಂಕ, ಕೇಂದ್ರದ ಜಿಎಸ್‌ಟಿ ಹಾಗೂ ಸೆಸ್ ಮತ್ತು ಪೆಟ್ರೋಲ್, ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ಸಂಗ್ರಹವು ಶೇ 20ರಷ್ಟು ಹೆಚ್ಚಳವಾಗಿದ್ದು, ₹12.90 ಲಕ್ಷ ಕೋಟಿ ಸಂಗ್ರಹವಾಗಿದೆ.

2021-22ನೇ ಸಾಲಿನ ತೆರಿಗೆ ವಿವರ



ಜಿಎಸ್‌ಟಿ ಸಂಗ್ರಹ ಭಾರಿ ಏರಿಕೆ

2021-22ನೇ ಆರ್ಥಿಕ ವರ್ಷದಲ್ಲಿ ಒಟ್ಟಾರೆ ₹14.88 ಲಕ್ಷ ಕೋಟಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹವಾಗಿದೆ. ಕೋವಿಡ್ ಎರಡನೇ ಅಲೆ ದಾಳಿಯಿಟ್ಟಿದ್ದ ಮೇ ಹಾಗೂ ಜೂನ್ ತಿಂಗಳಲ್ಲಿ ಮಾತ್ರ ಜಿಎಸ್‌ಟಿ ಸಂಗ್ರಹವು 1 ಲಕ್ಷ ಕೋಟಿ ರೂಪಾಯಿಗಿಂತ ಕಡಿಮೆ ಸಂಗ್ರಹವಾಗಿತ್ತು. ಏಪ್ರಿಲ್ ತಿಂಗಳಲ್ಲಿ ₹1.39 ಲಕ್ಷ ಕೋಟಿ ಸಂಗ್ರಹವಾಗುವ ಮೂಲಕ ಆರ್ಥಿಕ ವರ್ಷಕ್ಕೆ ದಾಖಲೆಯ ಆರಂಭ ಸಿಕ್ಕಿತ್ತು. ಮುಂದಿನ ತಿಂಗಳೇ ಎದುರಾದ ಕೋವಿಡ್, ಜಿಎಸ್‌ಟಿ ಸಂಗ್ರಹ ಕುಸಿತಕ್ಕೆ ಕಾರಣವಾಯಿತು. ಜುಲೈ ಹೊತ್ತಿಗೆ ನಿಧಾನವಾಗಿ ಚೇತರಿಸಿಕೊಂಡಿತು. ವರ್ಷದ ಕೊನೆಯ ತಿಂಗಳು ದಾಖಲೆಯ ₹1.42 ಲಕ್ಷ ಕೋಟಿ ಸಂಗ್ರಹಿಸಿತು.

ಕೇಂದ್ರದ ಜಿಎಸ್‌ಟಿ (ಸಿಜಿಎಸ್‌ಟಿ) ಹಾಗೂ ಸೆಸ್ ಸೇರಿ ₹6.75 ಕೋಟಿ ಸಂಗ್ರಹಿಸುವುದಾಗಿ 2021-22ರ ಪರಿಷ್ಕೃತ ಬಜೆಟ್‌ನಲ್ಲಿ ಗುರಿ ಹಾಕಿಕೊಳ್ಳಲಾಗಿತ್ತು. ಆರ್ಥಿಕ ವರ್ಷದಲ್ಲಿ ಈ ಗುರಿಯನ್ನು ಮೀರಿ ₹6.90 ಲಕ್ಷ ಕೋಟಿ ಸಿಜಿಎಸ್‌ಟಿ ಹಾಗೂ ಸೆಸ್ ಸಂಗ್ರಹವಾಗಿದೆ.



ಪೆಟ್ರೋಲ್, ಡೀಸೆಲ್: 4 ವರ್ಷಗಳಲ್ಲಿ ₹11.9 ಲಕ್ಷ ಕೋಟಿ ಸಂಗ್ರಹ



ಕೋವಿಡ್ ಹೊಡೆತದ ನಡುವೆಯೂ, ಕೇಂದ್ರ ಸರ್ಕಾರವು 2021-22ನೇ ಹಣಕಾಸು ವರ್ಷದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಎಕ್ಸೈಸ್ ಸುಂಕದಿಂದ ₹3.90 ಲಕ್ಷ ಕೋಟಿ ಸಂಗ್ರಹಿಸಿದೆ. ಬಜೆಟ್‌ನಲ್ಲಿ ₹3.35 ಲಕ್ಷ ಕೋಟಿ ಸಂಗ್ರಹಿಸುವ ಗುರಿ ನಿಗದಿ ಮಾಡಲಾಗಿತ್ತು. ಪರಿಷ್ಕೃತ ಅಂದಾಜಿನಲ್ಲಿ ಇದನ್ನು ₹3.94 ಲಕ್ಷ ಕೋಟಿಗೆ ಹೆಚ್ಚಿಸಲಾಗಿತ್ತು. ಆದರೆ ಈ ಗುರಿಗಿಂತ ಸ್ವಲ್ಪ (ಶೇ 0.2ರಷ್ಟು) ಕಡಿಮೆ ಸಂಗ್ರಹವಾಗಿದೆ. 2022ರ ಆರಂಭದಲ್ಲಿ ಐದು ರಾಜ್ಯಗಳ ಚುನಾವಣೆ ಘೋಷಣೆಯಾಗುವ ಮುನ್ನ ಅಂದರೆ, 2021ರ ನವೆಂಬರ್‌ನಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಮೇಲೆ ಕ್ರಮವಾಗಿ ₹5 ಹಾಗೂ ₹10 ತೆರಿಗೆಯನ್ನು ಕೇಂದ್ರ ಸರ್ಕಾರ ಕಡಿತ ಮಾಡಿತ್ತು. ಈ ನಿರ್ಧಾರದಿಂದ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆ ಸಂಗ್ರಹ ಅಲ್ಪ ಪ್ರಮಾಣದಲ್ಲಿ ಕುಸಿಯಿತು ಎಂದು ವಿಶ್ಲೇಷಿಸಲಾಗಿದೆ.

2019ರ ಅವಧಿಯಲ್ಲಿ ಪೆಟ್ರೋಲ್‌ಗೆ ₹19.98 ಮತ್ತು ಡೀಸೆಲ್‌ಗೆ ₹15.83 ಇದ್ದ ತೆರಿಗೆಯನ್ನು 2020ರಲ್ಲಿ ಕ್ರಮವಾಗಿ ₹32.98 ಹಾಗೂ ₹31.83ಕ್ಕೆ ಹೆಚ್ಚಿಸಿದ್ದರಿಂದ ತೆರಿಗೆ ಆದಾಯದಲ್ಲಿ ಭಾರಿ ಏರಿಕೆ ದಾಖಲಾಗಿತ್ತು. ಒಟ್ಟಾರೆ ಕಳೆದ ನಾಲ್ಕು ವರ್ಷಗಳಲ್ಲಿ ಕೇಂದ್ರ ಸರ್ಕಾರವು ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಎಕ್ಸೈಸ್ ಸುಂಕದಿಂದ ₹11.9 ಲಕ್ಷ ಕೋಟಿ ಸಂಗ್ರಹಿಸಿದೆ.

ಜಿಎಸ್‌ಟಿ ಪರಿಹಾರ: ರಾಜ್ಯಗಳಿಗೆ ಕೇಂದ್ರದ ಬಾಕಿ ₹53,661 ಕೋಟಿ

ಜಿಎಸ್‌ಟಿ ಜಾರಿಗೆ ಬಂದ ನಂತರ, ರಾಜ್ಯಗಳು ಅನುಭವಿಸುವ ನಷ್ಟವನ್ನು ಭರಿಸಲು ಕೇಂದ್ರ ಸರ್ಕಾರವು ಪ್ರತಿ ಆರ್ಥಿಕ ವರ್ಷದಲ್ಲಿ ಇಂತಿಷ್ಟು ಜಿಎಸ್‌ಟಿ ಪರಿಹಾರದ ಮೊತ್ತ ನೀಡಬೇಕು. ಜಿಎಸ್‌ಟಿ ಜಾರಿಗೆ ಬಂದ ವರ್ಷದಿಂದಲೂ ಕೇಂದ್ರ ಸರ್ಕಾರವು ಜಿಎಸ್‌ಟಿ ಪರಿಹಾರವನ್ನು ಪೂರ್ಣ ಪ್ರಮಾಣದಲ್ಲಿ ನೀಡುತ್ತಿಲ್ಲ. ಇದರಿಂದ ರಾಜ್ಯಗಳಿಗೆ ನೀಡಬೇಕಿರುವ ಜಿಎಸ್‌ಟಿ ಪರಿಹಾರದ ಬಾಕಿ ಪ್ರತಿ ವರ್ಷ ಏರುತ್ತಲೇ ಇದೆ. 2021-22ನೇ ಆರ್ಥಿಕ ವರ್ಷದ ಅಂತ್ಯಕ್ಕೆ ರಾಜ್ಯಗಳಿಗೆ ನೀಡಬೇಕಿರುವ ಜಿಎಸ್‌ಟಿ ಪರಿಹಾರ ಬಾಕಿಯ ಮೊತ್ತ ₹53,661 ಕೋಟಿಗೆ ತಲುಪಿದೆ.

ಕೇಂದ್ರ ಸಂಗ್ರಹಿಸಿದ ಜಿಎಸ್‌ಟಿ ಪರಿಹಾರ ಸೆಸ್ (ಕೋಟಿಗಳಲ್ಲಿ)





ವರದಿ: ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ. ಆಧಾರ: ಜಿಎಸ್‌ಟಿ ಮಂಡಳಿ ಪತ್ರಿಕಾ ಪ್ರಕಟಣೆಗಳು, 2022-23ನೇ ಸಾಲಿನ ಕೇಂದ್ರ ಬಜೆಟ್, ಹಣಕಾಸು ಸಚಿವಾಲಯದ ಪತ್ರಿಕಾ ಪ್ರಕಟಣೆಗಳು, ಪಿಟಿಐ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 95

ಶಿವಲಿಂಗ ಸ್ಥಾಪನಾ ಕ್ರಮ

ಮಾನವನು ತನ್ನ ದೇಹಕ್ಕನುಗುಣವಾಗಿ ಹಲ್ಲುಜ್ಜುವ ಕಡ್ಡಿಯನ್ನು ಮಾಡಿಕೊಳ್ಳಬೇಕು. ಷಷ್ಠೀ, ಅಮಾವಾಸ್ಯೆ, ನವಮೀ, ವ್ರತದಿವಸ, ಅಸ್ತದಿನ, ಭಾನುವಾರ, ತಂದೆ-ತಾಯಿ ಮೊದಲಾದವರ ಶ್ರಾದ್ಧದಿನಗಳು - ಇಂಥ ದಿನಗಳಲ್ಲಿ ಹಲ್ಲು ಉಜ್ಜಬಾರದು. ಹಲ್ಲುಜ್ಜಿದ ನಂತರ ಜಲಾಶಯಗಳಲ್ಲಿ ವಿಧಿಪೂರ್ವಕವಾಗಿ ಸ್ನಾನಮಾಡಬೇಕು. ಮಂತ್ರಪೂರ್ವಕ ಸ್ನಾನಾನಂತರ ಆಚಮನವನ್ನು ಮಾಡಿ, ಒಗೆದ ಮಡಿ ಬಟ್ಟೆಯನ್ನುಟ್ಟುಕೊಳ್ಳಬೇಕು.

ಬಳಿಕ ನಿತ್ಯಕರ್ಮವನ್ನು ವಿಧಿಪೂರ್ವಕವಾಗಿ ನೆರವೇರಿಸಿ, ಪೂಜಾವಿಧಿಯನ್ನು ಆರಂಭಿಸಬೇಕು. ಏಕಾಗ್ರತೆಯಿಂದ ಪೂಜೆಗೆ ಬೇಕಾದ ಉಪಕರಣಗಳನ್ನೆಲ್ಲಾ ಸಜ್ಜುಗೊಳಿಸಿಕೊಳ್ಳಬೇಕು. ಮೊದಲು ನ್ಯಾಸಾದಿಗಳನ್ನು ಮಾಡಿಕೊಂಡು ಕ್ರಮವಾಗಿ ಶಿವನನ್ನು ಪೂಜಿಸಬೇಕು. ಮೊದಲು ಗಣಪತಿಯನ್ನು, ನಂತರ ದ್ವಾರಪಾಲಕರು, ಇಂದ್ರಾದಿ ದಿಕ್ಪಾಲಕರನ್ನೂ ಪೂಜಿಸಬೇಕು. ದೇವರ ಪೀಠವನ್ನು ಸಿದ್ಧಪಡಿಸಿಕೊಳ್ಳುವಾಗ ಅಷ್ಟದಳವನ್ನು ಮಾಡಿ, ಪೂಜಾದ್ರವ್ಯಗಳನ್ನು ಅಣಿಮಾಡಿಕೊಳ್ಳಬೇಕು. ಅಷ್ಟದಳದಲ್ಲಿ ಶಿವನನ್ನು ಸ್ಥಾಪಿಸಿ, ಮೂರಾವೃತ್ತಿ ಆಚಮನವನ್ನು ಮಾಡಿ, ಮತ್ತೆ ಕೈಗಳನ್ನು ತೊಳೆದುಕೊಂಡು, ಮೂರು ಸಲ ಪ್ರಾಣಾಯಾಮವನ್ನು ಮಾಡಬೇಕು. ನಂತರ, ಮೂರು ಕಣ್ಣುಗಳೂ ಐದು ಮುಖಗಳೂ ಹತ್ತು ತೋಳುಗಳೂ ಇರುವಂಥ, ಸ್ಫಟಿಕದಂತೆ ಶುಭ್ರವಾದ ದೇಹವನ್ನು ಧರಿಸಿರುವ, ವಿಧವಿಧವಾದ ಒಡವೆಗಳಿಂದ ಅಲಂಕೃತನಾದ, ಹುಲಿಯ ಚರ್ಮವನ್ನು ಹೊದ್ದ ಶಿವನ ಸ್ವರೂಪವನ್ನು ತನ್ನ ಮನದಲ್ಲಿ ಸಾಕ್ಷಾತ್ಕರಿಸಿಕೊಂಡು ಧ್ಯಾನ ಮಾಡಬೇಕು. ಶಿವನಂತೆಯೇ ತಾನೂ ಇರುವೆನೆಂದು ತಿಳಿದರೆ ಮನುಷ್ಯನು ತನ್ನ ಪಾಪಗಳೆಲ್ಲವನ್ನೂ ಕಳೆದುಕೊಳ್ಳುವನು.

ಶಿವನನ್ನು ಸ್ಮರಿಸಿ ಶರೀರ ಶುದ್ಧಿಯನ್ನು ಮಾಡಿಕೊಂಡು ಎಲ್ಲ ಕಡೆಯೂ ಪ್ರಣವದಿಂದಲೇ ಷಡಂಗನ್ಯಾಸವನ್ನು ಮಾಡಬೇಕು. ಹಾಗೆಯೇ ಹೃದಯಾದಿನ್ಯಾಸವನ್ನೂ ಮಾಡಿದ ಬಳಿಕ ಪೂಜೆಯನ್ನು ಪ್ರಾರಂಭ ಮಾಡಬೇಕು. ಪಾದ್ಯಕ್ಕೂ ಅರ್ಘ್ಯಕ್ಕೂ ಆಚಮನೀಯಕ್ಕೂ ತಲಾ ಮೂರು ಕುಂಭಗಳನ್ನಿಡಬೇಕು. ಆ ಒಂಬತ್ತು ಕುಂಭಗಳನ್ನೂ ದರ್ಭೆಗಳ ಮೇಲಿರಿಸಿ, ಅವುಗಳ ಮೇಲೆ ದರ್ಭೆಗಳನ್ನು ಮುಚ್ಚಬೇಕು. ಬಳಿಕ ನೀರಿನಿಂದ ಪ್ರೋಕ್ಷಿಸಿ ಎಲ್ಲ ಕುಂಭಗಳಲ್ಲೂ ತಂಪಾಗಿರುವ ಹಿತಕರವಾದ ನೀರನ್ನು ಹಾಕಬೇಕು. ಪಾದ್ಯದ ಬಟ್ಟಲಿನಲ್ಲಿ ಲಾವಂಚವನ್ನೂ ಶ್ರೀಗಂಧವನ್ನೂ ಹಾಕಬೇಕು. ಜಾಜೀಕಾಯಿ, ಕಂಕೋಲ, ಪಚ್ಚಕರ್ಪೂರ, ಆಲದ ಬೇರು, ಹೊಂಗೆಯ ಚಿಗುರುಗಳೆಲ್ಲವನ್ನೂ ಅರೆದು ಪುಡಿ ಮಾಡಬೇಕು. ಆ ಪುಡಿಯನ್ನು ಹದವರಿತು ಆಚಮನೀಯ ಪಾತ್ರೆಯಲ್ಲಿ ಬೆರಸಬೇಕು. ಉಳಿದ ಎಲ್ಲ ಪಾತ್ರೆಗಳಲ್ಲೂ ಇದನ್ನೇ ಶ್ರೀಗಂಧದೊಡನೆ ಬೆರೆಸಿ ಸೇರಿಸಬೇಕು. ದೇವದೇವನಾದ ಶಿವನ ಪಕ್ಕಗಳಲ್ಲಿ ನಂದೀಶ್ವರನನ್ನು ಪೂಜಿಸಬೇಕು. ಬಳಿಕ ಶಿವನನ್ನು ಗಂಧ, ಧೂಪ, ದೀಪ ಮೊದಲಾದವುಗಳಿಂದ ಅರ್ಚಿಸಬೇಕು.

ಬಳಿಕ ಲಿಂಗಶುದ್ಧಿಯನ್ನು ಮಾಡಿ ನರನು ಹರ್ಷಚಿತ್ತನಾಗಿ, ಓಂಕಾರವೇ ಮೊದಲಲ್ಲಿಯೂ, 'ನಮಃ' ಎಂಬ ಕಡೆಯಲ್ಲಿಯೂ ಉಳ್ಳ ('ಓಂ ಶಿವಾಯ ನಮಃ' ಇತ್ಯಾದಿ) ನಾನಾ ಮಂತ್ರಗಳಿಂದ ವಿಧ್ಯುಕ್ತವಾಗಿ ಪೂಜಿಸಬೇಕು. ಓಂಕಾರೋಚ್ಚಾರಣ ಪೂರ್ವಕವಾಗಿ ಸ್ವಸ್ತಿಕ, ಪದ್ಮ ಮೊದಲಾದವನ್ನು ಆಸನವನ್ನಾಗಿ ಕಲ್ಪಿಸಬೇಕು. ಆ ಪೀಠದ ಪೂರ್ವದಳದಲ್ಲಿ ಅಣಿಮಾಮಯವಾದ ಅಕ್ಷರವನ್ನೂ, ದಕ್ಷಿಣದಿಕ್ಕಿನ ದಳದಲ್ಲಿ ಲಘಿಮೆಯನ್ನೂ, ಪಶ್ಚಿಮದಳದಲ್ಲಿ ಮಹಿಮೆಯನ್ನೂ, ಉತ್ತರದಳದಲ್ಲಿ ಪ್ರಾಪ್ತಿಯನ್ನೂ, ಆಗ್ನೇಯಭಾಗದ ದಳದಲ್ಲಿ ಪ್ರಾಕಾಮ್ಯವನ್ನೂ, ನೈರುತ್ಯದಳದಲ್ಲಿ ಈಶಿತ್ವವನ್ನೂ, ವಾಯವ್ಯದಳದಲ್ಲಿ ವಶಿತ್ವವನ್ನೂ, ಈಶಾನ್ಯದಿಕ್ಕಿನಲ್ಲಿ ಸರ್ವಜ್ಞತ್ವವನ್ನೂ, ಕರ್ಣಿಕೆಯಲ್ಲಿ ಸೋಮಮಂಡಲವನ್ನೂ, ಅದರ ಕೆಳಗೆ ಸೂರ್ಯಮಂಡಲವನ್ನೂ, ಅದರ ಕೆಳಗೆ ಅಗ್ನಿಮಂಡಲವನ್ನೂ, ಅದರ ಕೆಳಗೆ ಧರ್ಮ ಜ್ಞಾನ ವೈರಾಗ್ಯ ಐಶ್ವರ್ಯಾದಿಗಳನ್ನೂ ಭಾವಿಸಬೇಕು.

ಶಿವನಿಗೆ ನಾಲ್ಕು ದಿಕ್ಕುಗಳಲ್ಲಿಯೂ, ಅವ್ಯಕ್ತ, ಮಹತ್ತು, ಅಹಂಕಾರ, ಬುದ್ಧಿಗಳನ್ನೂ; ಕರ್ಣಿಕೆಯ ಮೇಲಿರುವ ಸೋಮಮಂಡಲದ ಮೇಲೆ ಸತ್ವರಜಸ್ತಮೋಗುಣಗಳು ಇವೆ ಎಂದು ಭಾವಿಸಬೇಕು. 'ಸದ್ಯೋಜಾತಂಪ್ರಪದ್ಯಾಮಿ' ಎಂಬ ಮಂತ್ರದಿಂದ ಆ ಪರಶಿವನನ್ನು ಆವಾಹಿಸಬೇಕು. 'ವಾಮದೇವಾಯ ನಮಃ' ಎಂಬ ಮಂತ್ರದಿಂದ ಆಸನದ ಮೇಲೆ ಕುಳ್ಳಿರಿಸಬೇಕು. 'ತತ್ಪುರುಷಾಯ ವಿದ್ಮಹೇ' ಎಂಬ ರುದ್ರಗಾಯತ್ರಿಯಿಂದ ಶಿವನ ಸಾನ್ನಿಧ್ಯವನ್ನು ಬಯಸಬೇಕು. 'ಅಘೋರರೇಭ್ಯಃ' ಎಂಬ ಮಂತ್ರದಿಂದ ಧ್ಯಾನಿಸಬೇಕು. 'ಈಶಾನಃ ಸರ್ವವಿದ್ಯಾನಾಂ' ಎಂಬ ಮಂತ್ರದಿಂದ ಪೂಜಿಸಬೇಕು. ಪಾದ್ಯವನ್ನೂ ಆಚಮನೀಯವನ್ನೂ ಇತ್ತು, ಅರ್ಘ್ಯವನ್ನು ಅರ್ಪಿಸಿ, ವಿಧಿವತ್ತಾಗಿ ಶಿವನನ್ನು ಸ್ಥಾಪಿಸಬೇಕು - ಎಂದು ಬ್ರಹ್ಮ ನಾರದನಿಗೆ ತಿಳಿಸುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪ್ರತಿ ಕ್ವಿಂಟಲ್ ಗೋಧಿಗೆ ₹525 ಬೆಂಬಲ ಬೆಲೆ ನೀಡಲಾಗುವುದು ಎಂದು ಕೇಂದ್ರ ಸರ್ಕಾರ ಘೋಷಿಸಿದೆ ಎಂದು ಎಬಿಪಿ ಸುದ್ದಿ ವಾಹಿನಿ ವರದಿ ಮಾಡಿದೆ ಎನ್ನಲಾಗಿರುವ ಮಾಹಿತಿ ಈಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಗೋಧಿ ಬೆಳೆಯಲ್ಲಿ ಕುಸಿತ ಉಂಟಾಗಿರುವ ಕಾರಣದಿಂದಾಗಿ ಮೋದಿ ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಹೇಳಲಾಗಿದೆ. ಕೇಂದ್ರದ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರ ಚಿತ್ರವೂ ಮಾಹಿತಿ ಜೊತೆ ಇದೆ.

ಈ ಮಾಹಿತಿ ಸುಳ್ಳು ಎಂದು 'ಇಂಡಿಯಾ ಟುಡೆ ಫ್ಯಾಕ್ಟ್‌ಚೆಕ್' ವರದಿ ಮಾಡಿದೆ. 2022ರ ಮಾರ್ಚ್ 16ರಂದು ಈ ಮಾಹಿತಿಯು 'ಅನಜ್ ಮಂಡಿ ಎಕ್ಸ್‌ಪರ್ಟ್' ಎಂಬ ಯೂ ಟ್ಯೂಬ್ ಚಾನಲ್‌ನಲ್ಲಿ ಪ್ರಕಟವಾಗಿದೆ. ಈ ಸುದ್ದಿಗೆ ಸಂಬಂಧಿಸಿದ ಬೇರೆ ಯಾವುದೇ ಮಾಹಿತಿಯನ್ನೂ ಈ ಯೂ ಟ್ಯೂಬ್ ಚಾನಲ್ ನೀಡಿಲ್ಲ. ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯವು ಈ ರೀತಿಯ ಘೋಷಣೆಯನ್ನು ಮಾಡಿಲ್ಲ. ಎಬಿಪಿ ಸುದ್ದಿ ವಾಹಿನಿ ವೆಬ್‌ಸೈಟ್‌ನಲ್ಲಿಯೂ ಈ ಕುರಿತು ಮಾಹಿತಿ ಇಲ್ಲ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಪ್ರೇಮ-ವ್ಯಾಮೋಹಗಳಲ್ಲಿ ಸಾಮರಸ್ಯ

ಪ್ರೇಮಾತಿಶಯವಿರದ ದಾಂಪತ್ಯ ವರ್ಧಿಸದು |
ವ್ಯಾಮೋಹಕೆಡೆಗೊಟ್ಟೊಡದು ನಿಗಳವಹುದು ||
ಸಾಮರಸ್ಯವನೆಂತು ಕಾಣ್ಬುದೀ ವಿಷಮದಲಿ |
ಆಮಿಷದ ತಂಟೆಯಿದು - ಮಂಕುತಿಮ್ಮ || 607 ||

ಪದ-ಅರ್ಥ: ಪ್ರೇಮಾತಿಶಯವಿರದ = ಪ್ರೇಮ + ಅ-ತಿಶಯ + ಇರದ, ವರ್ಧಿಸದು = ಬೆಳೆಯದು, ವ್ಯಾಮೋಹಕೆಡೆಗೊಟ್ಟೊಡದು = ವ್ಯಾಮೋಹಕ್ಕೆ + ಎಡೆಗೊಟ್ಟೊಡೆ(ಅವಕಾಶ ಕೊಟ್ಟರೆ) + ಅದು, ನಿಗಳವಹುದು = ನಿಗಳ(ಬಂಧ, ಸಂಕೋಲೆ-) + ಅಹುದು, ಸಾಮರಸ್ಯವನೆಂತು = ಸಾಮರಸ್ಯವನು + ಎಂತು, ಕಾಣ್ಬುದೀ = ಕಾಣ್ಬುದು(ಕಾಣುವುದು) + ಈ, ಆಮಿಷ = ದೇಹ, ಮನಸುಗಳ, ತಂಟೆಯಿದು = ತಂಟೆ(ತಕರಾರು) + ಇದು.

ವಾಚ್ಯಾರ್ಥ: ಅತಿಶಯದ ಪ್ರೇಮವಿರದ ದಾಂಪತ್ಯ ಬೆಳೆಯದು. ಅದು ವ್ಯಾಮೋಹಕ್ಕೆ ತಿರುಗಿದರೆ ಬಂಧವಾದೀತು. ಇಂಥ ವಿಷಮದಲ್ಲಿ ಸಾಮರಸತೆಯನ್ನು ಕಾಣುವುದು ಹೇಗೆ? ಇದು ದೇಹ, ಮನಸುಗಳ ತಕರಾರು.

ವಿವರಣೆ: ದಾಂಪತ್ಯ ಜೀವನಕ್ಕೆ ಆದರ್ಶ ಯಾವುದು? ವೇದಗಳಲ್ಲಿ ಬರುವ ವರ್ಣನೆ ತುಂಬ ಸುಂದರವಾದದ್ದು, ಅರ್ಥಗರ್ಭಿತವಾದದ್ದು. 'ನಾನು ದಿವಿ, ನೀನು ಭುವಿ, ಪೃಥಿವಿ ತಾಯಿ, ಆಕಾಶ ತಂದೆ'. 'ದ್ಯಾವಾಪೃಥಿವೀ' ಎಂಬುದು ವೇದದ ಕಾಣ್ಕೆ. ತಾಯಿ ಪೃಥ್ವಿ, ತಂದೆ ಆಕಾಶ. ಇದು ಅಚ್ಚುಮೆಚ್ಚಿನ ಜೋಡಿ. ಆಕಾಶದಿಂದ ಸುರಿದ ಮಳೆಯಿಂದಾಗಿ ಪೃಥ್ವಿ ಗರ್ಭ ಧರಿಸುತ್ತಾಳೆ. ಆಕೆಯ ಗರ್ಭದ ಮಗು, ನೀರು ಮತ್ತೆ ಮೋಡವಾಗಿ ಆಕಾಶವನ್ನೇರುತ್ತದೆ. ಹೀಗೆ ಸದಾಕಾಲದ ಸಂಬಂಧ ಪೃಥ್ವಿ ಮತ್ತು ಆಕಾಶಗಳದ್ದು. ಆಕಾಶ ನೋಟಕ್ಕೆ ಸಿಲುಕುವಂಥದ್ದು ಆದರೆ ಕೈಗೆಟುಕದಂಥದ್ದು. ಆದರೆ ಆಕಾಶ ನೆಲವನ್ನು ಯಾವಾಗಲೂ ಮುಟ್ಟದಂತೆಯೇ ಕಂಡರೂ ಅದು ಯಾವಾಗಲೂ ದೂರವೇ. ಹೀಗೆ ಆತ್ಮೀಯ ಸಂಬಂಧವನ್ನು ಮತ್ತು ನಿರ್ಧಾರಿತ ದೂರವನ್ನು ಉಳಿಸಿಕೊಂಡಿರುವ ಈ ದಂಪತಿಗಳು ಒಂದು ಆದರ್ಶ. ಅಲ್ಲಿ ಪರಸ್ಪರಾವಲಂಬನೆ, ಪ್ರೀತಿ ಇದೆ. ಆದರೆ ಅದು ಅಲ್ಲಿ ಅತಿಶಯವಾದ ಮೋಹವಾಗದೆ ಅಂತರವನ್ನು ಕಾಪಾಡಿಕೊಂಡಿದೆ.

ಕಗ್ಗದ ಮಾತು ಬಲು ಚೆಂದ. ಪ್ರೇಮದ ಅತಿಶಯದ ಬಂಧವಿರದೆ ದಾಂಪತ್ಯ ಉಳಿಯದು. ಪ್ರೇಮವೇ ಎರಡು ಜೀವಗಳನ್ನು ಗಟ್ಟಿಯಾಗಿ ಹಿಡಿದಿಡುವ ಬಂಧ. ನಮ್ಮ ಪುರಾಣಗಳಲ್ಲಿ, ಇತಿಹಾಸದಲ್ಲಿ ಇಂಥ ಸುಂದರ ಪ್ರೇಮಮಯ ದಂಪತಿಗಳ ಚಿತ್ರಣಗಳನ್ನು ನೋಡಿದ್ದೇವೆ. ರಾಮ-ಸೀತೆಯರ ಪ್ರೇಮ, ಕೃಷ್ಣ-ರಾಧೆಯರ ಪ್ರೇಮ, ಅಷ್ಟೇ ಅಲ್ಲ, ಋಷಿಗಳಾಗಿದ್ದರೂ ಅನಾದೃಶ ಪ್ರೇಮದಿಂದ ಹೆಸರಾದ ವಶಿಷ್ಠ-ಅರುಂಧತಿಯರು, ಅಗಸ್ತ್ಯ-ಲೋಪಾಮುದ್ರೆ, ಯಾಜ್ಞವಲ್ಕ್ಯ-ಮೈತ್ರೇಯಿ, ಇವರೆಲ್ಲ ದಾಂಪತ್ಯಕ್ಕೆ ತಮ್ಮ ಪ್ರೇಮದಿಂದ ಹೊಸ ಆಯಾಮವನ್ನೇ ಕೊಟ್ಟವರು.

ಪ್ರೇಮ ಒಂದು ಅಳತೆಯಲ್ಲಿರಬೇಕು. ಅದು ಮಿತಿಯನ್ನು ದಾಟಿದರೆ ವ್ಯಾಮೋಹವಾಗುತ್ತದೆ. ಅದು ಅನಾಹುತಕ್ಕೆ ಎಡೆಮಾಡುತ್ತದೆ. ರಾಮಾಯಣದಲ್ಲಿ ಕೈಕೇಯಿಯ ಬಗ್ಗೆ ದಶರಥನ ವ್ಯಾಮೋಹ ರಾಮಾಯಣದ ದಿಶೆಯನ್ನೇ ಬದಲಿಸಿತು. ಹೆಂಡತಿಯ ಮೋಹದಲ್ಲಿ ಸಿಕ್ಕಿಬಿದ್ದ ದಶರಥ ಮೂಢನ ಹಾಗೆ ವರ್ತಿಸುತ್ತಾನೆ, ಅಸಂಬದ್ಧ ಪ್ರಲಾಪ ಮಾಡುತ್ತಾನೆ, ಅಸಾಧ್ಯವಾದದ್ದನ್ನು ನಡೆಸುವ ಮಾತುಕೊಡುತ್ತಾನೆ. ಕೊನೆಗೆ ಸೋಲುತ್ತಾನೆ.

ಕಗ್ಗದ ಕೊನೆಯ ಎರಡು ಸಾಲುಗಳು ವಿಶೇಷವನ್ನು ಧ್ವನಿಸುತ್ತವೆ. ಪ್ರೇಮ ಮತ್ತು ವ್ಯಾಮೋಹಗಳೆಂಬ ಎರಡು ಧ್ರುವಗಳ ಮಧ್ಯೆ ಸಾಮರಸ್ಯವನ್ನು ಸಾಧಿಸುವುದೆಂತು? ಅದನ್ನು ಆಮಿಷದ ತಂಟೆ ಎನ್ನುತ್ತದೆ. ಆಮಿಷವೆಂದರೆ ದೇಹ ಮತ್ತು ಮನಸ್ಸುಗಳ ವಿಚಾರ. ಸಾಮಾನ್ಯವಾಗಿ ಮನಸ್ಸು ಪ್ರೇಮಕ್ಕೆ ಹಾತೊರೆದರೆ, ದೇಹ ವ್ಯಾಮೋಹಕ್ಕೆ ಮುಖ ಮಾಡುತ್ತದೆ. ಈ ತಂಟೆಗೆ ಒಂದು ಪರಿಹಾರವೆಂದರೆ ಮನಸ್ಸನ್ನು ಬೆಳೆಸಿ, ದೇಹದ ಬಯಕೆಯನ್ನು ಕೊಂಚ ಮಿತಿಯಲ್ಲಿ ಇಡುವುದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ ಶುಕ್ರವಾರ ಏಪ್ರಿಲ್ 15, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು - ಮೇಷ ಮಾಸದ 01 ನೇ ದಿನ ತಿಥಿ: (ಚೈತ್ರ ಶುದ್ಧ) ಚತುರ್ದಶಿ ಗಂ. 26-26 ನಕ್ಷತ್ರ: ಉತ್ತರಫಲ್ಗುನಿ ಗಂ. 09-35 ಯೋಗ: ಧ್ರುವ ಗಂ. 07-55, ವ್ಯಾಘತ ಗಂ. 29-32 ಕರಣ: ಗರಜೆ ಗಂ. 15-15.
ರಾಹುಕಾಲ : ಬೆಳಿಗ್ಗೆ 10:30 - 12:00 ಸೂರ್ಯೋದಯ : 06-21 ಸೂರ್ಯಾಸ್ತ : 06-40
ಮುಸ್ಲಿಂ ದಿನಾಂಕ : 13 ರಂಜಾನ್
ದಿನ ವಿಶೇಷ : ಸೌರ ಯುಗಾದಿ, ದಮನಕ ಚತುರ್ದಶಿ, ತ್ರಿವೆಂಡ್ರಮ್ ಅರತ್, ಗುಡ್ ಫ್ರೈಡೆ,
ಅದೃಷ್ಟ ಸಂಖ್ಯೆ: 2, 9

ಮೇಷ: ನಿಮ್ಮ ಎಲ್ಲಾ ಕಾರ್ಯಗಳ ವೈಫಲ್ಯಕ್ಕೆ ಪ್ರಧಾನ ಕಾರಣವಾಗಿ ನಿಮ್ಮ ಅನುಭವದ ಕೊರತೆ ಕಾಣಲಿದೆ. ಆದ್ದರಿಂದ ನೀವು ಸೂಕ್ತ ಮಾರ್ಗದರ್ಶನ ತೆಗೆದುಕೊಳ್ಳುವುದು ಉತ್ತಮ. ಅವಶ್ಯಕತೆಗಿಂತ ಹೆಚ್ಚಾಗಿ ಹಣ ವ್ಯಯವಾಗುವುದು.

ವೃಷಭ: ಧಾರ್ಮಿಕ ವಿಚಾರದಲ್ಲಿ ಆಸಕ್ತಿ ತೋರಿದಷ್ಟೂ ಸುಖ-ಶಾಂತಿ ಹೆಚ್ಚುವುದು. ಉಪಹಾರ ಮಂದಿರ, ಐಸ್‌ಕ್ರೀಮ್, ತಂಪುಪಾನೀಯದ ಅಂಗಡಿಯವರಿಗೆ ಈ ದಿನವು ಸುಗ್ಗಿ ಹಬ್ಬದಂತಾಗುವುದು.

ಮಿಥುನ: ಏಕಾಂಗಿಯಾಗಿರುವವರಿಗೆ ಸಂಗಾತಿ ಸಿಗುವ ಲಕ್ಷಣಗಳಿವೆ. ಕೆಲಸಗಾರರಲ್ಲಿ ಒಮ್ಮತಾಭಿಪ್ರಾಯ ಮೂಡಿಸಲು ನೀವು ಅನುಸರಿಸಿದ ಮಾರ್ಗ ಮೆಚ್ಚಿ ಮೇಲಧಿಕಾರಿಗಳಿಂದ ಪ್ರಶಂಸೆ. ಕೆಲಸದ ಒತ್ತಡ, ಜವಾಬ್ದಾರಿಗಳು ಹೆಚ್ಚಲಿವೆ.

ಕರ್ಕಾಟಕ: ಶತ್ರುಗಳ ಬಾಧೆ ದೂರಾಗಿ ನಿಮ್ಮ ಯೋಜನೆಗಳು ಈಡೇರಲಿದೆ. ಆಸ್ತಿ ವಿಷಯಗಳನ್ನು ತ್ವರಿತಗತಿಯಲ್ಲಿ ಬಗೆಹರಿಸಿಕೊಳ್ಳಲು ಹಿತೈಷಿಯೊಬ್ಬರ ನೆರವು ಪಡೆಯುವಿರಿ. ದೂರ ಪ್ರಯಾಣ ಮಾಡಬೇಕಾದ ಸಂದರ್ಭ ಬರಲಿದೆ.

ಸಿಂಹ: ಶ್ವಾಸಕೋಶಕ್ಕೆ ಸಂಬಂಧಪಟ್ಟ ಕಾಯಿಲೆಗಳ ಲಕ್ಷಣಗಳು ಗಮನಕ್ಕೆ ಬಂದಲ್ಲಿ, ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ. ಧಾನ್ಯಗಳ ರಫ್ತು ಮಾರಾಟಗಾರರು ಹಾಗೂ ದಲ್ಲಾಳಿಗಳು ಹೆಚ್ಚಿನ ಅನುಕೂಲವನ್ನು ಪಡೆಯುವರು.

ಕನ್ಯಾ: ಕುಟುಂಬದಲ್ಲಿ ಭಿನ್ನಾಭಿಪ್ರಾಯವನ್ನು ಮುರಿದು ಹೊಸ ತಲೆಮಾರಿನವರು ನೂತನವಾಗಿ ಸಂಬಂಧ ಬೆಳೆಸುವರು. ಸರ್ಕಾರಿ ಕೆಲಸಗಳು ಗುತ್ತಿಗೆಯಾಗಿ ಲಭಿಸುವುದರ ಜೊತೆಗೆ ಲಾಭದಾಯಕವಾಗಿ ಇರುತ್ತವೆ.

ತುಲಾ: ಗಣಿತಶಾಸ್ತ್ರಜ್ಞರಿಗೆ, ಆಧ್ಯಾತ್ಮ ಚಿಂತಕರಿಗೆ ಈ ದಿನ ಅತ್ಯಂತ ವಿಶೇಷವಾದ ದಿನವೆನಿಸಲಿದೆ. ಸುಗಂಧ ದ್ರವ್ಯಗಳ ವ್ಯಾಪಾರಿಗಳಿಗೆ ವ್ಯಾಪಾರ ಹೆಚ್ಚಲಿದೆ. ಸುತ್ತಲಿನ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಪರಿಗಣಿಸಿ ವ್ಯವಹರಿಸಿ.

ವೃಶ್ಚಿಕ: ಗುರಿಯನ್ನು ಮುಟ್ಟುವತ್ತ ನಿಮ್ಮ ಹಾದಿಯನ್ನು ಮತ್ತೊಮ್ಮೆ ಪರಿಶೀಲಿಸಿಕೊಂಡಲ್ಲಿ ಯೋಜನೆಗಳು ನೀವು ಆಲೋಚಿಸಿದಕ್ಕಿಂತಲೂ ಹೆಚ್ಚು ಪ್ರಾಯೋಗಿಕವಾಗಿ ನೆರವೇರುವುದು.

ಧನು: ಗೃಹ ನಿರ್ಮಾಣ ಕಾರ್ಯಕ್ಕೆ ಆರ್ಥಿಕತೆಯ ಅಭಾವ ಸ್ಥಿತಿ ಎದುರಾಗಬಹುದು, ಪರಿಣಾಮವಾಗಿ ಮನಸ್ಸಿನಲ್ಲಿ ಹೆದರಿಕೆ ಮೂಡಲಿದೆ. ಶ್ರೀ ಲಕ್ಷ್ಮೀ ವೆಂಕಟರಮಣನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಶುಭವಾಗುತ್ತದೆ.

ಮಕರ: ಸಿನಿಮಾ ಕಲಾವಿದರಿಗೆ ಸದವಕಾಶ ಒದಗಿ ಬರಲಿದೆ. ಅಭಿಮಾನಿಗಳನ್ನು ಸಂಪಾದಿಸಿಕೊಳ್ಳುವಿರಿ. ಈ ದಿನ ಗ್ರಹಗಳು ಪೂರಕವಾಗಿದೆ, ನಿಮ್ಮಿಚ್ಛೆಯಂತೆ ಚಟುವಟಿಕೆಗಳು ನಡೆಯುವುದು..

ಕುಂಭ: ಬಹಳ ದಿನಗಳಿಂದ ಕಾಡುತ್ತಿದ್ದ ಭೂಮಿಗೆ ಸಂಬಂಧಿಸಿದ ಸಮಸ್ಯೆಯೊಂದು ಈ ದಿನ ನಿರಾತಂಕವಾಗಿ ಬಗೆ ಹರಿಯುವುದು. ವೃತ್ತಿ ಮತ್ತು ಕುಟುಂಬದ ಜವಾಬ್ದಾರಿಯನ್ನು ಸಮವಾಗಿ ಸ್ವೀಕರಿಸಿ.

ಮೀನ: ಅಸಾಧ್ಯ ಕಾರ್ಯಗಳನ್ನೂ ಸಹ ಸಾಧಿಸಿ ತೋರಿಸುವಷ್ಟು ಮನೋಬಲ ನಿಮ್ಮಲ್ಲಿದೆ. ಕುಲದೇವರ ದರ್ಶನದಿಂದ ಈಗಿನ ನಿಮ್ಮೆಲ್ಲಾ ವ್ಯವಹಾರಗಳಲ್ಲಿ ಅಭಿವೃದ್ಧಿಯನ್ನು ಸಾಧಿಸಬಲ್ಲಿರಿ. ನಿಮ್ಮ ಭಾವನೆಗಳ ಬಗ್ಗೆ ಪ್ರಾಮಾಣಿಕರಾಗಿರಿ.

ಪದಬಂಧ 4928

- ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಕಾಂತಿಯಿಂದ ಕೂಡಿದವನು (3)
4.ಹರನಲ್ಲಿ ದಿಟ್ಟ ಅಡಗಿದ್ದಾನೆ! (3)
5.ಕೊನೆಗೆ ಗರ ಬಡಿದಿರುವ ಸಂಭ್ರಮ! (4)
6.ದರದಲ್ಲಿರುವ ಅಗತ್ಯತೆ (4)
8.ತಿರುವುಮುರುವಾಗಿರುವ ನೊಸಲು (2)
10.ನೇಸರ ಇಲ್ಲಿದ್ದಾನೆ (2)
13.ತಾಯಿಯ ಮನೆ ಕಿಟಕಿ! (4)
14.ತನ್ನ ಜಾತಿಯೇ ಮುಖ್ಯವೆಂದು ವಾದಿಸುವವನು (4)
15.ಈತ ಪ್ರವಾಸಿ (3)
16.ತುಂಬಾ ಹದಗೆಟ್ಟ ಸ್ಥಿತಿ (3)

ಮೇಲಿಂದ ಕೆಳಕ್ಕೆ

1.ಪಂಚಾಯಿತರ ಸಮ್ಮುಖದಲ್ಲಿ ಸಿದ್ಧಪಡಿಸಿದ ವರದಿ (6)
2.ಲಗ್ನದಲ್ಲಿ ಕನ್ಯಾಪಿತೃವು ವರನಿಗೆ ಕೊಡುವ ಹಣ (5)
3.ಮಗನೊಡನೆ ಕಾಣಿಸಿದ ಪುತ್ರಿ (3)
5.ಈತ ಸೈನ್ಯದ ಮುಖ್ಯಸ್ಥ (4)
7.ಇದು ಚರಿತ್ರೆಗೆ ಸಂಬಂಧಿಸಿರುವುದು (6)
9.ದಿಟವಾಗಿಯೂ ಈತ ಮೊಂಡ! (4)
11.ಲೋಹದ ಹಕ್ಕಿಯಲ್ಲಿನ ಪಯಣ (5)
12.ಕನ್ನಡಿಗನ ಡೊನೇಷನ್! (3)



4927ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಂಹಿತೆ 4.ಗಡಿಪಾರು
6.ನಾಟುನುಡಿ 8.ಕೆನ್ನೀರು
11.ಉಬ್ಬಕ 13.ಪರಿಣಾಮ
17.ತಟವಟ 18.ಕವಾಟ

ಮೇಲಿಂದ ಕೆಳಕ್ಕೆ:
1.ಸಂಹಾರ 2.ತೆಗಳಿಕೆ
3.ವಯಿನು 5.ರುನಾ
7.ಡಿಳ್ಳಾಯ 9.ರುಮಾಲು
10.ಪ್ರತಾಪ 12.ಕರ್ನಾಟಕ
14.ರಿವಾಜು 15.ಮತ
16.ಚೀರಾಟ

ಸುಡೊಕು 5314

		5	6		2			
	3				4		8	
6				1			5	
	8	3		6				4
1				4				8
2			8		1	5	6	
					3			
4		2		9			3	1
	1		4		6			5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5313 ಸುಡೊಕು

8	7	6	1	4	9	3	2	5
1	3	4	5	2	7	8	6	9
5	9	2	6	3	8	7	4	1
2	1	5	9	7	3	6	8	4
6	4	7	8	1	2	9	5	3
3	8	9	4	5	6	1	7	2
9	2	8	3	6	5	4	1	7
7	6	1	2	9	4	5	3	8
4	5	3	7	8	1	2	9	6

ಶುಕ್ರವಾರ • ಏಪ್ರಿಲ್ 15, 2022 ಪ್ರಜಾವಾಣಿ

50 ದಿನಗಳು ಕಳೆದರೂ ನಿಲ್ಲದ 'ವಿಶೇಷ ಸೇನಾ ಕಾರ್ಯಾಚರಣೆ'

ರಷ್ಯಾದ ಸಮರನೌಕೆಗೆ ಉಕ್ರೇನ್ ಕ್ಷಿಪಣಿ ದಾಳಿ

ಒಡೆಸಾ (ಎಎಫ್‌ಪಿ): ಕಪ್ಪು ಸಮುದ್ರದಲ್ಲಿ ರಷ್ಯಾದ ನೌಕಾಪಡೆಯ ಹೆಮ್ಮೆಯ ಕಿರೀಟದಂತಿದ್ದ ಸಮರ ನೌಕೆ 'ಮಾಸ್ಕವಾ' ಮೇಲೆ ಕ್ಷಿಪಣಿ ದಾಳಿ ನಡೆಸಿ ತೀವ್ರ ಹಾನಿಗೊಳಿಸಿರುವುದಾಗಿ ಉಕ್ರೇನ್ ಸೇನೆ ಗುರುವಾರ ತಿಳಿಸಿದೆ.

ನಿಖರ ಗುರಿ ನಿರ್ದೇಶಿತ ಕ್ರೂಸರ್ ಕ್ಷಿಪಣಿಗಳನ್ನು ಉಡಾಯಿಸುವ ಮಾಸ್ಕವಾ ನೌಕೆ ಈ ಹಿಂದೆ ಸಿರಿಯಾ ಸಂಘರ್ಷದಲ್ಲಿ ಕಾರ್ಯನಿರ್ವಹಿಸಿತ್ತು. ಉಕ್ರೇನ್‌ನ ದಕ್ಷಿಣ ಕರಾವಳಿ ಮತ್ತು ಕೇಂದ್ರ ಸ್ಥಳಗಳ ಮೇಲೆ ರಷ್ಯಾ ನೌಕಾಪಡೆ ನಡೆಸುತ್ತಿದ್ದ ದಾಳಿಯಲ್ಲಿ ಈ ನೌಕೆ ಸದ್ಯ ಮುಂಚೂಣಿ ಪಾತ್ರ ನಿರ್ವಹಿಸುತ್ತಿತ್ತು.

'ರಷ್ಯಾದ ಸಮರ ನೌಕೆಗೆ ಆಗಿರುವ ತೀವ್ರ ಹಾನಿಗೆ ನಮ್ಮ ದೇಶೀಯ ನೆಪ್ಚೂನ್ ಕ್ರೂಸ್ ಕ್ಷಿಪಣಿಗಳು ಕಾರಣ' ಎಂದು ಒಡೆಸಾ ಸೇನಾ ಆಡಳಿತದ ವಕ್ತಾರ ಸೆರ್ಗೆ ಬ್ರಾಚುಕ್ ಟೆಲಿಗ್ರಾಮ್‌ನಲ್ಲಿ ತಿಳಿಸಿದರು.

'ನೌಕೆಯಲ್ಲಿನ ಮದ್ದುಗುಂಡುಗಳು ಸ್ಫೋಟಿಸಿದ್ದರಿಂದ ನೌಕೆಗೆ ಬೆಂಕಿ ಹೊತ್ತಿತ್ತು. ಬೆಂಕಿ ನಂದಿಸಲಾಗಿದೆ. ಪ್ರಮುಖ ಕ್ಷಿಪಣಿ ಶಸ್ತ್ರಾಸ್ತ್ರಗಳಿಗೆ ಯಾವುದೇ ಹಾನಿಯಾಗಿಲ್ಲ. ನೌಕೆ ಸಮುದ್ರದಲ್ಲಿ ತೇಲುತ್ತಿದೆ' ಎಂದು ರಷ್ಯಾದ ರಕ್ಷಣಾ ಸಚಿವಾಲಯ ಸ್ಪಷ್ಟನೆ ನೀಡಿದೆ.

ನಾಗರಿಕರ ಸ್ಥಳಾಂತರ ಪುನರಾರಂಭ: ರಷ್ಯಾದಿಂದ ಮತ್ತಷ್ಟು ತೀವ್ರ ದಾಳಿ ನಡೆಯುವ ಆತಂಕವಿರುವುದರಿಂದ ನಾಗರಿಕರನ್ನು ಸ್ಥಳಾಂತರಿಸುವ ಪ್ರಕ್ರಿಯೆಯನ್ನು ಉಕ್ರೇನ್ ಪುನರಾರಂಭಿಸಿದೆ.

ಉಕ್ರೇನ್‌ನ ಪೂರ್ವ ಮತ್ತು ದಕ್ಷಿಣದಲ್ಲಿ 9 ಮಾನವೀಯ ಕಾರಿಡಾರ್‌ಗಳ ಮೂಲಕ ನಾಗರಿಕರ ಸ್ಥಳಾಂತರಿಸುವಿಕೆಯನ್ನು ಗುರುವಾರ ಪುನರಾರಂಭಿಸಲಾಗಿದೆ ಎಂದು ಉಕ್ರೇನ್ ಉಪ ಪ್ರಧಾನಿ ಇರಿನಾ ವೆರೆಶ್‌ಚುಕ್ ತಿಳಿಸಿದರು.

ಉಕ್ರೇನ್‌ನ ಮರಿಯುಪೊಲ್‌ನಲ್ಲಿ ಗುರುವಾರ ಬಹುಮಹಡಿ ಕಟ್ಟಡವೊಂದು ಧ್ವಂಸಗೊಂಡಿದೆ — ಎಪಿ/ಪಿಟಿಐ

ರಷ್ಯಾ-ಉಕ್ರೇನ್ ಸಮರಾಂಗಣ

ಕಲಿಬ್ ಕ್ಷಿಪಣಿ ಉಡಾವಣೆ: ರಷ್ಯಾದ ಪೆಸಿಫಿಕ್ ಫ್ಲೀಟ್‌ನ ಎರಡು ಡೀಸೆಲ್ ಚಾಲಿತ ಜಲಾಂತರ್ಗಾಮಿ ನೌಕೆಗಳು ಜಪಾನ್ ಸಮುದ್ರದಲ್ಲಿ ಗುರುವಾರ ಸಮರಾಭ್ಯಾಸದಲ್ಲಿ ಕಲಿಬ್ ಕ್ರೂಸ್ ಕ್ಷಿಪಣಿಗಳನ್ನು ಯಶಸ್ವಿಯಾಗಿ ಉಡಾಯಿಸಿದವು ಎಂದು ರಷ್ಯಾದ 'ಟಾಸ್' ಸುದ್ದಿ ಸಂಸ್ಥೆ ಹೇಳಿದೆ. ರಷ್ಯಾದ ಸೇನಾ ಚಟುವಟಿಕೆಗಳನ್ನು ಹತ್ತಿರದಿಂದ ಗಮನಿಸಲಾಗುತ್ತಿದೆ ಎಂದು ಜಪಾನ್ ಹೇಳಿದೆ.

'ಪೂರ್ವದ ದೇಶಗಳಿಗೆ ಇಂಧನ ರಫ್ತು'

ಮಾಸ್ಕೊ (ರಾಯಿಟರ್ಸ್): 'ರಷ್ಯಾದ ಅನಿಲ ಆಮದನ್ನು ತಕ್ಷಣ ತ್ಯಜಿಸಲು ಐರೋಪ್ಯ ರಾಷ್ಟ್ರಗಳಿಗೆ ಸಾಧ್ಯವಿಲ್ಲ. ಆದರೆ, ನಾವು ಪೂರ್ವದ ದೇಶಗಳಿಗೆ ಇಂಧನ ರಫ್ತು ಮಾಡಲಿದ್ದೇವೆ' ಎಂದು ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಗುರುವಾರ ಹೇಳಿದ್ದಾರೆ.

'ಐರೋಪ್ಯ ರಾಷ್ಟ್ರಗಳು ರಷ್ಯಾದ ಇಂಧನ ಅವಲಂಬನೆಯಿಂದ ಹೊರಬರಲು ಪ್ರಯತ್ನಿಸುತ್ತಿರುವುದರಿಂದ ನಾವು ಚೀನಾ ಮತ್ತು ಏಷ್ಯಾದ ರಾಷ್ಟ್ರಗಳೊಂದಿಗೆ ನಿಕಟ ಬಾಂಧವ್ಯ ಬಲಪಡಿಸಿಕೊಳ್ಳುತ್ತಿದ್ದೇವೆ' ಎಂದು ಪುಟಿನ್ ಹೇಳಿದರು.

ಭದ್ರತೆ ಹೆಚ್ಚಳ: 'ಸ್ವೀಡನ್ ಮತ್ತು ಫಿನ್ಲೆಂಡ್ ನ್ಯಾಟೊ ಸೇರಿದರೆ ರಷ್ಯಾ ತನ್ನ ಪಶ್ಚಿಮ ಗಡಿಗಳಲ್ಲಿ ಭದ್ರತೆ ಹೆಚ್ಚಿಸಲಿದೆ. ಇನ್ನುಮುಂದೆ ಬಾಲ್ಟಿಕ್ ಪರಮಾಣು ಮುಕ್ತತೆ ಬಗ್ಗೆ ಮಾತನಾಡಲಾಗದು' ಎಂದು ರಷ್ಯಾ ಹೇಳಿದೆ.

ರಷ್ಯಾಕ್ಕೆ ಸೋಲು: ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿಯ ನಾಲ್ಕು ಸಮಿತಿಗಳಿಗೆ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ರಷ್ಯಾ ನಾಲ್ಕರಲ್ಲೂ ಸೋಲು ಕಂಡಿದೆ. ಇದನ್ನು ಉಕ್ರೇನ್ ಮೇಲಿನ ಆಕ್ರಮಣಕ್ಕಾಗಿ ರಷ್ಯಾ ಜಾಗತಿಕ ವೇದಿಕೆಯಿಂದ ಪ್ರತ್ಯೇಕಿಸುವ ತೀರ್ಪು ಎಂದು ಪರಿಗಣಿತವಾಗಿದೆ.

ಗಡಿಯಲ್ಲೂ ಶೆಲ್ ದಾಳಿ

ಮಾಸ್ಕೊ (ಎಎಫ್‌ಪಿ): ದೇಶದ ಗಡಿಗೆ 10 ಕಿ.ಮೀ ಅಂತರದಲ್ಲಿರುವ ಕ್ಲಿಮೊವೊ ಪಟ್ಟಣದ ಮೇಲೆ ಉಕ್ರೇನ್ ಸೇನೆ ಶೆಲ್ ದಾಳಿ ನಡೆಸಿದೆ. ಎರಡು ವಸತಿ ಕಟ್ಟಡಗಳು ಹಾನಿಗೀಡಾಗಿವೆ. ಕೆಲವು ನಿವಾಸಿಗಳು ಗಾಯಗೊಂಡಿದ್ದಾರೆ' ಎಂದು ರಷ್ಯಾದ ಬ್ರಿಯಾನ್‌ಸ್ಕ್ ಪ್ರದೇಶದ ಗವರ್ನರ್ ಅಲೆಕ್ಸಾಂಡರ್ ಬೊಗೊಮಾಜ್ ಗುರುವಾರ ತಿಳಿಸಿದರು.

ರಷ್ಯಾಕ್ಕೆ ಬರುತ್ತಿದ್ದ ಉಕ್ರೇನ್ ನಿರಾಶ್ರಿತರನ್ನು ಗುರಿಯಾಗಿಸಿ ಗಡಿ ತಪಾಸಣಾ ಕೇಂದ್ರದ ಮೇಲೂ ಉಕ್ರೇನ್ ಸೇನೆ ಗುಂಡಿನ ದಾಳಿ ನಡೆಸಿದೆ ಎಂದು ರಷ್ಯಾದ ಭದ್ರತಾ ಸಂಸ್ಥೆ ಎಫ್‌ಎಸ್‌ಬಿ ತಿಳಿಸಿರುವುದಾಗಿ 'ಟಾಸ್' ಸುದ್ದಿ ಸಂಸ್ಥೆ ವರದಿ ಮಾಡಿದೆ.

ಹಾರ್ಕಿವ್ ಸೇತುವೆ ಧ್ವಂಸ: ರಷ್ಯಾದ ಯೋಧರನ್ನು ಸಾಗಿಸುತ್ತಿದ್ದ ಬೆಂಗಾವಲು ಪಡೆ ವಾಹನಗಳನ್ನು ನಾಶ ಪಡಿಸಲು ಹಾರ್ಕಿವ್‌ನ ಪ್ರಮುಖ ಸೇತುವೆಯನ್ನು ಗುರುವಾರ ಸ್ಫೋಟಿಸಲಾಯಿತು. ಇದರಿಂದಾಗಿ ರಷ್ಯಾ ಸೇನೆಯ ಒಂದು ತುಕಡಿ ಸಂಪೂರ್ಣ ನಾಶವಾಗಿದೆ ಎಂದು ಉಕ್ರೇನ್ ಸೇನೆ ಹೇಳಿದೆ.

ಆರ್ಥಿಕ ಬಿಕ್ಕಟ್ಟಿನ ಲಂಕಾದಲ್ಲಿ ಹೊಸ ವರ್ಷ: ಸಿಹಿ ಹಂಚಿ ಪ್ರತಿಭಟನೆ

ಕೊಲಂಬೊ (ಪಿಟಿಐ): ಶ್ರೀಲಂಕಾವು ಹೊಸ ವರ್ಷದ ಸಂಭ್ರಮದಲ್ಲಿದ್ದರೂ, ಆರ್ಥಿಕ ಬಿಕ್ಕಟ್ಟಿನಿಂದಾಗಿ ಆಚರಿಸುವ ಮನಸ್ಥಿತಿಯಲ್ಲಿ ಜನರು ಇಲ್ಲವಾಗಿದ್ದಾರೆ. ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ಜನರು ಗಣ್ಯ ವ್ಯಕ್ತಿಗಳ ಮನೆಗಳ ಮುಂದೆಯೇ ಬಿಸಿ ಹಾಲು ಮತ್ತು ಸಿಹಿ ಹಂಚುವ ಮೂಲಕ ಗುರುವಾರ ಹೊಸ ವರ್ಷವನ್ನು ಸ್ವಾಗತಿಸಿದರು.

ದೇಶದ ಭೀಕರ ಆರ್ಥಿಕ ಬಿಕ್ಕಟ್ಟನ್ನು ನಿಭಾಯಿಸುವಲ್ಲಿ ವಿಫಲವಾಗಿರುವ ಶ್ರೀಲಂಕಾದ ಅಧ್ಯಕ್ಷ ಗೊಟಬಯ ರಾಜಪಕ್ಸ ಮತ್ತು ಅವರ ಕುಟುಂಬದ ಪ್ರಬಲ ಸಚಿವರ ರಾಜೀನಾಮೆಗೆ ಆಗ್ರಹಿಸಿ ದೇಶದಾದ್ಯಂತ ನಡೆಯುತ್ತಿರುವ ಪ್ರತಿಭಟನೆ ಗುರುವಾರ ಆರನೇ ದಿನಕ್ಕೆ ಕಾಲಿಟ್ಟಿತ್ತು. ಪ್ರಧಾನಿ ಮಹಿಂದಾ ರಾಜಪಕ್ಸ ಅವರ ಮಾತುಕತೆ ಪ್ರಸ್ತಾಪವನ್ನು ತಿರಸ್ಕರಿಸಿರುವ ಪ್ರತಿಭಟನಕಾರರು ಗೊಟಬಯ ಮತ್ತು ಅಧಿಕಾರದಲ್ಲಿರುವ ಅವರ ಕುಟುಂಬದ ಸದಸ್ಯರ ರಾಜೀನಾಮೆಗೆ ಒತ್ತಾಯಿಸಿದ್ದಾರೆ.

ವಿರೋಧ ಪಕ್ಷದಿಂದ ಪ್ರತಿಭಟನಾ ಜಾಥಾ: ದೇಶದಲ್ಲಿ ನಡೆಯುತ್ತಿರುವ ಪ್ರತಿಭಟನೆಯನ್ನು ಬೆಂಬಲಿಸಲು ಮುಂದಿನ ವಾರ ಮೂರು ದಿನಗಳ ಕಾಲ ಪ್ರತಿಭಟನಾ ಜಾಥಾ ನಡೆಸಲು ಶ್ರೀಲಂಕಾದ ಪ್ರಮುಖ ವಿರೋಧ ಪಕ್ಷ ಜನತಾ ವಿಮುಕ್ತಿ ಪೆರಮುನಾ (ಜೆವಿಪಿ) ನಿರ್ಧರಿಸಿದೆ.

ದೇಶದ ಆರ್ಥಿಕ ಬಿಕ್ಕಟ್ಟನ್ನು ನಿವಾರಿಸಲು ವಿಫಲವಾಗಿರುವ ಗೊಟಬಯ ನೇತೃತ್ವದ ಸರ್ಕಾರ ಮೊಂಡುತನ ಪ್ರದರ್ಶಿಸುತ್ತಿದೆ. ಅಡ್ಡದಾರಿ ಮೂಲಕ ಅಧಿಕಾರದಲ್ಲಿ ಉಳಿಯಲು ಪ್ರಯತ್ನ ನಡೆಸುತ್ತಿದೆ ಎಂದು ಜೆವಿಪಿ ಆರೋಪಿಸಿದೆ.

'ಜಯಕ್ಕಾಗಿ ಹೋರಾಟ' ವಾಕ್ಯದಡಿ ಏಪ್ರಿಲ್ 17ರಿಂದ 19ರ ವರೆಗೆ ಬೃಹತ್ ಪ್ರತಿಭಟನಾ ಜಾಥಾ ನಡೆಸಲಾಗುವುದು. ಇದು ದೇಶದ ಇತಿಹಾಸದಲ್ಲಿಯೇ ಅತಿ ದೊಡ್ಡ ಬೃಹತ್ ಜಾಥಾವಾಗಲಿದೆ ಎಂದು ಜೆವಿಪಿ ಪ್ರಧಾನ ಕಾರ್ಯದರ್ಶಿ ತಿಲ್ವಿನ್ ಸಿಲ್ವ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಶ್ರೀಲಂಕಾದ ಕೊಲಂಬೊದಲ್ಲಿ ಗುರುವಾರ ಸಾರ್ವಜನಿಕರು ರಸ್ತೆಯಲ್ಲಿ ಹಾಲು ಉಕ್ಕಿಸಿ ಪ್ರತಿಭಟನಾ ರೂಪದಲ್ಲಿ ಹೊಸ ವರ್ಷ ಸ್ವಾಗತಿಸಿದರು —ಎಎಫ್‌ಪಿ ಚಿತ್ರ

ಶ್ರೀಲಂಕಾಗೆ ₹ 15,200 ಕೋಟಿ ಹೆಚ್ಚುವರಿ ನೆರವು: ಭಾರತ

ಮುಂಬೈ/ ನವದೆಹಲಿ (ರಾಯಿಟರ್ಸ್): ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸಿರುವ ಶ್ರೀಲಂಕಾವನ್ನು ಚೀನಾದ ಪ್ರಭಾವದಿಂದ ಹೊರತರಲು, ದ್ವೀಪ ರಾಷ್ಟ್ರಕ್ಕೆ ಇನ್ನೂ 200 ಕೋಟಿ ಡಾಲರ್ (₹15,200 ಕೋಟಿ) ಹಣಕಾಸಿನ ನೆರವು ನೀಡಲು ಭಾರತ ಸಿದ್ಧವಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಚೀನಾವನ್ನು ಹೆಚ್ಚಾಗಿ ಅವಲಂಬಿಸಿದ್ದ ಶ್ರೀಲಂಕಾವನ್ನು ಮರಳಿ ತನ್ನ ಪ್ರಭಾವದ ಪರಿಧಿಗೆ ತಂದುಕೊಳ್ಳಲು ಕೇಂದ್ರ ಸರ್ಕಾರ, ದ್ವೀಪ ರಾಷ್ಟ್ರಕ್ಕೆ ಅಗತ್ಯ ಆಹಾರ ಮತ್ತು ಇಂಧನ ಪೂರೈಸಲು ಮುಂದಾಗಿದೆ ಎಂದು ಮೂಲಗಳು ತಿಳಿಸಿರುವುದಾಗಿ 'ರಾಯಿಟರ್ಸ್' ಸುದ್ದಿ ಸಂಸ್ಥೆ ವರದಿ ಮಾಡಿದೆ.

ಕೋವ್ಯಾಕ್ಸಿನ್: ಕ್ಲಿನಿಕಲ್ ಪ್ರಯೋಗಕ್ಕೆ ಅಮೆರಿಕ ತಡೆ

ಹೈದರಾಬಾದ್ (ಪಿಟಿಐ): ಭಾರತದ ಭಾರತ್ ಬಯೊಟೆಕ್ ಅಭಿವೃದ್ಧಿಪಡಿಸಿರುವ ಕೋವಿಡ್ ಲಸಿಕೆ 'ಕೋವ್ಯಾಕ್ಸಿನ್'ನ 2 ಮತ್ತು 3ನೇ ಹಂತದ ಕ್ಲಿನಿಕಲ್ ಪ್ರಯೋಗಕ್ಕೆ ಅಮೆರಿಕದ ಆಹಾರ ಮತ್ತು ಔಷಧ ಆಡಳಿತ ಇಲಾಖೆ ತಡೆ ನೀಡಿದೆ.

ಭಾರತದಲ್ಲಿ ಇರುವ ಕೋವ್ಯಾಕ್ಸಿನ್ ಲಸಿಕೆ ಉತ್ಪಾದನಾ ಘಟಕಗಳನ್ನು ಕುರಿತು ವಿಶ್ವ ಆರೋಗ್ಯ ಸಂಸ್ಥೆ ಅಭಿಪ್ರಾಯಗಳನ್ನು ಆಧರಿಸಿ ಈ ತೀರ್ಮಾನಕ್ಕೆ ಬರಲಾಗಿದೆ. ಕೋವ್ಯಾಕ್ಸಿನ್ ಲಸಿಕೆಗೆ ಅಮೆರಿಕ, ಕೆನಡಾದಲ್ಲಿ ಭಾರತ್ ಬಯೊಟೆಕ್ ಪಾಲುದಾರರಾಗಿರುವ ಒಕುಜೆನ್ ಸಂಸ್ಥೆ ಈ ಬಗ್ಗೆ ಹೇಳಿಕೆ ನೀಡಿದ್ದು, ಭಾರತ್ ಬಯೊಟೆಕ್ ಉತ್ಪಾದನಾ ಘಟಕ ಪರಿಶೀಲಿಸಿ ಡಬ್ಲ್ಯುಎಚ್‌ಒ ನೀಡಿದ ಅಭಿಪ್ರಾಯ ಆಧರಿಸಿ ಈ ಕ್ರಮ ವಹಿಸಲಾಗಿದೆ ಎಂದು ತಿಳಿಸಿದೆ.

ಡಬ್ಲ್ಯುಎಚ್‌ಒ ಇದಕ್ಕೂ ಮೊದಲು ಅಮೆರಿಕದ ಖರೀದಿ ಕೇಂದ್ರಗಳ ಮೂಲಕ ಕೋವ್ಯಾಕ್ಸಿನ್ ಲಸಿಕೆ ವಿತರಣೆಯನ್ನು ಅಮಾನತುಪಡಿಸಿತ್ತು. ಭಾರತ್ ಬಯೊಟೆಕ್‌ನ ಉತ್ಪಾದನಾ ಘಟಕಗಳಲ್ಲಿ ಉತ್ಪಾದನಾ ಮಾನದಂಡಗಳನ್ನು ಪಾಲಿಸುತ್ತಿಲ್ಲ ಎಂದು ಡಬ್ಲ್ಯುಎಚ್‌ಒ ಹೇಳಿತ್ತು.

ಭಾರತ್ ಬಯೊಟೆಕ್‌ನ ಮೂಲಗಳು, ಅಮೆರಿಕದ ಕ್ರಮದಿಂದ ಯಾವುದೇ ಪ್ರತಿಕೂಲ ಪರಿಣಾಮ ಆಗುವುದಿಲ್ಲ. ಅಮೆರಿಕದ ಸಂಸ್ಥೆಗಳಿಗೆ ತಾನು ಲಸಿಕೆಯನ್ನು ಪೂರೈಕೆ ಮಾಡಿಲ್ಲ ಎಂದು ತಿಳಿಸಿವೆ.

ದೆಹಲಿಯಲ್ಲಿ 325 ಕೋವಿಡ್ ಹೊಸ ಪ್ರಕರಣಗಳು ಪತ್ತೆ

'ಸೋಂಕು ಪತ್ತೆಯಾದರೆ ಶಾಲೆ ಬಂದ್ ಮಾಡಿ'

ನವದೆಹಲಿ (ಪಿಟಿಐ): ರಾಜಧಾನಿಯಲ್ಲಿ ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಹೊಸದಾಗಿ ಕೋವಿಡ್ ಸೋಂಕು ಕಾಣಿಸಿಕೊಂಡ ಹಿಂದೆಯೇ ದೆಹಲಿ ಸರ್ಕಾರ ಶಿಕ್ಷಣ ಸಂಸ್ಥೆಗಳಿಗೆ ಅನ್ವಯಿಸಿ ನೂತನ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

ಹೊಸದಾಗಿ ಯಾವುದಾದರೂ ಪ್ರಕರಣ ಕಾಣಿಸಿಕೊಂಡಲ್ಲಿ ಶಾಲೆಯನ್ನು ಬಂದ್ ಮಾಡಬೇಕು ಎಂದು ಆದೇಶಿಸಿದೆ.

ಅಲ್ಲದೆ, ಎಲ್ಲ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಮತ್ತು ಪರಸ್ಪರ ಅಂತರ ಕಾಯ್ದುಕೊಳ್ಳಬೇಕು ಎಂದು ಶಿಕ್ಷಣ ಇಲಾಖೆ ಆದೇಶದಲ್ಲಿ ತಿಳಿಸಿದೆ.

ದೆಹಲಿಯಲ್ಲಿ ಗುರುವಾರ ಹೊಸದಾಗಿ 325 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಇವು ಕಳೆದ 40 ದಿನಗಳಲ್ಲಿ ವರದಿಯಾದ ಅತಿ ಹೆಚ್ಚು ಪ್ರಕರಣಗಳಾಗಿವೆ. ಆದರೆ, ಯಾವುದೇ ಸಾವು ವರದಿಯಾಗಿಲ್ಲ.

ಸೋಂಕು ತಡೆಗೆ ಕ್ರಮ ಕೈಗೊಳ್ಳಲು ಇದೇ 20ರಂದು ಸಭೆ ನಡೆಸುವುದಾಗಿ ದೆಹಲಿ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

'ಕೋವಿಡ್ -19 ಪರಿಸ್ಥಿತಿಯ ಮೇಲೆ ನಮ್ಮ ಸರ್ಕಾರವು ನಿಗಾ ವಹಿಸಿದೆ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಗುರುವಾರ ತಿಳಿಸಿದ್ದಾರೆ.

'ಕೊರೊನಾ ವೈರಸ್‌ನಿಂದಾಗಿ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆಯಲ್ಲಿ ಹೆಚ್ಚಳವಾಗಿಲ್ಲ. ಜನರು ಆತಂಕಪಡುವ ಅಗತ್ಯವಿಲ್ಲ' ಎಂದೂ ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

15 ಮಕ್ಕಳಿಗೆ ಸೋಂಕು: ಉತ್ತರ ಪ್ರದೇಶದ ಗೌತಮ ಬುದ್ಧ ನಗರದಲ್ಲಿ 15 ಮಕ್ಕಳು ಸೇರಿ 44 ಮಂದಿಗೆ ಸೋಂಕು ದೃಢಪಟ್ಟಿದೆ. ಜಿಲ್ಲೆಯಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 121ಕ್ಕೆ ಏರಿಕೆಯಾಗಿದೆ.

ಚೀನಾದಲ್ಲಿ ಕೋವಿಡ್ ಏರಿಕೆ: ಮತ್ತಷ್ಟು ನಗರಗಳಿಗೆ ನಿರ್ಬಂಧ ವಿಸ್ತರಣೆ

ಬೀಜಿಂಗ್ (ಎಪಿ): ಚೀನಾದಲ್ಲಿ ಕೋವಿಡ್ ಪ್ರಕರಣಗಳು ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಶಾಂಘೈನಲ್ಲಿ ವಿಧಿಸಲಾಗಿದ್ದ ಕಠಿಣ ನಿರ್ಬಂಧಗಳನ್ನು ಇತರೆ ನಗರಗಳಿಗೂ ವಿಸ್ತರಿಸಲಾಗಿದೆ.

2.5 ಕೋಟಿ ಜನರು ಇರುವ ಚೀನಾದ ವಾಣಿಜ್ಯ ನಗರಿ ಶಾಂಘೈನಲ್ಲಿ ವಿಧಿಸಿರುವ ಲಾಕ್‌ಡೌನ್ ಮೂರನೇ ವಾರಕ್ಕೆ ಕಾಲಿಟ್ಟಿದೆ. ಇಲ್ಲಿ 27,719 ಹೊಸ ಪ್ರಕರಣಗಳು ವರದಿಯಾಗಿವೆ. ಇದರಲ್ಲಿ 2,573 ಮಂದಿಗೆ ಸೋಂಕಿನ ಲಕ್ಷಣಗಳಿವೆ. ಸೋಂಕು ನಿಯಂತ್ರಣ ಮೀರಿದೆ ಎಂದು ಆರೋಗ್ಯಾಧಿಕಾರಿಗಳು ಎಚ್ಚರಿಸಿದ್ದಾರೆ.

1.9 ಕೋಟಿ ಜನಸಂಖ್ಯೆ ಇರುವ ಗುವಾಂಗ್‌ಝೌ ನಗರಕ್ಕೆ ಪ್ರವೇಶ ನಿಷೇಧಿಸಲಾಗಿದೆ. ಇತರೆ ನಗರಗಳಲ್ಲಿಯೂ ಕೈಗಾರಿಕೆಗಳು ಹಾಗೂ ಶಾಲೆಗಳನ್ನು ಬಂದ್ ಮಾಡಲಾಗುತ್ತಿದೆ. ಈ ನಿರ್ಬಂಧಗಳು ರೈತರ ಕೃಷಿ ಚಟುವಟಿಕೆಗೂ ಅಡ್ಡಿಯಾಗಬಹುದು. ಇದರಿಂದ ಗೋಧಿ ಮತ್ತು ಆಹಾರ ಆಮದು ಹೆಚ್ಚಬಹುದು ಎಂದು ಆರ್ಥಿಕ ತಜ್ಞರು ಎಚ್ಚರಿಕೆ ನೀಡಿದ್ದಾರೆ.

ಹಾಂಗ್‌ಕಾಂಗ್‌ನಲ್ಲಿ ಸೋಂಕು ಇಳಿಕೆ: ಹಾಂಗ್‌ಕಾಂಗ್‌ನಲ್ಲಿ ಸೋಂಕು ಇಳಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ನಿರ್ಬಂಧಗಳನ್ನು ಸಡಿಲಗೊಳಿಸಲಾಗಿದೆ. ಅಂತರ ಕಾಯ್ದುಕೊಳ್ಳುವಿಕೆ, ಸಂಜೆ ರೆಸ್ಟೋರೆಂಟ್ ಮತ್ತು ಖಾಸಗಿಯಾಗಿ ಜನ ಸೇರುವುದರ ಮೇಲೆ ವಿಧಿಸಲಾಗಿದ್ದ ನಿರ್ಬಂಧಗಳಿಗೆ ವಿನಾಯಿತಿ ನೀಡಲಾಗಿದೆ.

ಪ್ರಯಾಣದ ವೇಳೆ ಮಾಸ್ಕ್ ಬಳಸಿ: ಅಮೆರಿಕದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ದೇಶದಾದ್ಯಂತ ಪ್ರಯಾಣ, ವಿಮಾನ ಪ್ರಯಾಣ ಮತ್ತು ಸಾರ್ವಜನಿಕ ಸಾರಿಗೆಗಳಲ್ಲಿ ಮಾಸ್ಕ್ ಧರಿಸಬೇಕೆಂಬ ನಿಯಮವನ್ನು ವಿಸ್ತರಿಸುವುದಾಗಿ ಬೈಡನ್ ಆಡಳಿತ ತಿಳಿಸಿದೆ.

ರೋಗ ನಿಯಂತ್ರಣ ಕೇಂದ್ರ ಜಾರಿಗೊಳಿಸಿದ್ದ ಮಾಸ್ಕ್ ನಿಯಮಾವಳಿ ಏ.18ರಂದು ಮುಕ್ತಾಯ ಗೊಳ್ಳಬೇಕಿತ್ತು. ಅದನ್ನು ಇದೀಗ ಮೇ 3ರವರೆಗೂ ವಿಸ್ತರಿಸಲಾಗಿದೆ.

ಕೋವಿಡ್: ಸಕ್ರಿಯ ಪ್ರಕರಣ ಏರಿಕೆ

ನವದೆಹಲಿ(ಪಿಟಿಐ): ದೇಶದಲ್ಲಿ ಇಳಿಕೆಯಾಗುತ್ತಿದ್ದ ಕೋವಿಡ್ ಸಕ್ರಿಯ ಪ್ರಕರಣಗಳು ಗುರುವಾರ ತುಸು ಏರಿಕೆಯಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 11,058ಕ್ಕೆ ಏರಿಕೆಯಾಗಿದೆ. 1,007 ಹೊಸ ಪ್ರಕರಣಗಳು ವರದಿಯಾಗಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ನಿತ್ಯ ಎರಡಂಕಿ ಇರುತ್ತಿದ್ದ ಸೋಂಕಿತರ ಸಾವಿನ ಸಂಖ್ಯೆ ಇಳಿಕೆ ಯಾಗಿದೆ. ಒಬ್ಬರ ಸಾವಿನೊಂದಿಗೆ ಒಟ್ಟು ಮೃತಪಟ್ಟವರ ಸಂಖ್ಯೆ 5,21,737ಕ್ಕೆ ಏರಿಕೆಯಾಗಿದೆ.

ಉಡುಗೊರೆಯ ನೆಕ್ಲೇಸ್ ಮಾರಾಟ: ಖಾನ್ ವಿರುದ್ಧ ತನಿಖೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು ತಮ್ಮ ಅಧಿಕಾರಾವಧಿಯಲ್ಲಿ ಉಡುಗೊರೆಯಾಗಿ ಪಡೆದಿದ್ದ ದುಬಾರಿ ನೆಕ್ಲೇಸ್ ಅನ್ನು ದೇಶದ 'ಉಡುಗೊರೆ ಭಂಡಾರ'ಕ್ಕೆ ನೀಡದೆ, ಆಭರಣ ವ್ಯಾಪಾರಿಗೆ ₹ 18 ಕೋಟಿಗೆ ಮಾರಾಟ ಮಾಡಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನದ ಉನ್ನತ ತನಿಖಾ ಸಂಸ್ಥೆ ವಿಚಾರಣೆಯನ್ನು ಆರಂಭಿಸಿದೆ ಎಂದು ಬುಧವಾರ ಮಾಧ್ಯಮವೊಂದು ವರದಿ ಮಾಡಿದೆ.

ನೆಕ್ಲೇಸ್ ಅನ್ನು ಇಮ್ರಾನ್ ಅವರು ತಮ್ಮ ಮಾಜಿ ವಿಶೇಷ ಸಹಾಯಕ ಜುಲ್ಫಿಕರ್ ಬುಖಾರಿಗೆ ನೀಡಿದ್ದರು. ಅವರು ಅದನ್ನು ಲಾಹೋರ್‌ನ ಆಭರಣ ವ್ಯಾಪಾರಿಗೆ ₹ 18 ಕೋಟಿಗೆ ಮಾರಾಟ ಮಾಡಿದ್ದರು. ಈ ಕುರಿತು ಫೆಡರಲ್ ಇನ್ವೆಸ್ಟಿಗೇಷನ್ ಏಜೆನ್ಸಿ (ಎಫ್‌ಐಎ) ತನಿಖೆ ಆರಂಭಿಸಿದೆ ಎಂದು 'ಎಕ್ಸ್‌ಪ್ರೆಸ್ ಟ್ರಿಬ್ಯೂನ್' ಪತ್ರಿಕೆ ವರದಿ ಮಾಡಿದೆ.

ಡರ್ಬನ್‌ನಲ್ಲಿ ಪ್ರವಾಹ: ಸಾವು 300ಕ್ಕೆ ಏರಿಕೆ

ಜೋಹಾನ್ಸ್‌ಬರ್ಗ್ (ಎಎಫ್‌ಪಿ): ದಕ್ಷಿಣ ಆಫ್ರಿಕಾದ ಡರ್ಬನ್ ಭಾಗದಲ್ಲಿ ಪ್ರವಾಹ ಮುಂದುವರಿದಿದ್ದು, ಮೃತಪಟ್ಟವರ ಸಂಖ್ಯೆ 300ಕ್ಕೆ ಏರಿದೆ. ಕೊಚ್ಚಿಹೋದ ಮನೆಗಳ ಅವಶೇಷಗಳನ್ನೇ ಹುಡುಕಿ ಜೀವನ ಕಟ್ಟಿಕೊಳ್ಳಲು ಯತ್ನಿಸುತ್ತಿರುವ ಜನರ ದಯನೀಯ ಸ್ಥಿತಿ ಎಲ್ಲೆಡೆ ಕಾಣಿಸಿದ್ದು, ಸರ್ಕಾರದಿಂದ ಯಾವುದೇ ನೆರವು ದೊರೆತಿಲ್ಲ ಎಂದು ಜನರು ಆರೋಪಿಸಿದ್ದಾರೆ.

ಕುಸಿದು ಬಿದ್ದ ಮನೆಗಳಲ್ಲಿ ಇರಬಹುದಾದ ವಸ್ತುಗಳನ್ನು ಸಂಗ್ರಹಿಸಲು ಜನರ ಪರದಾಟವೇ ಈ ಭಾಗದಲ್ಲಿ ಸದ್ಯ ಕಾಣಿಸುವ ಸಾಮಾನ್ಯ ದೃಶ್ಯವಾಗಿದೆ.

ಮಾನವ ಹಕ್ಕು ಉಲ್ಲಂಘನೆ: ಅಮೆರಿಕ ಹೇಳಿಕೆಗೆ ತಿರುಗೇಟು

ಒಂದನೇ ಪುಟದಿಂದ

ಇದಕ್ಕೆ ಪ್ರತಿಕ್ರಿಯೆಯ ರೀತಿಯಲ್ಲಿ ಮಾತನಾಡಿದ ಜೈಶಂಕರ್, ಮಾನವ ಹಕ್ಕುಗಳ ವಿಷಯವು 2+2 ಮಾತುಕತೆಯ ವಿಷಯ ಆಗಿರಲಿಲ್ಲ ಎಂದು ಗುರುವಾರ ಹೇಳಿದ್ದಾರೆ.

'ಅಮೆರಿಕವೂ ಸೇರಿ ಇತರೆಡೆಯ ಮಾನವ ಹಕ್ಕು ಪರಿಸ್ಥಿತಿಯ ಬಗ್ಗೆ ನಮಗೂ ನಿಲುವುಗಳು ಇವೆ ಎಂದು ಹೇಳಲು ಬಯಸುತ್ತೇನೆ. ಈ ದೇಶದಲ್ಲಿ (ಅಮೆರಿಕ), ಅದರಲ್ಲಿಯೂ ವಿಶೇಷವಾಗಿ ನಮ್ಮ ಸಮುದಾಯಕ್ಕೆ ಸಂಬಂಧಿಸಿ ಮಾನವ ಹಕ್ಕುಗಳ ವಿಚಾರಗಳು ಬಂದಾಗ ಅದನ್ನು ಖಂಡಿತ ಪ್ರಸ್ತಾಪಿಸುತ್ತೇವೆ. ನಿನ್ನೆಯೂ (ಬುಧವಾರ) ಒಂದು ಪ್ರಕರಣ ವರದಿಯಾಗಿದೆ' ಎಂದು ಜೈಶಂಕರ್ ಹೇಳಿದ್ದಾರೆ.

'2+2 ಮಾತುಕತೆಯು ಮುಖ್ಯವಾಗಿ ರಾಜಕೀಯ ಮತ್ತು ಸೇನಾ ವ್ಯವಹಾರಗಳಿಗೆ ಸಂಬಂಧಿಸಿದ್ದಾಗಿತ್ತು. ಮಾನವ ಹಕ್ಕುಗಳ ವಿಚಾರವು ಸಭೆಯಲ್ಲಿ ಚರ್ಚೆಯೇ ಆಗಿಲ್ಲ' ಎಂದು ಜೈಶಂಕರ್ ತಿಳಿಸಿದ್ದಾರೆ. ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಜೈಶಂಕರ್ ಹೀಗೆ ಹೇಳಿದ್ದಾರೆ.

'ಈ ಹಿಂದಿನ ಸಭೆಗಳಲ್ಲಿ ಮಾನವ ಹಕ್ಕುಗಳ ವಿಚಾರ ಪ್ರಸ್ತಾಪ ಆಗಿತ್ತು. ಬ್ಲಿಂಕನ್ ಅವರು ಭಾರತಕ್ಕೆ ಬಂದಿದ್ದಾಗ ವಿಷಯ ಚರ್ಚೆ ಆಗಿತ್ತು. ಈ ಹಿಂದೆ ನಡೆದ ಮಾಧ್ಯಮಗೋಷ್ಠಿಯನ್ನು ನೆನಪಿಸಿಕೊಂಡರೆ, ಆಗ ಏನು ಚರ್ಚೆ ಆಗಿತ್ತು ಮತ್ತು ನಾನು ಏನು ಹೇಳಬೇಕಿತ್ತೋ ಅದನ್ನು ಹೇಳಿದ್ದೆ ಎಂಬುದು ತಿಳಿಯುತ್ತದೆ' ಎಂದೂ ಅವರು ತಿಳಿಸಿದ್ದಾರೆ.

ವಿವಾಹ ಬಂಧ...

ಬಾಲಿವುಡ್ ನಟಿ ಆಲಿಯಾ ಭಟ್ ಮತ್ತು ನಟ ರಣಬೀರ್ ಕಪೂರ್ ಅವರ ವಿವಾಹವು ಮುಂಬೈನಲ್ಲಿ ಗುರುವಾರ ನೆರವೇರಿತು –ಪಿಟಿಐ ಚಿತ್ರ

ಮುನ್ನೆಚ್ಚರಿಕೆ ಡೋಸ್‌ಗೆ ನಿರುತ್ಸಾಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ತಡೆ ಲಸಿಕೆಯ ಮುನ್ನೆಚ್ಚರಿಕೆ ಡೋಸ್ ಅನ್ನು 18-59 ವಯೋಮಾನದ 85,000 ಜನರು ಮಾತ್ರ ಹಾಕಿಸಿಕೊಂಡಿದ್ದಾರೆ. ಎಲ್ಲ ವಯಸ್ಕರು ಮುನ್ನೆಚ್ಚರಿಕೆ ಡೋಸ್ ಲಸಿಕೆ ಪಡೆದುಕೊಳ್ಳಲು ಸರ್ಕಾರ ಅವಕಾಶ ನೀಡಿದ ನಾಲ್ಕು ದಿನಗಳಲ್ಲಿ ಇಷ್ಟು ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ.

ಎಲ್ಲ ವಯಸ್ಕರು ಖಾಸಗಿ ಕೇಂದ್ರಗಳಲ್ಲಿ ಇದೇ 10ರಿಂದ ಲಸಿಕೆ ಹಾಕಿಸಿಕೊಳ್ಳಬಹುದು ಎಂದು ಸರ್ಕಾರ ಹೇಳಿತ್ತು. 18-44ರ ವಯೋಮಾನದ 18,406 ಮಂದಿ ಮತ್ತು 45-59ರ ವಯೋಮಾನದ 66,748 ಮಂದಿ ಮುನ್ನೆಚ್ಚರಿಕೆ ಡೋಸ್ ಹಾಕಿಸಿಕೊಂಡಿದ್ದಾರೆ. ಕೋವಿಡ್ ತಡೆ ಲಸಿಕೆ ಹಾಕಿಸಿಕೊಂಡ ಕೆಲವು ತಿಂಗಳ ಬಳಿಕ ರೋಗ ನಿರೋಧಕ ಶಕ್ತಿ ಕುಗ್ಗುತ್ತದೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ. ಹಾಗಿದ್ದರೂ ಮುನ್ನೆಚ್ಚರಿಕೆ ಡೋಸ್ ಹಾಕಿಸಿಕೊಳ್ಳುವ ಉತ್ಸಾಹ ಜನರಲ್ಲಿ ಕಾಣಿಸುತ್ತಿಲ್ಲ.

> **ಕೋವಿಡ್ ಹರಡುವಿಕೆ ಪ್ರಮಾಣವು ಕಡಿಮೆ ಇದೆ. ಅಪಾಯದ ಭೀತಿಯು ಜನರಲ್ಲಿ ಕಡಿಮೆ ಆಗಿದೆ. ಇದುವೇ ಮುನ್ನೆಚ್ಚರಿಕೆ ಡೋಸ್ ಬಗ್ಗೆ ನಿರುತ್ಸಾಹಕ್ಕೆ ಕಾರಣ**
> **ಉಮ್ಮನ್ ಜಾನ್,** ಸಂಶೋಧಕ, ಜಾರ್ಜ್ ಇನ್ಸ್‌ಟಿಟ್ಯೂಟ್ ಆಫ್ ಗ್ಲೋಬಲ್ ಹೆಲ್ತ್

'ಮುನ್ನೆಚ್ಚರಿಕೆ ಡೋಸ್ ತಮ್ಮನ್ನು ತೀವ್ರ ಅನಾರೋಗ್ಯದಿಂದ ರಕ್ಷಿಸಬಲ್ಲುದು ಮತ್ತು ರಕ್ಷಣೆಯನ್ನು ಹೆಚ್ಚಿಸಬಲ್ಲುದು ಎಂಬುದನ್ನು ಜಾಗೃತಿಯ ಮೂಲಕ ಜನರಿಗೆ ತಿಳಿಸಬೇಕು' ಎಂದು ಬೆಂಗಳೂರಿನ ಪಬ್ಲಿಕ್ ಹೆಲ್ತ್ ಫೌಂಡೇಶನ್ ಆಫ್ ಇಂಡಿಯಾದ ಸೋಂಕುಶಾಸ್ತ್ರಜ್ಞ ಆರ್. ಗಿರಿಧರ ಬಾಬು ಹೇಳಿದ್ದಾರೆ.

ಎರಡನೇ ಡೋಸ್ ಹಾಕಿಸಿಕೊಂಡು ಒಂಬತ್ತು ತಿಂಗಳ ಬಳಿಕವೇ ಮುನ್ನೆಚ್ಚರಿಕೆ ಡೋಸ್ ಹಾಕಿಸಿಕೊಳ್ಳಬೇಕು ಎಂಬ ನಿಯಮ ಇದೆ. ಮುನ್ನೆಚ್ಚರಿಕೆ ಡೋಸ್ ಹಾಕಿಸಿಕೊಂಡ ಜನರ ಸಂಖ್ಯೆ ಕಡಿಮೆ ಇರಲು ಇದು ಕೂಡ ಕಾರಣ ಎನ್ನಲಾಗಿದೆ.

ಸಿಂಗಪುರ ಪ್ರಧಾನಿ ಉತ್ತರಾಧಿಕಾರಿ ಲಾರೆನ್ಸ್

ಸಿಂಗಪುರ (ಪಿಟಿಐ): ಸಿಂಗಪುರ ಪ್ರಧಾನಿ ಲೀ ಸೀನ್ ಲೂಂಗ್ ಅವರ ಉತ್ತರಾಧಿಕಾರಿಯಾಗಿ, ಹಣಕಾಸು ಸಚಿವ ಲಾರೆನ್ಸ್ ವೊಂಗ್ ಅವರನ್ನು ಆಡಳಿತರೂಢ ಪೀಪಲ್ಸ್ ಆ್ಯಕ್ಷನ್ ಪಾರ್ಟಿ (ಪಿಎಪಿ) ಆಯ್ಕೆ ಮಾಡಿದೆ.

ಪಕ್ಷದ 4ಜಿ ತಂಡದ ನಾಯಕನಾಗಿ, 49 ವರ್ಷದ ವೊಂಗ್ ಅವರ ಆಯ್ಕೆಗೆ ಸಂಪುಟದ ಸಚಿವರು ಸಹಮತ ವ್ಯಕ್ತಪಡಿಸಿದ್ದಾರೆ.

ನಂತರ ಈ ಆಯ್ಕೆಯನ್ನು ಪಕ್ಷ ಅನುಮೋದಿಸಿದೆ

ವಾರಾಣಸಿ ತಲುಪಿದ 'ಆಜಾನ್' ವಿವಾದ

ಧ್ವನಿವರ್ಧಕಗಳಲ್ಲಿ ಭಜನೆ, ಮಂತ್ರ ಪಠಣ?

ಪ್ರಜಾವಾಣಿ ವಾರ್ತೆ

ಲಖನೌ: 'ಆಜಾನ್' ನಿಷೇಧಿಸುವಂತೆ ಒತ್ತಾಯಿಸುತ್ತಿರುವ ಕೆಲ ಹಿಂದೂ ಸಂಘಟನೆಗಳು, ಪ್ರಧಾನಿ ನರೇಂದ್ರ ಮೋದಿ ಅವರ ಲೋಕಸಭಾ ಕ್ಷೇತ್ರ ವಾರಾಣಸಿಯಲ್ಲಿ ಹಲವು ಮನೆಗಳ ಮೇಲೆ ಧ್ವನಿವರ್ಧಕದ ಮೂಲಕ ಭಜನೆ ಮತ್ತು ವೇದಮಂತ್ರಗಳ ಪಠಣಕ್ಕೆ ಸಿದ್ಧತೆ ಆರಂಭಿಸಿವೆ.

ಶ್ರೀ ಕಾಶಿ ವಿಶ್ವನಾಥ ಜ್ಞಾನವಾಪಿ ಆಂದೋಲನದ ಅಧ್ಯಕ್ಷ ಮತ್ತು ಬಿಜೆಪಿ ಸದಸ್ಯ ಸುಧೀರ್ ಸಿಂಗ್ ಗುರುವಾರ ಮಾತನಾಡಿ, 'ನಗರದ ಪ್ರಮುಖ ದೇವಾಲಯಗಳಲ್ಲಿ ಶೀಘ್ರದಲ್ಲೇ ಧ್ವನಿವರ್ಧಕಗಳನ್ನು ಅಳವಡಿಸಲಾಗುವುದು, ಅದರ ಮೂಲಕ 'ಹನು ಮಾನ್ ಚಾಲೀಸಾ', ಭಜನೆ ಮತ್ತು ವೇದ ಮಂತ್ರಗಳನ್ನು ಪಠಿಸಲಾಗುವುದು. 'ಆಜಾನ್' ಅನ್ನು ದಿನಕ್ಕೆ ಐದು ಬಾರಿ ಪಠಿಸಲಾಗುತ್ತಿದೆ. ಅಂತೆಯೇ, ನಾವೂ ದಿನಕ್ಕೆ ಐದು ಬಾರಿ ಭಜನೆ, ವೇದಮಂತ್ರಗಳನ್ನು ಧ್ವನಿ ವರ್ಧಕದ ಮೂಲಕ ಪಠಿಸುತ್ತೇವೆ' ಎಂದು ಹೇಳಿದ್ದಾರೆ.

'ಭಜನೆ ಮತ್ತು ವೇದಮಂತ್ರಗಳನ್ನು ಪಠಿಸುವುದು ವಾರಾಣಸಿಯಲ್ಲಿ ಪುರಾತನ ಸಂಪ್ರದಾಯವಾಗಿತ್ತು. ಆದರೆ, ಬಿಜೆಪಿಯೇತರ ಸರ್ಕಾರಗಳ ಅವಧಿಯಲ್ಲಿ ಇದಕ್ಕೆ ಒತ್ತಡ ಹಾಕಿ ನಿಲ್ಲಿಸಲಾಗಿತ್ತು. ಆದರೆ, ನಾವೀಗ ಪುರಾತನ ಸಂಪ್ರದಾಯವನ್ನು ಪುನರಾರಂಭಿಸಲು ಬಯಸುತ್ತೇವೆ' ಎಂದು ಸಿಂಗ್ ಹೇಳಿದ್ದಾರೆ.

'ವಾರಾಣಸಿಯ ಎಲ್ಲಾ ಹಿಂದೂ ನಿವಾಸಿಗಳಿಗೆ ತಮ್ಮ ಮನೆಗಳ ಮೇಲೆ ಧ್ವನಿವರ್ಧಕಗಳನ್ನು ಅಳವಡಿಸಿ, ದಿನಕ್ಕೆ ಐದು ಬಾರಿ ಭಜನೆ, ಮಂತ್ರ ಪಠಣ ಮಾಡಲು ಹೇಳಿದ್ದೇವೆ. ಆದರೆ, ಈ ಕ್ರಮವು ನಗರದಲ್ಲಿ ಕೋಮುಸೌಹಾರ್ದ ಕದಡುವ ಉದ್ದೇಶವನ್ನು ಒಳಗೊಂಡಿಲ್ಲ' ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಈ ನಡುವೆ ರಾಷ್ಟ್ರೀಯ ಹಿಂದೂ ದಳದ ಅಧ್ಯಕ್ಷ ರೋಷನ್ ಪಾಂಡೆ, 'ಮಸೀದಿಗಳಿಂದ ಧ್ವನಿ ವರ್ಧಕಗಳ ಮೂಲಕ 'ಆಜಾನ್' ಪಠಿಸಬಹುದಾದರೆ, ನಾವು ದೇವಾಲಯಗಳಿಂದ ಧ್ವನಿವರ್ಧಕಗಳ ಮೂಲಕ ಏಕೆ ಭಜನೆಗಳನ್ನು ಹೇಳಬಾರದು' ಎಂದು ಪ್ರಶ್ನಿಸಿದ್ದಾರೆ.

ಆದಾಗ್ಯೂ, ಕೆಲವು ಹಿಂದೂ ದಾರ್ಶನಿಕರು ಧ್ವನಿವರ್ಧಕಗಳ ಮೂಲಕ ಭಜನೆಗಳನ್ನು ಪಠಿಸುವುದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

'ಹಿಂದೂ ಧರ್ಮವು ಪ್ರತಿಗಾಮಿ ಧರ್ಮವಲ್ಲ. ಪೂಜೆಗೆ ಕೆಲವು ಸ್ಥಾಪಿತ ಸಂಪ್ರದಾಯಗಳಿವೆ. ಮೂರು ಬಾರಿ ಅಥವಾ ಐದು ಬಾರಿ ಭಜನೆ ಮಾಡುವಂತಹ ಯಾವುದೇ ನಿಬಂಧನೆ ಇಲ್ಲ. ಈ ಕ್ರಮವು ರಾಜಕೀಯ ಪ್ರೇರಿತವಾಗಿದೆ' ಎಂದು ವಾರಾಣಸಿಯ ಪ್ರಮುಖ ದಾರ್ಶನಿಕರೊಬ್ಬರು ಹೇಳಿದ್ದಾರೆ.

ಮಹಾರಾಷ್ಟ್ರದ ಮಸೀದಿಗಳಿಂದ ರಾಜ್ಯ ಸರ್ಕಾರವು ಧ್ವನಿವರ್ಧಕಗಳನ್ನು ತೆಗೆದುಹಾಕದಿದ್ದರೆ ತಮ್ಮ ಪಕ್ಷದ ಕಾರ್ಯಕರ್ತರು ಹೆಚ್ಚಿನ ಡೆಸಿಬಲ್ ಮಟ್ಟದಲ್ಲಿ 'ಹನುಮಾನ್ ಚಾಲೀಸಾ' ಪಠಿಸಲು ಪ್ರಾರಂಭಿಸುವರು ಎಂದು ಮಹಾರಾಷ್ಟ್ರ ನವನಿರ್ಮಾಣ ಸೇನಾ ಮುಖ್ಯಸ್ಥ ರಾಜ್ ಠಾಕ್ರೆ ಈ ಹಿಂದೆ ಎಚ್ಚರಿಕೆ ನೀಡಿದ್ದರು.

ಶಿಲುಬೆ: ಸೋಲಿನ ಪಾಡೋ ಜಯದ ಹಾಡೋ

• ಫಾದರ್ ಐವನ್ ಡಿ'ಸೋಜ

ಇಂದು 'ಗುಡ್ ಫ್ರೈಡೇ' ಅಥವಾ 'ಶುಭ ಶುಕ್ರವಾರ'. ಯೇಸುವನ್ನು ಕಲ್ವಾರಿ ಬೆಟ್ಟದಲ್ಲಿ ಶಿಲುಬೆಗೇರಿಸಿದ ದಿನ.

ಶಿಲುಬೆಯು ಕ್ರೈಸ್ತರ ಪವಿತ್ರ ಮತ್ತು ಪ್ರಮುಖ ಸಂಕೇತ. ಸಾಮಾನ್ಯ ನೋಟಕ್ಕೆ ಶಿಲುಬೆಯು ಶಾಪದ, ಪಾಪದ ಹಾಗೂ ಶಿಕ್ಷೆಯ ಸಾಧನ. ಆದರೆ ಯೇಸುವು ಶಿಲುಬೆಯಲ್ಲಿ ಮರಣ ಹೊಂದಿದ ನಂತರ ಅದೊಂದು ಪ್ರೀತಿಯ, ಕ್ಷಮೆಯ ಹಾಗೂ ಬಿಡುಗಡೆಯ ಸಾಧನವಾಯಿತು. ಯೇಸುವಿಗಿಂತ ಮೊದಲು ಶಿಲುಬೆಯು ಶಿಕ್ಷೆ ನೀಡುವ ಅಸ್ತ್ರವಾಗಿತ್ತು. ಕಳ್ಳ, ಅಪರಾಧಿ, ದುಷ್ಕರ್ಮಿ, ತಪ್ಪಿಸಿ ಓಡಿಹೋದ ಗುಲಾಮ, ಕ್ರಾಂತಿಕಾರಿ, ಪ್ರತಿಭಟನಕಾರ ಮುಂತಾದವರಿಗೆ ರೋಮನ್ನರು ಶಿಲುಬೆಯ ಶಿಕ್ಷೆ ನೀಡುತ್ತಿದ್ದರು. ಹೀಗಾಗಿ ಅದೊಂದು ಮರಣದಂಡನೆಯ ಶಿಕ್ಷೆಯಾಗಿತ್ತು.

ಯೇಸುಕ್ರಿಸ್ತರು ಶಿಲುಬೆಗೆ ಹೆಗಲು ನೀಡಿದರು. ಹೀಗೆ ಶಿಲುಬೆಯು ಕಷ್ಟ, ನೋವು, ವೇದನೆ ಹಾಗೂ ವ್ಯಥೆಯಲ್ಲಿರು ವವರಿಗೆ ಭರವಸೆಯ ಪ್ರತೀಕವಾಯಿತು. ಶಿಲುಬೆಯ ಮುಖಾಂತರ ಸಮಾಜದಲ್ಲಿನ ಕೊನೆಯ ಅಥವಾ ಕಟ್ಟಕಡೆಯ ವ್ಯಕ್ತಿಗೂ ಯೇಸು ಸಾರಿದ ದೇವರ ಪ್ರೀತಿ ವ್ಯಕ್ತವಾಯಿತು. ಶಿಲುಬೆಯ ಮುಖಾಂತರ ಯೇಸು ಕಲಿಸಿದ ಸಹನೆ, ತ್ಯಾಗ, ಸಮಾಧಾನ, ಶಾಂತಿ, ಕ್ಷಮೆ, ಕರುಣೆ ಮತ್ತು ಪ್ರೀತಿಯಿಂದ ಮಾತ್ರ ಒಳ್ಳೆಯ ಬಾಳು ಹಾಗೂ ಸಮಾಜ ಸಾಧ್ಯ ಎಂಬುದನ್ನು ನಾವು ಮನಗಾಣಬೇಕು.

ಶಿಲುಬೆಯ ಹಿಂದಿನ ಹಾದಿ ನೋಡಿದರೆ ಅದೊಂದು ಸೋಲು, ನಿರಾಶೆ, ಕೇಡು, ನಿಂದನೆ, ನೋವು, ವೇದನೆ, ಅವಹೇಳನ, ಅಸಹ್ಯ ಎಂಬಿತ್ಯಾದಿ ಗೋಳು ಅಥವಾ ಪಾಡು.



ಆದರೆ ಶಿಲುಬೆಯ ನಂತರದ ಅನುಭವ ಜಯ, ಸಂತೋಷ, ಶಾಂತಿ, ಧೈರ್ಯ, ಹುಮ್ಮಸ್ಸು, ಭರವಸೆ, ಆತ್ಮವಿಶ್ವಾಸ, ಬಿಡುಗಡೆ, ಸಮಾಧಾನದ ಹಾಡು. ಇದನ್ನು ಯೇಸು 'ಗೋಧಿಯ ಕಾಳು ಸತ್ತರೆ ಮಾತ್ರ ಸಮೃದ್ಧಿಯಾದ ಫಲವನ್ನು ಕೊಡುತ್ತದೆ' ಎಂಬ ಮಾತಿನಲ್ಲಿ ಸ್ಪಷ್ಟಪಡಿಸಿದ್ದಾರೆ (ಬೈಬಲ್, ಯೊವಾನ್ನ 12:24).

ಶಿಲುಬೆಯನ್ನೊಮ್ಮೆ ನೋಡಿದಾಗ ಎಲ್ಲರ ಬಾಳಿನಲ್ಲೂ ಕಷ್ಟ-ಸಂಕಷ್ಟಗಳಿವೆ ಎಂಬುದು ಸ್ಫುಟವಾಗುತ್ತದೆ. ನಮ್ಮ ಬಾಳು ಸುಖ-ದುಃಖಗಳ ಸಮ್ಮಿಲನ. ನಾವೆಲ್ಲರೂ ವಾಸ್ತವ ಬದುಕಿನಲ್ಲಿ ಆರೋಹಣ-ಅವರೋಹಣ, ಮೇಲಕ್ಕೇರುವುದು-ಕೆಳಗಿಳಿಯುವುದು, ಏಳಿಕೆ-ಇಳಿಕೆಗಳನ್ನು ಅನುಭವಿಸುತ್ತೇವೆ. ಶಿಲುಬೆಗೇರಿ ಸಾವನ್ನಪ್ಪುವುದೆಂದರೆ ಹೊಸ ಬಾಳಿಗೆ ಮತ್ತು ನಿತ್ಯಜೀವಕ್ಕೆ ಮೇಲಕ್ಕೇಳುವುದು. ಶಿಲುಬೆಯು ಬಾಳಲ್ಲಿ ನೊಂದವರಿಗೆ, ನಿರುತ್ಸಾಹಗೊಂಡವರಿಗೆ ಸಾಂತ್ವನ-ಸಮಾಧಾನದ ಸಂದೇಶವಾಗಿದೆ. 'ನನ್ನನ್ನು ಭೂಮಿಯಿಂದ ಮೇಲೇರಿಸಿದಾಗ, ನಾನು ಎಲ್ಲರನ್ನೂ ನನ್ನೆಡೆಗೆ ಸೆಳೆದುಕೊಳ್ಳುತ್ತೇನೆ' ಎಂಬ ಯೇಸುವಿನ ಮಾತಿನಲ್ಲಿ ಅವರ ಶಿಲುಬೆಯ ಶಕ್ತಿ ಅಡಗಿದೆ (ಬೈಬಲ್, ಯೊವಾನ್ನ 12:32).

ದೇವರು ಮನುಕುಲಕ್ಕೆ ಹತ್ತು ಆಜ್ಞೆಗಳನ್ನು ನೀಡಿದರು. ಅವುಗಳಲ್ಲಿ ಮೊದಲ ಮೂರು ಆಜ್ಞೆಗಳು ದೇವರನ್ನು ಪ್ರೀತಿಸಲು ಕರೆ ನೀಡಿದರೆ, ಉಳಿದ ಏಳು ಆಜ್ಞೆಗಳು ಪರರನ್ನು ಪ್ರೀತಿಸಲು ಕರೆ ನೀಡುತ್ತವೆ. ಯೇಸುವಿನ ಕಾಲದಲ್ಲಿ ಶಾಸ್ತ್ರಜ್ಞರು ಹಾಗೂ ಸಂಪ್ರದಾಯಸ್ಥರು ಹಳೆ ಒಡಂಬಡಿಕೆಯ ಹತ್ತು ಆಜ್ಞೆಗಳನ್ನು ಇನ್ನಷ್ಟು ವಿಭಾಗಗಳನ್ನಾಗಿ ಮಾಡಿ 613 ನಿಯಮಗಳನ್ನಾಗಿ ಮಾಡಿದ್ದರು. ಇದರಿಂದ ಜನಸಾಮಾನ್ಯರಿಗೆ ತೊಡಕು-ತೊಂದರೆಗಳಾಗುತ್ತಿದ್ದವು. ಆದುದರಿಂದ ಯೇಸು ಈ ಎಲ್ಲಾ ಆಜ್ಞೆ-ನಿಯಮಗಳನ್ನು ಒಟ್ಟು ಸೇರಿಸಿ, ಎರಡು ಆಜ್ಞೆಗಳು ಮಾತ್ರ ಸರ್ವಶ್ರೇಷ್ಠವಾದುವು ಎಂದು ಸಾರಿದರು. ಮೊದಲನೆಯದು ದೇವರನ್ನು ಪ್ರೀತಿಸುವುದು, ಎರಡನೆ ಯದು ನೆರೆಯವರನ್ನು ಪ್ರೀತಿಸುವುದು.

ಯೇಸು ತನ್ನ ಶಿಷ್ಯರಿಗೆ ಕಲಿಸಿದ 'ಪರಲೋಕದಲ್ಲಿರುವ ನಮ್ಮ ತಂದೆಯೇ' (ಬೈಬಲ್, ಮತ್ತಾಯ 6:10-15) ಎಂಬ ಪ್ರಾರ್ಥನೆಯ ಮೊದಲ ಭಾಗದಲ್ಲಿ ದೇವರೊಡನೆ ಆತ್ಮೀಯತೆಯಿಂದ ಬಾಳುವ ಬಿನ್ನಹವಿದ್ದರೆ, ಎರಡನೆಯ ಭಾಗದಲ್ಲಿ ಎಲ್ಲಾ ಜನರೊಂದಿಗೂ ಅನ್ಯೋನ್ಯತೆಯಿಂದ ಬದುಕಲು ಮಾಡುವ ವಿನಂತಿಯಿದೆ. ಇದರಲ್ಲಿ ಕ್ಷಮೆಯಿಂದ ಮಾನವ ಸಂಬಂಧಗಳನ್ನು ಬೆಸೆಯುವ ಕರೆಯಿದೆ. ಶಿಲುಬೆಯ ಎರಡು ಹಲಗೆಗಳು ದೇವರನ್ನು (ನೇರ ಹಲಗೆ) ಹಾಗೂ ಪರರನ್ನು (ಅಡ್ಡ ಹಲಗೆ) ಪ್ರೀತಿಸಲು ಆಹ್ವಾನಿಸುತ್ತವೆ. ಕ್ಷಮೆಯೇ ಪ್ರೀತಿಯ ಪರಮರೂಪ ಎಂಬ ಮಹಾನ್ ಸತ್ಯವನ್ನು ಯೇಸುವಿನ ಶಿಲುಬೆ ಸಾರುತ್ತದೆ. 'ಪಿತನೇ, ಇವರನ್ನು ಕ್ಷಮಿಸಿ; ತಾವೇನು ಮಾಡುತ್ತಿರುವರೆಂದು ಇವರು ಅರಿಯರು' (ಬೈಬಲ್, ಲೂಕ 23:34) ಎಂದು ತನ್ನನ್ನು ಶಿಲುಬೆಗೇರಿಸಿದವರನ್ನು ಯೇಸು ಕ್ಷಮಿಸಿದರು.

ರಾಜಕೀಯ ಲಾಭ, ಜಾತಿ-ಮತಗಳ ನಡುವಿನ ಭೇದ-ದ್ವೇಷ ಮತ್ತು ಅಸಹಿಷ್ಣುತೆಯಿಂದ ವಿಭಜನೆಗೊಂಡ ಇಂದಿನ ಸಮಾಜಕ್ಕೆ ಶಿಲುಬೆಯಲ್ಲಿನ ಯೇಸುವಿನ ತ್ಯಾಗ, ಕರುಣೆ, ಮಮತೆ ಹಾಗೂ ಕ್ಷಮೆ ಪ್ರೇರಣೆಯಾಗಲಿ. ನಾವೆಲ್ಲರೂ ಈ ಗುಣಗಳನ್ನು ಮೈಗೂಡಿಸಿಕೊಂಡು ಉತ್ತಮ ಸಮಾಜವನ್ನು ಕಟ್ಟೋಣ. ಯೇಸುವಿನಂತೆ ಅನ್ಯಾಯ, ಅನೀತಿ, ಅಸತ್ಯ, ಅಜ್ಞಾನಗಳನ್ನು ಪ್ರಶ್ನಿಸೋಣ. ಶಿಲುಬೆಯು ಸೋಲಲ್ಲ, ಜಯದ ಮೆಟ್ಟಿಲು. ❖

ನಿಮಗೆ ನೀವೇ ವಕೀಲರಾಗಿ ಅಂತಾನೆ

‘ಪುರುಷೋತ್ತಮ’

ಕೋಲಾರ ಜಿಲ್ಲೆಯ ಕಠಾರಿಪಾಳ್ಯದ ಹುಡುಗ ಅಪ್ಪಟ ಏಕಲವ್ಯನಂತೆಯೇ ಬೆಳೆದು ದೇಹದಾರ್ಢ್ಯ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿದರು. ಅವರೇ ಜಿಮ್ ರವಿ. ಅವರ ಗರಡಿಯಲ್ಲಿ ಪಳಗಿದವರು ಸಾವಿರಾರು ಮಂದಿ. ಕ್ರೀಡಾಪಟು, ಪೋಷಕನಟರಾಗಿದ್ದ ಅವರು ಸುಮಾರು 150ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದವರು. ಈಗ 'ಪುರುಷೋತ್ತಮ'ನಾಗಿ ಬರುತ್ತಿರುವ ಹೊತ್ತಿನಲ್ಲಿ ಒಂದಿಷ್ಟು ಮಾತುಕತೆ...

ಶರತ್ ಹೆಗ್ಡೆ

- **ಕ್ರೀಡಾಪಟುವಿನಿಂದ ಸಿನಿಮಾ ಹೀರೊವರೆಗಿನ ಬದುಕು ಹೇಗಿತ್ತು?**

ನನ್ನ ಸಾಧನೆಗೆ ಸ್ಫೂರ್ತಿಯೇ ಕಡುಬಡತನ. ಅದು ನನಗೆ ಹಸಿವನ್ನು ತೋರಿಸಿತು. ಕನಸು ಕಾಣುವುದನ್ನು ಕಲಿಸಿತು. ಅಮ್ಮನೂ ಅದನ್ನೇ ಹೇಳುತ್ತಿದ್ದರು. ಕನಸು ಕಾಣಬೇಕು ಅಂತ. ಜತೆಗೊಂದು ಛಲ ಇತ್ತು. ಹಾಗಾಗಿ ಪರಿಶ್ರಮದ ಜತೆಗೆ ಕ್ರೀಡಾಪಥದಲ್ಲಿ ಮುನ್ನಡೆದೆ. ನೂರಾರು ಚಿನ್ನದ ಪದಕಗಳು ಅರಸಿ ಬಂದವು. ಏಕಲವ್ಯ, ಮಿಸ್ಟರ್ ಇಂಡಿಯಾ ಸಹಿತ ಹಲವು ಪ್ರಶಸ್ತಿಗಳು ಬಂದವು. ಈಗ ‘ಪುರುಷೋತ್ತಮ’ನಾಗಿ ಬಂದಿದ್ದೇನೆ.

- **ಸಿನಿಮಾ ಹೀರೊ ಆಗಲು ಕಾರಣ?**

4ನೇ ತರಗತಿಯಲ್ಲಿದ್ದಾಗಲೇ ‘ನಮ್ಮಮ್ಮ ತಾಯಿ ಅಣ್ಣಮ್ಮ’ ಚಿತ್ರದಲ್ಲಿ ಬಾಲನಟನಾಗಿ ಅಭಿನಯಿಸಿದ್ದೆ. ರವಿಚಂದ್ರ ವಿ. ಅವರ ಸಿಪಾಯಿ ಚಿತ್ರದಲ್ಲಿ ಸಹ ಅವಕಾಶ ಸಿಕ್ಕಿತು. ನಂತರ ಸಾಲು ಅವಕಾಶಗಳು ಬಂದವು. ತೆಲುಗಿನಲ್ಲಿ ಸುಮಾರು 70ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದೇನೆ. ಯಾವಾಗಲೂ ಖಳ, ಒದೆ ತಿನ್ನುವ ಪಾತ್ರಗಳಲ್ಲೇ ಕಾಣಿಸಿಕೊಳ್ಳುತ್ತಿದ್ದೆ. ಹೀರೊ ಆಗುವುದು ಯಾವಾಗ ಎಂದು ನನ್ನ ಸ್ನೇಹಿತರು, ಹಿತೈಷಿಗಳು ಕೇಳುತ್ತಿದ್ದರು. ಈಗ ‘ಪುರುಷೋತ್ತಮ’ನಾಗಿ ಆ ಪ್ರಯತ್ನಕ್ಕೆ ಕೈಹಾಕಿದ್ದೇನೆ.

- **ಯಾರು ಈ ‘ಪುರುಷೋತ್ತಮ’?**

ಚಿತ್ರದಲ್ಲಿ ಹೇಳಿರುವುದು ತ್ಯಾಗಮಯಿ ಪುರುಷೋತ್ತಮ. ಗಂಡ ಹೆಂಡತಿಗಾಗಿ, ಹೆಂಡತಿ ಗಂಡನಿಗಾಗಿ ಪರಸ್ಪರ ತ್ಯಾಗಿಗಳಾಗಬೇಕು. ಅದರಲ್ಲೇನೂ ಹೆಚ್ಚುಗಾರಿಕೆ ಇಲ್ಲ. ರಾಜೀ ಸೂತ್ರವೇ ಮುಖ್ಯ. ಒಬ್ಬರನ್ನೊಬ್ಬರು ಬಿಟ್ಟುಕೊಡಬಾರದು. ಈ ವಿಚಾರ ಎಲ್ಲರಿಗೂ ಇಷ್ಟವಾಗುತ್ತದೆ. ಮದುವೆ ಆಗಬೇಕಾದರೆ ಕುಟುಂಬದ ಎಲ್ಲರೂ ಸೇರಿ ನಿರ್ಧರಿಸುತ್ತಾರೆ. ವಿಚ್ಛೇದನವನ್ನು ಗಂಡ ಹೆಂಡತಿ ಮಾತ್ರ ನಿರ್ಧರಿಸುತ್ತಾರೆ. ವಿಚ್ಛೇದಿತರೇನೋ ಚೆನ್ನಾಗಿಯೇ ಬದುಕಬಹುದು. ಆದರೆ, ಅವರ ಸುತ್ತಮುತ್ತಲಿನವರು, ಕುಟುಂಬದವರು ಎಷ್ಟು ನೋವು ಅನುಭವಿಸುತ್ತಾರೆ ಅಲ್ವಾ? ಆದ್ದರಿಂದ ನಿಮ್ಮ ಭಿನ್ನಾಭಿಪ್ರಾಯಗಳನ್ನು ಕುಳಿತು ಮಾತನಾಡಿ ಬಗೆಹರಿಸಿಕೊಳ್ಳಿ. ನಿಮಗೆ ನೀವೇ ವಕೀಲರಾಗಿ ಎಂದು ಚಿತ್ರದಲ್ಲಿ ಹೇಳಿದ್ದೇನೆ. ವಿಚ್ಛೇದನ ಎಲ್ಲದಕ್ಕೂ ಪರಿಹಾರ ಅಲ್ಲ.

- **‘ಪುರುಷೋತ್ತಮ’ನ ವಕೀಲಿಕೆ ತಯಾರಿ ಹೇಗಿತ್ತು?**

ಈಗಾಗಲೇ ಚಿತ್ರಗಳಲ್ಲಿ ನಟಿಸಿದ ಕಾರಣ ಹೆಚ್ಚಿನ ತಯಾರಿ ಮಾಡಲಿಲ್ಲ. ಆದರೆ ನನ್ನ ಪಾತ್ರ ವಕೀಲರು, ನ್ಯಾಯಾಧೀಶರಿಗೆ ಖಂಡಿತವಾಗಿ ಇಷ್ಟವಾಗುತ್ತದೆ. ಅವರ ವೃತ್ತಿ ಗೌರವವನ್ನು ಎತ್ತಿ ಹಿಡಿಯುತ್ತದೆ. ವಕೀಲ ಈ ರೀತಿಯೂ ಇರಬಹುದು ಎಂಬುದನ್ನು ತೋರಿಸಿದ್ದೇನೆ.

‘ಪುರುಷೋತ್ತಮ’ನ ಪ್ರಕಾರ ಹೆಂಡತಿಯನ್ನು ಹೇಗೆ ಪ್ರೀತಿಸಬೇಕು?

ಸ್ನೇಹಿತೆಯ ತರಹ ನೋಡಿ. ತಾಯಿಯ ತರಹ ಪ್ರೀತಿಸಿ. ಅವರು ನಿಮ್ಮೊಡನೆ (ಗಂಡನೊಡನೆ) ಹೇಳಲಾಗದ ತೊಳಲಾಟಗಳನ್ನು ಅರ್ಥಮಾಡಿಕೊಳ್ಳಿ. ಸಂಕಷ್ಟಗಳನ್ನು ಎದುರಿಸಲು ಬೆನ್ನೆಲುಬಾಗಿ ನಿಲ್ಲಿ. ವಿಶ್ವಾಸ ಮೂಡಿಸಿ. ಹೆಂಡತಿ ಹೇಗಿರಬೇಕು ಎಂಬುದನ್ನು ಇಲ್ಲಿ ನಾಯಕಿ ಅಪೂರ್ವಾ ತುಂಬಾ ಅದ್ಭುತವಾಗಿ ಪ್ರಸ್ತುತಪಡಿಸಿದ್ದಾರೆ. ಈ ಕಥೆಯನ್ನು ನನ್ನ ಪತ್ನಿ ಜ್ಯೋತಿ ಅವರು ಆಯ್ಕೆ ಮಾಡಿದರು.

- **ಸಿನಿಮಾ ಮೇಲೆ ನಿಮ್ಮ ನಿರೀಕ್ಷೆ?**

ಒಳ್ಳೆಯ ಕಂಟೆಂಟ್ ಕೊಟ್ಟಿದ್ದೇನೆ. ಅದನ್ನು ಜನರಿಗೆ ಕೊಡುತ್ತೇನೆ. ಹೇಗಿದೆ ಎಂಬುದನ್ನು ಅವರೇ ಹೇಳಲಿ. ಪ್ರತಿಫಲವನ್ನು ದೇವರು ಕೊಡುತ್ತಾನೆ. ಇದು ನನ್ನ ನಂಬಿಕೆ. ಇಲ್ಲಿ ಜಿಮ್ ರವಿಯನ್ನು ನೋಡಲು ಬಂದರೆ ನಿರಾಸೆಯಾಗಬಹುದು. ಆದರೆ, ಪುರುಷೋತ್ತಮ ಎಂಬ ಸದ್ಗೃಹಸ್ಥನನ್ನು ನೋಡಲು ಬಂದರೆ ಖಂಡಿತವಾಗಿಯೂ ಚಿತ್ರ ಇಷ್ಟವಾಗುತ್ತದೆ. ಆದ್ದರಿಂದ ‘ಪುರುಷೋತ್ತಮ’ನನ್ನು ನೋಡಲು ಬನ್ನಿ.

- **ಗರಡಿಮನೆ ಉಳಿಸುವ ಅಭಿಯಾನ ಎಲ್ಲಿವರೆಗೆ ಬಂದಿತು?**

ಈಗಾಗಲೇ ಅದು ಚಾಮರಾಜನಗರ, ಕೊಳ್ಳೆಗಾಲದಲ್ಲಿ ಆರಂಭವಾಗಿದೆ. ಸಿನಿಮಾ ಕೆಲಸ ಮುಗಿದ ಮೇಲೆ ಪೂರ್ಣವಾಗಿ ಆ ಅಭಿಯಾನ ರಾಜ್ಯದಾದ್ಯಂತ ಮುಂದುವರಿಯಲಿದೆ. ನಮ್ಮ ಗರಡಿಮನೆಗಳು ಪುನರುಜ್ಜೀವನಗೊಳ್ಳಬೇಕು. ದೇಸಿ ಆಹಾರ ಬರಬೇಕು. ಈ ಬಗ್ಗೆ ಸಮಗ್ರವಾದ ಕಾರ್ಯತಂತ್ರ ಇದೆ. ಜನಬೆಂಬಲ ಬೇಕು. ❖

ಹಿಟ್ಲರ್ ಮನೆಯಲ್ಲಿ ಲೀಲಾ ದರ್ಬಾರ್!

ಮಲ್ಲೈಕಾ ಟಿ. ವಸುಪಾಲ್

ರೇಷ್ಮಾ

ಪಟ ಪಟ ಅಂತ ಮಾತನಾಡುತ್ತಾ, ತುಟಿ ಅಂಚಲ್ಲೇ ನಗು ಸೂಸುತ್ತಾ, ಕಣ್ಣಲ್ಲೇ ಅಭಿನಯಿಸುತ್ತಾ, ಸದಾ ಚಟುವಟಿಕೆಯೊಂದಿಗೆ ಒಂದಿಲ್ಲೊಂದು ಎಡವಟ್ಟು ಮಾಡಿಕೊಂಡು ಎಂಥವರನ್ನೂ ತನ್ನ ನಟನೆಯ ಮೂಲಕವೇ ಕಟ್ಟಿ ಹಾಕುವ ಹುಡುಗಿ ಲೀಲಾ. ಈಕೆ ಇತ್ತೀಚೆಗೆ ಕಿರುತೆರೆಯಲ್ಲಿ ತುಂಬಾನೇ ಸದ್ದು ಮಾಡುತ್ತಿದ್ದಾಳೆ. ಕಿರುತೆರೆ ವೀಕ್ಷಕರಿಗೂ ಇವಳೆಂದರೆ ಬಹಳ ಅಚ್ಚುಮೆಚ್ಚು. ಯಾರು ಈ ಲೀಲಾ?

ಲೀಲಾ, ಜೀ ಕನ್ನಡ ವಾಹಿನಿಯ ಹಿಟ್ಲರ್ ಕಲ್ಯಾಣ ಧಾರಾವಾಹಿಯ ನಾಯಕಿ. ಇವರ ನಿಜ ಹೆಸರು ಮಲ್ಲೈಕಾ ಟಿ. ವಸುಪಾಲ್. ಇವರನ್ನು ಸದ್ಯದ ಕಿರುತೆರೆ ಕ್ರಷ್ ಎಂದರೂ ತಪ್ಪಾಗಲಿಕ್ಕಿಲ್ಲ.

ಮೂಲತಃ ದಾವಣಗೆರೆಯವರಾದ ಇವರು ನಟನೆಯ ಕನಸು ಹೊತ್ತು ಬಂದವರು. ನೃತ್ಯದ ಮೇಲೆ ಅಪಾರ ಒಲವು. ಕಥಕ್ ನೃತ್ಯ ಪ್ರಕಾರವನ್ನೂ ಅಭ್ಯಸಿಸಿದ್ದಾರೆ. ಆದರೆ ತಂದೆ–ತಾಯಿಗೆ ಮಗಳು ಓದಿನಲ್ಲಿ ಸಾಧನೆ ಮಾಡಬೇಕು ಎಂಬ ಹಂಬಲ. ಈ ಹಂಬಲಕ್ಕೆ ಒಲ್ಲೆ ಎನ್ನದ ಮಲ್ಲೈಕಾ ಸಿವಿಲ್ ಎಂಜಿನಿಯರಿಂಗ್ ಮುಗಿಸಿದ್ದಾರೆ.

ಕಾಲೇಜು ದಿನಗಳಿಂದಲೂ ಇವರಿಗೆ ಆಡಿಷನ್‌ಗಳಿಗೆ ಕರೆ ಬರುತ್ತಲೇ ಇತ್ತು. ‘ಆದರೆ ಓದು ಮುಖ್ಯವಾದ ಕಾರಣ ಯಾವುದೇ ಪ್ರಾಜೆಕ್ಟ್‌ಗಳನ್ನು ನಾನು ಒಪ್ಪಿರಲಿಲ್ಲ. ಕಾಲೇಜು ಮುಗಿದ ಮೇಲೆ ಹಿಟ್ಲರ್ ಕಲ್ಯಾಣಕ್ಕೆ ಆಯ್ಕೆಯಾದೆ. ನಟನೆ, ಕ್ಯಾಮೆರಾ ಎದುರಿಸುವುದು ನನಗೆ ತಿಳಿದಿರಲಿಲ್ಲ. ಆದರೆ ಮೊದಲ ಧಾರಾವಾಹಿಯಲ್ಲೇ ನಟನೆಯ ಮೂಲಕ ಸಾಕಷ್ಟು ಅಭಿಮಾನಿ ಬಳಗವನ್ನು ಹೊಂದಿದ್ದೇನೆ. ಅತೀ ಕಡಿಮೆ ಸಮಯದಲ್ಲಿ ಬಹಳಷ್ಟು ಅಭಿಮಾನಿ ಬಳಗವನ್ನು ಗಳಿಸಿದ್ದು ನನಗೆ ತುಂಬಾನೇ ಖುಷಿ ಕೊಟ್ಟಿದೆ’ ಎನ್ನುತ್ತಾ ಸಂಭ್ರಮ ಹಂಚಿಕೊಳ್ಳುತ್ತಾರೆ.

ಲೀಲಾ ಪಾತ್ರಕ್ಕೂ ಮಲ್ಲೈಕಾರ ವೈಯಕ್ತಿಕ ಜೀವನಕ್ಕೂ ಸಾಕಷ್ಟು ಹೋಲಿಕೆ ಇದೆ ಎನ್ನುವ ಈ ಬೆಡಗಿ ಮುಂದಿನಗಳಲ್ಲಿ ನಟನೆಯಲ್ಲೇ ಮುಂದುವರಿಯವ ಭರವಸೆ ಮಾತುಗಳನ್ನಾಡುತ್ತಾರೆ. ತೆಲುಗು ಧಾರಾವಾಹಿ ಕ್ಷೇತ್ರದಿಂದಲೂ ಇವರಿಗೆ ಅವಕಾಶ ಬಂದಿದ್ದು ಸದ್ಯ ಹಿಟ್ಲರ್ ಕಲ್ಯಾಣದಲ್ಲೇ ಮುಂದುವರಿಯುತ್ತೇನೆ ಎನ್ನುತ್ತಾರೆ.

ಸಿನಿಮಾ ನಟನೆಯ ಕುರಿತೂ ಮಾತನಾಡುವ ಇವರು ‘ಸದ್ಯ ನಾನು ಧಾರಾವಾಹಿಯ ಮೇಲೆ ಸಂಪೂರ್ಣ ಗಮನ ಹರಿಸಿದ್ದೇನೆ. ಮುಂದಿನ ದಿನಗಳಲ್ಲಿ ಉತ್ತಮ ಚಿತ್ರಕತೆ ಸಿಕ್ಕೂ ನಟಿಸುವ ಅವಕಾಶ ಸಿಕ್ಕರೆ ಖಂಡಿತ ನಟಿಸುತ್ತೇನೆ’ ಎನ್ನುತ್ತಾ ಮಾತು ಮುಗಿಸುತ್ತಾರೆ. ❖

ಜೂನ್ 10ಕ್ಕೆ ‘777 ಚಾರ್ಲಿ’

ಪ್ರಜಾವಾಣಿ ನೋಡಿಯೊ

ವಾರದ ಸಿನಿಮಾ ಚಟುವಟಿಕೆಗಳ ನೋಟಕ್ಕೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ರಕ್ಷಿತ್ ಶೆಟ್ಟಿ ನಟನೆ, ನಿರ್ಮಾಣದ ‘777 ಚಾರ್ಲಿ’ ತೆರೆಗೆ ಬರಲು ಮುಹೂರ್ತ ನಿಗದಿಯಾಗಿದೆ. ಜೂನ್ 10ರಂದು ಈ ಚಿತ್ರ ವಿಶ್ವದಾದ್ಯಂತ ಬಿಡುಗಡೆಯಾಗಲಿದೆ ಎಂದು ಪರಂವಃ ಸ್ಟುಡಿಯೊ ಪ್ರಕಟಣೆ ತಿಳಿಸಿದೆ.

‘777 ಚಾರ್ಲಿ’ಗೆ ಸೆನ್ಸಾರ್ ಮಂಡಳಿ ಯು/ಎ ಪ್ರಮಾಣಪತ್ರ ನೀಡಿದೆ. ಪರಂವಃ ಸ್ಟುಡಿಯೋಸ್ ನಿರ್ಮಾಣದ ಈ ಪ್ಯಾನ್ ಇಂಡಿಯಾ ಚಿತ್ರವು ಕಳೆದ ಡಿ.31ಕ್ಕೇ ಬಿಡುಗಡೆಯಾಗಬೇಕಿತ್ತು. ಕಾರಣಾಂತರದಿಂದ ಬಿಡುಗಡೆ ಮುಂದಕ್ಕೆ ಹೋಗಿತ್ತು. ಚಿತ್ರದ ಕಥೆ, ನಿರ್ದೇಶನ ಕಿರಣ್‌ರಾಜ್ ಕೆ. ಅವರದ್ದು. ಜಿ.ಎಸ್.ಗುಪ್ತ ಹಾಗೂ ರಕ್ಷಿತ್ ಶೆಟ್ಟಿ ಚಿತ್ರದ ನಿರ್ಮಾಪಕರು. ಸಂಗೀತಾ ಶೃಂಗೇರಿ ಚಿತ್ರದ ನಾಯಕಿ. ನಟ, ನಿರ್ದೇಶಕ ರಾಜ್ ಬಿ.ಶೆಟ್ಟಿ, ಡ್ಯಾನಿಶ್ ಸೇಠ್ ತಾರಾಗಣದಲ್ಲಿದ್ದಾರೆ. ಇಲ್ಲಿ ನಾಯಿ (ಚಾರ್ಲಿ) ಪ್ರಧಾನ ಪಾತ್ರದಲ್ಲಿ ಕಾಣಿಸಿಕೊಂಡಿದೆ. ಟೀಸರ್‌ನಲ್ಲಿ ಅದರ ತುಂಟಾಟ, ವರ್ತನೆ ಭಾರೀ ಮೆಚ್ಚುಗೆ ಪಡೆದಿದೆ. ❖

‘777 ಚಾರ್ಲಿ’ ಚಿತ್ರ

‘ಹತ್ತಿ ಉತ್ಪನ್ನ ಬೆಲೆ ಇಳಿಕೆ’

ನವದೆಹಲಿ (ಪಿಟಿಐ): ಹತ್ತಿಯ ಮೇಲಿನ ಆಮದು ಸುಂಕವನ್ನು ತೆಗೆದುಹಾಕುವ ಕೇಂದ್ರ ಸರ್ಕಾರದ ನಿರ್ಧಾರದಿಂದಾಗಿ ಹತ್ತಿಯಿಂದ ಸಿದ್ಧವಾಗುವ ಉತ್ಪನ್ನಗಳ ಬೆಲೆ ತಗ್ಗುವ ನಿರೀಕ್ಷೆ ಇದೆ ಎಂದು ಕೇಂದ್ರ ಜವಳಿ ಕಾರ್ಯದರ್ಶಿ ಯು.ಪಿ. ಸಿಂಗ್ ಹೇಳಿದ್ದಾರೆ.

ಆಮದು ಹತ್ತಿ ಮೇಲಿನ ಆಮದು ಸುಂಕವನ್ನು ಸೆಪ್ಟೆಂಬರ್ 30ರವರೆಗೆ ಮನ್ನಾ ಮಾಡುವುದಾಗಿ ಕೇಂದ್ರ ಹಣಕಾಸು ಸಚಿವಾಲಯವು ಬುಧವಾರ ಹೇಳಿದೆ.

ಈಗಿನ ನಿಯಮಗಳ ಅನ್ವಯ ಆಮದು ಹತ್ತಿಗೆ ಶೇ 5ರಷ್ಟು ಮೂಲ ಆಮದು ಸುಂಕ ಹಾಗೂ ಶೇ 5ರಷ್ಟು ಕೃಷಿ ಮೂಲಸೌಕರ್ಯ ಅಭಿವೃದ್ಧಿ ಸೆಸ್ ಪಾವತಿಸಬೇಕು.

ಹತ್ತಿಯ ಪೂರೈಕೆ ಕಡಿಮೆ ಇದೆ. ಆದರೆ, ಬೇಡಿಕೆ ಹೆಚ್ಚಾಗಿದೆ. ಹೀಗಾಗಿ, ಆಮದು ಸುಂಕ ತೆಗೆದುಹಾಕಿರುವುದರಿಂದ ದೇಶದಲ್ಲಿ ಹತ್ತಿಯ ಬೆಲೆಯ ಮೇಲೆ ಪರಿಣಾಮ ಇರಲಿದೆ ಎಂದು ಹೇಳಿದ್ದಾರೆ.

ವಾಟ್ಸ್‌ಆ್ಯಪ್ ಪಾವತಿ ಸೇವೆ ವಿಸ್ತರಣೆಗೆ ಎನ್‌ಪಿಸಿಐ ಒಪ್ಪಿಗೆ

ನವದೆಹಲಿ (ಪಿಟಿಐ): ವಾಟ್ಸ್‌ಆ್ಯಪ್‌ನ ಪಾವತಿ ಸೌಲಭ್ಯವನ್ನು ಹೆಚ್ಚುವರಿಯಾಗಿ 6 ಕೋಟಿ ಬಳಕೆದಾರರಿಗೆ ವಿಸ್ತರಿಸಲು ರಾಷ್ಟ್ರೀಯ ಪಾವತಿ ನಿಗಮವು (ಎನ್‌ಪಿಸಿಐ) ಒಪ್ಪಿಗೆ ನೀಡಿದೆ.

ಇದರಿಂದಾಗಿ ಕಂಪನಿಯು ಒಟ್ಟಾರೆ 10 ಕೋಟಿ ಬಳಕೆದಾರರಿಗೆ ಯುಪಿಐ (ಏಕೀಕೃತ ಪಾವತಿ ವ್ಯವಸ್ಥೆ) ಆಧಾರಿತ ಪಾವತಿ ಸೌಲಭ್ಯವನ್ನು ನೀಡಲು ಸಾಧ್ಯವಾಗಲಿದೆ ಎಂದು ಎನ್‌ಪಿಸಿಐ ಹೇಳಿದೆ.

₹ 3.12 ಲಕ್ಷ ಕೋಟಿ ಮೌಲ್ಯದ ಪ್ರಸ್ತಾವ

ಟ್ವಿಟರ್ ಖರೀದಿಸಲು ಮುಂದಾದ ಮಸ್ಕ್

ನ್ಯೂಯಾರ್ಕ್/ಲಂಡನ್ (ಎಪಿ/ರಾಯಿಟರ್ಸ್): ಟೆಸ್ಲಾ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಎಲಾನ್ ಮಸ್ಕ್ ಅವರು ಟ್ವಿಟರ್ ಕಂಪನಿಯ ಅಷ್ಟೂ ಷೇರುಗಳನ್ನು ಖರೀದಿಸುವ ಪ್ರಸ್ತಾವವನ್ನು ಮುಂದಿರಿಸಿದ್ದಾರೆ. ತಾವು ಟ್ವಿಟರ್ ಆಡಳಿತ ಮಂಡಳಿಯನ್ನು ಸೇರುವುದಿಲ್ಲ ಎಂದು ಪ್ರಕಟಿಸಿದ ನಂತರ ಅವರು ಈ ಪ್ರಸ್ತಾವ ಇರಿಸಿದ್ದಾರೆ.

ಕಂಪನಿಯ ಖರೀದಿಗೆ ಒಟ್ಟು 41 ಬಿಲಿಯನ್ ಡಾಲರ್ (₹ 3.12 ಲಕ್ಷ ಕೋಟಿ) ನೀಡಲು ಅವರು ಮುಂದಾಗಿದ್ದಾರೆ.

ಮಸ್ಕ್ ಅವರು ಈಗ ಟ್ವಿಟರ್‌ನಲ್ಲಿ ಶೇಕಡ 9ಕ್ಕಿಂತ ತುಸು ಹೆಚ್ಚು ಷೇರುಪಾಲು ಹೊಂದಿದ್ದಾರೆ. ಅವರು ಟ್ವಿಟರ್‌ನಲ್ಲಿ ಅತಿಹೆಚ್ಚು ಷೇರುಪಾಲು ಹೊಂದಿರುವವರೂ ಹೌದು. ಕಂಪನಿಯ ಇನ್ನುಳಿದ ಷೇರುಗಳನ್ನು ಕೂಡ ತಾವು ಖರೀದಿಸಬಯಸಿರುವುದಾಗಿ ಮಸ್ಕ್ ಹೇಳಿದ್ದಾರೆ ಎಂದು ಟ್ವಿಟರ್ ಷೇರುಪೇಟೆಗೆ ಮಾಹಿತಿ ನೀಡಿದೆ.

ಎಲಾನ್ ಮಸ್ಕ್

ಟ್ವಿಟರ್‌ನ ಪ್ರತಿ ಷೇರಿಗೆ 54.20 ಡಾಲರ್ (₹ 4,130.99) ಪಾವತಿಸುವುದಾಗಿ ಅವರು ಹೇಳಿದ್ದಾರೆ. ‘ಮುಕ್ತ ಅಭಿವ್ಯಕ್ತಿಗೆ ಜಗತ್ತಿನ ಎಲ್ಲೆಡೆ ವೇದಿಕೆಯಾಗಬಲ್ಲ ಶಕ್ತಿ ಟ್ವಿಟರ್‌ಗೆ ಇದೆ ಎಂಬ ನಂಬಿಕೆಯಿಂದ ನಾನು ಟ್ವಿಟರ್‌ನಲ್ಲಿ ಹೂಡಿಕೆ ಮಾಡಿದ್ದೇನೆ. ಕ್ರಿಯಾಶೀಲ ಪ್ರಜಾತಂತ್ರಕ್ಕೆ ಮುಕ್ತ ಅಭಿವ್ಯಕ್ತಿಯು ಅನಿವಾರ್ಯ’ ಎಂದು ಮಸ್ಕ್ ಅವರು ಹೇಳಿದ್ದಾರೆ.

‘ಆದರೆ, ಟ್ವಿಟರ್ ಕಂಪನಿಯು ಈಗಿನ ಸ್ವರೂಪದಲ್ಲಿ ಈ ಉದ್ದೇಶವನ್ನು ಈಡೇರಿಸುವುದಿಲ್ಲ, ಬೆಳೆಯುವುದೂ ಇಲ್ಲ ಎಂಬುದು ನನಗೆ ಅರಿವಾಗಿದೆ. ಟ್ವಿಟರ್‌ಅನ್ನು ಖಾಸಗಿ ಕಂಪನಿಯನ್ನಾಗಿ ಪರಿವರ್ತಿಸಬೇಕು’ ಎಂದು ಕೂಡ ಅವರು ಹೇಳಿದ್ದಾರೆ. ಮಸ್ಕ್ ಅವರು ಟ್ವಿಟರ್ ಷೇರುಗಳನ್ನು ಜನವರಿ 31ರಿಂದ ಪ್ರತಿದಿನವೂ ಖರೀದಿಸುತ್ತಿದ್ದಾರೆ.

ಮಸ್ಕ್ ಅವರ ಪ್ರಸ್ತಾವ ಸಿಕ್ಕಿದೆ. ಅದನ್ನು ಒಪ್ಪಿಕೊಳ್ಳಬೇಕೋ ಅಥವಾ ಷೇರುಪೇಟೆಯಲ್ಲಿ ನೋಂದಾಯಿತ ಕಂಪನಿಯಾಗಿ ಮುಂದುವರಿಯಬೇಕೋ ಎಂಬುದನ್ನು ತೀರ್ಮಾನಿಸಲಾಗುವುದು ಎಂದು ಟ್ವಿಟರ್ ಹೇಳಿದೆ.

ಶತಕೋಟ್ಯಧೀಶ ಆಗಿರುವ ಮಸ್ಕ್ ಅವರು ಈಚಿನ ದಿನಗಳಲ್ಲಿ ಟ್ವಿಟರ್‌ಅನ್ನು ಹಲವು ಬಾರಿ ಟೀಕಿಸಿದ್ದಾರೆ. ಮುಕ್ತ ಅಭಿವ್ಯಕ್ತಿಯ ತತ್ವಗಳನ್ನು ಟ್ವಿಟರ್ ಪೂರ್ತಿಯಾಗಿ ಪಾಲಿಸುತ್ತಿಲ್ಲ ಎಂಬುದು ಮಸ್ಕ್ ಅವರ ನಂಬಿಕೆ. ಮಸ್ಕ್ ಅವರು ಟ್ವಿಟರ್‌ನಲ್ಲಿ 8.1 ಕೋಟಿ ಅನುಯಾಯಿಗಳನ್ನು ಹೊಂದಿದ್ದಾರೆ.

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹168.50
ಆರ್‌ಎಸ್‌ಎಸ್-5	₹163
ಗುಡ್ ಲಾಟ್	₹159

(ಪ್ರತಿ ಕೆ.ಜಿಗೆ)

ಜವಳಿ: ₹ 19 ಸಾವಿರ ಕೋಟಿ ಹೂಡಿಕೆ ಪ್ರಸ್ತಾವಕ್ಕೆ ಒಪ್ಪಿಗೆ

ನವದೆಹಲಿ (ಪಿಟಿಐ): ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯ ಅಡಿ ಜವಳಿ ಕ್ಷೇತ್ರದಲ್ಲಿ ₹ 19 ಸಾವಿರ ಕೋಟಿ ಹೂಡಿಕೆಗೆ ಸಂಬಂಧಿಸಿದಂತೆ 61 ಅರ್ಜಿಗಳಿಗೆ ಒಪ್ಪಿಗೆ ನೀಡಲಾಗಿದೆ ಎಂದು ಕೇಂದ್ರ ಜವಳಿ ಕಾರ್ಯದರ್ಶಿ ಯು.ಪಿ. ಸಿಂಗ್ ಗುರುವಾರ ತಿಳಿಸಿದ್ದಾರೆ.

ಒಪ್ಪಿಗೆ ನೀಡಿರುವ ಅರ್ಜಿಗಳಿಂದ ₹ 19,077 ಕೋಟಿ ಹೂಡಿಕೆ ಆಗುವ ನಿರೀಕ್ಷೆ ಮಾಡಲಾಗಿದೆ. ವಹಿವಾಟು ಮೊತ್ತವು ₹ 1.84 ಲಕ್ಷ ಕೋಟಿ ಆಗುವ ಅಂದಾಜು ಇದೆ ಎಂದು ತಿಳಿಸಿದ್ದಾರೆ.

ದೇಶದ ತಯಾರಿಕಾ ಸಾಮರ್ಥ್ಯ ವೃದ್ಧಿಸಲು ಮತ್ತು ರಫ್ತು ವಹಿವಾಟು ಹೆಚ್ಚಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಪಿಎಲ್‌ಐ ಯೋಜನೆ ಆರಂಭಿಸಿದೆ.

ಸುದ್ದಿ 2 ನಿಮಿಷ

ಭಾರತದ ಬೆಳವಣಿಗೆ ಅಂದಾಜು ತಗ್ಗಿಸಿದ ವಿಶ್ವಬ್ಯಾಂಕ್

ನವದೆಹಲಿ (ರಾಯಿಟರ್ಸ್): ಭಾರತ ಮತ್ತು ಇಡೀ ದಕ್ಷಿಣ ಏಷ್ಯಾ ಪ್ರದೇಶದ ಆರ್ಥಿಕ ಬೆಳವಣಿಗೆ ದರದ ಅಂದಾಜನ್ನು ವಿಶ್ವ ಬ್ಯಾಂಕ್ ತಗ್ಗಿಸಿದೆ. ಪೂರೈಕೆ ವ್ಯವಸ್ಥೆಯಲ್ಲಿ ಸಮಸ್ಯೆಗಳು ಆಗುತ್ತಿರುವುದು ಹಾಗೂ ಉಕ್ರೇನ್ ಬಿಕ್ಕಟ್ಟಿನಿಂದಾಗಿ ಹಣದುಬ್ಬರ ಪ್ರಮಾಣ ಜಾಸ್ತಿ ಆಗುತ್ತಿರುವುದು ಇದಕ್ಕೆ ಕಾರಣ ಎಂದು ಅದು ಹೇಳಿದೆ.



ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ಅರ್ಥ ವ್ಯವಸ್ಥೆಯು ಶೇಕಡ 8ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ಅಂದಾಜಿಸಿದೆ. ದೇಶದ ಜಿಡಿಪಿ ಶೇ 8.7ರಷ್ಟು ಬೆಳವಣಿಗೆ ಕಾಣಲಿದೆ ಎಂದು ಈ ಮೊದಲು ಅಂದಾಜು ಮಾಡಿತ್ತು. ಹಾಲಿ ಹಣಕಾಸು ವರ್ಷದಲ್ಲಿ ದಕ್ಷಿಣ ಏಷ್ಯಾದ ಬೆಳವಣಿಗೆಯ ಅಂದಾಜು ಪ್ರಮಾಣ ಶೇ 6.6ರಷ್ಟು ಎಂದೂ ಹೇಳಿದೆ.

‘ತೈಲ ಬೆಲೆ ಮತ್ತು ಆಹಾರ ವಸ್ತುಗಳ ಬೆಲೆಯು ದುಬಾರಿ ಆಗಿರುವುದು ಜನರ ಆದಾಯದ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡಲಿದೆ’ ಎಂದು ವಿಶ್ವ ಬ್ಯಾಂಕ್‌ನ ದಕ್ಷಿಣ ಏಷ್ಯಾ ಉಪಾಧ್ಯಕ್ಷ ಹಾರ್ಟ್‌ವಿಗ್ ಷಾಫರ್ ಹೇಳಿದ್ದಾರೆ.

ಮಹೀಂದ್ರ ವಾಹನಗಳ ಬೆಲೆ ಶೇ 2.5ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ತಕ್ಷಣದಿಂದ ಜಾರಿಗೆ ಬರುವಂತೆ ತನ್ನ ಎಲ್ಲ ಮಾದರಿಯ ವಾಹನಗಳ ಬೆಲೆಯನ್ನು ಶೇಕಡ 2.5ರಷ್ಟು ಹೆಚ್ಚಳ ಮಾಡಿರುವುದಾಗಿ ಗುರುವಾರ ಹೇಳಿದೆ.

ಇದರಿಂದಾಗಿ ವಾಹನಗಳ ಮಾದರಿ ಮತ್ತು ಆವೃತ್ತಿಗೆ ಅನುಗುಣವಾಗಿ ಎಕ್ಸ್ ಷೋರೂಂ ದರವು ₹ 10 ಸಾವಿರದಿಂದ ₹ 63 ಸಾವಿರದವರೆಗೆ ಏರಿಕೆ ಆಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಉಕ್ಕು, ಅಲ್ಯುಮಿನಿಯಂ ಸೇರಿದಂತೆ ಪ್ರಮುಖ ಲೋಹಗಳ ಬೆಲೆ ನಿರಂತರವಾಗಿ ಹೆಚ್ಚಾಗುತ್ತಿರುವುದೇ ಬೆಲೆ ಏರಿಕೆಗೆ ಕಾರಣ ಎಂದು ಹೇಳಿದೆ. ಸರಕುಗಳ ದರ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿರುವುದರಿಂದ ತಯಾರಿಕಾ ವೆಚ್ಚದಲ್ಲಿ ಏರಿಕೆ ಆಗಿದೆ. ಹೀಗಾಗಿ ದರ ಪರಿಷ್ಕರಣೆಯ ಮೂಲಕ ಅದನ್ನು ಅತ್ಯಲ್ಪ ಪ್ರಮಾಣದಲ್ಲಿ ಗ್ರಾಹಕರಿಗೆ ವರ್ಗಾಯಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

✓ TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

✓ ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC,PUC, Degree ಯವರು ITI ನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

Hotel

ಅಡುಗೆಭಟ್ಟರು ಮತ್ತು ಸಹಾಯಕರು ಬೇಕಾಗಿದ್ದಾರೆ. ರಾಮನಗರದ ಬಳಿಯಿರುವ ರೆಸಾರ್ಟ್‌ನಲ್ಲಿ ಕೆಲಸಕ್ಕೆ, ಊಟ, ವಸತಿಯೊಂದಿಗೆ ಆಕರ್ಷಕ ಸಂಬಳ. ಸಂಪರ್ಕಿಸಿ: 9353191972/ 8867338388

Marketing & Sales

URGENTLY Required Salesmen For Selling Food Products. Should be below the age of 40 years & residing in & around south Bangalore.Attractive salary plus incentive. Contact: 8660499891/8296741193

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಚಿಕ್ಕಮಗಳೂರಿನ ಪ್ರತಿಷ್ಠಿತ ರೆಸಾರ್ಟಿಗೆ ಕೆಳಗಿನ ಅನುಭವಸ್ಥ ಅಭ್ಯರ್ಥಿಗಳು ಬೇಕಾಗಿದ್ದಾರೆ. 1) ಇಲೆಕ್ಟ್ರಿಕಲ್ ಮತ್ತು ಪ್ಲಂಬಿಂಗ್ ಮೆಂಟೆನೆನ್ಸ್ 2) ಸರ್ವಿಸ್ ಬಾಯ್ಸ್ 3) ಆಫೀಸ್ ಅಸಿಸ್ಟೆಂಟ್ (ಮಹಿಳೆ) 4).ಸೌತ್ ಇಂಡಿಯನ್ ಚೆಫ್ 5) ನಾರ್ತ್ ಇಂಡಿಯನ್ + ತಂದೂರ್ ಚೆಫ್ 6) ರಿಸೆಪ್ಷನಿಸ್ಟ್ ಕಮ್ ಅಕೌಂಟೆಂಟ್ (ಮಹಿಳೆ) 7).ಆಪರೇಶನ್ಸ್ ಮ್ಯಾನೇಜರ್. ಅರ್ಹತೆ ಮತ್ತು ಕಾರ್ಯಕ್ಷಮತೆಗೆ ಅನುಗುಣವಾಗಿ ಊಟ, ವಸತಿಯೊಂದಿಗೆ ಆಕರ್ಷಕ ಪ್ಯಾಕೇಜ್ ನೀಡಲಾಗುವುದು. Whatsapp Resume: 9379099855

✓ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT 17800/- 68000/- 9538811223, 9538811104

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

General

PRIME DOUBLE site for sale in a gated community. Location Bagalur, Bangalore, just 14km to International Airport. Only 1250/- per SqftTotal of 2400sqft. Contact: 89516 19777

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಧರ್ಮಸ್ಥಳ: 7022443071

ನಂ.1 ವಶೀಕರಣ ಸ್ಪೆಷಲಿಸ್ಟ್ ತಾಂತ್ರಿಕ್: ಸ್ತ್ರೀಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿಮೋಸ, ಗಂಡಹೆಂಡತಿ ಕಲಹ, ನಾಗಸಾಧುಗಳಿಂದ ವಶೀಕರಣ 3ದಿನಗಳಲ್ಲಿ ಪರಿಹಾರ 6360611244

ಕೇರಳ ಹಾಗೂ ಕೊಳ್ಳೆಗಾಲದ ಪ್ರಸಿದ್ಧ ಮಾಂತ್ರಿಕ ವಶೀಕರಣ ಜ್ಯೋತಿಷ್ಯರು ಇವರು ಎಂತಹ ಕಠಿಣ ಸಮಸ್ಯೆಗಳಿದ್ದರೂ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ. ಮಂಗಳೂರು, ಮೈಸೂರು, ಚಿತ್ರದುರ್ಗ.ಸಂಪರ್ಕಿಸಿ: 9008867041

★ll ಶ್ರೀಕೇದರನಾಥ ll★ ಆರಾಧನೆಯಿಂದ ಆರಾಧನೆಯಿಂದ ಪ್ರೀತಿಪ್ರೇಮ,ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ, ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತಪರಿಹಾರ. 9148773459

ಪ್ರವಾಸ

Travel

ಹಿಮಾಚಲ ಸ್ಪೆಶಲ್ ಸಿಮ್ಲಾ,ಕುಲು,ಮನಾಲಿ ಚಂಡಿಘಡ್ ನೈನಾದೇವಿ ಚಾಮುಂಡಾ ವಜ್ರೇಶ್ವರಿ ವೈಷ್ಣವಿದೇವಿ ಅಮೃತ್-ಸರ್ ಕುರುಕ್ಷೇತ್ರ ಹಾಗು ಚಾರ್-ಧಾಮ್ ಯಾತ್ರೆ. ಬದರಿನಾಥ್ ಕೇದಾರನಾಥ್ ಗಂಗೋತ್ರಿ,ಯುಮುನೋತ್ರಿ, ಹರಿದ್ವಾರ್,ರಿಷಿಕೇಶ್ ಬುಕಿಂಗ್ಗಳಿಗಾಗಿ ಸಂಪರ್ಕಿಸಿ ಆರ್ಕಿಡ್ ಟ್ರಾವಲ್ ಅಂಡ್ ಟೂರ್ಸ್ 9900080793 9880079588

26.06.2022 ಸಪ್ಟಂಬರ್ ಅಕ್ಟೋಬರ್‌ನಲ್ಲಿ 14/20/26 ದಿನಗಳ ಪೂರಿಜಗನ್ನಾಥ್, ಕಾಶಿ,ಗಯಾ,ಅಯೋಧ್ಯ, ನೈಮಿಶಾರಣ್ಯ ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯುಮುನೋತ್ರಿ ಅಮೃತ್‌ಸರ್ ವೈಷ್ಣೋದೇವಿ, ದೆಹಲಿ. ಜುಲೈ ಅಗಸ್ಟ್ ತಿಂಗಳಲ್ಲಿ ಅಮರನಾಥ್ ಮುಕ್ತಿನಾಥ್ 'ಶ್ರೀಸುಧಾ ಟ್ರಾವೆಲ್ಸ್' 080-22429289, 9448119290, 9019301300

28.06.2022 14 ದಿನಗಳು ವಿಮಾನ A/C ಬಸ್ಸಿನಲ್ಲಿ ಅಮರನಾಥ್,ದೆಹಲಿ ವೈಷ್ಣೋದೇವಿ,ಕಾಶ್ಮೀರ್ ಕಾಂಗ್ಡಾದೇವಿ ಅಮೃತ್‌ಸರ್ ಇತ್ಯಾದಿ. 02.10.2022 15 ದಿನಗಳು ಚಾರ್‌ಧಾಮ್ ಇತ್ಯಾದಿ. ಊಟ ವಸತಿಯೊಂದಿಗೆ ಸಂಪರ್ಕಿಸಿ ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು-4. 9342514289

ಅಂಡಮಾನ್ ಹವಳದ್ವೀಪ 5ದಿನಗಳು ವಿಮಾನದಲ್ಲಿ ಏಪ್ರಿಲ್, ಮೇ, ಜೂನ್ನಲ್ಲಿ Royal Package. 10/07/2022 13/17 ದಿನಗಳು ದೆಹಲಿ, ಅಮೃತಸರ, ವೈಷ್ಣವದೇವಿ, ಅಮರನಾಥ್ ಕಾಶ್ಮೀರ, ಇತ್ಯಾದಿ. 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9739847429/ 9845560219.

15 ದಿನಗಳ ಕಾಶಿ,ದೆಹಲಿ ಪ್ರವಾಸ. 17ದಿನಗಳ ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಚಾರ್‌ಧಾಮ್ ಮತ್ತು ಜೂನ್ ಜುಲೈನಲ್ಲಿ ಅಮರನಾಥ್ ಪ್ರವಾಸ. ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರ ಸೇವಸಂಘ, ಗಿರಿನಗರ ಬೆಂಗಳೂರು 9916473906 8861111568

★13.5.2022 ರಿಂದ★ 16ದಿನಗಳ ಯಾತ್ರೆ ಭುವನೇಶ್ವರ, ಕಾಶಿ, ಗಯಾ, ಅಲಹಾಬಾದ್, ಅಯೋಧ್ಯೆ, ಅಮೃತಸರ, ವೈಷ್ಣೋದೇವಿ. ಜೈ ಕರ್ನಾಟಕ ಟೂರ್ಸ್: 9480588568

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 02/05/22 ದೆಹಲಿ, ವೈಷ್ಣೋದೇವಿ.09/05/22 ಚಾರ್ಧಾಮ್ ಯಾತ್ರಾ.26/05/22 ಕಾಶಿ, ಜಾರ್ಖಂಡ್ ವೈದ್ಯನಾಥ. 26/05/22 ರಾಮೇಶ್ವರಂ. 9964527782

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ (ಸೂಚನೆ)

ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ಹುತ್ತನಹಳ್ಳಿ ದಾಖಲೆ, ಕೋಳಿಪುರ ಗ್ರಾಮದ, ಶ್ರೀಮತಿ. ನರಸಮ್ಮ ಕೋಂ ಆನಂತರಾಮಯ್ಯ ಮತ್ತು ಇವರ ಮಕ್ಕಳಾದ ಕೆಂಪೇಗೌಡ, ಮುನಿರಾಜು, ಕೆಂಪಮ್ಮ ಮತ್ತು ಶಾರದಮ್ಮರವರು ನಮ್ಮ ಕಕ್ಷಿದಾರರಾಗಿದ್ದು, ಇವರು ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ, ದೇವನಹಳ್ಳಿ, ಮೂಲ ದಾವ ಸಂಖ್ಯೆ: 854/2015 ರಂತೆ, ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳಿಗೆ ಸಂಬಂಧಿಸಿದಂತೆ ತಮ್ಮ 1/3ನೇ ಭಾಗಾಂಶ ಕೋರಿ ವಿಭಾಗಕ್ಕಾಗಿ ದಾವಾ ಸಲ್ಲಿಸಿದ್ದು ಸದರಿ ದಾವೆಯು ವಿಚಾರಣೆಯ ಹಂತದಲ್ಲಿರುತ್ತದೆ.

ಈ ಸನ್ನಿವೇಶದಲ್ಲಿ, ಸದರಿ ದಾವಾದ ಪ್ರತಿವಾದಿಗಳಾದ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ಹುತ್ತನಹಳ್ಳಿ ದಾಖಲೆ, ಕೋಳಿಪುರ ಗ್ರಾಮದ, ದಿವಂಗತ ಹನುಮಂತರಾಯರವರ ಮಡದಿ, ಶ್ರೀಮತಿ. ಅಕ್ಕಮ್ಮ ಮತ್ತು ಇವರ ಮಕ್ಕಳಾದ ಶಿವಣ್ಣ, ಗೋವಿಂದಪ್ಪ, ಚಿಕ್ಕಆಂಜನಪ್ಪ, ಗೋಪಾಲಕೃಷ್ಣ, ಚಂದ್ರಶೇಖರ, ರಾಧಮ್ಮ, ದೇವರಾಜು ಮತ್ತು ಶ್ರೀಮತಿ ಅಂಜಿನಮ್ಮ, ಅಶ್ವತಪ್ಪ ಬಿನ್ ಲೇ. ಕೃಷ್ಣಪ್ಪ ರವರುಗಳು, ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳನ್ನು, ನಮ್ಮ ಕಕ್ಷಿದಾರರಿಗೆ ಕಾನೂನಿನಲ್ಲಿ ಬರಬೇಕಾದ ಭಾಗವನ್ನು ಕೊಡದೇ, ಮೋಸ ಮಾಡುವ ಉದ್ದೇಶದಿಂದ ಮಾರಾಟ ಮಾಡಲು ಮುಂದಾಗಿರುತ್ತಾರೆಂದು ಮತ್ತು ಕೆಳಗೆ ನಮೂದಿಸಿರುವ 1ನೇ ಮತ್ತು 2ನೇ ಜಮೀನುಗಳಲ್ಲಿ ಆದರ್ಶ ಗ್ರೂಪ್ ರವರು ನಿವೇಶನಗಳು ಮತ್ತು ವಿಲ್ಲಾಗಳನ್ನು ಮಾಡಿ, ಮೇಲೆ ತಿಳಿಸಿದ ಮೂಲ ದಾವೆ ಇನ್ನೂ ವಿಚಾರಣೆ ಹಂತದಲ್ಲಿರುವುದು ಅವರ ಗಮನದಲ್ಲಿದ್ದರೂ ಸಹಾ ಮಾರಾಟ ಮಾಡಲು ಪ್ರಯತ್ನಿಸುತ್ತಿರುವುದು ನಮ್ಮ ಕಕ್ಷಿದಾರರ ಗಮನಕ್ಕೆ ಬಂದಿರುತ್ತದೆ. ಆದುದರಿಂದ ಸಾರ್ವಜನಿಕ ಗಮನಕ್ಕೆ ತರುವುದೇನೆಂದರೆ, ದಾವಾ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು ಅದರಲ್ಲಿ ಕಟ್ಟಿರುವ ಕಟ್ಟಡಗಳನ್ನು ಖರೀದಿಸುವ ಮೊದಲು ಸದರಿ ಜಮೀನುಗಳಲ್ಲಿ ನಮ್ಮ ಕಕ್ಷಿದಾರರ ಕಾನೂನುಬದ್ಧ 1/3ನೇ ಹಕ್ಕು/ ಭಾಗ/ ಹಿತಾಸಕ್ತಿ ಇರುತ್ತದೆ ಎಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲು ಬಯಸುತ್ತೇನೆ.

ದಾವಾ ಸ್ವತ್ತುಗಳ ವಿವರ

ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ಹುತ್ತನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೇ ನಂಬರುಗಳಾದ:- ಸರ್ವೇ ನಂ.133 ರಲ್ಲಿ 3 ಎಕರೆ 37 ಗುಂಟೆ, ಸರ್ವೇ ನಂ.134 ರಲ್ಲಿ 5 ಎಕರೆ 5 ಗುಂಟೆ, ಸರ್ವೇ ನಂ.66/2 ರಲ್ಲಿ 1 ಎಕರೆ 19 ಗುಂಟೆ ಪೈಕಿ 12 ಗುಂಟೆ, ಸರ್ವೇ ನಂ. 66/3 ರಲ್ಲಿ 3 ಎಕರೆ 14 ಗುಂಟೆ, ಸರ್ವೇ ನಂ. 67/2 ರಲ್ಲಿ 3 ಎಕರೆ 29 ಗುಂಟೆ ಪೈಕಿ 1 ಎಕರೆ 16 ಗುಂಟೆ, ಸರ್ವೇ ನಂ.69/1 ರಲ್ಲಿ 3 ಎಕರೆ 10 ಗುಂಟೆ, ಸರ್ವೇ ನಂ.42/4ಸಿ ರಲ್ಲಿ 2 ಗುಂಟೆ, ಸರ್ವೇ ನಂ.42/1ಸಿ ರಲ್ಲಿ 5 ಗುಂಟೆ, ಸರ್ವೇ ನಂ.41/3 ರಲ್ಲಿ 03 ಗುಂಟೆ, ಸರ್ವೇ ನಂ.52/3 ರಲ್ಲಿ 19 ಗುಂಟೆ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ದೊಡ್ಡಜಾಲ ಅಮಾನಿಕೆರೆ ಸೇರಿದ ಸರ್ವೇ ನಂಬರುಗಳಾದ:- ಸರ್ವೇ ನಂ.77/1 ರಲ್ಲಿ 17 ಗುಂಟೆ, ಸರ್ವೇ ನಂ.77/2 ರಲ್ಲಿ 2 ಎಕರೆ 7 ಗುಂಟೆ, ಸರ್ವೇ ನಂ. 75/2 ರಲ್ಲಿ 36 ಗುಂಟೆ, ಸರ್ವೇ ನಂ. 37 ರಲ್ಲಿ 22 ಗುಂಟೆ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಜಾಲ ಹೋಬಳಿ, ಬಿ.ಕೆ.ಪಾಳ್ಯ ಗ್ರಾಮದ ಸರ್ವೇ ನಂ.7/ಪಿ1ರಲ್ಲಿ 6.00 ಎಕರೆ ಜಮೀನು.

ಡಿ. ಎನ್. ನಾಗರಾಜು, ಮಂಜುನಾಥ ಜಿ. ಕಂಡೇಕರ್, ವಕೀಲರು, ನಂ.10, ಅಪ್ಪಾಜಿ ನಿಲಯ, ವೆಂಕಟಪ್ಪ ಲೇಔಟ್ ಪೂರ್ವ, ಶಾಂತಿನಗರ ದಕ್ಷಿಣ, ದೇವನಹಳ್ಳಿ ಟೌನ್-562110 ಮೊ : 9901048313, 9448448836

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ಸಂಕ್ಷಿಪ್ತ ಸುದ್ದಿ

ಭಾರತ–ಚೀನಾ ವ್ಯಾಪಾರ ವಹಿವಾಟು ಹೆಚ್ಚಳ

ಬೀಜಿಂಗ್ (ಪಿಟಿಐ): ಮಾರ್ಚ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಭಾರತ ಮತ್ತು ಚೀನಾ ನಡುವಿನ ದ್ವಿಪಕ್ಷೀಯ ವ್ಯಾಪಾರ ವಹಿವಾಟು ಶೇಕಡ 15.3ರಷ್ಟು ಹೆಚ್ಚಳ ಆಗಿದ್ದು, ₹ 2.36 ಲಕ್ಷ ಕೋಟಿಗೆ ತಲುಪಿದೆ ಎಂದು ಚೀನಾ ಸರ್ಕಾರ ಮಾಹಿತಿ ನೀಡಿದೆ.

ಈ ಅವಧಿಯಲ್ಲಿ ಚೀನಾದಿಂದ ಭಾರತಕ್ಕೆ ಆಮದು ಆಗುವ ಉತ್ಪನ್ನಗಳ ಮೌಲ್ಯವು ₹ 2.06 ಲಕ್ಷ ಕೋಟಿಗೆ ತಲುಪಿದೆ. ಹಿಂದಿನ ವರ್ಷದಲ್ಲಿ ಭಾರತ–ಚೀನಾ ದ್ವಿಪಕ್ಷೀಯ ವ್ಯಾಪಾರ ವಹಿವಾಟು ದಾಖಲೆಯ ₹ 9.53 ಲಕ್ಷ ಕೋಟಿಗೆ ತಲುಪಿತ್ತು.

ವಹಿವಾಟು ಏರಿಕೆಯ ಪ್ರವೃತ್ತಿಯು ಈ ವರ್ಷದ ಮೊದಲ ತ್ರೈಮಾಸಿಕದಲ್ಲಿ ಕೂಡ ಮುಂದುವರಿದಿದ್ದು, ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 15.3ರಷ್ಟು ಜಾಸ್ತಿ ಆಗಿದೆ ಎಂದು ಸರ್ಕಾರಿ ಸ್ವಾಮ್ಯದ ಗ್ಲೋಬಲ್ ಟೈಮ್ಸ್ ಪತ್ರಿಕೆಯು ವರದಿ ಮಾಡಿದೆ.

‘ಪಾಕ್ ಸೇನೆಗೆ ರಾಜಕೀಯ ನಂಟಿಲ್ಲ’

ಇಸ್ಲಾಮಾಬಾದ್(ಪಿಟಿಐ): ‘ರಾಜಕಾರಣದೊಂದಿಗೆ ಸೇನೆಯು ಯಾವುದೇ ಸಂಬಂಧ ಹೊಂದಿಲ್ಲ. ಭವಿಷ್ಯದಲ್ಲೂ ರಾಜಕೀಯೇತರವಾಗಿಯೇ ಉಳಿಯಲಿದೆ’ ಎಂದು ಪಾಕಿಸ್ತಾನದ ಸೇನೆ ಹೇಳಿದೆ.

ಪಾಕ್‌ನಲ್ಲಿ ಉದ್ಭವಿಸಿದ ರಾಜಕೀಯ ಪ್ರಕ್ಷುಬ್ಧತೆಯ ನಂತರ ವಿರೋಧ ಪಕ್ಷ ನಾಯಕ ಶೆಹಬಾಝ್ ಷರೀಫ್ ಅವರು ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಮೂರು ದಿನಗಳ ನಂತರ ಸೇನೆಯಿಂದ ಈ ಹೇಳಿಕೆ ಹೊರ ಬಿದ್ದಿದೆ

‘ಸೇನಾ ಮುಖ್ಯಸ್ಥ ಜನರಲ್ ಕಮರ್ ಜಾವೇದ್ ಬಾಜ್ವಾ ಅವರು ಪ್ರತಿಪಾದಿಸಿರುವಂತೆ ಅಧಿಕಾರಾವಧಿ ವಿಸ್ತರಿಸಿಕೊಳ್ಳುವುದಿಲ್ಲ ಮತ್ತು ಅಂತಹ ಆಹ್ವಾನವನ್ನೂ ಅವರು ಒಪ್ಪಿಕೊಳ್ಳುವುದಿಲ್ಲ’ ಎಂದು ಸೇನೆಯ ಮಾಧ್ಯಮ ವಿಭಾಗ ಇಂಟರ್-ಸರ್ವೀಸಸ್ ಪಬ್ಲಿಕ್ ರಿಲೇಶನ್ಸ್‌ನ ಮಹಾನಿರ್ದೇಶಕ ಮೇಜರ್ ಜನರಲ್ ಬಾಬರ್ ಇಫ್ತಿಕರ್ ತಿಳಿಸಿದರು.

ನೀಟ್: ರಾಜ್ಯಪಾಲರ ಸತ್ಕಾರಕೂಟದಿಂದ ಡಿಎಂಕೆ ದೂರ

ಚೆನ್ನೈ (ಪಿಟಿಐ): ತಮಿಳುನಾಡು ವಿದ್ಯಾರ್ಥಿಗಳಿಗೆ ‘ನೀಟ್’ನಿಂದ ವಿನಾಯಿತಿ ನೀಡಬೇಕು ಎಂಬ ವಿಷಯವಾಗಿ ಡಿಎಂಕೆ ನೇತೃತ್ವದ ರಾಜ್ಯ ಸರ್ಕಾರ ಹಾಗೂ ರಾಜ್ಯಪಾಲರ ನಡುವಿನ ಸಂಘರ್ಷಕ್ಕೆ, ತಮಿಳು ಹೊಸ ವರ್ಷ ಅಂಗವಾಗಿ ರಾಜಭವನದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸತ್ಕಾರಕೂಟ ಸಾಕ್ಷಿಯಾಯಿತು.

ರಾಜ್ಯಪಾಲ ಆರ್.ಎನ್.ರವಿ ಅವರು ತಮಿಳು ಹೊಸ ವರ್ಷಾಚರಣೆ ಅಂಗವಾಗಿ ರಾಜಭವನದಲ್ಲಿ ಸತ್ಕಾರ ಕೂಟ ಏರ್ಪಡಿಸಿದ್ದರು. ಆದರೆ, ಆಡಳಿತಾರೂಢ ಪಕ್ಷ ಡಿಎಂಕೆ ಮುಖಂಡರು ಕಾರ್ಯಕ್ರಮದಿಂದ ದೂರ ಉಳಿಯುವ ಮೂಲಕ ಗಮನ ಸೆಳೆದರು.

ಪ್ರವಾಸಿಗರ ಸಂಖ್ಯೆ 12 ಲಕ್ಷಕ್ಕೆ ಏರಿಕೆ ನಿರೀಕ್ಷೆ

‘ಆಸ್ಟ್ರೇಲಿಯಾ ಪ್ರವಾಸಿ ವೀಸಾ: ಶುಲ್ಕರಹಿತ ನವೀಕರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸಾಂಕ್ರಾಮಿಕ ಆವರಿಸಿದ ನಂತರದಲ್ಲಿ ಆಸ್ಟ್ರೇಲಿಯಾದ ಪ್ರವಾಸಿ ವೀಸಾ ಅವಧಿ ಮುಗಿದುಹೋಗಿದ್ದರೆ, ಅದನ್ನು ಶುಲ್ಕವಿಲ್ಲದೆ ನವೀಕರಿಸಿಕೊಳ್ಳುವ ಅವಕಾಶವನ್ನು ಆಸ್ಟ್ರೇಲಿಯಾ ಸರ್ಕಾರ ಕಲ್ಪಿಸಿದೆ.

‘2020ರ ಮಾರ್ಚ್ 20ರಿಂದ ಈ ವರ್ಷದ ಜೂನ್ 30ರ ನಡುವಿನ ಅವಧಿಯಲ್ಲಿ ಪ್ರವಾಸಿ ವೀಸಾ ಅವಧಿ ಮುಗಿಯುತ್ತದೆ ಎಂದಾದರೆ, ಅಂತಹ ವೀಸಾ ಹೊಂದಿರುವವರು ಅರ್ಜಿ ಶುಲ್ಕ ವಿನಾಯಿತಿಯ ಪ್ರಯೋಜನ ಪಡೆಯಬಹುದು. ಅವರು ವೀಸಾ ನವೀಕರಣಕ್ಕೆ ಡಿಸೆಂಬರ್ 31ಕ್ಕೆ ಮೊದಲು ಅರ್ಜಿ ಸಲ್ಲಿಸಬೇಕು’ ಎಂದು ಟೂರಿಸಂ ಆಸ್ಟ್ರೇಲಿಯಾ ಸಂಸ್ಥೆಯ ಭಾರತ ಮತ್ತು ಕೊಲ್ಲಿ ರಾಷ್ಟ್ರಗಳ ವ್ಯವಸ್ಥಾಪಕ ನಿಶಾಂತ್ ಕಾಶಿಕರ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಭಾರತದಿಂದ ಆಸ್ಟ್ರೇಲಿಯಾಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯು 2035ರ ವೇಳೆಗೆ 12 ಲಕ್ಷಕ್ಕೆ ಏರಿಕೆ ಆಗುವ ನಿರೀಕ್ಷೆ ಇದೆ ಎಂದರು. 2019ರಲ್ಲಿ ಭಾರತದಿಂದ ಆಸ್ಟ್ರೇಲಿಯಾಕ್ಕೆ 4 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದರು, ಈ ಪೈಕಿ ಬೆಂಗಳೂರಿನಿಂದ ಬಂದವರ ಸಂಖ್ಯೆ 41 ಸಾವಿರ ಆಗಿತ್ತು. ಬೆಂಗಳೂರಿನಿಂದ ಬಂದಿದ್ದವರು ಆಸ್ಟ್ರೇಲಿಯಾ ಅರ್ಥ ವ್ಯವಸ್ಥೆಗೆ ₹ 1,040 ಕೋಟಿ ಕೊಡುಗೆ ನೀಡಿದ್ದಾರೆ ಎಂದರು.

ದೀರ್ಘ ಅವಧಿಗೆ ಪ್ರವಾಸ ಹೋಗಲು ಬಯಸುವ 22 ಲಕ್ಷ ಭಾರತೀಯ ಪ್ರವಾಸಿಗರ ಪೈಕಿ 18 ಲಕ್ಷ ಮಂದಿ ಇನ್ನು ಎರಡು ವರ್ಷಗಳೊಳಗೆ ಆಸ್ಟ್ರೇಲಿಯಾಕ್ಕೆ ಹೋಗಲು ಬಯಸಿದ್ದಾರೆ ಎಂದು ಸಮೀಕ್ಷೆಯೊಂದು ಹೇಳಿದೆ. ಸೆಪ್ಟೆಂಬರ್ 14ರಿಂದ ಬೆಂಗಳೂರಿನಿಂದ ಸಿಡ್ನಿಗೆ ಕ್ವಾಂಟಾಸ್ ಏರ್‌ಲೈನ್ಸ್ ವಾರದಲ್ಲಿ ನಾಲ್ಕು ದಿನ ನೇರ ವಿಮಾನ ಪ್ರಯಾಣ ಆರಂಭಿಸಲಿದೆ. ಎರಡು ಡೋಸ್ ಕೊವಿಡ್ ಲಸಿಕೆ ಪಡೆದವರು ಆಸ್ಟ್ರೇಲಿಯಾದಲ್ಲಿ ಪ್ರತ್ಯೇಕವಾಸದಲ್ಲಿ ಇರುವ ಅಗತ್ಯ ಇಲ್ಲ ಎಂದು ಅವರು ವಿವರಿಸಿದರು.

ಹೋಂಡಾ ಸಿಟಿ ಇ–ಎಚ್‌ಇವಿ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಂಡಾ ಕಾರ್ಸ್ ಇಂಡಿಯಾ ಕಂಪನಿಯು ಗುರುವಾರ ಹೊಸ ‘ಸಿಟಿ ಇ–ಎಚ್‌ಇವಿ’ ಮಾದರಿಯನ್ನು ಅನಾವರಣ ಮಾಡಿದ್ದು, ಮುಂದಿನ ತಿಂಗಳು ಇದು ಮಾರುಕಟ್ಟೆಗೆ ಬಿಡುಗಡೆ ಆಗಲಿದೆ.

ಇ–ಎಚ್‌ಇವಿ ಮೂಲಕ ಕಂಪನಿಯು ದೇಶದ ಹೈಬ್ರಿಡ್ ಎಲೆಕ್ಟ್ರಿಕ್ ವಾಹನ ವಿಭಾಗ ಪ್ರವೇಶಿಸಿದೆ. ಈ ಕಾರು ಸೆಲ್ಫ್ ಚಾರ್ಜಿಂಗ್ ಮತ್ತು ಎರಡು ಮೋಟರ್‌ಗಳ ಇ-ಸಿವಿಟಿ ಹೈಬ್ರಿಡ್ ಸಿಸ್ಟಂ ಹೊಂದಿದೆ. 1.5 ಲೀಟರ್ ಅಟ್ಕಿನ್ಸನ್-ಸೈಕಲ್ ಡಿಒಎಚ್‌ಸಿ ಐ-ವಿಟೆಕ್ ಪೆಟ್ರೋಲ್ ಎಂಜಿನ್, ಸುಧಾರಿತ ಲೀಥಿಯಂ ಅಯಾನ್ ಬ್ಯಾಟರಿ ಮತ್ತು ಎಂಜಿನ್ ಲಿಂಕ್ಡ್ ಡೈರೆಕ್ಟ್ ಕಪ್ಲಿಂಗ್ ಕ್ಲಚ್ ಒಳಗೊಂಡಿದೆ.

ಇ.ವಿ. ಡ್ರೈವ್ ಮೋಡ್, ಹೈಬ್ರಿಡ್ ಡ್ರೈವ್ ಮೋಡ್ ಮತ್ತು ಎಂಜಿನ್ ಡ್ರೈವ್ ಮೋಡ್... ಹೀಗೆ ಮೂರು ರೀತಿಯ ಡ್ರೈವಿಂಗ್ ಆಯ್ಕೆಗಳಲ್ಲಿ ಇದು ಲಭ್ಯವಿದೆ. ಇದರ ಬ್ಯಾಟರಿ ಚಾರ್ಜ್ ಮಾಡಲು ಮ್ಯಾನುಯಲ್ ಚಾರ್ಜರ್ ಅಗತ್ಯ ಇಲ್ಲ. ಸ್ವಯಂಚಾಲಿತವಾಗಿ ಚಾರ್ಜ್ ಆಗುತ್ತದೆ.

ಪ್ರತಿ ಲೀಟರಿಗೆ 26.5 ಕಿಲೋ ಮೀಟರ್ ಇಂಧನ ದಕ್ಷತೆಯನ್ನು ನೀಡಲಿದೆ.

ರಾಜಸ್ಥಾನದ ತಪುಕರಾ ಘಟಕದಲ್ಲಿ ಇದನ್ನು ತಯಾರಿಸಲಾಗುತ್ತದೆ. ಇದರ ಮುಂಗಡ ಬುಕಿಂಗ್ ಆರಂಭ ಆಗಿದ್ದು, ಹೊಂಡಾ ಡೀಲರ್‌ಶಿಪ್‌ಗಳಲ್ಲಿ ₹ 21 ಸಾವಿರ ಪಾವತಿಸಿ ಬುಕ್ ಮಾಡಬಹುದು. ಹೋಂಡಾ ಕಾರ್ಸ್ ಜಾಲತಾಣದ ಹೋಂಡಾ ಪ್ರಮ್ ಹೋಮ್ ವೇದಿಕೆಯಲ್ಲಿ ₹ 5 ಸಾವಿರ ಪಾವತಿಸಿಯೂ ಬುಕ್ ಮಾಡಬಹುದು.

ಹೋಂಡಾ ಸೆನ್ಸಿಂಗ್: ಚಾಲನೆಯ ವೇಳೆ ಅಪಘಾತ ಆಗುವುದನ್ನು ತಡೆಯಲು ‘ಹೋಂಡಾ ಸೆನ್ಸಿಂಗ್’ ಸುಧಾರಿತ ತಂತ್ರಜ್ಞಾನ ಆಗಿದೆ. ಮುಂದಿನ ಕ್ಯಾಮೆರಾ ಬಳಸಿಕೊಂಡು ರಸ್ತೆ ಅಪಘಾತ ತಡೆಯಲು ಇದು ನೆರವಾಗುತ್ತದೆ.

‘ಸಿಟಿ ಇ–ಎಚ್‌ಇವಿ ಮೂಲಕ ಭಾರತದಲ್ಲಿ ನಮ್ಮ ವಿದ್ಯುತ್ ಚಾಲಿತ ವಾಹನ ಪ್ರಯಾಣ ಆರಂಭಿಸಿದ್ದೇವೆ. ಭಾರತ ಸರ್ಕಾರವು ಭಾರತದಲ್ಲಿಯೇ ತಯಾರಿಸಿ ಅಭಿಯಾನದ ಜೊತೆಗೆ ಸುರಕ್ಷತೆಗೂ ಹೆಚ್ಚು ಒತ್ತು ನೀಡುತ್ತಿದೆ’ ಎಂದು ಹೋಂಡಾ ಕಾರ್ಸ್ ಇಂಡಿಯಾದ ಅಧ್ಯಕ್ಷ ತಕುಯಾ ಸುಮುರಾ ಹೇಳಿದರು.

₹ 7.6 ಲಕ್ಷ ಕೋಟಿ ಎಫ್‌ಡಿಐ ನಿರೀಕ್ಷೆ



ನವದೆಹಲಿ (ಪಿಟಿಐ): ಭಾರತವು 2022–23ನೇ ಹಣಕಾಸು ವರ್ಷದಲ್ಲಿ ₹ 7.60 ಲಕ್ಷ ಕೋಟಿ ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಆಕರ್ಷಿಸುವ ನಿರೀಕ್ಷೆ ಇದೆ ಎಂದು ಉದ್ಯಮ ಸಂಘಟನೆಯಾದ ಪಿಎಚ್‌ಡಿಸಿಸಿಐ ಗುರುವಾರ ಹೇಳಿದೆ.

ಆರ್ಥಿಕ ಸುಧಾರಣೆ ಮತ್ತು ಸುಲಲಿತ ವಹಿವಾಟು ನಡೆಸಲು ಈಚಿನ ವರ್ಷಗಳಲ್ಲಿ ತೆಗೆದುಕೊಂಡಿರುವ ಕ್ರಮಗಳಿಂದಾಗಿ ಎಫ್‌ಡಿಐ ಹೆಚ್ಚಾಗುವ ನಿರೀಕ್ಷೆ ಮಾಡಿರುವುದಾಗಿ ಅದು ತಿಳಿಸಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಶೇ 8ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆ ಮಾಡಿರುವುದಾಗಿಯೂ ಹೇಳಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹455
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹457

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1600)
ಸೋಯಾ (ರಿಫೈನ್ಡ್)	₹1537 (1515)
ಸೂರ್ಯಕಾಂತಿ (ರಿಫೈನ್ಡ್)	₹1740 (1725)
ಪಾಮೋಲಿನ್	₹1492 (1470)

ಮುಂಬೈ ಧಾರಣೆ

ಶೇಂಗಾ

14-4-2022

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10200-10250
ದಪ್ಪ ಮಧ್ಯಪ್ರದೇಶ(ಹೊಸ)	11050-11100
ದಪ್ಪ ಗುಜರಾತ್(ಹೊಸ)	9950-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1590)
ಒಂದು ವಾರದ ಡೆಲಿವರಿ	1605 (1585)
ಸೋಯಾ ಕಚ್ಚಾ	1500 (1475)
ಪಾಮ್ ವಾರದ ಡೆಲಿವರಿ	1490 (1469)
ಸೂರ್ಯಕಾಂತಿ ಎಣ್ಣೆ ಕಚ್ಚಾ	1650 (1650)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,850 (53,050)
ಬೆಳ್ಳಿ ಕೆ.ಜಿ 69,200 (69,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	505

ರಾಮನಗರ ರೇಷ್ಮೆಗೂಡು

ಮಿಶ್ರ ತಳಿ	400-693
ದ್ವಿತಳಿ	337-830

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ		ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	16000	16100	236.60 ಸೆಂಟ್ಸ್
ಎಸಿ	8400	8000	8575	
ಆರ್‌ಪಿ	9300	9000	9250	ಲಂಡನ್
ಆರ್‌ಸಿ	4265	4050	4200	2108 ಡಾಲರ್ಸ್

ರಾಜಸ್ಥಾನ ರಾಯಲ್ಸ್ ವಿರುದ್ಧ ಹಾರ್ದಿಕ್ ಪಾಂಡ್ಯ, ಅಭಿನವ್ ಅಬ್ಬರ: ಯಶ್, ಲಾಕಿ ಮಿಂಚು

ಟೈಟನ್ಸ್‌ಗೆ ಹ್ಯಾಟ್ರಿಕ್ ಗೆಲುವು

ನವಿ ಮುಂಬೈ (ಪಿಟಿಐ): ನಾಯಕ ಹಾರ್ದಿಕ್ ಪಾಂಡ್ಯ ಮತ್ತು ಕನ್ನಡಿಗ ಅಭಿನವ್ ಮನೋಹರ್ ಅವರು ಇಲ್ಲಿನ ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ಅಬ್ಬರದ ಬ್ಯಾಟಿಂಗ್ ಪ್ರದರ್ಶಿಸಿದರು.

ಎಡಗೈ ವೇಗಿ ಯಶ್ ದಯಾಳ್ ಮತ್ತು ಮಧ್ಯಮ ವೇಗಿ ಲಾಕಿ ಫರ್ಗ್ಯುಸನ್ ಬೌಲಿಂಗ್‌ನಲ್ಲಿ ಮಿಂಚು ಹರಿಸಿದರು. ಇದರ ಪರಿಣಾಮ ಗುಜರಾತ್ ಟೈಟನ್ಸ್ ತಂಡ ಭರ್ಜರಿ ಜಯ ಗಳಿಸಿತು.

ಗುರುವಾರ ರಾತ್ರಿ ನಡೆದ ರಾಜಸ್ಥಾನ ರಾಯಲ್ಸ್ ಎದುರಿನ ಐಪಿಎಲ್ ಪಂದ್ಯದಲ್ಲಿ ಗುಜರಾತ್ 37 ರನ್‌ಗಳಿಂದ ಗೆದ್ದಿತು. ಈ ಮೂಲಕ ಗೆಲುವಿನ ಹ್ಯಾಟ್ರಿಕ್ ಸಾಧನೆ ಮಾಡಿತು.

193 ರನ್‌ಗಳ ಜಯದ ಗುರಿ ಬೆನ್ನತ್ತಿದ ರಾಜಸ್ಥಾನ್ ತಂಡದ ಆರಂಭಿಕ ಬ್ಯಾಟರ್ ದೇವದತ್ತ ಪಡಿಕ್ಕಲ್ ಶೂನ್ಯಕ್ಕೆ ಔಟಾದರು. ಅವರ ಜೊತೆ ಇನಿಂಗ್ಸ್ ಆರಂಭಿಸಿದ ಜೋಸ್ ಬಟ್ಲರ್ ಸ್ಫೋಟಕ ಬ್ಯಾಟಿಂಗ್ ಮಾಡಿ ಭರವಸೆ ಮೂಡಿಸಿದರು. ಮಧ್ಯಮ ಕ್ರಮಾಂಕದ ಶಿಮ್ರೊನ್ ಹೆಟ್ಮೆಯರ್ ಕೂಡ ಸ್ವಲ್ಪ ಪ್ರತಿರೋಧ ಒಡ್ಡಿದರು. ಉಳಿದ ಬ್ಯಾಟರ್‌ಗಳೆಲ್ಲ ವೈಫಲ್ಯ ಕಂಡರು. 9 ವಿಕೆಟ್‌ಗಳಿಗೆ 155 ರನ್ ಗಳಿಸಲಷ್ಟೇ ತಂಡಕ್ಕೆ ಸಾಧ್ಯವಾಯಿತು.

ಹಾರ್ದಿಕ್-ಅಭಿನವ್ ಜೊತೆಯಾಟದ ಸೊಬಗು: ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ರಾಜಸ್ಥಾನ ರಾಯಲ್ಸ್ ತಂಡದ ನಾಯಕ ಸಂಜು ಸ್ಯಾಮ್ಸನ್ ಅವರ ತಂತ್ರಗಾರಿಕೆಯು ಆರಂಭದಲ್ಲಿ ಫಲ ನೀಡಿತು. ಯುವಪ್ರತಿಭೆ ಕುಲದೀಪ್ ಸೇನ್ ಮತ್ತು ರಿಯಾನ್ ಪರಾಗ್ ಅವರ ನಿಖರ ದಾಳಿಯಿಂದಾಗಿ ಗುಜರಾತ್ ಆರಂಭದಲ್ಲಿ ಪೆಟ್ಟು ತಿಂದಿತು.

53 ರನ್‌ಗಳಿಗೆ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿತು. ಈ ಹಂತದಲ್ಲಿ ಜೊತೆಯಾದ ನಾಯಕ ಹಾರ್ದಿಕ್ (ಔಟಾಗದೆ 87; 52ಎ, 4X8, 6X4) ಮತ್ತು ಬೆಂಗಳೂರು ಹುಡುಗ ಅಭಿನವ್ (43; 28ಎ) ಇನಿಂಗ್ಸ್ ಚಿತ್ರಣ ಬದಲಿಸಿದರು. ಇದರಿಂದಾಗಿ ಗುಜರಾತ್ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 192 ರನ್ ಗಳಿಸಿತು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ಹಾರ್ದಿಕ್ ಮತ್ತು ಅಭಿನವ್ 86 ರನ್ ಸೇರಿಸಿದರು.

ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ವ್ಯಾನ್ ಡರ್ ಡಸೆನ್ (12 ರನ್) ರನ್‌ಔಟ್ ಆಗುವುದರೊಂದಿಗೆ ಗುಜರಾತ್ ತಂಡಕ್ಕೆ ಮೊದಲ ಆಘಾತವಾಯಿತು. ನಂತರದ ಓವರ್‌ನಲ್ಲಿ ವಿಜಯಶಂಕರ್ ವಿಕೆಟ್ ಗಳಿಸಿದ ಕುಲದೀಪ್ ಸಂಭ್ರಮಿಸಿದರು. ಇನ್ನೊಂದು ಬದಿಯಲ್ಲಿದ್ದ ಯುವ ಬ್ಯಾಟರ್ ಶುಭಮನ್ ಗಿಲ್ (13; 14ಎ) ತಾಳ್ಮೆಯಿಂದ ಆಡುತ್ತಿದ್ದರು. ಈ ಸಂದರ್ಭದಲ್ಲಿ ಕ್ರೀಸ್‌ಗೆ ಬಂದ ಹಾರ್ದಿಕ್ ಆರಂಭದಿಂದಲೇ ಬೌಲರ್‌ಗಳನ್ನು ದಂಡಿಸಿದರು. ಕಳೆದ ಪಂದ್ಯದಲ್ಲಿ ಅರ್ಧಶತಕ ಗಳಿಸಿದ್ದ ಪಾಂಡ್ಯ ಇಲ್ಲಿಯೂ ಮಿಂಚಿನಾಟವಾಡಿದರು. ಆದರೆ, ಏಳನೇ ಓವರ್‌ನಲ್ಲಿ ರಿಯಾನ್ ಸ್ಪಿನ್ ಎಸೆತಕ್ಕೆ ಗಿಲ್ ಔಟಾದರು.

ಹಾರ್ದಿಕ್ ಜೊತೆ ಸೇರಿದ ಅಭಿನವ್ ಕೂಡ ಬೀಸಾಟ ಆರಂಭಿಸಿದರು. ರಾಯಲ್ಸ್ ಲೆಕ್ಕಾಚಾರಗಳೆಲ್ಲ ಮಣ್ಣುಪಾಲಾದವು. ಅಭಿನವ್ ನಾಲ್ಕು ಬೌಂಡರಿ ಮತ್ತು ಎರಡು ಸಿಕ್ಸರ್ ಸಿಡಿಸಿದರು. ಅರ್ಧಶತಕದತ್ತ ದಾಪುಗಾಲಿಟ್ಟಿದ್ದ ಅಭಿನವ್ ಆಟಕ್ಕೆ ಲೆಗ್‌ಸ್ಪಿನ್ನರ್ ಚಾಹಲ್ 16ನೇ ಓವರ್‌ನಲ್ಲಿ ತಡೆಯೊಡ್ಡಿದರು.

ಡೇವಿಡ್ ಮಿಲ್ಲರ್ (ಔಟಾಗದೆ 31) ಅವರು ಹಾರ್ದಿಕ್ ಜೊತೆಗೆ ಮುರಿಯದ ಐದನೇ ವಿಕೆಟ್ ಜೊತೆಯಾಟದಲ್ಲಿ 53 ರನ್ ಸೇರಿಸಿದರು. ಈ ರನ್‌ಗಳು ಬಂದಿದ್ದು ಕೊನೆಯ ನಾಲ್ಕು ಓವರ್‌ಗಳಲ್ಲಿ!

ಹಾರ್ದಿಕ್ ಪಾಂಡ್ಯ –ಪಿಟಿಐ ಚಿತ್ರ



ಜೋಸ್ ಬಟ್ಲರ್ ವಿಕೆಟ್ ಗಳಿಸಿದ ಲಾಕಿ ಫರ್ಗ್ಯುಸನ್ ಸಂಭ್ರಮ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್ 4ಕ್ಕೆ 192 (20 ಓವರ್)

ವೇಡ್ ರನ್ ಔಟ್ (ಡುಸೆನ್) 12 (6 ಎ, 4x3), ಶುಭಮನ್ ಸಿ ಹೆಟ್ಮೆಯರ್ ಬಿ ರಯಾನ್ 13 (14 ಎ, 4x2), ವಿಜಯ ಸಿ ಸಂಜು ಬಿ ಸೇನ್ 2 (7 ಎ), ಹಾರ್ದಿಕ್ ಔಟಾಗದೆ 87 (52 ಎ, 4x8, 6x4), ಅಭಿನವ್ ಸಿ ಅಶ್ವಿನ್ ಬಿ ಚಾಹಲ್ 43 (28 ಎ, 4x4, 6x2), ಮಿಲ್ಲರ್ ಔಟಾಗದೆ 31 (14 ಎ, 4x5, 6x1)

ಇತರೆ (ನೋ ಬಾಲ್ 1, ವೈಡ್ 3) 4

ವಿಕೆಟ್ ಪತನ: 1-12 (ಮ್ಯಾಥ್ಯೂ ವೇಡ್, 1.2), 2-15 (ವಿಜಯ ಶಂಕರ್, 2.5), 3-53 (ಶುಭಮನ್ ಗಿಲ್, 6.4), 4-139 (ಅಭಿನವ್ ಮನೋಹರ್, 15.5)

ಬೌಲಿಂಗ್: ಜೇಮ್ಸ್ ನೀಶಮ್ 3–0–29–0, ಪ್ರಸಿದ್ಧ ಕೃಷ್ಣ 4–0–35–0, ಕುಲದೀಪ್ ಸೇನ್ 4–0–51–1, ಯಜುವೇಂದ್ರ ಚಾಹಲ್ 4–0–32–1, ರಿಯಾನ್ ಪರಾಗ್ 1–0–12–1, ರವಿಚಂದ್ರನ್ ಅಶ್ವಿನ್ 4–0–33–0

ರಾಜಸ್ಥಾನ ರಾಯಲ್ಸ್ 9ಕ್ಕೆ 155 (20 ಓವರ್)

ಬಟ್ಲರ್ ಬಿ ಫರ್ಗ್ಯುಸನ್ 54 (24 ಎ, 4x8, 6x3), ದೇವದತ್ತ ಸಿ ಶುಭಮನ್ ಬಿ ಯಶ್ 0 (1 ಎ), ರವಿಚಂದ್ರನ್ ಸಿ ಮಿಲ್ಲರ್ ಬಿ ಫರ್ಗ್ಯುಸನ್ 8 (8 ಎ, 6x1), ಸಂಜು ರನ್ ಔಟ್ (ಹಾರ್ದಿಕ್) 11 (11 ಎ, 6x1), ರಸಿ ಸಿ ವೇಡ್ ಬಿ ಯಶ್ 6 (10 ಎ), ಶಿಮ್ರೊನ್ ಸಿ ತೇವಟಿಯಾ ಬಿ ಶಮಿ 29 (17 ಎ, 4x2, 6x1), ರಿಯಾನ್ ಸಿ ಶುಭಮನ್ ಬಿ ಫರ್ಗ್ಯುಸನ್ 18 (16 ಎ, 4x1, 6x1), ಜೇಮ್ಸ್ ಸಿ ಮತ್ತು ಬಿ ಹಾರ್ದಿಕ್ 17 (15 ಎ, 4x1), ಪ್ರಸಿದ್ಧ ಔಟಾಗದೆ 4 (7 ಎ), ಯಜುವೇಂದ್ರ ಬಿ ಯಶ್ 5 (8 ಎ), ಸೇನ್ ಔಟಾಗದೆ 0 (3 ಎ)

ಇತರೆ (ಲೆಗ್‌ಬೈ 1, ವೈಡ್ 2) 3

ವಿಕೆಟ್ ಪತನ: 1-28 (ದೇವದತ್ತ ಪಡಿಕ್ಕಲ್, 1.6), 2-56 (ರವಿಚಂದ್ರನ್ ಅಶ್ವಿನ್, 5.1), 3-65 (ಜೋಸ್ ಬಟ್ಲರ್, 5.6), 4-74 (ಸಂಜು ಸ್ಯಾಮ್ಸನ್, 7.3), 5-90 (ರಸಿ ವ್ಯಾನ್ ಡೆರ್ ಡುಸೆನ್, 10.3), 6-116 (ಶಿಮ್ರೊನ್ ಹೆಟ್ಮೆಯರ್, 12.5), 7-138 (ರಿಯಾನ್ ಪರಾಗ್, 15.6), 8-147 (ಜೇಮ್ಸ್ ನೀಶಮ್, 17.2), 9-155 (ಯಜುವೇಂದ್ರ ಚಾಹಲ್, 19.3)

ಬೌಲಿಂಗ್: ಮೊಹಮ್ಮದ್ ಶಮಿ 4–0–39–1, ಯಶ್ ದಯಾಳ್ 4–0–40–3, ರಶೀದ್ ಖಾನ್ 4–0–24–0, ಲಾಕಿ ಫರ್ಗ್ಯುಸನ್ 4–0–23–3, ರಾಹುಲ್ ತೇವಟಿಯಾ 1–0–9–0, ಹಾರ್ದಿಕ್ ಪಾಂಡ್ಯ 2.3–0–18–1, ವಿಜಯಶಂಕರ್ 0.3–0–1–0

ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ 37 ರನ್‌ಗಳ ಜಯ

ಕೋಲ್ಕತ್ತಗೆ ಸನ್‌ರೈಸರ್ಸ್ ಸವಾಲು

ಗೆಲುವಿನ ಓಟ ಮುಂದುವರಿಸುವತ್ತ ಕೇನ್ ಚಿತ್ತ

ಮುಂಬೈ (ಪಿಟಿಐ): ಟೂರ್ನಿಯ ಆರಂಭದಲ್ಲಿ ಸತತ ಎರಡು ಸೋಲುಗಳ ನಂತರ ಪುಟಿದೆದ್ದಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡವು ಶುಕ್ರವಾರ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಕಣಕ್ಕಿಳಿಯಲಿದೆ.

ಎರಡೂ ತಂಡಗಳಲ್ಲಿ ಸ್ಫೋಟಕ ಬ್ಯಾಟರ್‌ಗಳ ದಂಡು ಇದೆ. ಇದರಿಂದಾಗಿ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ರನ್‌ಗಳ ಹೊಳೆ ಹರಿಯುವ ನಿರೀಕ್ಷೆ ಇದೆ. ಶ್ರೇಯಸ್ ಅಯ್ಯರ್ ನಾಯಕತ್ವದ ಕೋಲ್ಕತ್ತ ತಂಡವು ಐದು ಪಂದ್ಯಗಳಲ್ಲಿ ಮೂರು ಗೆದ್ದು, ಎರಡರಲ್ಲಿ ಸೋತಿದೆ.

ಆ್ಯಂಡ್ರೆ ರಸೆಲ್, ವೆಂಕಟೇಶ್ ಅಯ್ಯರ್, ನಿತೀಶ್ ರಾಣಾ ರನ್‌ಗಳ ಹೊಳೆ ಹರಿಸುವ ಸಮರ್ಥರು. ಅನುಭವಿ ರಹಾನೆ ಲಯಕ್ಕೆ ಮರಳಿದರೆ ಮತ್ತಷ್ಟು ಬಲ ಹೆಚ್ಚಬಹುದು. ಉಮೇಶ್ ಯಾದವ್ ಉತ್ತಮ ಲಯದಲ್ಲಿರುವುದರಿಂದ ಕೋಲ್ಕತ್ತ ತಂಡಕ್ಕೆ ಬೌಲಿಂಗ್ ವಿಭಾಗದಲ್ಲಿ ಹೆಚ್ಚಿನ ಚಿಂತೆಯಿಲ್ಲ. ವರುಣ ಚಕ್ರವರ್ತಿ ಮತ್ತು ಸುನಿಲ್ ನಾರಾಯಣ ಸ್ಪಿನ್ ಬೌಲಿಂಗ್ ವಿಭಾಗವನ್ನು ನಿರ್ವಹಿಸುವ ಸಮರ್ಥರು. ಸನ್‌ರೈಸರ್ಸ್ ತಂಡದಲ್ಲಿರುವ ಸ್ವಿಂಗ್ ಪ್ರತಿಭೆ ಭುವನೇಶ್ವರ್ ಕುಮಾರ್, ಯಾರ್ಕರ್ ಪರಿಣತ ಟಿ. ನಟರಾಜನ್ ಮತ್ತು ಸ್ಪಿನ್ನರ್– ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಮುಂದೆ ಕೋಲ್ಕತ್ತದ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಸವಾಲಿದೆ. ನಾಯಕ ಕೇನ್ ವಿಲಿಯಮ್ಸನ್ ಲಯಕ್ಕೆ ಮರಳಿರುವುದು ತಂಡದ ಬ್ಯಾಟಿಂಗ್ ವಿಭಾಗದಲ್ಲಿ ವಿಶ್ವಾಸ ಮೂಡಿಸಿದೆ. ಯುವಪ್ರತಿಭೆ ಅಭಿಷೇಕ್ ಶರ್ಮಾ ಮತ್ತು ಕೇನ್ ಕಳೆದ ಪಂದ್ಯದಲ್ಲಿ ಉತ್ತಮವಾಗಿ ಆಡಿದ್ದರು.

ರಾಹುಲ್ ತ್ರಿಪಾಠಿ, ನಿಕೊಲಸ್ ಪೂರನ್ ಮತ್ತು ಮರ್ಕರಮ್ ತಮ್ಮ ಲಯ ಕಂಡು ಕೊಂಡರೆ ತಂಡದ ಬ್ಯಾಟಿಂಗ್ ವಿಭಾಗದ ಶಕ್ತಿ ವೃದ್ಧಿಸುವುದು ಖಚಿತ. ತಂಡದಲ್ಲಿರುವ ಕನ್ನಡಿಗ ಲೆಗ್‌ಸ್ಪಿನ್-ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಅವರಿಗೆ ಈ ಪಂದ್ಯದಲ್ಲಿಯೂ ಅವಕಾಶ ಸಿಗುವುದು ಖಚಿತವಿಲ್ಲ.

ಟಿ.ನಟರಾಜನ್

ಉಮೇಶ್ ಯಾದವ್

ಪಂದ್ಯ ಆರಂಭ: ರಾತ್ರಿ 7.30, ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್. ಹಾಟ್‌ಸ್ಟಾರ್

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	272
ಹಾರ್ದಿಕ್	ಗುಜರಾತ್	228
ಶಿವಂ ದುಬೆ	ಪಂಜಾಬ್	207

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	12
ಉಮೇಶ್	ಕೋಲ್ಕತ್ತ	10
ಕುಲದೀಪ್	ಡೆಲ್ಲಿ	10

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	5	4	1	0	0	8	0.450
ಕೋಲ್ಕತ್ತ	5	3	2	0	0	6	0.446
ರಾಜಸ್ಥಾನ	5	3	2	0	0	6	0.389
ಪಂಜಾಬ್	5	3	2	0	0	6	0.239
ಲಖನೌ	5	3	2	0	0	6	0.174
ಬೆಂಗಳೂರು	5	3	2	0	0	6	0.006
ಡೆಲ್ಲಿ	4	2	2	0	0	4	0.476
ಹೈದರಾಬಾದ್	4	2	2	0	0	4	-0.501
ಚೆನ್ನೈ	5	1	4	0	0	2	-0.745
ಮುಂಬೈ	5	0	5	0	0	0	-1.072

*ಗುರುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ರೋಹಿತ್ ಶರ್ಮಾಗೆ ₹ 24 ಲಕ್ಷ ದಂಡ

ಮುಂಬೈ (ಪಿಟಿಐ): ಮುಂಬೈ ಇಂಡಿಯನ್ಸ್ ತಂಡದ ನಾಯಕ ರೋಹಿತ್ ಶರ್ಮಾ ಅವರಿಗೆ ₹24 ಲಕ್ಷ ದಂಡ ವಿಧಿಸಲಾಗಿದೆ. ಪುಣೆಯ ಎಂಸಿಎ ಕ್ರೀಡಾಂಗಣದಲ್ಲಿ ಬುಧವಾರ ಪಂಜಾಬ್ ಕಿಂಗ್ಸ್ ಎದುರು ನಡೆದ ಪಂದ್ಯದಲ್ಲಿ ನಿಗದಿಯ ವೇಳೆಯಲ್ಲಿ ಓವರ್‌ಗಳನ್ನು ಮುಗಿಸದ್ದಕ್ಕೆ ದಂಡ ವಿಧಿಸಲಾಗಿದೆ.

ತಂಡದ ಉಳಿದ ಆಟಗಾರರಿಗೂ ಪಂದ್ಯ ಶುಲ್ಕದ ಶೇ 25ರಷ್ಟನ್ನು ದಂಡ ವಿಧಿಸಲಾಗಿದೆ. ಇದರಿಂದಾಗಿ ತಲಾ ಒಬ್ಬ ಆಟಗಾರನಿಗೆ ಸುಮಾರು ಆರು ಲಕ್ಷ ರೂಪಾಯಿ ದಂಡ ಬೀಳಲಿದೆ. ಪಂದ್ಯದಲ್ಲಿ ಮುಂಬೈ ಸೋತಿತ್ತು.

ವಾಟ್ಸನ್ ‘ಬಿಗ್ ಫೈವ್’ ಬಳಗದಲ್ಲಿ ಕೊಹ್ಲಿ

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ಮಾಜಿ ಕ್ರಿಕೆಟಿಗ ಶೇನ್ ವಾಟ್ಸನ್ ‘ಬಿಗ್ ಫೈವ್’ ಶ್ರೇಷ್ಠ ಬ್ಯಾಟರ್‌ಗಳಲ್ಲಿ ಭಾರತದ ವಿರಾಟ್ ಕೊಹ್ಲಿ ಅವರಿಗೆ ಸ್ಥಾನ ನೀಡಿದ್ದಾರೆ.

ವಾಟ್ಸನ್ ಪಟ್ಟಿಯಲ್ಲಿ ಕೊಹ್ಲಿ ಜೊತೆಗೆ ಆಸ್ಟ್ರೇಲಿಯಾದ ಸ್ಟೀವ್ ಸ್ಮಿತ್, ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್, ಇಂಗ್ಲೆಂಡ್‌ನ ಜೋ ರೂಟ್ ಮತ್ತು ಪಾಕಿಸ್ತಾನದ ಬಾಬರ್ ಆಜಂ ಸ್ಥಾನ ಪಡೆದಿದ್ದಾರೆ.

ಶೇನ್ ವಾಟ್ಸನ್

‘ಟೆಸ್ಟ್ ಕ್ರಿಕೆಟ್‌ನಲ್ಲಿ ನನ್ನ ಮೊದಲ ಆಯ್ಕೆಯಾವಾಗಲೂ ವಿರಾಟ್ ಕೊಹ್ಲಿಯೇ. ಪ್ರತಿ ಸಲ ಬ್ಯಾಟಿಂಗ್‌ಗೆ ಬಂದಾಗಲೂ ಅವರ ಗಾಢವಾದ ಶ್ರದ್ಧೆ ಅನುಕರಣೀಯ. ಅವರೊಬ್ಬ ದಿವ್ಯಮಾನವ’ ಎಂದು ವಾಟ್ಸನ್ ಅವರು ಇಶಾ ಗುಹಾ ಅವರಿಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

‘ಈ ಪಟ್ಟಿಯಲ್ಲಿ ಪಾಕಿಸ್ತಾನದ ಬಾಬರ್ ಆಜಂ ಅವರಿಗೆ ಎರಡನೇ ಸ್ಥಾನ ಕೊಡುತ್ತೇನೆ. ಅವರು ಟೆಸ್ಟ್ ಕ್ರಿಕೆಟ್‌ಗೆ ಹೊಂದಿಕೊಂಡು ಬೆಳೆಯುತ್ತಿರುವ ಪರಿ ಅಮೋಘವಾಗಿದೆ’ ಎಂದರು.

2019ರಿಂದ ಇಲ್ಲಿಯವರೆಗೆ ವಿರಾಟ್ ಯಾವುದೇ ಮಾದರಿಯಲ್ಲಿಯೂ ಶತಕ ಬಾರಿಸಿಲ್ಲ. ಮೂರು ಮಾದರಿಗಳ ತಂಡಗಳ ನಾಯಕತ್ವವನ್ನೂ ಅವರು ಬಿಟ್ಟುಕೊಟ್ಟಿದ್ದಾರೆ.

ಚುಟುಕು ಕ್ರಿಕೆಟ್‌ನಲ್ಲಿ ರೋಹಿತ್ ಹತ್ತು ಸಾವಿರ ರನ್

ಪುಣೆ: ರೋಹಿತ್ ಶರ್ಮಾ ಟ್ವೆಂಟಿ–20 ಕ್ರಿಕೆಟ್ ಮಾದರಿಯಲ್ಲಿ ಹತ್ತು ಸಾವಿರ ರನ್ ಗಳಿಸಿದ ಬ್ಯಾಟರ್‌ಗಳ ಸಾಲಿಗೆ ಸೇರಿದರು. ಬುಧವಾರ ನಡೆದ ಪಂಜಾಬ್ ಕಿಂಗ್ಸ್ ಎದುರಿನ ಪಂದ್ಯದಲ್ಲಿ ರೋಹಿತ್ 28 ರನ್ ಗಳಿಸಿದರು. ಇದರೊಂದಿಗೆ ಅವರು 10 ಸಾವಿರ ರನ್‌ಗಳ ಗಡಿ ದಾಟಿದರು. ಒಟ್ಟು 375 ಟಿ20 ಪಂದ್ಯಗಳನ್ನು ಆಡಿರುವ ಅವರು ಈ ಸಾಧನೆ ಮಾಡಿದ್ದಾರೆ. ಇದರಲ್ಲಿ 69 ಅರ್ಧಶತಕಗಳು ಮತ್ತು ಆರು ಶತಕಗಳು ಸೇರಿವೆ.

ರೋಹಿತ್ ಶರ್ಮಾ

ರಾಮಯ್ಯ ಸಂಸ್ಥೆಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ತಂಡವನ್ನು ಅಮೋಘ ಆಟದ ಮೂಲಕ ಮಣಿಸಿದ ಬೆಂಗಳೂರಿನ ರಾಮಯ್ಯ ಸಂಸ್ಥೆಯ (ಎಂಎಸ್‌ಆರ್‌ಐಟಿ) ತಂಡ ಅಖಿಲ ಭಾರತ ಅಂತರ ಕಾಲೇಜು ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡಿತು.

ಮಣಿಪಾಲ ತಾಂತ್ರಿಕ ಸಂಸ್ಥೆ ಆಯೋಜಿಸಿದ್ದ ಟೂರ್ನಿಯ ಫೈನಲ್‌ನಲ್ಲಿ ಎಂಎಸ್‌ಆರ್‌ಐಟಿ 57–32ರಲ್ಲಿ ಮಣಿಪಾಲ ಎಂಐಟಿ ತಂಡವನ್ನು ಮಣಿಸಿತು. ಪ್ರೀತಮ್ ಮತ್ತು ಪ್ರದ್ಯುಮ್ನ ಗಳಿಸಿದ ತಲಾ 18 ಮತ್ತು 15 ಪಾಯಿಂಟ್‌ಗಳು ಎಂಎಸ್‌ಆರ್‌ಐಟಿ ತಂಡದ ಕೈ ಹಿಡಿದವು. ಮಣಿಪಾಲ ತಂಡಕ್ಕಾಗಿ ನಮನ್ 14 ಮತ್ತು ನಿಪುಣ್ 12 ಪಾಯಿಂಟ್ ಕಲೆ ಹಾಕಿದರು.

ಪ್ರಶಸ್ತಿ ಗೆದ್ದ ಬೆಂಗಳೂರಿನ ರಾಮಯ್ಯ ಸಂಸ್ಥೆಯ ತಂಡ. ನಿಂತವರು (ಎಡದಿಂದ): ಪ್ರದ್ಯುಮ್ನ, ಪ್ರೀತಮ್, ರೋಹನ್, ಸಚಿನ್ ಬೆಳವಾಡಿ (ಕೋಚ್), ವಿಷ್ಣು, ಆನೀಶ್, ದಿನೇಶ್. ಕುಳಿತವರು: ಅಕ್ಷಣ್, ವಶು, ಶ್ರೀನಿವಾಸ್, ಧ್ರುವ್, ಜೋಶುವಾ, ಅಭಿಷೇಕ್.

ಕೌಂಟಿಯಲ್ಲಿ ಪೂಜಾರ ಕಣಕ್ಕೆ

ಡರ್ಬಿ, ಇಂಗ್ಲೆಂಡ್ (ಪಿಟಿಐ): ಭಾರತ ಕ್ರಿಕೆಟ್ ತಂಡದ ಚೇತೇಶ್ವರ್ ಪೂಜಾರ ಮತ್ತು ಪಾಕಿಸ್ತಾನ ತಂಡದ ಮೊಹಮ್ಮದ್ ರಿಜ್ವಾನ್ ಕೌಂಟಿ ಕ್ರಿಕೆಟ್‌ನಲ್ಲಿ ಸಸೆಕ್ಸ್ ತಂಡವನ್ನು ಇದೇ ಮೊದಲ ಬಾರಿ ಪ್ರತಿನಿಧಿಸಲಿದ್ದಾರೆ.

ಚೇತೇಶ್ವರ್ ಪೂಜಾರ

ಆತಿಥೇಯ ಡರ್ಬಿಶೈರ್ ವಿರುದ್ಧ ಕೌಂಟಿ ಚಾಂಪಿಯನ್‌ಷಿಪ್ 2ನೇ ಡಿವಿಷನ್‌ನಲ್ಲಿ ತಂಡವು ಆಡಲಿದೆ. ಟಾಮ್ ಹೇನ್ಸ್ ಈ ತಂಡಕ್ಕೆ ನಾಯಕರಾಗಿದ್ದಾರೆ.

ಕಳೆದ ಕೆಲವು ತಿಂಗಳುಗಳಿಂದ ಫಾರ್ಮ್ ಕಳೆದುಕೊಂಡಿರುವ ಪೂಜಾರ ಟೆಸ್ಟ್ ತಂಡದಲ್ಲಿ ಸ್ಥಾನ ಕಳೆದುಕೊಂಡಿದ್ದಾರೆ. ಕೌಂಟಿಯಲ್ಲಿ ಉತ್ತಮವಾಗಿ ಆಡಿ ಭಾರತ ತಂಡದ ಆಯ್ಕೆ ಸಮಿತಿಯ ಗಮನ ಸೆಳೆಯುವ ಛಲದಲ್ಲಿದ್ದಾರೆ.

ನಿವೃತ್ತಿಗೆ ಅಲಿಸನ್ ನಿರ್ಧಾರ

ವಾಷಿಂಗ್ಟನ್ (ಎಪಿ): ಟ್ರ್ಯಾಕ್‌ನಲ್ಲಿ ಮಿಂಚಿನ ಸಂಚಾರ ಮೂಡಿಸಿರುವ ಅಮೆರಿಕದ ಅಲಿಸನ್ ಫೆಲಿಕ್ಸ್ ನಿವೃತ್ತರಾಗಲು ನಿರ್ಧರಿಸಿದ್ದಾರೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮಿಂಚಿದ ಅವರು ಈ ವರ್ಷದ ಕೊನೆಯಲ್ಲಿ ಟ್ರ್ಯಾಕ್‌ಗೆ ವಿದಾಯ ಹೇಳುವುದಾಗಿ ಬುಧವಾರ ಘೋಷಿಸಿದ್ದಾರೆ.

‘ಈ ಋತುವಿನ ಕ್ರೀಡಾಕೂಟಗಳು ನನಗೆ ಹಿಂದೆಂದಿಗಿಂತಲೂ ಪ್ರಮುಖವಾಗಲಿವೆ. ಈ ಬಾರಿ ನನ್ನನ್ನು ಟ್ರ್ಯಾಕ್‌ನಲ್ಲಿ ನೋಡಲು ಇಚ್ಛಿಸುವವರನ್ನು ನಾನು ಪ್ರತ್ಯೇಕವಾಗಿ ಅಭಿನಂದಿಸುತ್ತೇನೆ’ ಎಂದು ಅವರು ಇನ್‌ಸ್ಟಾಗ್ರಾಮ್‌ನಲ್ಲಿ ಬರೆದುಕೊಂಡಿದ್ದಾರೆ.

35 ವರ್ಷದ ಅಲಿಸನ್ ಅವರು ಟೋಕಿಯೊ ಒಲಿಂಪಿಕ್ಸ್‌ನ 400 ಮೀಟರ್ಸ್ ಓಟದಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದರು. 4x400 ರಿಲೆಯಲ್ಲಿ ಚಿನ್ನ ಗೆದ್ದ ತಂಡದಲ್ಲಿ ಅವರಿದ್ದರು. ಈ ಮೂಲಕ ಒಟ್ಟು 11 ಪದಕಗಳನ್ನು ಗೆದ್ದ ಸಾಧನೆ ಮಾಡಿದ್ದರು. ಇದು ಅಮೆರಿಕದ ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್ ಒಬ್ಬರು ಒಲಿಂಪಿಕ್ಸ್‌ನಲ್ಲಿ ಗೆದ್ದ ಅತಿ ಹೆಚ್ಚು ಪದಕಗಳಾಗಿವೆ. ಈ ಮೂಲಕ ಕಾರ್ಲ್ ಲೂಯಿಸ್ ಅವರ ದಾಖಲೆಯನ್ನು ಹಿಂದಿಕ್ಕಿದ್ದರು.

ಅಲಿಸನ್ ಫೆಲಿಕ್ಸ್–

ಕ್ರಿಕೆಟ್‌ಗೆ ಆನ್ಯಾ ವಿದಾಯ

ಲಂಡನ್ (ಪಿಟಿಐ): ಐದು ವರ್ಷಗಳ ಹಿಂದೆ ಲಾರ್ಡ್ಸ್‌ನಲ್ಲಿ ನಡೆದಿದ್ದ ಮಹಿಳೆಯರ ಏಕದಿನ ವಿಶ್ವಕಪ್ ಕ್ರಿಕೆಟ್ ಫೈನಲ್‌ನಲ್ಲಿ ಭಾರತದ ಎದುರು ಇಂಗ್ಲೆಂಡ್ ತಂಡ ಜಯಿಸಲು ಕಾರಣರಾಗಿದ್ದ ಆನ್ಯಾ ಶ್ರಬ್‌ಸೋಲ್ ಗುರುವಾರ ಎಲ್ಲ ಮಾದರಿಗಳ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದಾರೆ.

ಬಲಗೈ ಮಧ್ಯಮವೇಗಿ ಆನ್ಯಾ ಕಳೆದ 14 ವರ್ಷಗಳಿಂದ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಇಂಗ್ಲೆಂಡ್ ತಂಡವನ್ನು ಪ್ರತಿನಿಧಿಸಿದ್ದಾರೆ. 2017ರ ವಿಶ್ವಕಪ್ ಟೂರ್ನಿಯಲ್ಲಿ ಭಾರತದ ಎದುರು ಆರು ವಿಕೆಟ್ ಗಳಿಸಿದ್ದು ಅವರ ಶ್ರೇಷ್ಠ ಸಾಧನೆ.

2009ರಲ್ಲಿ ಟ್ರೋಫಿ ಜಯಿಸಿದ್ದ ಇಂಗ್ಲೆಂಡ್ ತಂಡದಲ್ಲಿ ಆನ್ಯಾ ಆಡಿದ್ದರು. ಈಚೆಗೆ ವಿಶ್ವಕಪ್ ಟೂರ್ನಿಯಲ್ಲಿ ಆಸ್ಟ್ರೇಲಿಯಾದ ಎದುರಿನ ಫೈನಲ್‌ನಲ್ಲಿಯೂ ಅವರು ಮೂರು ವಿಕೆಟ್ ಗಳಿಸಿದ್ದರು.

ಅವರು ಎಂಟು ಟೆಸ್ಟ್, 86 ಏಕದಿನ ಮತ್ತು 79 ಟಿ20 ಪಂದ್ಯಗಳನ್ನು ಅವರು ಆಡಿದ್ದಾರೆ.

‘ದೇಶದ ತಂಡವನ್ನು 14 ವರ್ಷಗಳಿಂದ ಪ್ರತಿನಿಧಿಸಿದ್ದು ಹೆಮ್ಮೆಯ ವಿಷಯ. ಮಹಿಳಾ ಕ್ರಿಕೆಟ್ ಬೆಳವಣಿಗೆಯಲ್ಲಿ ನಮ್ಮ ಆಟದ ಪಾಲು ಕೂಡ ಸೇರಿರುವುದು ಗೌರವದ ವಿಷಯ. ಮಹಿಳಾ ಕ್ರಿಕೆಟ್ ದಿನದಿಂದ ದಿನಕ್ಕೆ ಉತ್ತಮವಾಗಿ ಬೆಳೆಯುತ್ತಿದೆ. ವೇಗವಾಗಿ ಸಾಗುತ್ತಿದೆ. ಯುವ ಆಟಗಾರ್ತಿಯರು ಕಾಣಿಕೆ ನೀಡಲು ಕಾದು ನಿಂತಿದ್ದಾರೆ. ಕ್ರಿಕೆಟ್‌ಗೆ ವಿದಾಯ ಹೇಳಲು ಇದು ಸೂಕ್ತ ಸಮಯ’ ಎಂದು ಆನ್ಯಾ ಹೇಳಿದ್ದಾರೆ.

‘ವೃತ್ತಿಜೀವನದಲ್ಲಿ ಬಹಳಷ್ಟು ಏರಿಳಿತಗಳನ್ನು ಕಂಡಿದ್ದೇನೆ. 2017ರಲ್ಲಿ ವಿಶ್ವಕಪ್ ಗೆದ್ದಿದ್ದು ಅವಿಸ್ಮರಣೀಯ ಕ್ಷಣ. ಇಂಗ್ಲೆಂಡ್ ತಂಡದಲ್ಲಿ ಇಷ್ಟು ಸುದೀರ್ಘ ಕಾಲ ಆಡುವ ನಿರೀಕ್ಷೆ ಇರಲಿಲ್ಲ. ನಾನು ಅದೃಷ್ಟಶಾಲಿ’ ಎಂದಿದ್ದಾರೆ.

ಆನ್ಯಾ ಶ್ರಬ್‌ಸೋಲ್ –ಎಎಫ್‌ಪಿ ಚಿತ್ರ

ಮುಷ್ತಾಕ್‌ಗೆ ಭಯೋತ್ಪಾದಕ ಹಣೆಪಟ್ಟಿ

ನವದೆಹಲಿ (ಪಿಟಿಐ): ಪಾಕಿಸ್ತಾನದಲ್ಲಿ ನೆಲೆಸಿರುವ ಉಗ್ರ ಮುಷ್ತಾಕ್ ಅಹ್ಮದ್ ಜರ್ಗರ್ ಅಲಿಯಾಸ್ ಮುಷ್ತಾಕ್ ಲಟ್ರಾಮ್‌ನನ್ನು (52) ಕಠಿಣ ಭಯೋತ್ಪಾದನಾ ವಿರೋಧಿ ಕಾನೂನು (ಯುಎಪಿಎ) ಅಡಿಯಲ್ಲಿ ಕುಖ್ಯಾತ ಭಯೋತ್ಪಾದಕ ಎಂದು ಕೇಂದ್ರ ಸರ್ಕಾರ ಘೋಷಿಸಿದೆ.

ಮೂಲತಃ ಶ್ರೀನಗರದ ನೌಹಟ್ಟಾದವನಾದ ಜರ್ಗರ್, ಜಮ್ಮು-ಕಾಶ್ಮೀರ ಲಿಬರೇಶನ್ ಫ್ರಂಟ್ (ಜೆಕೆಎಲ್‌ಎಫ್) ನಿಂದ ಹೊರಬಂದು ತನ್ನದೇ ಆದ ‘ಅಲ್ ಉಮರ್ ಮುಜಾಹಿದೀನ್’ ಭಯೋತ್ಪಾದಕ ಗುಂಪನ್ನು ಸ್ಥಾಪಿಸಿ, ಅದರಲ್ಲಿ ಮುಖ್ಯ ಕಮಾಂಡರ್ ಆಗಿದ್ದ. 1980ರ ದಶಕದ ಉತ್ತರಾರ್ಧದಲ್ಲಿ ಶಸ್ತ್ರಾಸ್ತ್ರ ತರಬೇತಿ ಪಡೆಯಲು ಪಾಕಿಸ್ತಾನಕ್ಕೆ ಹೋಗಿದ್ದ. ಕಳೆದ ಒಂದು ವಾರದಲ್ಲಿ ಕೇಂದ್ರ ಸರ್ಕಾರ, ಭಯೋತ್ಪಾದಕರಾಗಿ ಪರಿಗಣಿಸಿದ ನಾಲ್ಕನೇ ವ್ಯಕ್ತಿ ಜರ್ಗರ್. ಕೇಂದ್ರ ಈವರೆಗೆ ಭಯೋತ್ಪಾದಕ ಪಟ್ಟಿಯಲ್ಲಿ ಹೆಸರಿಸಿರುವ 35ನೇ ವ್ಯಕ್ತಿಯೂ ಹೌದು.

ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನಾ ಚಟುವಟಿಕೆಗೆ ಉತ್ತೇಜನ ನೀಡಲು ಜರ್ಗರ್ ಪಾಕಿಸ್ತಾನದಿಂದ ನಿರಂತರ ಕಾರ್ಯಾಚರಣೆ ನಡೆಸುತ್ತಿದ್ದಾನೆ. ಕೊಲೆ, ಕೊಲೆ ಯತ್ನ, ಅಪಹರಣ, ಭಯೋತ್ಪಾದಕ ದಾಳಿ, ಭಯೋತ್ಪಾದನೆಗೆ ನಿಧಿ ಸಂಗ್ರಹ ಸೇರಿ ವಿವಿಧ ಅಪರಾಧಗಳಲ್ಲಿ ಭಾಗಿಯಾಗಿದ್ದಾನೆ. ಅಲ್ ಖೈದಾ ಮತ್ತು ಜೈಶ್-ಎ-ಮೊಹಮ್ಮದ್‌ನಂತಹ ಉಗ್ರ ಸಂಘಟನೆಗಳ ಜತೆ ನಂಟು ಹೊಂದಿರುವ ಈತ, ಭಾರತಕ್ಕೆ ಮಾತ್ರವಲ್ಲದೆ, ವಿಶ್ವದ ಶಾಂತಿಗೆ ಬೆದರಿಕೆಯಾಗಿದ್ದಾನೆ ಎಂದು ಗೃಹ ಸಚಿವಾಲಯ ಹೇಳಿದೆ.

1999ರಲ್ಲಿ ಉಗ್ರರು ಇಂಡಿಯನ್ ಏರ್‌ಲೈನ್ಸ್ ಐಸಿ-814 ವಿಮಾನ ಅಪಹರಿಸಿ, ಒತ್ತೆ ಇರಿಸಿಕೊಂಡಿದ್ದ ಪ್ರಯಾಣಿಕರ ಸುರಕ್ಷಿತ ಬಿಡುಗಡೆಗೆ ಪರ್ಯಾಯವಾಗಿ ಬಿಡುಗಡೆಯಾದ ಭಯೋತ್ಪಾದಕರಲ್ಲಿ ಜರ್ಗರ್ ಕೂಡ ಒಬ್ಬ. ಜೈಶ್-ಎ-ಮೊಹಮ್ಮದ್ ಭಯೋತ್ಪಾದಕ ಸಂಘಟನೆ ಮುಖ್ಯಸ್ಥ ಮೌಲಾನಾ ಮಸೂದ್ ಅಜರ್ ಮತ್ತು ‘ವಾಲ್ ಸ್ಟ್ರೀಟ್ ಜರ್ನಲ್’ನಲ್ಲಿ ಕೆಲಸ ಮಾಡುತ್ತಿದ್ದ ಅಮೆರಿಕದ ಪತ್ರಕರ್ತ ಡೇನಿಯಲ್ ಪರ್ಲ್ ಅವರನ್ನು ಹತ್ಯೆ ಮಾಡಿದ ಉಗ್ರ ಶೇಖ್ ಒಮರ್ ಜತೆಗೆ ಜರ್ಗರ್‌ನನ್ನು ಉಗ್ರರು ಬಿಡುಗಡೆ ಮಾಡಿಸಿಕೊಂಡಿದ್ದರು.

ಆರೋಪಿ ಮತ್ತು ಆತನ ಸಹಚರರು ಅಪರಾಧ ಚಟುವಟಿಕೆಗಳಿಂದ ಸಂಪಾದಿಸಿದ ಆದಾಯದಲ್ಲಿ ಖರೀದಿಸಿದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ತನಿಖಾ ಸಂಸ್ಥೆಗಳಿಗೆ ಯುಎಪಿಎ ಕಾಯ್ದೆ ಅನುವು ಮಾಡಿಕೊಡುತ್ತದೆ. ಅಲ್ಲದೇ, ಅಪರಾಧಿಯ ಸಂಪರ್ಕದಲ್ಲಿದ್ದವರೂ ಈ ಕಾನೂನಿನಡಿ ಅಪರಾಧಿಗಳಾಗಿಯೇ ಪರಿಗಣಿಸಲ್ಪಡುತ್ತಾರೆ.

ಕಾರ್ಖಾನೆಯಲ್ಲಿ ಸ್ಫೋಟ 6 ಕಾರ್ಮಿಕರ ಸಾವು

ಪ್ರಜಾವಾಣಿ ವಾರ್ತೆ

ಏಲೂರು, ಆಂಧ್ರಪ್ರದೇಶ: ಏಲೂರು ಜಿಲ್ಲೆಯ ಅಕ್ಕಿರೆಡ್ಡಿಗುಡೆಂನಲ್ಲಿ ಇರುವ ಪೊರಸ್ ಲ್ಯಾಬ್ಸ್ ಎಂಬ ರಾಸಾಯನಿಕ ಕಾರ್ಖಾನೆಯಲ್ಲಿ ಸ್ಫೋಟ ಸಂಭವಿಸಿ ಆರು ಕಾರ್ಮಿಕರು ಸಾವನ್ನಪ್ಪಿರುವ ಘಟನೆ ಗುರುವಾರ ಬೆಳಗಿನ ಜಾವ ನಡೆದಿದೆ. ಇನ್ನು 12 ಜನ ಕಾರ್ಮಿಕರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಅನಿಲ ಸೋರಿಕೆಯಿಂದ ರಿಯಾಕ್ಟರ್ ಸ್ಫೋಟಗೊಂಡಿದ್ದು, ಸ್ಥಳದಲ್ಲೇ ಐದು ಜನ ಕಾರ್ಮಿಕರು ಸಾವನ್ನಪ್ಪಿದ್ದಾರೆ. ಇನ್ನೊಬ್ಬ ಕಾರ್ಮಿಕ ಆಸ್ಪತ್ರೆಗೆ ರವಾನಿಸುವ ವೇಳೆ ಮಾರ್ಗ ಮಧ್ಯದಲ್ಲೇ ಅಸು ನೀಗಿದ್ದಾನೆ. ಮೃತ ಕಾರ್ಮಿಕರಲ್ಲಿ ನಾಲ್ವರು ಬಿಹಾರ ಮೂಲದವರಾದರೆ, ಇಬ್ಬರು ಆಂಧ್ರಪ್ರದೇಶದವರು.

ಸದ್ಯ ಗಂಭೀರವಾಗಿ ಗಾಯಗೊಂಡ 12 ಕಾರ್ಮಿಕರನ್ನು ವಿಜಯವಾಡದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಆದರೆ ಇವರಲ್ಲಿ ಕೆಲವರ ಸ್ಥಿತಿ ಬಹಳ ಗಂಭೀರವಾಗಿದೆ. ಸ್ಫೋಟ ಸಂಭವಿಸಿದಾಗ ಕಾರ್ಖಾನೆಯಲ್ಲಿ 100ಕ್ಕೂ ಹೆಚ್ಚು ಜನರಿದ್ದರು ಎಂದು ಮೂಲಗಳು ತಿಳಿಸಿವೆ.

ಮೃತ ಕಾರ್ಮಿಕರ ಕುಟುಂಬಗಳಿಗೆ ₹ 25 ಲಕ್ಷ ಪರಿಹಾರ, ಗಂಭೀರವಾಗಿ ಗಾಯಗೊಂಡ ಕಾರ್ಮಿಕರಿಗೆ ₹ 5 ಲಕ್ಷ ಪರಿಹಾರ ಹಾಗೂ ಸಾಮಾನ್ಯ ಗಾಯಾಳುಗಳಿಗೆ ₹ 2 ಲಕ್ಷ ಪರಿಹಾರವನ್ನು ಆಂಧ್ರಪ್ರದೇಶದ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಘೋಷಿಸಿದ್ದಾರೆ. ಪೋರ್ ಲ್ಯಾಬ್ಸ್ ಕೂಡ ₹ 25 ಲಕ್ಷ ಪರಿಹಾರ ನೀಡುವುದಾಗಿ ಹೇಳಿದೆ.

ಕಾರ್ಖಾನೆ ಮುಚ್ಚಿಸಲು ಪ್ರತಿಭಟನೆ: ಘಟನೆ ನಡೆದ ಬೆನ್ನಲ್ಲೇ ಸುತ್ತಮುತ್ತಲ ಹಳ್ಳಿಗಳ ಜನ ಕಾರ್ಖಾನೆಯನ್ನು ಮುಚ್ಚುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು. ಇದೇ ವೇಳೆ ಗ್ರಾಮಸ್ಥರು ಕಾರ್ಖಾನೆಯಿಂದ ಸುತ್ತಮುತ್ತ ಪ್ರದೇಶದ ಗಾಳಿ ಹಾಗೂ ನೀರು ಕಲುಷಿತವಾಗುತ್ತಿದೆ ಎಂದು ಆರೋಪಿಸಿದರು.

ಎಲ್‌ಇಟಿ ನಾಲ್ವರು ಉಗ್ರರ ಹತ್ಯೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಶೋಪಿಯಾನ್ ಜಿಲ್ಲೆಯಲ್ಲಿ ಗುರುವಾರ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಲಷ್ಕರ್–ಎ–ತಯಬ (ಎಲ್‌ಇಟಿ) ನಾಲ್ವರು ಉಗ್ರರು ಹತರಾಗಿದ್ದು, ಕಾರ್ಯಾಚರಣೆಗೆ ತೆರಳುವಾಗ ಭದ್ರತಾ ಪಡೆಯ ವಾಹನ ಅಪಘಾತಕ್ಕೀಡಾಗಿ ಮೂವರು ಯೋಧರು ಮೃತಪಟ್ಟಿದ್ದಾರೆ.

‘ಉಗ್ರರು ಅಡಗಿರುವ ಖಚಿತ ಮಾಹಿತಿ ಮೇರೆಗೆ ಶೋಪಿಯಾನ್‌ನ ಝೈನ್‌ಪೋರಾ ಪ್ರದೇಶದಲ್ಲಿ ಬಡಿಗಾಮ್ ಎಂಬಲ್ಲಿ ಭದ್ರತಾಪಡೆಗಳು ಶೋಧ ಕಾರ್ಯಾಚರಣೆ ಆರಂಭಿಸಿದ್ದರು. ಈ ವೇಳೆ ಉಗ್ರರು ಗುಂಡಿನ ದಾಳಿ ನಡೆಸಿದ್ದು, ಭದ್ರತಾ ಪಡೆಗಳ ಪ್ರತಿದಾಳಿಗೆ ನಾಲ್ವರು ಉಗ್ರರು ಹತರಾಗಿದ್ದಾರೆ. ಹತ್ಯೆಯಾದವರ ಗುರುತು ಪತ್ತೆ ಹಚ್ಚುವ ಕಾರ್ಯ ನಡೆದಿದೆ’ ಎಂದು ಅಧಿಕಾರ ಟ್ವೀಟ್ ಮಾಡಿದ್ದಾರೆ.

‘ಅಪಘಾತದಲ್ಲಿ ಗಾಯಗೊಂಡ ಎಂಟು ಯೋಧರಲ್ಲಿ ಇಬ್ಬರು ಮಾರ್ಗ ಮಧ್ಯೆ ಮೃತಪಟ್ಟಿದ್ದು, ಮತ್ತೊಬ್ಬರು ಆಸ್ಪತ್ರೆಯಲ್ಲಿ ಮೃತಪಟ್ಟರು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.



ಕಾಮನ್‌ವೆಲ್ತ್, ಏಷ್ಯನ್ ಗೇಮ್ಸ್‌ಗೆ ಬ್ಯಾಡ್ಮಿಂಟನ್ ತಂಡಗಳ ಆಯ್ಕೆ ಇಂದಿನಿಂದ

ಯುವಪ್ರತಿಭೆಗಳತ್ತ ಬಿಎಐ ಚಿತ್ತ

ನವದೆಹಲಿ (ಪಿಟಿಐ): ಮುಂಬರಲಿರುವ ಕಾಮನ್‌ವೆಲ್ತ್ ಕ್ರೀಡಾಕೂಟ ಮತ್ತು ಏಷ್ಯನ್ ಗೇಮ್ಸ್‌ನಲ್ಲಿ ಸ್ಪರ್ಧಿಸಲಿರುವ ಭಾರತ ತಂಡ ಆಯ್ಕೆಯಲ್ಲಿ ಯುವ ಆಟಗಾರರಿಗೆ ಪ್ರಾಶಸ್ತ್ಯ ನೀಡಲು ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ನಿರ್ಧರಿಸಿದೆ.

ಇಲ್ಲಿಯ ಇಂದಿರಾಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರ ತಂಡಗಳ ಆಯ್ಕೆ ಟ್ರಯಲ್ಸ್ ಆರಂಭವಾಗಲಿದೆ. ಥಾಮಸ್ ಮತ್ತು ಊಬರ್ ಕಪ್ ಟೂರ್ನಿ, ಕಾಮನ್‌ವೆಲ್ತ್ ಮತ್ತು ಏಷ್ಯನ್ ಕ್ರೀಡಾಕೂಟಗಳಿಗೆ ತಂಡಗಳನ್ನು ಆಯ್ಕೆ ನಡೆಯಲಿದ್ದು, 120 ಆಟಗಾರರು ಭಾಗವಹಿಸುತ್ತಿದ್ದಾರೆ. ಐದು ವಿಭಾಗಗಳಲ್ಲಿ ಸ್ಪರ್ಧಿಸಲಿದ್ದಾರೆ. ಆರು ದಿನಗಳವರೆಗೆ ನಡೆಯಲಿರುವ ಟ್ರಯಲ್ಸ್‌ನಲ್ಲಿ, ವಿಶ್ವ ರ‍್ಯಾಂಕಿಂಗ್‌ನಲ್ಲಿ 16 ರಿಂದ 50ರೊಳಗಿನ ಸ್ಥಾನಗಳಲ್ಲಿರುವ ಆಟಗಾರರೂ ಭಾಗವಹಿಸುತ್ತಿದ್ದಾರೆ.

ಮಾರ್ಚ್ 29ರಂದು ಬಿಡುಗಡೆಯಾದ ಶ್ರೇಯಾಂಕ ಪಟ್ಟಿಯಲ್ಲಿ ಮೊದಲ 15 ಸ್ಥಾನಗಳಲ್ಲಿ ಇರುವವರಿಗೆ ನೇರಪ್ರವೇಶ ಸಿಗಲಿದೆ. ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್, ಕಿದಂಬಿ ಶ್ರೀಕಾಂತ್ ಮತ್ತು ಪಿ.ವಿ. ಸಿಂಧು, ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ನೇರಪ್ರವೇಶ ಪಡೆದಿದ್ದಾರೆ. ಉತ್ತಮ ಫಾರ್ಮ್‌ನಲ್ಲಿರುವ ಎಚ್‌.ಎಸ್. ಪ್ರಣಯ್ ಕೂಡ ಸ್ಥಾನ ಗಿಟ್ಟಿಸಲಿದ್ದಾರೆ.

ಮಾಳವಿಕಾ ಬಂಸೋಡ್

ಮಿಥುನ್ ಮಂಜುನಾಥ್

'ಆಯ್ಕೆದಾರರ ಒಮ್ಮತದ ಅಭಿಪ್ರಾಯದ ಪ್ರಕಾರ ಪ್ರಣಯ್‌ಗೆ ಸ್ಥಾನ ನೀಡಲಾಗಿದೆ. ಕಳೆದ ಕೆಲವು ಟೂರ್ನಿಗಳಲ್ಲಿ ಅವರು ನಿರಂತರವಾಗಿ ಉತ್ತಮ ಸಾಧನೆ ಮಾಡುತ್ತಿರುವುದೇ ಇದಕ್ಕೆ ಕಾರಣ' ಎಂದು ಬಿಎಐ ಪ್ರಧಾನ ಕಾರ್ಯದರ್ಶಿ ಸಂಜಯ್ ಮಿಶ್ರಾ ತಿಳಿಸಿದ್ದಾರೆ.

ಒಲಿಂಪಿಯನ್ ಸೈನಾ ನೆಹ್ವಾಲ್ ಅವರು ಟ್ರಯಲ್ಸ್‌ನಿಂದ ಹಿಂದೆ ಸರಿದಿರುವುದರಿಂದ ಯುವ ಆಟಗಾರ್ತಿಯರಾದ ಮಾಳವಿಕಾ ಬಂಸೋಡ್, ಅಶ್ಮಿತಾ ಚಲಿಹಾ, ಆಕರ್ಷಿ ಕಶ್ಯಪ್, ತಸ್ನಿಮ್ ಮೀರ್ ಮತ್ತು ಅನುಪಮಾ ಉಪಾಧ್ಯಾಯ ಅವರಿಗೆ ಸ್ಥಾನ ಗಿಟ್ಟಿಸಲು ಉತ್ತಮ ಅವಕಾಶ ಲಭಿಸಿದೆ.

ಮಹಿಳೆಯರ ಡಬಲ್ಸ್‌ನಲ್ಲಿ ಅಶ್ವಿನಿ ಪೊನ್ನಪ್ಪ ಮತ್ತು ಎನ್. ಸಿಕ್ಕಿರೆಡ್ಡಿ ಜೋಡಿಯು ವಿಶ್ವ ಶ್ರೇಯಾಂಕದಲ್ಲಿ 20ನೇ ರ‍್ಯಾಂಕ್ ಹೊಂದಿದ್ದಾರೆ. 36ನೇ ರ‍್ಯಾಂಕ್‌ನಲ್ಲಿರುವ ತ್ರೆಷಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿಯೂ ಕಣದಲ್ಲಿದೆ. ಇವರು ಈಚೆಗೆ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದರು.

ಪುರುಷರ ವಿಭಾಗದ ಸಿಂಗಲ್ಸ್‌ನಲ್ಲಿ ಒಲಿಂಪಿಯನ್ ಬಿ. ಸಾಯಿಪ್ರಣೀತ್, ಸಮೀರ್ ವರ್ಮಾ, ಸೌರಭ್ ವರ್ಮಾ, ಕಿರಣ ಜಾರ್ಜ್, ಮಿಥುನ್ ಮಂಜುನಾಥ್ ಅವರೂ ಟ್ರಯಲ್ಸ್‌ನಲ್ಲಿ ಕಣಕ್ಕಿಳಿಯುವರು. ಡಬಲ್ಸ್‌ನಲ್ಲಿ ಎಂ.ಆರ್. ಅರ್ಜುನ್, ಧ್ರುವ ಕಪಿಲ್, ಮನು ಅತ್ರಿ, ಬಿ. ಸುಮೀತ್ ರೆಡ್ಡಿ ಮತ್ತು ಕೃಷ್ಣಪ್ರಸಾದ ಗರಗ ಮತ್ತು ವಿಷ್ಣುವರ್ಧನ ಗೌಡ ಪಂಜಾಲಾ ಸಾಮರ್ಥ್ಯ ಪರೀಕ್ಷೆಗೊಡ್ಡಲಿದ್ದಾರೆ.

ಕಾಮನ್‌ವೆಲ್ತ್ ತಂಡದಲ್ಲಿ ಒಟ್ಟು ಹತ್ತು ಆಟಗಾರರು, ಏಷ್ಯನ್ ಗೇಮ್ಸ್ ಮತ್ತು ಥಾಮಸ್–ಊಬರ್ ಕಪ್ ತಂಡಗಳಲ್ಲಿ ತಲಾ 20 ಆಟಗಾರರು ಸ್ಥಾನ ಪಡೆಯುವರು.

ಬಿಎಐ ವಿರುದ್ಧ ಸೈನಾ ಕಿಡಿ

ನವದೆಹಲಿ (ಪಿಟಿಐ): ಬ್ಯಾಡ್ಮಿಂಟನ್ ತಂಡಗಳ ಆಯ್ಕೆ ಪ್ರಕ್ರಿಯೆಯನ್ನು ಕಡಿಮೆ ಕಾಲಾವಕಾಶದಲ್ಲಿ ನಡೆಸಲಾಗುತ್ತಿದೆ. ಈ ರೀತಿ ಟ್ರಯಲ್ಸ್ ನಿಗದಿಪಡಿಸಿರುವುದು ಸರಿಯಲ್ಲ ಎಂದು ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹ್ವಾಲ್ ಬಿಎಐ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮುಂಬರುವ ಏಷ್ಯನ್ ಮತ್ತು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಸ್ಪರ್ಧಿಸುವ ಭಾರತ ತಂಡಗಳ ಆಯ್ಕೆ ಪ್ರಕ್ರಿಯೆ ಶುಕ್ರವಾರ ಆರಂಭವಾಗಲಿದ್ದು, ತಾವು ಭಾಗವಹಿಸುತ್ತಿಲ್ಲವೆಂದು ಮೂರು ದಿನಗಳ ಹಿಂದೆ ಸೈನಾ ಬಿಎಐಗೆ ತಿಳಿಸಿದ್ದರೆಂದು ವರದಿಯಾಗಿತ್ತು. ಕಾಮನ್‌ವೆಲ್ತ್ ಕೂಟದಲ್ಲಿ ಎರಡು ಬಾರಿ ಚಿನ್ನ ಗೆದ್ದಿದ್ದರು.

ಈ ಕುರಿತು ಟ್ವೀಟ್ ಮಾಡಿರುವ ಸೈನಾ, 'ಕಾಮನ್‌ವೆಲ್ತ್ ಮತ್ತು ಏಷ್ಯಾಡ್ ಚಾಂಪಿಯನ್ ಪಟ್ಟವನ್ನು ನಾನು ಉಳಿಸಿಕೊಳ್ಳಲು ಇಚ್ಛಿಸುತ್ತಿಲ್ಲವೆಂಬ ವರದಿಗಳನ್ನು ಓದಿ ಅಚ್ಚರಿಯಾಯಿತು. ನಾನು ಟ್ರಯಲ್ಸ್‌ನಲ್ಲಿ ಮಾತ್ರ ಭಾಗವಹಿಸುತ್ತಿಲ್ಲ. ಮೂರು ವಾರಗಳ ಕಾಲ ಯುರೋಪ್ ಪ್ರವಾಸ ಮುಗಿಸಿ ಬಂದಿದ್ದೇನೆ. ಏಷ್ಯನ್ ಚಾಂಪಿಯನ್‌ಷಿಪ್ ಕೂಡ ಮುಂದಿರುವ ಕಾರಣಕ್ಕೆ ಈ ನಿರ್ಧಾರ ಮಾಡಿದ್ದೆ' ಎಂದಿದ್ದಾರೆ.

'ಸೀನಿಯರ್ ಆಟಗಾರ್ತಿಯಾಗಿ ಎರಡು ವಾರಗಳ ಅಂತರದಲ್ಲಿ ಒಂದರ ಹಿಂದೆ ಒಂದರಂತೆ ದೊಡ್ಡ ಟೂರ್ನಿಗಳಲ್ಲಿ ಭಾಗವಹಿಸುವುದರಿಂದ ಗಾಯಗೊಳ್ಳುವ ಅಪಾಯವಿರುತ್ತದೆ. ಈ ವಿಷಯವನ್ನು ಬಿಎಐಗೆ ತಿಳಿಸಿದ್ದೇನೆ. ಆದರೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಟೂರ್ನಿಗಳ ವೇಳಾ ಪಟ್ಟಿಯ ದಟ್ಟಣೆಯ ನಡುವೆ ಟ್ರಯಲ್ಸ್ ಘೋಷಿಸುವುದು ಸರಿಯಲ್ಲ. ಕೇವಲ 10 ದಿನಗಳ ಸಮಯಾವಕಾಶ ನೀಡಿದ್ದು ಕಡಿಮೆಯಾಯಿತು. ವಿಶ್ವ ರ‍್ಯಾಂಕಿಂಗ್‌ನಲ್ಲಿ 23ನೇ ಸ್ಥಾನದಲ್ಲಿರುವ ನಾನು ಅಗ್ರಸ್ಥಾನದಲ್ಲಿರುವ ಅಕಾನೆ (ಯಮಗುಚಿ) ವಿರುದ್ಧ ಆಲ್ ಇಂಗ್ಲೆಂಡ್ ಟೂರ್ನಿಯಲ್ಲಿ ಚೆನ್ನಾಗಿ ಆಡಿದ್ದೆ. ಇಂಡಿಯಾ ಓಪನ್ ಟೂರ್ನಿಯಲ್ಲಿ ಒಂದು ಪಂದ್ಯ ಸೋತಿದ್ದನ್ನು ನೆಪ ಮಾಡಿಕೊಂಡು ನನ್ನ ಹೊರತಳ್ಳಲು ಬಿಎಐ ಪ್ರಯತ್ನಿಸುತ್ತಿದೆ' ಎಂದು ಒಲಿಂಪಿಯನ್ ಸೈನಾ ಅಸಮಾಧಾನ ವ್ಯಕ್ತಪಡಿಸಿದರು.

ಇಂಡಿಯನ್ ವಿಮೆನ್ಸ್ ಲೀಗ್ ನೇರಪ್ರಸಾರ

ಮುಂಬೈ (ಪಿಟಿಐ): ಭಾರತದ ಪ್ರಮುಖ ಕ್ಲಬ್ ಫುಟ್‌ಬಾಲ್ ಟೂರ್ನಿ ಇಂಡಿಯನ್ಸ್ ವಿಮೆನ್ಸ್ ಲೀಗ್ (ಐಡಬ್ಲ್ಯುಎಲ್) ಯೂರೊಸ್ಪೋರ್ಟ್ ಇಂಡಿಯಾ ನೆಟ್‌ವರ್ಕ್‌ನಲ್ಲಿ ನೇರಪ್ರಸಾರವಾಗಲಿದೆ.

ಐದನೇ ಆವೃತ್ತಿಯ ಲೀಗ್‌ನಲ್ಲಿ 12 ತಂಡಗಳು ಪ್ರಶಸ್ತಿಗಾಗಿ ಸೆಣಸಲಿದ್ದು, ಶುಕ್ರವಾರದಿಂದ (ಏಪ್ರಿಲ್ 15) ಮೇ 26ರವರೆಗೆ ಒಡಿಶಾದ ಮೂರು ಕ್ರೀಡಾಂಗಣಗಳಲ್ಲಿ ನಡೆಯಲಿದೆ. ಕಳಿಂಗ, ಕ್ಯಾಪಿಟಲ್ ಮತ್ತು ಬೆಟಾಲಿಯನ್ ಕ್ರೀಡಾಂಗಣಗಳು ಪಂದ್ಯಗಳಿಗೆ ಆತಿಥ್ಯ ವಹಿಸಲಿವೆ.

ಹಾಕಿ: ಹರ್ಮನ್‌ಪ್ರೀತ್ ಮಿಂಚು: ಭಾರತಕ್ಕೆ ಜಯ

ಭುವನೇಶ್ವರ್ (ಪಿಟಿಐ): ಉಪನಾಯಕ ಹರ್ಮನ್‌ಪ್ರೀತ್ ಸಿಂಗ್ ಚುರುಕಾದ ಆಟದ ಫಲವಾಗಿ ಭಾರತ ತಂಡವು ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯಲ್ಲ ಭಾರತ ತಂಡವು ಗೆಲುವಿನ ಆರಂಭ ಮಾಡಿತು.

ಗುರುವಾರ ಇಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡವು 3–0ಯಿಂದ ಜರ್ಮನಿ ವಿರುದ್ಧ ಜಯಿಸಿತು. ಆತಿಥೇಯ ತಂಡದ ಹರ್ಮನ್‌ಪ್ರೀತ್ ಎರಡು ಪೆನಾಲ್ಟಿ ಕಾರ್ನರ್‌ಗಳನ್ನು (18ನೇ ನಿ ಮತ್ತು 27ನೇ ನಿ) ಗೋಲಿನಲ್ಲಿ ಪರಿವರ್ತಿಸಿದರು. 45ನೇ ನಿಮಿಷದಲ್ಲಿ ಅಭಿಷೇಕ್ ಒಂದು ಗೋಲು ಗಳಿಸಿದರು.

ಇದರೊಂದಿಗೆ ಭಾರತ ತಂಡ ಪಾಯಿಂಟ್‌ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. 11 ಪಂದ್ಯಗಳಿಂದ 24 ಅಂಕಗಳನ್ನು ತಂಡವು ಗಳಿಸಿದೆ. ಜರ್ಮನಿಯು ಒಂಬತ್ತು ಪಂದ್ಯಗಳಿದ 17 ಅಂಕಗಳನ್ನು ಗಳಿಸಿ, ಎರಡನೇ ಸ್ಥಾನದಲ್ಲಿದೆ.

ಜರ್ಮನಿ ತಂಡದಲ್ಲಿ ಅನುಭವದ ಕೊರತೆ ಎದ್ದುಕೊಂಡಿತು. 22 ಆಟಗಾರರ ಬಳಗದಲ್ಲಿ ಆರು ಮಂದಿ ಈ ಟೂರ್ನಿಯ ಮೂಲಕ ಅಂತರರಾಷ್ಟ್ರೀಯ ಸೀನಿಯರ್ ಹಾಕಿಗೆ ಪದಾರ್ಪಣೆ ಮಾಡಿದ್ದಾರೆ.

ಹರ್ಮನ್‌ಪ್ರೀತ್ ಸಿಂಗ್

ಉಭಯ ತಂಡಗಳು ಕಳಿಂಗ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆಯುವ ಎರಡನೇ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಚೆಸ್: ಗೌತಮ್ ಶುಭಿ ಗುಪ್ತಾಗೆ ಪ್ರಶಸ್ತಿ

ಮಂಡ್ಯ: ಕೇರಳದ ಗೌತಮ್ ಕೃಷ್ಣ ಹಾಗೂ ಉತ್ತರಪ್ರದೇಶದ ಶುಭಿ ಗುಪ್ತಾ ಇಲ್ಲಿ ನಡೆದ 34ನೇ ರಾಷ್ಟ್ರೀಯ 12 ವರ್ಷದೊಳಗಿನವರ ಚೆಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಹಾಗೂ ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಆದರು.

ಗುರುವಾರ ನಡೆದ ಅಂತಿಮ 11ನೇ ಸುತ್ತಿನ ಪಂದ್ಯದಲ್ಲಿ ಗೌತಮ್ ಕೃಷ್ಣ, ತಮಿಳುನಾಡಿನ ಜಿ.ಆಕಾಶ್ ವಿರುದ್ಧ ಜಯ ಗಳಿಸಿ ಪೂರ್ಣ ಅಂಕ ಸಂಪಾದಿಸಿದರು. 9.5ಅಂಕಗಳೊಂದಿಗೆ ಚಾಂಪಿಯನ್ ಪಟ್ಟ ಅಲಂಕರಿಸಿದರು. ತೆಲಂಗಾಣದ ಆದಿರೆಡ್ಡಿ ಅರ್ಜುನ್, ತಮಿಳುನಾಡಿನ ಮುತ್ತುಕುಮಾರ್ ಮುಕೇಶ್ ವಿರುದ್ಧ ಜಯ ಗಳಿಸಿದರು. ಗೋವಾದ ವಾಜ್ ಇಥಾನ್, ತಮಿಳುನಾಡಿನ ಗಾಯಕ್ ವಾಡ್ ಮನಸ್ ವಿರುದ್ಧ ಗೆದ್ದರು. ಟೈಬ್ರೇಕರ್ ಆಧಾರದ ಮೇಲೆ ಆದಿರೆಡ್ಡಿ ಅರ್ಜುನ್ ಹಾಗೂ ವಾಜ್ ಇಥಾನ್ ಕ್ರಮವಾಗಿ 2ನೇ ಮತ್ತು 3ನೇ ಸ್ಥಾನ ಪಡೆದರು.

ಬಾಲಕಿಯ ವಿಭಾಗದಲ್ಲಿ ಶುಭಿ ಗುಪ್ತಾ, ಉತ್ತರಾಖಂಡದ ಶೆರಾಲಿ ಪಟ್ನಾಯಕ್ ಅವರನ್ನು ಸೋಲಿಸಿ ಪೂರ್ಣ ಅಂಕ ಪಡೆದರು. 9 ಅಂಕಗಳೊಂದಿಗೆ ಟ್ರೋಫಿ ಗಳಿಸಿದರು.

ಸೆಮಿಫೈನಲ್‌ಗೆ ಮ್ಯಾಂಚೆಸ್ಟರ್ ಸಿಟಿ

ಮ್ಯಾಡ್ರಿಡ್ (ಎಪಿ): ಮ್ಯಾಂಚೆಸ್ಟರ್ ಸಿಟಿ ತಂಡ ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಗುರುವಾರ ಅಟ್ಲೆಟಿಕೊ ಮ್ಯಾಡ್ರಿಡ್ ತಂಡದ ಎದುರು ನಡೆದ ಪಂದ್ಯದಲ್ಲಿ ಮ್ಯಾಂಚೆಸ್ಟರ್ ಡ್ರಾ ಸಾಧಿಸಿತು. ಮೊದಲ ಲೆಗ್‌ನ ಪಂದ್ಯದಲ್ಲಿ ಅಟ್ಲೆಟಿಕೊ ಎದುರು 1–0 ಅಂತರದಿಂದ ಜಯ ಗಳಿಸಿದ್ದು ತಂಡದ ಸೆಮಿಫೈನಲ್ ಹಾದಿಯನ್ನು ಸುಗಮಗೊಳಿಸಿತು. ಪಂದ್ಯದಲ್ಲಿ ಅಟ್ಲೆಟಿಕೊ ಎಚ್ಚರಿಕೆಯ ಆಟವಾಡಿತು. ಮೊದಲ ಲೆಗ್‌ನಲ್ಲಿ ಸೋತಿರುವ ಕಾರಣ ಸೆಮಿಫೈನಲ್ ಹಾದಿ ಸುಗಮವಾಗಬೇಕಾದರೆ ಈ ಪಂದ್ಯದಲ್ಲಿ ಆ ತಂಡ ಜಯ ಗಳಿಸಬೇಕಾಗಿತ್ತು.

ಉದಕಮಂಡಲ ರೇಸ್

ಎಮೆಲ್ಡಾ ಗೆಲ್ಲುವ ನಿರೀಕ್ಷೆ

ನೀಲ್‌ಗಿರೀಸ್ ಮುನ್ಸಿಪಾಲಿಟಿ ಟ್ರೋಫಿ ಶುಕ್ರವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಎಮೆಲ್ಡಾ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಬೆಳಿಗ್ಗೆ 11ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಟಫೊಸಿ 4, ಮೆಜೆಸ್ಟಿಕ್ ಚಾರ್ಮರ್ 3, ಫ್ಯಾಬ್ಯುಲಸ್ ಶೋ 2
2ನೇ ರೇಸ್: ವೇಟುಗೋ 2, ಸ್ಟಾರ್ ಫ್ಲಿಂಗ್ 4, ಇಲ್ಲಸ್ಟ್ರೇಸಿಯಸ್ ರೂಲ್ 7
3ನೇ ರೇಸ್: ರಾಯಲ್ ಪರ್ಲ್ 4, ಏರ್ ಮಾರ್ಷಲ್ 3, ಪಾಲ್ಸಿ ವಾಲ್ಸಿ 2
4ನೇ ರೇಸ್: ಎಮೆಲ್ಡಾ 2, ಎಂಜಿಲಿಕಾಜಿ 1, ಗ್ಲೋರಿಯಸ್ ಡೆಸ್ಟಿನಿ 4
5ನೇ ರೇಸ್: ಕರಾಡೆನಿಝ್ 5, ಸಸಕಾವ 3, ನೈಟ್ ಇನ್ ಆರ್ಮರ್ 2
6ನೇ ರೇಸ್: ಎಂಪರರ್ ಆಫ್ ಅಶೋಕ 2, ಗೋಲ್ಡನ್ ಸ್ಟ್ರೈಕ್ 1, ಬೀ ಕಾಮ್ 3

ಉತ್ತಮ ಬೆಟ್: ರಾಯಲ್ ಪರ್ಲ್

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್
2,3,4,5,6	1,2,3	4,5,6

ನ್ಯಾಷನಲ್ಸ್, ಬೀಗಲ್ಸ್ ತಂಡಗಳ ಜಯಭೇರಿ

ಬೆಂಗಳೂರು: ಮೈಸೂರಿನ ನ್ಯಾಷನಲ್ಸ್ ಬ್ಯಾಸ್ಕೆಟ್‌ಬಾಲ್ ತಂಡ ಮತ್ತು ಬೆಂಗಳೂರಿನ ಬೀಗಲ್ಸ್ ಬಿ.ಸಿ ತಂಡಗಳು ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಆಶ್ರಯದ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಜಯ ಗಳಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಬಾಲಕರ ವಿಭಾಗದ ಪಂದ್ಯದಲ್ಲಿ ನ್ಯಾಷನಲ್ಸ್ ತಂಡ 50–25ರಲ್ಲಿ ಬೀಗಲ್ಸ್ ವಿರುದ್ಧ ಜಯ ಗಳಿಸಿತು. ಕುಶಾಲ್ 28 ಪಾಯಿಂಟ್‌ಗಳೊಂದಿಗೆ ನ್ಯಾಷನಲ್ಸ್ ಪರವಾಗಿ ಮಿಂಚಿದರು. ಬೀಗಲ್ಸ್‌ಗಾಗಿ ಆರ್ಯಮನ್ ಮಕ್ಕಾರ್ 10 ಪಾಯಿಂಟ್ ಗಳಿಸಿದರು.

ಬಾಲಕಿಯರ ವಿಭಾಗದಲ್ಲಿ ಬೀಗಲ್ಸ್ ಪಾರಮ್ಯ ಮೆರೆಯಿತು. ಸಿಜೆಸಿ ಎದುರಿನ ಪಂದ್ಯದಲ್ಲಿ ಬೀಗಲ್ಸ್ 22–21ರಲ್ಲಿ ಜಯ ಗಳಿಸಿತು. ಅದಿಶಾ 10 ಮತ್ತು ಸ್ವಾತಿ 8 ಪಾಯಿಂಟ್‌ಗಳೊಂದಿಗೆ ಬೀಗಲ್ಸ್ ಪರವಾಗಿ ಮಿಂಚಿದರು. ಸಿಜೆಜಿಗಾಗಿ ನಿಶ್ಕಾ 13 ಪಾಯಿಂಟ್ ಗಳಿಸಿದರು.

ಬಾಲಕರ ಇತರ ಪಂದ್ಯಗಳಲ್ಲಿ ಎಸ್. ಬ್ಲೂಸ್ 56–6ರಲ್ಲಿ ಎಸ್‌.ಸಿ ದಾವಣಗೆರೆಯನ್ನು ಮಣಿಸಿತು. ರಾಘವ್ (23), ತನ್ಮಯ್ (10) ಬ್ಲೂಸ್ ಪರವಾಗಿ ಮಿಂಚಿದರು. ಬಿ.ಸಿ ಬಿ.ಸಿ ತಂಡ 28–26ರಲ್ಲಿ ಬಾಗಲಕೋಟೆ ಬಿ.ಸಿಯನ್ನು ಮಣಿಸಿತು. ಬಿ.ಸಿ ಬಿ.ಸಿಗಾಗಿ ಧ್ರುವ್ 10 ಪಾಯಿಂಟ್ ತಂದುಕೊಟ್ಟರೆ ಬಾಗಲಕೋಟೆ ತಂಡಕ್ಕಾಗಿ ವಿನಾಯಕ್ 18 ಪಾಯಿಂಟ್ ಕಲೆ ಹಾಕಿದರು.

ಎಂಎನ್‌ಕೆ ರಾವ್ ಬಿ.ಸಿ 52–8ರಲ್ಲಿ ಧಾರವಾಡದ ಮಲ್ಲಸಜ್ಜನ ಬಿ.ಸಿಯನ್ನು ಮಣಿಸಿತು. ಹಿತೀನ್ ಜೈನ್ (10) ಎಂಎನ್‌ಕೆ ಪರ ಮಿಂಚಿದರು. ಎಚ್‌ಬಿಆರ್ ಬಿ.ಸಿ 59–19ರಲ್ಲಿ ಮಂಗಳೂರು ಬಿ.ಸಿಯನ್ನು ಸೋಲಿಸಿತು. ಚತುರ 34, ಸಂವೇದ್ 17 ಪಾಯಿಂಟ್ ಗಳಿಸಿ ಎಚ್‌ಬಿಆರ್ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದರು. ಪಿಪಿಸಿ 50–8ರಲ್ಲಿ ನೆಟ್ಟಕಲ್ಲಪ್ಪ ತಂಡವನ್ನು ಸೋಲಿಸಿತು. ಪಿಪಿಸಿಗಾಗಿ ಅದ್ವಿತ್ 13 ಮತ್ತು ಮಿಹಿರ್ 10 ಪಾಯಿಂಟ್ ಗಳಿಸಿದರು.

ಬಾಲಕಿಯರ ವಿಭಾಗದಲ್ಲಿ ಅಪ್ಪಯ್ಯ ಬಿ.ಸಿ 60–21ರಲ್ಲಿ ಹಲಸೂರು ಎಸ್‌ಯು ತಂಡವನ್ನು ಮಣಿಸಿತು. ಹಸಿನಿ 14 ಮತ್ತು ಮೌಲ್ಯ 10 ಪಾಯಿಂಟ್‌ಗಳೊಂದಿಗೆ ಅಪ್ಪಯ್ಯ ತಂಡಕ್ಕಾಗಿ ಮಿಂಚಿದರು. ಹಲಸೂರು ಪರವಾಗಿ ಜಾಹ್ನವಿ 10 ಪಾಯಿಂಟ್ ಗಳಿಸಿದರು. ಎಂಸಿಎಚ್‌ಎಸ್ 48–17ರಲ್ಲಿ ವೈಎಂಎಂಎಯನ್ನು ಸೋಲಿಸಿತು. ಎಂಸಿಎಚ್‌ಎಸ್‌ಗಾಗಿ ಅದಿತಿ 16, ಆಹನಾ 10 ಪಾಯಿಂಟ್ ಗಳಿಸಿದರು. ಪಿಪಿಸಿ 29–12ರಲ್ಲಿ ಓರಿಯನ್ಸ್ ಎಸ್‌ಸಿಯನ್ನು ಮಣಿಸಿತು. ರಿಧಿ (11), ತನ್ವಿ (8) ಪಿಪಿಸಿ ಪರವಾಗಿ ಮಿಂಚಿದರು. ಎಚ್‌ಬಿಆರ್ ಬಿ.ಸಿ 63–12ರಲ್ಲಿ ಭಾರತ್ ಎಸ್‌ಯುವನ್ನು ಸೋಲಿಸಿತು. ಎಚ್‌ಬಿಆರ್‌ಗಾಗಿ ಭವ್ಯ 42, ನಿಧಿ 10 ಪಾಯಿಂಟ್ ಗಳಿಸಿದರು.